ವಿಶ್ವವಾಣಿ
ವಿಶ್ವಾಸವೇ ವಿಶ್ವ

ಸಲ್ಮಾನ್ ಖಾನ್‌ಗೆ ಬೆದರಿಕೆ: ಆರೋಪಿ ಸೆರೆ

ಬಾಲಿವುಡ್ ನಟ ಸಲ್ಮಾನ್ ಖಾನ್ ಗೆ ವಿಡಿಯೋ ಸಂದೇಶದ ಮೂಲಕ ಹತ್ಯೆಗೈಯುವುದಾಗಿ ಬೆದರಿಕೆ ಹಾಕಿದ ರಾಜಸ್ಥಾನ ಮೂಲದ ಆರೋಪಿಯನ್ನು ಮುಂಬೈ ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಆರೋಪಿ ಬನ್ವರ್‌ಲಾಲ್ ಲಾತೂರ್ ಲಾಲ್ ಗುಜರ್‌ನನ್ನು ಅಪರಾಧ ತನಿಖಾ ದಳದ ಪೊಲೀಸರು ರಾಜಸ್ಥಾನದಿಂದ ಮುಂಬೈಗೆ ಕರೆತಂದಿದ್ದಾರೆ.

ಇಂಧನ ದರ ನಮ್ಮಲ್ಲೇ ಕಡಿಮೆ: ಸಿದ್ದರಾಮಯ್ಯ

ಕೇಂದ್ರದ ಸಂಚಿನಿಂದ ರಾಜಸ್ವ ಸಂಗ್ರಹಕ್ಕೆ ಹೊಡೆತ: ಸಿಎಂ | ಇಂದಿನಿಂದ ರಾಜ್ಯವ್ಯಾಪಿ ಪ್ರತಿಭಟನೆಗೆ ಬಿಜೆಪಿ ನಿರ್ಧಾರ | ದರ ಏರಿಕೆಗೆ ವಿವಿಧ ಸಂಘ ಸಂಸ್ಥೆಗಳ ವ್ಯಾಪಕ ವಿರೋಧ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚುನಾವಣೆಯ ಬೆನ್ನಲ್ಲೇ ರಾಜ್ಯ ಸರಕಾರ ಪೆಟ್ರೋಲ್-ಡೀಸೆಲ್ ಮೇಲಿನ ತೆರಿಗೆ ಹೆಚ್ಚಿಸಿರುವುದು ಇದೀಗ ಭಾರಿ ವಿರೋಧಕ್ಕೆ ಕಾರಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸಿಗರು ಈ ನಡೆಯನ್ನು ಸಮರ್ಥಿಸಿಕೊಂಡರೆ, ಪ್ರತಿಪಕ್ಷ ಬಿಜೆಪಿ-ಜೆಡಿಎಸ್ ಸೇರಿದಂತೆ ಅನೇಕರು ವಿರೋಧಿಸಿದ್ದಾರೆ. ಬೆಲೆ ಏರಿಕೆ ಖಂಡಿಸಿ ಸೋಮವಾರದಿಂದಲೇ ರಾಜ್ಯವ್ಯಾಪಿ ಪ್ರತಿಭಟನೆ ನಡೆಸಲು ಬಿಜೆಪಿ ನಿರ್ಧರಿಸಿದೆ. ಖಾಸಗಿ ಬಸ್ ಮಾಲೀಕರು, ಚಾಲಕರ ಸಂಘದವರೂ ಸರಕಾರದ ಈ ನಡೆಯನ್ನು ಖಂಡಿಸಿದ್ದು, ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದೆ.



ಈ ನಡುವೆ ಸರಕಾರದ ಈ ನಡೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮರ್ಥಿಸಿಕೊಂಡಿದ್ದು, ದಕ್ಷಿಣ ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಪೆಟ್ರೋಲ್-ಡೀಸೆಲ್ ದರ ಕಡಿಮೆಯಿದೆ. ಈ ಹಿಂದಿನ ಬಿಜೆಪಿ ಸರಕಾರದ ಒಳಸಂಚಿನಿಂದ ಈ ಸಮಸ್ಯೆ ಉದ್ಭವಿಸಿತು. ಇದೀಗ ನಮ್ಮ ಸರಕಾರ ರಾಜಸ್ವ ಕೊರತೆಗೆ ನಿಯಂತ್ರಣ ಹೇರುವ ಹಾಗೂ ಈ ಹೆಚ್ಚುವರಿ ಅನುದಾನವನ್ನು ರಾಜ್ಯದ ಸರ್ವಾತೋಮುಖ ಅಭಿವೃದ್ಧಿಗೆ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದ ಜನರಿಗೆ ಹೊರೆಯಾಗಿಲ್ಲ: ಮಹಾರಾಷ್ಟ್ರದಲ್ಲಿ ಪೆಟ್ರೋಲ್ ಮೇಲೆ ಮೌಲ್ಯವರ್ಧಿತ ತೆರಿಗೆ ಶೇ.25ರೊಂದಿಗೆ ಹೆಚ್ಚುವರಿ ತೆರಿಗೆ 5.12 ರು.ಇದೆ ಹಾಗೂ ಡೀಸೆಲ್ ಮೇಲೆ ಶೇ.21ರಷ್ಟಿದೆ. ಇದಕ್ಕೆ ಹೋಲಿಸಿದರೆ ರಾಜ್ಯದ ಪರಿಷ್ಕೃತ ದರ ಕೂಡ ಜನರಿಗೆ ಹೊರೆಯಾಗದಂತಿದೆ. ಮೌಲ್ಯ ವರ್ಧಿತ ತೆರಿಗೆ ಹೆಚ್ಚಳದ ಹೊರತಾಗಿಯೂ, ರಾಜ್ಯದಲ್ಲಿ ಡೀಸೆಲ್ ಬೆಲೆ ಗುಜರಾತ್ ಹಾಗೂ ಮಧ್ಯಪ್ರದೇಶಗಳಿಗಿಂತ ಕಡಿಮೆಯಿದೆ. ಪೆಟ್ರೋಲಿಯಂ ಉತ್ಪನ್ನಗಳ ದರವು ಜನರಿಗೆ ಹೊರೆಯಾಗದ ರೀತಿಯಲ್ಲಿ ಲಭ್ಯವಾಗಿಸಲು ನಾವು ಬದ್ಧರಿದ್ದೇವೆ.

→ 4

- ಗ್ಯಾರಂಟಿಗೆ ಹಣ ಹೊಂದಿಸಲು ಪೆಟ್ರೋಲ್ ದರ ಏರಿಕೆ ಆರೋಪ
- ಡೀಸೆಲ್ ಬೆಲೆ ಏರಿಕೆಗೆ ಖಾಸಗಿ ಬಸ್ ಮಾಲೀಕರ ಆಕ್ಷೇಪ; ಪ್ರತಿಭಟನೆ ಎಚ್ಚರಿಕೆ
- ದರ ಏರಿಕೆ ಹಿಂಪಡೆಯಲು ಖಾಸಗಿ ಚಾಲಕರ ಆಗ್ರಹ; ಹೋರಾಟದ ಎಚ್ಚರಿಕೆ

ಬಸ್ ಪ್ರಯಾಣ ದರ ಏರಿಕೆಗೆ ಚಿಂತನೆ

ಡೀಸೆಲ್ ದರ ಏರಿಕೆಯ ಬೆನ್ನಲ್ಲೇ, ಸಾರಿಗೆ ನಿಗಮಗಳ ಟಿಕೆಟ್ ದರ ಏರಿಕೆ ಪ್ರಸ್ತಾಪಕ್ಕೆ ಮತ್ತೆ 'ಜೀವ' ಬಂದಿದ್ದು ಶೇ.15ರಿಂದ 35ರಷ್ಟು ಟಿಕೆಟ್ ದರ ಹೆಚ್ಚಿಸುವ ನಿಟ್ಟಿನಲ್ಲಿ ಚಿಂತನೆ ನಡೆಸಿವೆ ಎನ್ನಲಾಗಿದೆ.

ಚುನಾವಣೆಯ ಬೆನ್ನಿಗೇ ಕೆಎಸ್ಸಾರ್ಟಿಸಿ ಮತ್ತು ಬಿಎಂಟಿಸಿ ಬಸ್‌ಗಳ ಟಿಕೆಟ್ ದರ ಏರಿಕೆ ಮಾತುಗಳು ಕೇಳಿ ಬಂದಿದ್ದವು. ಆದರೆ ಸ್ಥಳೀಯ ಸಂಸ್ಥೆ ಚುನಾವಣೆ ಹತ್ತಿರದಲ್ಲಿರು ವುದರಿಂದ ಟಿಕೆಟ್ ದರ ಏರಿಕೆಗೆ ಪಕ್ಷದಲ್ಲಿಯೇ ವಿರೋಧ ವ್ಯಕ್ತವಾಗಿತ್ತು. ಇದೀಗ ಡೀಸೆಲ್ ದರ ಏರಿಕೆ ಹಿನ್ನೆಲೆಯಲ್ಲಿ ಮತ್ತೊಮ್ಮೆ ದರ ಏರಿಕೆ ಪ್ರಸ್ತಾಪ ಮುಂದಿಡಲಾಗಿದೆ. ಬಿಎಂಟಿಸಿ ಟಿಕೆಟ್ ದರ ಏರಿಸುವ ನಿರೀಕ್ಷೆ ಇದೆ ಎನ್ನಲಾಗಿದೆ.

ಸರಕಾರದ ನಡೆಗೆ ಬಿಜೆಪಿ ವಿರೋಧ

ದರ ಏರಿಕೆಯನ್ನು ವಿರೋಧಿಸಿರುವ ಬಿಜೆಪಿ, ಮುಂದಿನ ದಿನದಲ್ಲಿ ಸರಕಾರದ ವಿರುದ್ಧ ಉಗ್ರ ಹೋರಾಟದ ಎಚ್ಚರಿಕೆ ನೀಡಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಈ ರೀತಿ ಮಾಡಿರುವ ಸರಕಾರ, ಒಂದು ಕೈಯಲ್ಲಿ ಕಸಿದುಕೊಂಡು ಇನ್ನೊಂದು ಕೈಯಲ್ಲಿ ಕೊಡುವ ಪ್ರಯತ್ನ ಮಾಡುತ್ತಿದೆ. ಇದರಿಂದ ಜನಸಾಮಾನ್ಯರಿಗೆ ಸಮಸ್ಯೆಯಾಗಲಿದೆ. ತೈಲದರ ಏರಿಕೆಯಿಂದ ಬರುವ ಸಹಾಯಧನ ವೆಲ್ಲ ಪೆಟ್ರೋಲ್‌ಗೆ ಇಡಬೇಕಾಗುತ್ತದೆ ಎಂದು ಟೀಕಿಸಿದೆ.

ಪೆಟ್ರೋಲ್ ಬೆಲೆ ಏರಿಕೆಗೂ, ಚುನಾವಣಾ ಫಲಿತಾಂಶಕ್ಕೂ ಸಂಬಂಧವಿಲ್ಲ. ಕೇರಳದ ಕಾಸರಗೋಡಿನಲ್ಲಿ ಪೆಟ್ರೋಲ್ ಬೆಲೆ 106.66 ರು.ಗಳಿದೆ. ಆಂಧ್ರದ ಅನಂತಪುರದಲ್ಲಿ 109.44, ತೆಲಂಗಾಣದಲ್ಲಿ 107.40 ಹಾಗೂ ಮಹಾರಾಷ್ಟ್ರದಲ್ಲಿ 104.46 ರುಪಾಯಿದೆ. ಇವೆಲ್ಲಕ್ಕೆ ಹೋಲಿಸಿದರೆ ನಮ್ಮ ದರ ಕಡಿಮೆಯಿದೆ.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ದಾರಿದೀಪೋಕ್ತಿ

ನಮ್ಮ ಮುಂದೆ ಯಾರಿದ್ದಾರೆ ಅಥವಾ ನಮ್ಮ ಹಿಂದೆ ಯಾರಿದ್ದಾರೆ ಎಂಬುದು ಮುಖ್ಯ ಅಲ್ಲ. ಆದರೆ ನಮ್ಮ ಜತೆ ಯಾರಿದ್ದಾರೆ ಎಂಬುದಷ್ಟೇ ಮುಖ್ಯ. ನಮ್ಮ ಜತೆ ಇರುವವರು ಯೋಗ್ಯರೂ, ನಮ್ಮ ಹಿತ ಕಾಪಾಡುವವರೂ ಆಗಿರಬೇಕು.

ವಕ್ರತುಂಡೋಕ್ತಿ

ಎಲ್ಲರೂ ಹುಟ್ಟುವಾಗ ಅಜ್ಞಾನಿಗಳೇ. ಆದರೆ ಕೆಲವರು ಜೀವನವಿಡೀ ಶ್ರಮಪಡುತ್ತಾರೆ ಮೂರ್ಖರಾಗಿರಲು.

ಪುಟ ತೆರೆದಂತೆ...

ಮಿಸ್ಟರ್ ಕೂಲ್ ಆಗಿದ್ದಾರೆ ಸಿದ್ದು
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
ಸಂ.ಪುಟ | 6

ಅದನ್ನೆಲ್ಲ ಬಿಚ್ಚಿಟ್ಟು ಸಮವಸ್ತ್ರ ಧರಿಸಬೇಕು!
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
ಸಂ.ಗಮ | 7

ಮಾತಂದ್ರೆ ಮಾತು

ಕರ್ನಾಟಕದಲ್ಲಿ ಪೆಟ್ರೋಲ್ -ಡೀಸೆಲ್ ಬೆಲೆ ಏರಿಕೆ ಕಾಂಗ್ರೆಸ್ ಪಕ್ಷ ಖಟಾಖಟ್ ಲೂಟಿಯ ಮಾದರಿಯಾಗಿದೆ. ದೇಶದ ಮಹಿಳೆಯರ ಖಾತೆಗೆ ಒಂದು ಲಕ್ಷ ರು. ಹಾಕುವ ಬದಲು ಕಾಂಗ್ರೆಸ್ ಪಕ್ಷವೇ ಜನಸಾಮಾನ್ಯರ ಹಣವನ್ನು ಕದಿಯುತ್ತಿದೆ. ಒಂದೆಡೆ ಆ ಪಕ್ಷ ಹಣದುಬ್ಬರದ ಬಗ್ಗೆ ಮಾತನಾಡುತ್ತದೆ. ಮತ್ತೊಂದೆಡೆ ರಾಜ್ಯದಲ್ಲಿ ತೈಲಬೆಲೆ ಏರಿಸುವ ಮೂಲಕ ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕುತ್ತಿದೆ.

ಶಹಜಾದ್ ಪೂನಾವಾಲಾ
ಬಿಜೆಪಿ ವಕ್ತಾರ

ಕ್ರೌರ್ಯದ ದರ್ಶನ

ನಟ ದರ್ಶನ್ ಗ್ಯಾಂಗ್ ವಿರುದ್ಧ ಮತ್ತಷ್ಟು ಸಾಕ್ಷ್ಯ | ವಿಚಾರಣೆ ವೇಳೆ ಕ್ರೌರ್ಯದ ಕರಾಳ ಮುಖ ಬಿಚ್ಚಿಟ್ಟ ಸಂಗಡಿಗರು | ದರ್ಶನ್ ಮನೆಯಲ್ಲಿ ಶೂ, ಬಟ್ಟೆ ಜಪ್ತಿ | ಪವಿತ್ರಾ ಗೌಡ ಮ್ಯಾನೇಜರ್ ಬಂಧನ | ಇಂದು ಸ್ವಾಮಿ ಮನೆಗೆ ಸಚಿವ ಪರಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಪ್ರಯೋಗಿಸಿರುವ ದರ್ಶನ್ ಗ್ಯಾಂಗ್‌ನ ಒಂದೊಂದೇ ಕರಾಳ ಮುಖಗಳು ಹೊರಬರುತ್ತಿದ್ದು, ನಿತ್ಯ ಒಂದಿಲ್ಲೊಂದು ಆಘಾತಕಾರಿ ಮಾಹಿತಿಯನ್ನು ವಿಚಾರಣೆ ವೇಳೆ ದುರುಳರು ಬಾಯಿಬಿಡುತ್ತಿದ್ದಾರೆ. ಇದೇ ವೇಳೆ ಪ್ರಕರಣ ಸಂಬಂಧ ಪವಿತ್ರಾ ಮ್ಯಾನೇಜರ್ ಸೇರಿದಂತೆ ಇನ್ನಷ್ಟು ಜನರನ್ನು ವಶಕ್ಕೆ ಪಡೆಯಲಾಗಿದೆ.

ಚಿತ್ರದುರ್ಗದಿಂದ ಬೆಂಗಳೂರಿನ ಪಟ್ಟಣಗೆರೆಯ ಶೆಡ್‌ಗೆ ರೇಣುಕಾ ಸ್ವಾಮಿಯನ್ನು ಕರೆ ತಂದ ಆರೋಪಿಗಳನ್ನು ಶನಿವಾರ ತಡ ರಾತ್ರಿ ಚಿತ್ರದುರ್ಗಕ್ಕೆ ಕರೆದೊಯ್ದು ಮಹಜರು ನಡೆಸಲಾಯಿತು. ಭಾನುವಾರ ನಟ ದರ್ಶನ್ ಮತ್ತು ಪವಿತ್ರಾ ಗೌಡ ಮನೆಯಲ್ಲೂ ಮಹಜರು ನಡೆಸಲಾಯಿತು. ಚಿತ್ರದುರ್ಗದಲ್ಲಿ ರೇಣುಕಾಸ್ವಾಮಿ ಸ್ಕೂಟರ್ ಅಡ್ಡಗಟ್ಟಿ ರಿಕ್ಷಾದಲ್ಲಿ ಕರೆದುಕೊಂಡ ಬಂದ ಸ್ಥಳ, ಮತ್ತು ಅಲ್ಲಿಂದ ಬಾಡಿಗೆ ಕಾರನ್ನು ಬುಕ್ ಮಾಡಿ ಕರೆದುಕೊಂಡ ಬಂದ ಸ್ಥಳ, ದಾರಿ ಮಧ್ಯೆ ಉಪಾಹಾರ ಸೇವಿಸಿದ ಹೋಟೆಲ್ ಸೇರಿದಂತೆ ಆರೋಪಿಗಳ ಅಂದಿನ ಚಲನವಲನಗಳ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕಿದ್ದಾರೆ.

ಇದೇ ವೇಳೆ ರೇಣುಕಾ ಸ್ವಾಮಿಯನ್ನು ಕರೆ ತಂದ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ನೂರಾರು ಜನರು ನೆರೆದಿದ್ದ ಹಿನ್ನೆಲೆಯಲ್ಲಿ ಪೊಲೀಸರು ಮಧ್ಯರಾತ್ರಿ ಬಳಿಕ ಮಹಜರು ನಡೆಸಿದರು.

ಇತ್ತ ದರ್ಶನ್ ಮನೆಯಲ್ಲಿ ಮಹಜರು ವೇಳೆ ಘಟನೆ ದಿನ ದರ್ಶನ್ ಧರಿಸಿದ್ದ ಬಟ್ಟೆ, ಶೂ, ಚಪ್ಪಲಿ ಸೇರಿದಂತೆ ಹಲವು ವಸ್ತುಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪವಿತ್ರಾ ಗೌಡ ಮ್ಯಾನೇಜರ್ ದೇವರಾಜ್ ಘಟನೆ ನಡೆದ ದಿನ ಪಟ್ಟಣಗೆರೆಯ ಶೆಡ್ ನಲ್ಲಿದ್ದ ಎಂಬ ಮಾಹಿತಿ ಮೇರೆಗೆ ಆತನನ್ನು ಬಂಧಿಸಲಾಗಿದೆ.

ಪರಮೇಶ್ವರ್ ಭೇಟಿ: ಕೊಲೆಗೀಡಾದ ರೇಣುಕಾಸ್ವಾಮಿ ಮನೆಗೆ ಗೃಹ ಸಚಿವ ಜಿ. ಪರಮೇಶ್ವರ್ ಮತ್ತು ಉನ್ನತ ಶಿಕ್ಷಣ ಸಚಿವ ಡಾ. ಸುಧಾಕರ್ ಸೋಮವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಲಿದ್ದಾರೆ.

- ದರ್ಶನ್ ಸಮ್ಮುಖದಲ್ಲಿಯೇ ರೇಣುಕಾ ಸ್ವಾಮಿಗೆ ಕರೆಂಟ್ ಶಾಕ್ ಕೊಟ್ಟಿದ್ದ ದುರುಳರು
- ದರ್ಶನ್ ಹಾಗೂ ಪವಿತ್ರಾ ಗೌಡ ಮನೆಯಲ್ಲಿ ಮಹಜರು, ಹತ್ತಾರು ಸಾಕ್ಷ್ಯ ವಶ
- ಶವ ಎಸೆಯುವಾಗ ಸ್ವಾಮಿ ಮೈಮೇಲಿದ್ದ ನಗ ನಾಣ್ಯ ದೋಚಿದ ಜಗ್ಗ, ರಾಘವೇಂದ್ರ
- ತಂದೆಯ ಅಂತ್ಯಸಂಸ್ಕಾರದಲ್ಲಿ ಭಾಗವಹಿಸಲು ಆರೋಪಿ ಅನಿಲ್‌ಗೆ ಅನುಮತಿ
- ಸಾವಿನ ಮನೆಯಲ್ಲಿಯೂ ಶೋಧ ಕಾರ್ಯ ನಡೆಸಿರುವ ಪೊಲೀಸರು
- ತನಿಖಾ ತಂಡಕ್ಕೆ ವಾಪಸಾದ ಪೊಲೀಸ್ ಅಧಿಕಾರಿ ಗಿರೀಶ್ ನಾಯ್ಕ್
- ಚಿತ್ರದುರ್ಗದಿಂದ ಅಪಹರಣಕ್ಕೆ ಬಳಸಿದ ಕಾರನ್ನು ವಶಕ್ಕೆ ಪಡೆದ ಪೊಲೀಸರು
- ಪೋಸ್ಟ್‌ಮಾರ್ಟಂ ತಿರುಚಲು ಒಂದು ಕೋಟಿ ಆಫರ್ ನೀಡಿದ್ದ ಆರೋಪ



ದರ್ಶನ್ ಡಿಫೆಂಡರ್ ಕಾರು ವಶ

ರೇಣುಕಾಸ್ವಾಮಿ ಕೊಲೆಯಾದ ಮರುದಿನ ಶೂಟಿಂಗ್‌ನಲ್ಲಿ ಪಾಲ್ಗೊಳ್ಳಲು ತೆರಳಿದ್ದ ದರ್ಶನ್, ಬೆಂಗಳೂರಿನಿಂದ ಮೈಸೂರಿಗೆ ಮೂರು ಕೋಟಿ ರೂ. ಮೊತ್ತದ ಡಿಫೆಂಡರ್ ಕಾರಿನಲ್ಲಿ ತೆರಳಿದ್ದರು. ಪಂಚತಾರಾ ಹೋಟೆಲ್‌ನಲ್ಲಿ ನಿಲ್ಲಿಸಲಾಗಿದ್ದ ಡಿಫೆಂಡರ್ ಕಾರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ ಎನ್ನಲಾಗಿದೆ. ವಿಚಾರಣೆಗೆ ಡಿಫೆಂಡರ್ ಕಾರಿನಲ್ಲಿಯೇ ಬರುವುದಾಗಿ ದರ್ಶನ್ ಹೇಳಿದರೂ, ಕೇಳದೇ ಪೊಲೀಸ್ ವಾಹನದಲ್ಲಿ ಬೆಂಗಳೂರಿಗೆ ಕರೆತಂದಿದ್ದನ್ನು ಸ್ಮರಿಸಬಹುದು.

ಶಾಕ್ ಟ್ರೀಟ್‌ಮೆಂಟ್

ದರ್ಶನ್ ಗ್ಯಾಂಗ್ ರೇಣುಕಾಸ್ವಾಮಿಯ ಮೇಲೆ ಬರ್ಬರವಾಗಿ ಹಲ್ಲೆ ನಡೆಸಿ ವಿದ್ಯುತ್ ಶಾಕ್ ನೀಡಿರುವ ವಿಚಾರವೂ ಬೆಳಕಿಗೆ ಬಂದಿದೆ. ದರ್ಶನ್ ಸಮ್ಮುಖದಲ್ಲೇ ನಂದೀಶ್ ಮತ್ತು ದೀಪಕ್ ಶಾಕ್ ಟ್ರೀಟ್‌ಮೆಂಟ್ ಕೊಟ್ಟ ಸಂಗತಿ ಬಯಲಿಗೆ ಬಂದಿದೆ. ಮರಣೋತ್ತರ ವರದಿಯಲ್ಲೂ ದೇಹದಲ್ಲಿ ಸುಟ್ಟ ಗಾಯದ ಬಗ್ಗೆ ಉಲ್ಲೇಖಿಸಲಾಗಿತ್ತು. ಶಾಕ್ ಕೊಟ್ಟ ಸಾಧನಕ್ಕಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ. ದಿನದಿಂದ ದಿನಕ್ಕೆ ಆರೋಪಿಗಳ ಸಂಖ್ಯೆ ಹೆಚ್ಚುತ್ತಲಿದ್ದು, ಮುಂದಿನ ದಿನದಲ್ಲಿ ಆರೋಪಿಗಳ ಸಂಖ್ಯೆ 25ಕ್ಕೆ ಏರಿಕೆಯಾದರೂ ಅಚ್ಚರಿಯಿಲ್ಲ ಎನ್ನಲಾಗುತ್ತಿದೆ.

ಅಪರಾಧಿಗಳಿಗೆ ಶಿಕ್ಷೆಯಾಗಲಿ ಎಂದ ಸುದೀಪ್

ನಟ ಸುದೀಪ್ ಪ್ರತಿಕ್ರಿಯಿಸಿದ್ದು, ರೇಣುಕಾಸ್ವಾಮಿ ಕುಟುಂಬಕ್ಕೆ ಎಲ್ಲರ ಹೃದಯ ಮಿಡಿಯುತ್ತಿದೆ. ವಾತಾವರಣ ಏನೋ ಸರಿ ಕಾಣಿಸುತ್ತಿಲ್ಲ. ಚಿತ್ರರಂಗಕ್ಕೆ ನ್ಯಾಯ ಸಿಗಬೇಕು. ಚಿತ್ರರಂಗಕ್ಕೆ ಒಂದು ಕ್ಲೀನ್‌ಚಿಟ್ ಬೇಕಾಗಿದೆ. ಚಿತ್ರರಂಗ ಎಂದರೆ ಒಬ್ಬರು-ಇಬ್ಬರು ಅಲ್ಲ. ನೂರಾರು ಕಲಾವಿದರಿದ್ದಾರೆ. ಅಪರಾಧಿಗೆ ಶಿಕ್ಷೆಯಾದರೆ ಚಿತ್ರರಂಗ ಖುಷಿ ಪಡುತ್ತದೆ ಎಂದಿದ್ದಾರೆ. ಬಾಳಿ ಬದುಕಬೇಕಿದ್ದ ರೇಣುಕಾಸ್ವಾಮಿ ಕೊಲೆಯಾಗಿದ್ದಾನೆ. ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿ. ಸತ್ಯ ಹೊರತರಲು ಮಾಧ್ಯಮ ಮತ್ತು ಪೊಲೀಸರು ಪ್ರಯತ್ನಿಸುತ್ತಿದ್ದಾರೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯಲಿ. ಕಾನೂನಿನ ಮೇಲೆ ಜನರಿಗೆ ನಂಬಿಕೆ ಬರುವಂತಾಗಲಿ ಎಂದವರು ಹೇಳಿದರು.

ಚಿತ್ರರಂಗದಿಂದ ದರ್ಶನ್ ಬ್ಯಾನ್ ಕುರಿತಂತೆ ಪ್ರತಿಕ್ರಿಯಿಸಿದ ಸುದೀಪ್, ಚಿತ್ರರಂಗದ ಮೇಲೆ ಕಪ್ಪು ಚುಕ್ಕೆ ಬರುವುದು ನಮಗೂ ಇಷ್ಟವಿಲ್ಲ. ಹಿರಿಯರು ಕಟ್ಟಿ ಬೆಳೆಸಿದ ಚಿತ್ರರಂಗ ಯಾರೋ ಒಬ್ಬರಿಂದ ಹಾಳಾಗಬಾರದು. ಬ್ಯಾನ್ ಮಾಡುವುದಕ್ಕಿಂತ ರೇಣುಕಾಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗುವುದು ಮುಖ್ಯ. ನಾನು ಯಾರ ಪರವೂ ಇಲ್ಲ. ವಿರುದ್ಧವೂ ಇಲ್ಲ. ನಾನು ನ್ಯಾಯದ ಪರ ಇದ್ದೇನೆ ಎಂದು ಕಿಚ್ಚ ತಿಳಿಸಿದರು.

ವಿಚಾರಣೆಗೆ ಇಂದು ಬಿಎಸ್‌ವೈ ಹಾಜರು

ಬೆಂಗಳೂರು: ಲೈಂಗಿಕ ಕಿರುಕುಳ ಆರೋಪದ ಮೇಲೆ ತಮ್ಮ ಮೇಲಿನ ಪೋಕ್ಸೋ ಪ್ರಕರಣ ಸಂಬಂಧ ಬಿಜೆಪಿ ನಾಯಕ ಮತ್ತು ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ಸೋಮವಾರ ಸಿಐಡಿ ಪೊಲೀಸರ ಎದುರು ವಿಚಾರಣೆಗೆ ಹಾಜರಾಗಲಿದ್ದಾರೆ.

ತಮ್ಮ ಬಂಧನಕ್ಕೆ ಹೊರಡಿಸಲಾಗಿದ್ದ ಜಾಮೀನುರಹಿತ ವಾರಂಟ್‌ಗೆ ಹೈಕೋರ್ಟ್ ತಡೆ ನೀಡಿದ ವೇಳೆ, ಜೂ. 17 ರಂದು ಹಾಜರಾಗುವುದಾಗಿ ಯಡಿಯೂರಪ್ಪ ತಿಳಿಸಿದ್ದರು. ಪೂರ್ವ ಯೋಜಿತ ಕಾರ್ಯ ಕ್ರಮಗಳಿಂದಾಗಿ ತಾವು ದೆಹಲಿಗೆ ತೆರಳಿದ್ದ ರಿಂದ ವಿಚಾರಣೆ ಎದುರಿಸಲಾಗಿರಲಿಲ್ಲ. ಈ ಬಗ್ಗೆ ಮೊದಲೇ ಮಾಹಿತಿ ನೀಡಿದ್ದಾಗಿ ಬಿಎಸ್‌ವೈ ಸ್ಪಷ್ಟಪಡಿಸಿದ್ದರು.

ವಿಚಾರಣೆ ಸಂದರ್ಭದಲ್ಲಿ ತಮ್ಮ ಬಳಿ ಇರುವ ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ಪೊಲೀಸರು ಯಡಿಯೂರಪ್ಪ ಅವರನ್ನು ಪ್ರಶ್ನಿಸುವ ಸಾಧ್ಯತೆ ಇದೆ. ದೂರುದಾರರ ಜತೆಗಿನ ಸಂಭಾಷಣೆಯ ಆಡಿಯೋ ತುಣುಕಿನ ಬಗ್ಗೆಯೂ ಬಿಎಸ್‌ವೈ ಅವರನ್ನು ಪ್ರಶ್ನಿಸುವ ಸಾಧ್ಯತೆ ಇದೆ.

ಮುಫ್ತಿ ವಿರೋಧ: ಬಿಎಸ್‌ವೈಗೆ ಜಾಮೀನು ನೀಡಿದ ಕ್ರಮವನ್ನು ಕಾಶ್ಮೀರ ಮಾಜಿ ಸಿಎಂ ಮೆಹಬೂಬಾ ಮುಫ್ತಿ ಟೀಕಿಸಿದ್ದಾರೆ

ಫನ್‌ತರಂಗ

– ರಘುಪತಿ ಶೃಂಗೇರಿ –

ಶೆಡ್‌ನಲ್ಲಿ ನಡೆದ ಮರ್ಡರ್



ಕೆಪಿಸಿಸಿ ಕಚೇರಿಯಲ್ಲಿ ಅಕಾಡೆಮಿ ಅಧ್ಯಕ್ಷರ ಜತೆ ಚರ್ಚೆಗೆ ಆಕ್ಷೇಪ

ಡಿಕೆಶಿ ಅಕಾಡೆಮಿಕ್ ಚರ್ಚೆಗೆ ವಿರೋಧ

ಬೆಂಗಳೂರು: ಲೋಕಸಭಾ ಚುನಾವಣೆಯ ಫಲಿತಾಂಶದ ಬಳಿಕ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿಯಲ್ಲಿ ನಡೆದ ವಿವಿಧ ಅಕಾಡೆಮಿಗಳ ಅಧ್ಯಕ್ಷರ ಸಭೆ ಇದೀಗ ವಿವಾದಕ್ಕೆ ಕಾರಣವಾಗಿದ್ದು, ಈ ನಡೆಯನ್ನು ಸಾಹಿತ್ಯ, ಕಲಾ ವಲಯದ ಹಿರಿಯರು ವಿರೋಧಿಸಿದ್ದಾರೆ.

ಪಕ್ಷದ ಕಚೇರಿಗಳಲ್ಲಿ ಸಾಹಿತ್ಯ ಕಲೆ ಸಂಸ್ಕೃತಿಗೆ ಸಂಬಂಧಿಸಿದ ವಿವಿಧ ಅಕಾಡೆಮಿ ಹಾಗೂ ಪ್ರಾಧಿಕಾರಗಳ ಅಧ್ಯಕ್ಷರ ಸಭೆ ನಡೆಸಿರುವುದು ಸರಿಯಲ್ಲ. ಈ ಅಕಾಡೆಮಿ ಮತ್ತು ಪ್ರಾಧಿಕಾರಗಳು ಉಳಿದ ಬೋರ್ಡ್ ಮತ್ತು ಪ್ರಾಧಿಕಾರಗಳಂತಲ್ಲ. ಸಾಹಿತ್ಯ ಕಲೆ ಸಂಸ್ಕೃತಿಗೆ ಸಂಬಂಧಿಸಿದ ಈ ಅಕಾಡೆಮಿಗಳು ತಜ್ಞರ ತಜ್ಞತೆಯ ನೆಲೆಯಲ್ಲಿ ಕಾರ್ಯನಿರ್ವಹಿಸುವ ಸ್ವಾಯತ್ತ ಸಂಸ್ಥೆಗಳು. ಇವುಗಳಿಗೆ ಸರಕಾರವೇ ಅಧ್ಯಕ್ಷರು ಹಾಗು ಸದಸ್ಯರನ್ನು ನೇಮಿಸಿದರೂ , ಅದು ತಜ್ಞತೆಯ ಮತ್ತು ಆ ಕ್ಷೇತ್ರದಲ್ಲಿ ಅವರ ಸಾಧನೆಯನ್ನು ಮಾನದಂಡವಾಗಿ ಇಟ್ಟುಕೊಂಡು ನೇಮಕವಾಗಿರುತ್ತದೆಯೇ ಹೊರತು ರಾಜಕೀಯ ಅಥವಾ ಪಕ್ಷ ರಾಜಕಾರಣ ಮಾನದಂಡವಲ್ಲ. ಆದ್ದರಿಂದ ಈ ರೀತಿ ನೇಮಕವಾಗಿರುವ ತಜ್ಞರನ್ನು ಇತರೆ ರಾಜಕೀಯ ನಾಯಕರ ರೀತಿಯಲ್ಲಿ ಪಕ್ಷದ ಕಚೇರಿಗೆ ಕರೆಸಿಕೊಂಡು ಸಭೆ ನಡೆಸುವುದು ಸರಿಯಲ್ಲ ಎನ್ನುವ ಮಾತುಗಳು ಕೇಳಿಬಂದಿದೆ.

ಪಕ್ಷದ ಕಚೇರಿಯಲ್ಲಿ ಆಯೋಜಿಸಿದ ಈ ಸಭೆಗೆ ಅಧ್ಯಕ್ಷರು ಹಾಗು ಸದಸ್ಯರು ಏಕೆ ಭಾಗವಹಿಸಿದರು ಎಂದು ನನಗೆ ಅರ್ಥವಾಗುತ್ತಿಲ್ಲ . ಇದನ್ನು ಒಪ್ಪಲಾಗದು. ಇದು ಅತ್ಯಂತ ವಿಷಾದನೀಯ ನಡೆ. ಪ್ರಜಾಸತ್ತಾತ್ಮಕ ಮತ್ತು ಜಾತ್ಯತೀತ ಮೌಲ್ಯಗಳ ನೆಲೆಯಲ್ಲಿ ಸಮಸಮಾಜದ ನಿರ್ಮಾಣಕ್ಕಾಗಿ ಸಂವಿಧಾನಬದ್ಧ ರಾಜಕಾರಣದಲ್ಲಿ ತೊಡಗಿರುವ ಲಕ್ಷಾಂತರ ಬರಹಗಾರರು, ಸಾಹಿತಿಗಳು ಮತ್ತು ಪ್ರಗತಿಪರರ ಬಗ್ಗೆ ಒಂದು ಕೆಟ್ಟ ಸಂದೇಶ ರವಾನೆಯಾಗಿದೆ.

– **ನಿರಂಜನಾರಾಧ್ಯ ವಿ.ಪಿ** ಶಿಕ್ಷಣ ತಜ್ಞ

ನಾಡಿನ ಸಾಹಿತ್ಯ, ಸಂಗೀತ, ಕನ್ನಡ-ಸಂಸ್ಕೃತಿ, ಜಾನಪದ, ಯಕ್ಷಗಾನ, ಶಿಲ್ಪಕಲೆ ಸೇರಿದಂತೆ ವಿವಿಧ ಅಕಾಡೆಮಿಗಳ ಅಧ್ಯಕ್ಷರು ಹಾಗೂ ಸದಸ್ಯರನ್ನು ಕೆಪಿಸಿಸಿ ಕಚೇರಿಗೆ ಕರೆಸಿ ಡಿಸಿಎಂ ಡಿ.ಕೆ.ಶಿವಕುಮಾರ್ ನಿರ್ದೇಶನ ನೀಡಿರುವ ಜತೆಗೆ ಇಂಥ ಹುದ್ದೆಗಳು ರಾಜಕಾರಣಕ್ಕೆ ಮೆಟ್ಟಿಲು ಎಂಬರ್ಥದಲ್ಲಿ ಮಾತನಾಡಿದ್ದಾರೆ. ರಾಜ್ಯದ ಸಾಹಿತ್ಯಿಕ ವಲಯದಲ್ಲಿ ಈ ರೀತಿ ಹಿಂದೆಂದೂ ನಡೆದ ಉದಾಹರಣೆಯಿಲ್ಲ. ಅಕಾಡೆಮಿಗಳ ಸಭೆಯನ್ನು ವಿಧಾನಸೌಧದಲ್ಲೋ ಅಥವಾ ರವೀಂದ್ರ ಕಲಾಕ್ಷೇತ್ರದಲ್ಲೋ ನಡೆಸಿ ಸಂವಾದ ನಡೆಸಿದರೆ ವಿರೋಧ ಇರುತ್ತಿರಲಿಲ್ಲ. ಆದರೆ ಕೆಪಿಸಿಸಿ ಕಚೇರಿಯಲ್ಲಿ ನಡೆದರೆ ಏನರ್ಥ

– **ವಿ. ಸುನಿಲ್ ಕುಮಾರ್** ಬಿಜೆಪಿ ಪ್ರಧಾನ ಕಾರ್ಯದರ್ಶಿ

ಎನ್‌ಸಿಇಆರ್‌ಟಿ ಪಠ್ಯದಿಂದ ಬಾಬರಿ ಮಸೀದಿಗೆ ಕೊಕ್

ನವದೆಹಲಿ: 9 ರಿಂದ 12ನೇ ತರಗತಿವರೆಗಿನ ಕೇಂದ್ರೀಯ ಪಠ್ಯಕ್ರಮದಿಂದ ಬಾಬರೀ ಮಸೀದಿ ಧ್ವಂಸ ಪ್ರಕರಣದ ಪಾಠವನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನಾ ಮತ್ತು ತರಬೇತಿ ಸಂಸ್ಥೆ (ಎನ್‌ಸಿಇಆರ್‌ಟಿ) ಕೈಬಿಟ್ಟಿರುವುದು ಚರ್ಚೆಗೆ ಗ್ರಾಸವಾಗಿದೆ.

ಪ್ರಜಾತಂತ್ರದ ಮುಂದಿರುವ ಸವಾಲುಗಳು, ಬಾಬರಿ ಮಸೀದಿ ಧ್ವಂಸದಂತಹ ವಿಷಯಗಳನ್ನು ಕೈಬಿಡಲಾಗಿದೆ. ಬಾಬರಿ ಮಸೀದಿ ಧ್ವಂಸ ಎಂಬ ಪದದ ಬದಲು ಮೂರು ಗುಮ್ಮಟಗಳ ಧ್ವಂಸ ಎಂಬ ಪದ ಬಳಸಲಾಗಿದೆ.

ಎನ್‌ಸಿಇಆರ್‌ಟಿ ಮೂಲಕ ಶಿಕ್ಷಣ ಕ್ಷೇತ್ರವನ್ನು ಕೇಸರೀಕರಣಗೊಳಿಸುವ ಸಂಚು ನಡೆದಿದೆಯೆಂಬ ಆರೋಪದ ಬಗ್ಗೆ ಸಂಸ್ಥೆಯ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಪ್ರತಿಕ್ರಿಯೆ ನೀಡಿದ್ದಾರೆ. ಪಠ್ಯಪುಸ್ತಕಗಳ ಮೂಲಕ ಮಕ್ಕಳಿಗೆ ಗಲಭೆ, ಹಿಂಸಾಚಾರದ ಬಗ್ಗೆ ಬೋಧಿಸುವುದು ಸರಿಯಲ್ಲ. ಸಮಾಜದಲ್ಲಿ ಅಪರಾಧ ಕೃತ್ಯ, ಹಿಂಸಾಚಾರ ಸೃಷ್ಟಿಸುವುದು ಹೇಗೆ, ಸಂತ್ರಸ್ತರಾಗುವುದು ಹೇಗೆ ಎಂಬುದನ್ನು ನಮ್ಮ ವಿದ್ಯಾರ್ಥಿಗಳಿಗೆ ಬೋಧಿಸಬೇಕೇ. ಶಿಕ್ಷಣದ ಮೂಲ ಉದ್ದೇಶ ಇದೆಯೇ ಏನು ಎಂದು ಸಕ್ಲಾನಿ ಪ್ರಶ್ನಿಸಿದ್ದಾರೆ.

ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಸ್ಮೃತಿ ಹೆಸರು

ನಡ್ಡಾ ಬಳಿಕ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಸಮರ್ಥರ ಹುಡುಕಾಟ, ಮಹಿಳಾ ಅಭ್ಯರ್ಥಿಯತ್ತ ಚಿತ್ತ

ಸ್ಮೃತಿ ಇರಾನಿ

ವಿನೋದ್ ತಾವ್ಡೆ

ಸುನೀಲ್ ಬನ್ಸಲ್

ದೆಹಲಿ: ನಾಲ್ಕು ವರ್ಷಗಳ ಕಾಲ ಬಿಜೆಪಿ ರಾಷ್ಟ್ರಾಧ್ಯಕ್ಷ ಸ್ಥಾನವನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ಜೆ.ಪಿ.ನಡ್ಡಾ, ಈಗ ಮೋದಿ 3.0 ಸರಕಾರದಲ್ಲಿ ಸಂಪುಟ ದರ್ಜೆ ಸಚಿವರಾಗಿದ್ದಾರೆ. ಬಿಜೆಪಿಗೆ ಮುಂದಿನ ಅಧ್ಯಕ್ಷ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿ ಆಯ್ಕೆಗೆ ಬಿಜೆಪಿ ಪಾಳಯದಲ್ಲಿ ಗಂಭೀರ ಚರ್ಚೆ ಮುಂದುವರಿದಿದ್ದು, ಸದ್ಯ ಮುನ್ನೆಲೆಗೆ ಬಂದ ಪಟ್ಟಿಯಲ್ಲಿ ಮಾಜಿ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರ ಹೆಸರೂ ಇದೆ.

ಲೋಕಸಭಾ ಚುನಾವಣೆಯಲ್ಲಿ ಅಮೇಥಿಯಿಂದ ಸೋಲು ಅನುಭವಿಸಿದ ಬಳಿಕ ಸ್ಮೃತಿ ಇರಾನಿ ಹೆಸರು ಪಕ್ಷದ ಅಧ್ಯಕ್ಷರ ಸ್ಥಾನಕ್ಕೆ ಕೇಳಿ ಬಂದಿದೆ. ಈವರೆಗೂ ಕೇಸರಿ ಪಕ್ಷದಲ್ಲಿ ಮಹಿಳೆಯೊಬ್ಬರು ಅಧ್ಯಕ್ಷರಾಗಿಲ್ಲ. ಈ ಬಾರಿ ಮಹಿಳೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಸ್ಮೃತಿ ಇರಾನಿಗೆ ಅಧ್ಯಕ್ಷ ಪಟ್ಟ ನೀಡುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ.

ಮೊದಲ ದಲಿತ ಮಹಿಳಾ ರಾಷ್ಟ್ರಪತಿ ನೇಮಕ ಹಾಗೂ ಮಹಿಳಾ ಮೀಸಲಾತಿ ಕಾಯ್ದೆ ಜಾರಿಗೊಳಿಸಿದ ಹೆಗ್ಗಳಿಕೆಗೆ ಬಿಜೆಪಿ ಪಾತ್ರವಾಗಿದೆ. ಚುನಾವಣೆಯಲ್ಲಿ ಮಹಿಳಾ ಮತಗಳು ಭಾರಿ ದೊಡ್ಡ ಪಾತ್ರ ವಹಿಸಿವೆ. ಹೀಗಾಗಿ ಸ್ಮೃತಿ ಇರಾನಿ ನೇಮಕ ಪಕ್ಷದ ಮೇಲೆ ಮಹಿಳೆಯರ ವಿಶ್ವಾಸ ಹೆಚ್ಚಿಸಲು ನೆರವಾಗಲಿದೆ ಎಂದು ವಿಶ್ಲೇಷಿಸಲಾಗಿದೆ.

ಕಮಲ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಕೇಳಿ ಬಂದ ಮತ್ತೊಂದು ಹೆಸರು ಸುನೀಲ್ ಬನ್ಸಲ್. ಚುನಾವಣಾ ಸಮಯದಲ್ಲಿ ಬಿಜೆಪಿಯ ಕೆಲವು ಹೇಳಿಕೆ ಹಾಗೂ ನಡೆಗೆ ಆರ್‌ಎಸ್‌ಎಸ್ ವಿರೋಧ ವ್ಯಕ್ತಪಡಿಸಿದೆ. ಬಹಿರಂಗವಾಗಿಯೇ ಮೋದಿ ಮತ್ತು ಅಮಿತ್ ಶಾ ಅವರನ್ನು ಮಣಿಪುರ ಸೇರಿ ಹಲವು ವಿಷಯಗಳಲ್ಲಿ ತರಾಟೆಗೆ ತೆಗೆದುಕೊಂಡಿತ್ತು. ಈ ಮೊದಲು ಕೂಡ ಜೆ.ಪಿ. ನಡ್ಡಾ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಆರ್‌ಎಸ್‌ಎಸ್ ಬೆಂಬಲ ನೀಡಿತ್ತು. ಈ ಬಾರಿ ಸಂಘವು ಬಿಜೆಪಿ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಪಶ್ಚಿಮ ಬಂಗಾಳ, ಒಡಿಶಾ, ತೆಲಂಗಾಣ ಉಸ್ತುವಾರಿಯಾಗಿ ಕಾರ್ಯ ನಿರ್ವಹಿಸಿ ಗುರುತಿಸಿಕೊಂಡ ಸುನೀಲ್ ಬನ್ಸಲ್ ಅವರನ್ನು ಬೆಂಬಲಿಸುವ ಸಾಧ್ಯತೆ ಎಂದು ಹೇಳಲಾಗಿದೆ.

- ಸ್ಮೃತಿ ಜತೆ ವಿನೋದ್ ತಾವ್ಡೆ, ಸುನೀಲ್ ಬನ್ಸಲ್ ಹೆಸರು ಮುನ್ನೆಲೆಗೆ

ಮತ್ತೊಂದು ಹೆಸರು ವಿನೋದ್ ತಾವ್ಡೆ. ಬಿ.ಎಲ್.ಸಂತೋಷ್ ಬಳಿಕ ಬಿಜೆಪಿಯಲ್ಲಿ ಪ್ರಭಾವಿ ಪ್ರಧಾನ ಕಾರ್ಯದರ್ಶಿ ಎಂಬ ಬಿರುದು ಪಡೆದವರು ಮರಾಠಾ ನಾಯಕ ವಿನೋದ್ ತಾವ್ಡೆ. ಆರ್‌ಎಸ್‌ಎಸ್, ಎಬಿವಿಪಿ ಮೂಲಕ ರಾಜಕೀಯ ಪ್ರವೇಶಿದ ತಾವ್ಡೆ, ಅಮಿತ್ ಶಾ ಆಪ್ತರು, ಪ್ರಧಾನಿ ಮೋದಿ ಜತೆಗೂ ನಿಕಟ ಸಂಪರ್ಕ ಹೊಂದಿದ್ದಾರೆ. ಮಹಾರಾಷ್ಟ್ರದಲ್ಲಿ ವಿಧಾನಸಭಾ ಚುನಾವಣೆ ಹತ್ತಿರವಿರುವ ಹಿನ್ನೆಲೆ ತಾವ್ಡೆ ಅವರಿಗೆ ಅಧ್ಯಕ್ಷ ಸ್ಥಾನ ಕೊಟ್ಟರೆ ಮರಾಠಿಗರ ವಿಶ್ವಾಸ ಗಳಿಸಲು ನೆರವಾಗಲಿದೆ ಎಂಬ ಚರ್ಚೆ ಪಕ್ಷದಲ್ಲಿದೆ.

ಇವಿಎಂ ಹ್ಯಾಕಿಂಗ್ ಸಾಧ್ಯ ಎಂದ ಮಸ್ಕ್

ನಿಲ್ಲದ ಮತಯಂತ್ರ ಚರ್ಚೆ | ಎಲಾನ್ ಮಸ್ಕ್ ಹೇಳಿಕೆಗೆ ರಾಹುಲ್ ಗಾಂಧಿ ಬೆಂಬಲ

ದೆಹಲಿ: ಮಳೆ ನಿಂತರೂ ಮಳೆ ಹನಿ ನಿಂತಿಲ್ಲ ಎಂಬಂತೆ, ಲೋಕಸಭೆ ಚುನಾವಣೆ ಬಳಿಕ ತಣ್ಣಗಾಗಿದ್ದ ವಿದ್ಯುನ್ಮಾನ ಮತ ಯಂತ್ರಗಳ ಬಗೆಗಿನ ಚರ್ಚೆ ಮತ್ತೆ ಮುನ್ನಲೆಗೆ ಬಂದಿದೆ. ಅದಕ್ಕೆ ಟೆಸ್ಲಾ ಕಾರು ಕಂಪನಿ ಮಾಲೀಕ, 'ಎಕ್ಸ್' ಕಿರು ಸಂದೇಶವಾಹಕ ಕಂಪನಿ ಒಡೆಯ ಎಲಾನ್ ಮಸ್ಕ್ ಇವಿಎಂ ವಿರೋಧಿಸಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ವ್ಯಾಪಕ ಪರ ವಿರುದ್ಧ ಚರ್ಚೆಗೆ ಕಾರಣವಾಗಿದೆ.

- ಇವಿಎಂ ಬೇಡ ಎಂದ ಎಲಾನ್ ಮಸ್ಕ್‌ಗೆ ರಾಹುಲ್ ಬೆಂಬಲ, ರಾಜೀವ್ ಚಂದ್ರಶೇಖರ್ ತಿರುಗೇಟು

'ನಾವು ಇವಿಎಂಗಳನ್ನು ಚುನಾವಣಾ ಪ್ರಕ್ರಿಯೆಯಿಂದಲೇ ದೂರವಿಡಬೇಕು. ಮಾನವ ಅಥವಾ ಕೃತಕ ಬುದ್ಧಿಮತ್ತೆ (ಎಐ)ಯ ಮೂಲಕ, ಇವಿಎಂಗಳನ್ನು ಹ್ಯಾಕ್ ಮಾಡುವ ಸಾಧ್ಯತೆ ಇದೆ' ಎಂದು ಹೇಳಿರುವ ಎಲಾನ್ ಮಸ್ಕ್, ಅಮೆರಿಕ ಅಧ್ಯಕ್ಷೀಯ ಚುನಾವಣೆಯಲ್ಲಿ ಇವಿಎಂ ಬಳಸಬಾರದು ಎಂದು ಒತ್ತಾಯಿಸಿದ್ದಾರೆ. ಎಲಾನ್ ಮಸ್ಕ್ ಹೇಳಿಕೆಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಧ್ವನಿಗೂಡಿಸಿದ್ದಾರೆ. ಈ ಇಬ್ಬರ ಟೀಕೆಯನ್ನು ಖಂಡಿಸಿರುವ ಮಾಹಿತಿ ತಂತ್ರಜ್ಞಾನ ಖಾತೆ ಮಾಜಿ ಸಚಿವ ರಾಜೀವ್ ಚಂದ್ರಶೇಖರ್, 'ಇವಿಎಂ' ಭಾರತದ ಚುನಾವಣೆಗಳಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದೆ ಎಂದು ಇವಿಎಂ ವಿರೋಧಿಗಳಿಗೆ ತಿರುಗೇಟು ನೀಡಿದ್ದಾರೆ.

ಎಲಾನ್ ಹೇಳಿಕೆ ಬೆಂಬಲಿಸಿ ಇವಿಎಂ ಬಗ್ಗೆ ಮಾತನಾಡಿರುವ ಸಂಸದ ರಾಹುಲ್, 'ಭಾರತದಲ್ಲಿ ಇವಿಎಂಗಳೆಂದರೆ ಬ್ಲ್ಯಾಕ್ ಬಾಕ್ಸ್ ಇದ್ದಂತೆ. ಅವನ್ನು ಪರಿಶೀಲಿಸಲು ಯಾರಿಗೂ ಅನುಮತಿ ಸಿಗುವುದಿಲ್ಲ. ಚುನಾವಣಾ ಪ್ರಕ್ರಿಯೆ ಪಾರದರ್ಶಕ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಲಾಗುತ್ತಿದೆ. ಸಂಸ್ಥೆಗಳಲ್ಲಿ ಹೊಣೆಗಾರಿಯ ಕೊರತೆ ಉಂಟಾದಾಗ ಪ್ರಜಾಪ್ರಭುತ್ವ ವಂಚನೆಗೆ ಗುರಿಯಾಗುತ್ತದೆ' ಎಂದು ಟೀಕಿಸಿದ್ದಾರೆ.

→ 4

ಟೀಕೆಗೆ ರಾಜೀವ್ ಚಂದ್ರಶೇಖರ್ ಇದಿರೇಟು

'ಇವಿಎಂ ಕುರಿತ ಎಲಾನ್ ಮಸ್ಕ್ ಹೇಳಿಕೆ ಬಹಳ ಸಾಮಾನ್ಯದ್ದಾಗಿದೆ. ಭಾರತದಲ್ಲಿ ಬಳಸುವ 'ಇವಿಎಂ' ಪೂರ್ಣ ಸುರಕ್ಷಿತ. ಯಾವುದೇ ನೆಟ್‌ವರ್ಕ್ ಮತ್ತು ಸಂಪರ್ಕದಿಂದ ದೂರವಿರಿಸಲಾಗಿದೆ. ಬ್ಲೂಟೂತ್, ವೈಫೈ ಸಂಪರ್ಕ ಇವಿಎಂಗಳಿಗೆ ಇರುವುದಿಲ್ಲ. ಇವಿಎಂ ತಯಾರಿಕಾ ಘಟಕದಲ್ಲಿ ಪ್ರೋಗ್ರಾಂ ಮಾಡಲಾದ ನಿಯಂತ್ರಕಗಳನ್ನು ಬದಲಿಸಲು ಸಾಧ್ಯವಿಲ್ಲ' ಎಂದು ಕೇಂದ್ರದ ಮಾಹಿತಿ-ತಂತ್ರಜ್ಞಾನ ಖಾತೆ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ಪ್ರತಿಕ್ರಿಯಿಸಿದ್ದಾರೆ. ಸುರಕ್ಷಿತವಾಗಿ ವಿದ್ಯುನ್ಮಾನ ಮತಯಂತ್ರ(ಇವಿಎಂ) ತಯಾರಿಸುವ ಬಗ್ಗೆ ತರಬೇತಿಯನ್ನೂ ನೀಡುವುದಾಗಿ ಸವಾಲು ಹಾಕಿದ್ದಾರೆ. ರಾಜೀವ್ ಈ ಹೇಳಿಕೆಗೂ ಪ್ರತಿಕ್ರಿಯಿಸಿರುವ ಎಲಾನ್ ಮಸ್ಕ್, 'ಯಾವುದನ್ನೂ ಬೇಕಾದರೂ ಹ್ಯಾಕ್ ಮಾಡಬಹುದು' ಎಂದಿದ್ದಾರೆ.

ಎಲಾನ್ ಮಸ್ಕ್

ರಾಹುಲ್ ಗಾಂಧಿ

ರಾಜೀವ್ ಚಂದ್ರಶೇಖರ್

ಸಮಾಚಾರ ಸಣ್ಣದಲ್ಲ

ಅರ್ಜಿ ಆಹ್ವಾನ

ಬೆಂಗಳೂರು: 2023-24ನೇ ಶೈಕ್ಷಣಿಕ ವರ್ಷಕ್ಕೆ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ, ಕೆ.ಆರ್ ವೃತ್ತ, ಬೆಂಗಳೂರು ಇಲ್ಲಿ ತಾಂತ್ರಿಕೇತರ ವಿಷಯಗಳನ್ನು ಬೋಧನೆ ಮಾಡಲು ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ, ಯುಜಿಸಿ ನಿಯಮಗಳಾನುಸಾರ ಸೂಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಹಾಗೂ ಸಂಬಂಧಿತ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ರನ್‌ಅಡಿಕ್ಟ್ ಸಂಸ್ಥೆಯಿಂದ ವಾರ್ಷಿಕ ಓಟ ಕಾರ್ಯಕ್ರಮ

ಬೆಂಗಳೂರು: ಜೂನ್ 23ರ ಭಾನುವಾರ ಬೆಳಗ್ಗೆ 6 ಗಂಟೆಗೆ ಬೆಂಗಳೂರಿನ ರಾಜರಾಜೇಶ್ವರಿ ನಗರದ ಬಾಲಕೃಷ್ಣ ಬಯಲು ರಂಗಮಂದಿರದಲ್ಲಿ ರನ್ ಅಡಿಕ್ಟ್ ರಾಜರಾಜೇಶ್ವರಿ ನಗರ ಸಂಸ್ಥೆ ತನ್ನ ಆರನೇ ವಾರ್ಷಿಕ ಓಟ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. 10 ಕಿಮೀ, 5 ಕಿಮೀ, ಮೂರು ಕಿಮೀ ವಿಭಾಗದಲ್ಲಿ ಓಟ ನಡೆಯಲಿದ್ದು 3500ಕ್ಕೂ ಹೆಚ್ಚು ಸಾರ್ವಜನಿಕರು ಮತ್ತು ಓಟಗಾರರು ಪಾಲ್ಗೊಳ್ಳಲಿದ್ದಾರೆ. ಸಂಸ್ಥೆಯು ಪ್ರತಿವರ್ಷ ತನ್ನ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಹಸಿರುಸ್ನೇಹಿಯಾಗಿಸಿದ್ದು ಪ್ಲಾಸ್ಟಿಕ್ ಮತ್ತಿತರ ಪರಿಸರ ಮಾರಕ ವಸ್ತುಗಳನ್ನು ಬಳಸದೇ ಇಷ್ಟು ದೊಡ್ಡ ಪ್ರಮಾಣದ ಕಾರ್ಯಕ್ರಮ ನಡೆಸುವುದು ವಿಶೇಷವಾಗಿದೆ. ರನ್ ಅಡಿಕ್ಟ್ ಸಂಸ್ಥೆಯು ಸ್ವಯಂಸೇವಕರಿಂದ ಮುನ್ನಡೆಸುವ ಲಾಭರಹಿತ ಸಂಸ್ಥೆಯಾಗಿದೆ. ಸಂಸ್ಥೆ ವತಿಯಿಂದ ಇದುವರೆಗೆ ಗ್ರಾಮೀಣ ಸರಕಾರಿ ಶಾಲೆಯ ಮಕ್ಕಳಿಗೆ ಒಂದೂವರೆ ಲಕ್ಷ ನೋಟ್ ಪುಸ್ತಕಗಳನ್ನು, 700ಕ್ಕೂ ಹೆಚ್ಚು ಡೆಸ್ಕ್, ಆಟೋಟ ಸಾಮಗ್ರಿಗಳನ್ನು ಉಚಿತವಾಗಿ ನೀಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9886673223 ಸಂಪರ್ಕಿಸಿ. ನೋಂದಣಿಗಾಗಿ runaddicts.in/events ವೆಬ್‌ಸೈಟ್‌ಗೆ ಭೇಟಿ ನೀಡಿ.

ಈಜಲು ಹೋದ ಬಾಲಕ ಸಾವು

ಆನೇಕಲ್: ತಾಲ್ಲೂಕಿನ ಬಳ್ಳೂರು ಕೆರೆಯಲ್ಲಿ ಭಾನುವಾರ ಕೆರೆಯಲ್ಲಿ ಈಜಲು ಹೋದ ಎಸ್‌ಎಸ್‌ಎಲ್ಸಿ ವಿದ್ಯಾರ್ಥಿಯೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ. ಧನುಷ್(15) ಮೃತ ಬಾಲಕ. ಧನುಷ್ ಮೃತದೇಹಕ್ಕಾಗಿ ಪೊಲೀಸ್ ಮತ್ತು ಅಗ್ನಿಶಾಮಕದಳ ಕಾರ್ಯಾಚರಣೆ ನಡೆಸಿದೆ. ರಾತ್ರಿ 8.30ಗಂಟೆಯಾದರೂ ಮೃತ ದೇಹ ಸಿಕ್ಕಿರಲಿಲ್ಲ, ಕಾರ್ಯಾಚರಣೆ ಮುಂದುವರೆದಿದೆ.

ಸುಮನಹಳ್ಳಿಯಲ್ಲಿ ಶವ ಹಾಕಿದ ಬಳಿಕ ಜಗ್ಗ ಚಿನ್ನಾಭರಣ ದೋಚಿದ್ದ | ದರ್ಶನ್ ಎದುರಲ್ಲಿಯೇ ಸ್ವಾಮಿ ಮರ್ಮಾಂಗಕ್ಕೆ ವಿದ್ಯುತ್ ಶಾಕ್ | ಶವ ಸಾಗಿಸುವ ಬಗ್ಗೆ ದರ್ಶನ್ ನಿವಾಸದಲ್ಲಿಯೇ ಪ್ಲ್ಯಾನ್

ಚಿತ್ರಹಿಂಸೆಯೊಂದಿಗೆ ಚಿನ್ನವನ್ನೂ ದೋಚಿದ್ದ ಡಿ ಗ್ಯಾಂಗ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಇಡೀ ಸಮಾಜವೇ ಆಘಾತಕ್ಕೆ ಒಳಗಾಗುವಂತೆ ಹಲ್ಲೆ ನಡೆಸಿ, ಕಿರುಕುಳ ನೀಡಿ ರೇಣುಕಾಸ್ವಾಮಿಯನ್ನು ಕೊಲೆ ಮಾಡಿದ್ದ ದರ್ಶನ್ ಆ್ಯಂಡ್ ಗ್ಯಾಂಗ್ ಕೊನೆಯಲ್ಲಿ ಆತನ ಮೈಮೇಲಿದ್ದ ಚಿನ್ನವನ್ನು ಕಸಿದುಕೊಂಡಿದ್ದರು ಎನ್ನುವ ಆಘಾತಕಾರಿ ವಿಷಯ ಬಹಿರಂಗವಾಗಿದೆ.

ರೇಣುಕಾಸ್ವಾಮಿಯನ್ನು ಚಿತ್ರ-ವಿಚಿತ್ರವಾಗಿ ಹಿಂಸೆ ನೀಡಿ ಕೊಲೆ ಮಾಡಿದ್ದು ಮಾತ್ರವಲ್ಲದೇ ಮೈಮೇಲಿದ್ದ ಒಡವೆಯನ್ನು ಕೂಡ ದೋಚಿರುವುದು ತನಿಖೆಯ ವೇಳೆ ಬಯಲಾಗಿದೆ. ರೇಣುಕಾಸ್ವಾಮಿ ಬರ್ಬರ ಕೊಲೆಯ ಬಳಿಕ ಅವರ ಮೈಮೇಲಿದ್ದ ಚಿನ್ನಾಭರಣವನ್ನು ಕಳವು ಮಾಡಲಾಗಿದೆ. ಪೊಲೀಸರ ತನಿಖೆ ವೇಳೆ ಈ ಸ್ಫೋಟಕ ಮಾಹಿತಿಯನ್ನು ಆರೋಪಿ ರವಿ ಬಾಯ್ಬಿಟ್ಟಿದ್ದಾನೆ. ರೇಣುಕಾಸ್ವಾಮಿ ಮೈಮೇಲಿದ್ದ ಚಿನ್ನವನ್ನು ಆರೋಪಿ ಜಗ್ಗ ದೋಚಿದ್ದಾನೆ ಎಂದು ವಿಚಾರಣೆ ವೇಳೆಗೆ ತಿಳಿಸಿದ್ದಾನೆ ಎನ್ನಲಾಗಿದೆ.

ವಿಚಾರಣೆ ವೇಳೆ ರವಿ, ಸುಮನಹಳ್ಳಿ ಬಳಿ ರೇಣುಕಾಸ್ವಾಮಿ ಶವವನ್ನು ಎಸೆದರು. ಬಳಿಕ ಪೊಲೀಸ್ ಠಾಣೆಗೆ ಶರಣಾಗುವಂತೆ ಹೇಳಿದರು. ಆದರೆ ಭಯದಿಂದ ಠಾಣೆಗೆ ಹೋಗದೆ ಕಾರಿನಲ್ಲಿ ದುರ್ಗಕ್ಕೆ ಬಂದೆ. ಕಾರಿನಲ್ಲಿ ಜಗ್ಗನೊಂದಿಗೆ ಚಿತ್ರದುರ್ಗಕ್ಕೆ ಬಂದುಬಿಟ್ಟೆ. ಆರೋಪಿ ಜಗ್ಗ ಚಿನ್ನಾಭರಣ ತೆಗೆದುಕೊಂಡು ಬಂದಿದ್ದ ಎಂದು ಹೇಳಿದ್ದಾನೆ.

ದರ್ಶನ್ ಮನೆಯಲ್ಲಿ ಹಲವು ವಸ್ತು ಜಪ್ತಿ

ದರ್ಶನ್ ಮನೆಯಲ್ಲಿ ಮಹಜರು ಮಾಡಿರುವ ಪೊಲೀಸರು, ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಕೆಲವು ಸಾಕ್ಷ್ಯ ಗಳನ್ನು ಕಲೆ ಹಾಕಿದ್ದಾರೆ. ದರ್ಶನ್ ಕೃತ್ಯ ನಡೆದ ದಿನ ಧರಿಸಿದ್ದ ಬಟ್ಟೆ ಸೇರಿದಂತೆ ಕೆಲವು ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಸಿ.ಸಿ. ಟಿ.ವಿಯಲ್ಲಿ ಸೆರೆಯಾಗಿರುವ ದೃಶ್ಯಾವಳಿಗೂ, ಅಂದು ದರ್ಶನ್ ಧರಿಸಿದ್ದ ಬಟ್ಟೆಗೂ ಹೋಲಿಕೆ ಮಾಡಲಾಗುವುದು ಎಂದು ಪೊಲೀಸರು ಹೇಳಿದರು.

ಸಣ್ಣಪುಟ್ಟ ಸಾಕ್ಷ್ಯವನ್ನೂ ಕಲೆ ಹಾಕುತ್ತಿರುವ ಪೊಲೀಸರು, ದರ್ಶನ್ ಅಭಿಮಾನಿಗಳು, ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರೆ ಮಹಜರು ನಡೆಸಲು ತೊಂದರೆ ಆಗಬಹುದು ಎಂಬ ಕಾರಣಕ್ಕೆ ತಡರಾತ್ರಿ ಅವರ ಮನೆಗೆ ಕರೆದೊಯ್ದು ದರ್ಶನ್ ಸಮ್ಮುಖದಲ್ಲೇ ಮಹಜರು ನಡೆಸಲಾಗಿದೆ. ಅರ್ಧ ತಾಸು ಪರಿಶೀಲನೆ ನಡೆಸಲಾಯಿತು' ಎಂದು ಪೊಲೀಸರು ಹೇಳಿದರು.

ಅಪಹರಣ, ಕೊಲೆ ಪ್ರಕರಣದಲ್ಲಿ ಆರೋಪಿಗಳು ಒಂದೊಂದು ಪಾತ್ರ ವಹಿಸಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ಪಟ್ಟಣಗೆರೆಯ ಶೆಡ್‌ನಲ್ಲಿ ಬಿದ್ದಿದ್ದ ರೇಣುಕ ಸ್ವಾಮಿ ತಲೆಕೂದಲು, ರಕ್ತದ ಮಾದರಿ ಸಂಗ್ರಹಿಸಲಾಗಿದೆ. ಆರೋಪಿಗಳ ಮೊಬೈಲ್ ಲೊಕೇಶನ್ ಪರಿಶೀಲಿಸಲಾಗಿದೆ. ಜೂನ್ 8ರಂದು ರಾತ್ರಿ ಎಲ್ಲರೂ ಒಂದೇ ಟವರ್ ವ್ಯಾಪ್ತಿಯಲ್ಲಿ ಇರುವುದು ಪತ್ತೆಯಾಗಿದೆ. ಪವನ್ ಹಾಗೂ ಪವಿತ್ರಾ ಗೌಡ ಹೇಳಿದಂತೆ ಚಿತ್ರದುರ್ಗದಿಂದ ರೇಣಕಾ ಸ್ವಾಮಿ ಅವರನ್ನು ಕರೆತರಲಾಗಿತ್ತು ಎಂದು ಆರೋಪಿ ರಾಘವೇಂದ್ರ ಹೇಳಿಕೆ ನೀಡಿದ್ದಾರೆ. ಇದು ಮಹತ್ವದ್ದಾಗಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಪವಿತ್ರಾಗೌಡ ಮನೆಯಲ್ಲಿಯೂ ಮಹಜರು: ಈ ನಡುವೆ ನಟ ದರ್ಶನ್ ಗೆಳತಿ ಪವಿತ್ರಾ ಗೌಡ ಮನೆಯಲ್ಲಿ ಭಾನುವಾರ ಪೊಲೀಸರು ಮಹಜರು ಪ್ರಕ್ರಿಯೆ ನಡೆಸಿದ್ದಾರೆ. ರೇಣುಕಾಸ್ವಾಮಿ ಮೇಲೆ ಹಲ್ಲೆ ನಡೆಸಿದ ನಂತರ ಪವಿತ್ರಾ ಗೌಡ ನೇರವಾಗಿ ತಮ್ಮ ಮನೆಗೆ ಹೋಗಿದ್ದರು. ಅಲ್ಲದೇ ರೇಣುಕಾಸ್ವಾಮಿಯ ಮೇಲೆ ಮೊದಲು ಹಲ್ಲೆ ಮಾಡಿದ್ದೇ ಪವಿತ್ರಾ ಗೌಡ ಎಂಬ ಮಾಹಿತಿಯೂ ತನಿಖಾಧಿಕಾರಿಗಳಿಗೆ ಲಭ್ಯವಾಗಿದೆ.

ರಾಜರಾಜೇಶ್ವರಿ ನಗರದಲ್ಲಿರುವ ಪವಿತ್ರಾ ಗೌಡ ಮನೆಗೆ ಆಕೆ ಮತ್ತು ಅವರ ಆಪ್ತ ಪವನ್ ಎಂಬವರನ್ನು ಕರೆದೊಯ್ಯಲಾಗಿದ್ದು, ಕೃತ್ಯದ ದಿನ ಪವಿತ್ರಾ ಧರಿಸಿದ್ದ ಬಟ್ಟೆ ಹಾಗೂ ಪವಿತ್ರಾ ಗೌಡ ಹಲ್ಲೆ ಮಾಡಲು ಬಳಸಿದ್ದರು ಎನ್ನಲಾಗಿರುವ ಚಪ್ಪಲಿಯನ್ನು ಜಪ್ತಿ ಮಾಡಲಾಗಿದೆ. ಇದರೊಂದಿಗೆ ಹತ್ಯೆಯಾದ ಸ್ಥಳದಲ್ಲಿದ್ದ ಪವಿತ್ರಾ ಗೌಡ ಅವರ ಮ್ಯಾನೇಜರ್ ದೇವರಾಜ್ ಎಂಬಾತನನ್ನೂ ಪೊಲೀಸರು ವಶಕ್ಕೆ ಪಡೆದಿದ್ದಾರೆ ಎಂಬಮೂಲಗಳಿಂದ ಲಭ್ಯವಾಗಿದೆ.

ಗಿರೀಶ್ ನಾಯ್ಕ್ ಮರುಸೇರ್ಪಡೆ

ಭೀಕರ ಹತ್ಯೆ ಪ್ರಕರಣದ ತನಿಖಾ ತಂಡಕ್ಕೆ ಪೊಲೀಸ್ ಇನ್ಸ್‌ಪೆಕ್ಟರ್ ಗಿರೀಶ್ ನಾಯ್ಕ್ ಮರು ಸೇರ್ಪಡೆಯಾಗಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ತಾತ್ಕಾಲಿಕವಾಗಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಇವರು ವರ್ಗಾವಣೆ ಯಾಗಿದ್ದರು. ನಂತರ ರೇಣುಕಾಸ್ವಾಮಿ ಹತ್ಯೆ ಪ್ರಕರಣ ಬೆಳಕಿಗೆ ಬಂದಿತ್ತು. ಮೈಸೂರಿನಲ್ಲಿ ನಟ ದರ್ಶನ್ ಸೇರಿದಂತೆ ಪ್ರಮುಖ ಆರೋಪಿಗಳ ಬಂಧನದ ಸಂದರ್ಭದಲ್ಲಿ ತನಿಖಾ ತಂಡದಲ್ಲಿದ್ದ ಗಿರೀಶ್ ನಾಯ್ಕ್ ಅವರನ್ನು ಪುನಃ ಸಿ.ಕೆ.ಅಚ್ಚುಕಟ್ಟು ಪೊಲೀಸ್ ಠಾಣೆಗೆ ವರ್ಗಾವಣೆಗೊಳಿಸಲಾಗಿತ್ತು. ಪ್ರಕರಣದ ತನಿಖಾಧಿಕಾರಿಯಾಗಿ ವಿಜಯನಗರ ಉಪವಿಭಾಗದ ಎಸಿಪಿ ಚಂದನ್ ಕುಮಾರ್ ಅವರನ್ನು ನಿಯೋಜಿಸಲಾಗಿತ್ತು. ಆರೋಪಿಗಳ ಹೆಚ್ಚಿನ ವಿಚಾರಣೆ ಅಗತ್ಯವಿರುವ ಹಿನ್ನೆಲೆಯಲ್ಲಿ ಗಿರೀಶ್ ನಾಯ್ಕ್ ಅವರನ್ನು ಪ್ರಕರಣದಲ್ಲಿ ಸಹಾಯಕ ತನಿಖಾಧಿಕಾರಿಯಾಗಿ ಮತ್ತೊಮ್ಮೆ ತಂಡಕ್ಕೆ ಮರು ಸೇರ್ಪಡೆಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಸಾಧನಕ್ಕಾಗಿ ಹುಡುಕಾಟ

ಈ ನಡುವೆ ರೇಣುಕಾಸ್ವಾಮಿ ಕೊಲೆಗೂ ಮೊದಲು ಕರೆಂಟ್ ಶಾಕ್ ಕೊಟ್ಟು ವಿಚಿತ್ರವಾಗಿ ಹಿಂಸೆ ಕೊಟ್ಟಿರುವ ಎಲೆಕ್ಟ್ರಾನಿಕ್ ಉಪಕರಣಕ್ಕಾಗಿ ವಿಜಯನಗರ ಉಪವಿಭಾಗದ ಪೊಲೀಸರು ಬೆಂಗಳೂರು-ಮೈಸೂರು ರಸ್ತೆಯಲ್ಲಿ ಶೋಧ ನಡೆಸುತ್ತಿದ್ದಾರೆ. ಹತ್ಯೆ ಮಾಡಿದ ನಂತರ ರೇಣುಕಾಸ್ವಾಮಿಯ ಶವ ಸಾಗಿಸುವ ಮುನ್ನ ನಟ ದರ್ಶನ್ ಭೇಟಿಗೆ ಹೋಗಿದ್ದ ಆರೋಪಿಗಳು ಈ ಸಂದರ್ಭದಲ್ಲಿ ಕರೆಂಟ್ ಶಾಕ್ ಕೊಡಲು ಬಳಸಿದ್ದ ಎಲೆಕ್ಟ್ರಾನಿಕ್ ಸಾಧನವನ್ನು ಬಿಸಾಡಿದರೆಂದು ತನಿಖೆಯಿಂದ ತಿಳಿದುಬಂದಿದೆ. ಆದ್ದರಿಂದ ಹೆದ್ದಾರಿಯಲ್ಲಿ ಪೊಲೀಸರು ಎಲೆಕ್ಟ್ರಾನಿಕ್ ಉಪಕರಣಕ್ಕಾಗಿ ಶೋಧ ನಡೆಸುತ್ತಿದ್ದಾರೆ.

ಪೋಸ್ಟ್‌ಮಾರ್ಟಂ ತಿರುಚಲು ಕೋಟಿ ಆಫರ್

ಈ ನಡುವೆ ದರ್ಶನ್ ಆ್ಯಂಡ್ ಟೀಂ ಆರೋಪದಿಂದ ಪಾರಾಗಲು ಪೋಸ್ಟ್ ಮಾರ್ಟಂ ವರದಿಯನ್ನೇ ತಿರುಚಲು ಮುಂದಾಗಿದ್ದರು ಎನ್ನುವ ವಿಷಯ ಹೊರಬಂದಿದೆ. ರೇಣುಕಸ್ವಾಮಿ ದೇಹದ ಪೋಸ್ಟ್‌ಮಾರ್ಟಂನಲ್ಲಿ ಮರ್ಮಾಂಗದ ಮೇಲೆ ಬಲವಾಗಿ ಬಿದ್ದಿರುವ ಹೊಡೆತದಿಂದಲೇ ಸಾವು ಸಂಭವಿಸಿದೆ ಎಂದು ಹೇಳಲಾಗಿದೆ. ಆದರೆ ಮರಣೋತ್ತರ ವರದಿಯನ್ನೇ ತಿರುಚಲು ವೈದ್ಯರಿಗೆ ದರ್ಶನ್ ಗ್ಯಾಂಗ್‌ನಿಂದ ಬರೋಬ್ಬರಿ 1 ಕೋಟಿ ರು. ಆಫರ್ ಬಂದಿತ್ತು ಎನ್ನುವುದು ಇದೀಗ ಬಯಲಾಗಿದೆ. ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆದಿತ್ತು. ಹೃದಯಾಘಾತದಿಂದ ರೇಣುಕಾಸ್ವಾಮಿ ಮೃತಪಟ್ಟಿದ್ದಾರೆ ಎಂದು ವರದಿ ಕೊಡುವಂತೆ ಪ್ರಭಾವಿ ರಾಜಕಾರಣಿಯೊಬ್ಬರು ವೈದ್ಯರಿಗೆ ಒಂದು ಕೋಟಿ ಆಫರ್ ಮುಂದಿಟ್ಟಿದ್ದರಂತೆ. ಆದರೆ ಪ್ರಭಾವಿ ರಾಜಕಾರಣಿಯ ಈ ಆಫರ್ ಅನ್ನು ಸಾರಸಗಟಾಗಿ ವೈದ್ಯರು ತಳ್ಳಿಹಾಕಿದ್ದರು ಎಂದು ಹೇಳಲಾಗಿದೆ. ಒಂದು ವೇಳೆ ಮರಣೋತ್ತರ ವರದಿಯಲ್ಲಿ ವೈದ್ಯರು, ಹೃದಯಾಘಾತದಿಂದ ಸಾವು ಎಂದು ವರದಿ ನೀಡಿದ್ದರೆ, ಮೃತದೇಹ ವಿಲೇವಾರಿ ಮಾಡಿದವರು ಮಾತ್ರ ಪ್ರಕರಣದಲ್ಲಿ ಸಿಕ್ಕಿಬೀಳುತ್ತಾರೆ. ದರ್ಶನ್ ಹಾಗೂ ಪವಿತ್ರಾ ಗೌಡ ಬಚಾವ್ ಆಗುವ ಸಾಧ್ಯತೆ ಹೆಚ್ಚಿತ್ತು ಎನ್ನಲಾಗಿದೆ.

ನನ್ನನ್ನು ಹುಡುಕುವ ಪ್ರಯತ್ನ ಮಾಡಬೇಡಿ: ಮಲ್ಲಿಕಾರ್ಜುನ್ ಪತ್ರ

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಬಗ್ಗೆ ಬಗೆದಷ್ಟೂ ಹಲವು ಸಂಗತಿಗಳು ಸಿಗುತ್ತಿವೆ. ಇದೀಗ ದರ್ಶನ್ ಮ್ಯಾನೇಜರ್ ಆಗಿದ್ದಂಥ ಮಲ್ಲಿಕಾರ್ಜುನ ಅವರ ನಿಗೂಢ ಕಣ್ಮರೆ ಬಗ್ಗೆಯೂ ಹಲವು ವಿಷಯಗಳು ಹೊರಬರುತ್ತಿದ್ದು, ಇದೀಗ ಅವರ ಹೆಸರಲ್ಲಿರುವ ಪತ್ರವೊಂದು ವೈರಲ್ ಆಗಿದೆ. ಮಲ್ಲಿಕಾರ್ಜುನ ಅವರ ಸಹಿಯಿರುವ ಪತ್ರದಲ್ಲಿ, ಮೊದಲನೆಯದಾಗಿ ದಯವಿಟ್ಟು ನನ್ನನ್ನು ಕ್ಷಮಿಸು ಎಂದು ತೇಜಸ್ವಿನಿ ಎನ್ನುವವರಿಗೆ ತಿಳಿಸಿದ್ದಾರೆ. ನಾನು ವೈಯಕ್ತಿಕ ವ್ಯವಹಾರಕ್ಕಾಗಿ ತುಂಬಾ ಸಾಲ ಮಾಡಿಕೊಂಡು ಅದನ್ನು ತೀರಿಸಲಾಗದ ಪರಿಸ್ಥಿತಿಗೆ ಬಂದು ತಲುಪಿದ್ದೇನೆ. ನನ್ನ ಈ ಕೆಲಸದಿಂದ ನಾನು ಯಾರಿಗೂ ಮುಖ ತೋರಿಸದ ಪರಿಸ್ಥಿತಿಯಲ್ಲಿದ್ದೇನೆ. ಆದ ಕಾರಣ ನಾನು ಎಲ್ಲೋ ಕಷ್ಟಪಟ್ಟು ದುಡಿದು ವಾಪಸ್ ಬಂದು ಸಾಲ ತೀರಿಸಿ ನನಗಂಟಿರೋ ಕಳಂಕನಾ ಹೋಗಲಾಡಿಸಿ ಮತ್ತೆ ಧೈರ್ಯವಾಗಿ ತಲೆಯೆತ್ತಿ ಎಲ್ಲರ ಮುಂದೆ ಜೀವನ ನಡೆಸುಬೇಕೆಂದು ಕೊಂಡಿದ್ದೇನೆ. ಅಲ್ಲಿಯವರೆಗೆ ನಿಮ್ಮ ಎದುರಿಗೆ ಬರುವ ಶಕ್ತಿ ನನಗಿಲ್ಲ. ನನ್ನನ್ನು ಯಾವುದೇ ಕಾರಣಕ್ಕೂ ಹುಡುಕುವ ಪ್ರಯತ್ನ ಮಾಡಬೇಡಿ. ನನ್ನ ಈ ಸಮಸ್ಯೆಯಿಂದ ನಿನ್ನನ್ನು, ಮಗನನ್ನು ಹಾಗೂ ಮನೆಯವರನ್ನು ಬಿಟ್ಟು ಹೋಗುವ ಪರಿಸ್ಥಿತಿ ಬಂದೊದಗಿದೆ . ದಯವಿಟ್ಟು ನನ್ನನ್ನು ಕ್ಷಮಿಸಿ. ಇಂತಿ ನಿಮ್ಮ ಪ್ರೀತಿಯ ಮಲ್ಲಿಕಾರ್ಜುನ ಎಂದು ಬರೆದು ಸಹಿ ಹಾಕಲಾಗಿದೆ. ಅಷ್ಟಕ್ಕೂ ಈ ಪತ್ರ ಖುದ್ದು ಮಲ್ಲಿಕಾರ್ಜುನ ಅವರು ಬರೆದದ್ದೇ ಅಲ್ಲವೇ ಗೊತ್ತಿಲ್ಲ. ಈ ಬಗ್ಗೆ ತನಿಖೆ ನಡೆಯುತ್ತಿದೆ.

ಗ್ರಹಗತಿ ಸರಿಹೋಗಲು ವಿಶೇಷ ಪೂಜೆ

ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿ ಕಸ್ಟಡಿಯಲ್ಲಿರುವ ದರ್ಶನ್ ಅವರಿಗೆ ಶಿಕ್ಷೆ ಆಗಬೇಕು ಎಂದು ರಾಜ್ಯದ ನಾನಾ ಕಡೆ ಪ್ರತಿಭಟನೆಗಳು ನಡೆಯುತ್ತಿವೆ. ಈ ನಡುವೆ ಅವರಿಗೆ ಕ್ಲೀನ್‌ಚಿಟ್ ಸಿಗಲೆಂದು ದರ್ಶನ್ ಸಹೋದರಿಯ ಗಂಡ ಮಂಜುನಾಥ್ ಅವರು ಕಾರವಾರದಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಮಾಡಿಸಿದ್ದಾರೆ.

ಪೂಜೆಯ ಬಗ್ಗೆ ದೇಗುಲದ ಅರ್ಚಕ ಶ್ರೀಪಾದ್ ಭಟ್ ಮಾತನಾಡಿದ್ದು, ದರ್ಶನ್ ಗ್ರಹಗತಿ ಸರಿಯಿಲ್ಲ, ಆರೋಪಗಳು ಬರುತ್ತಿವೆ, ಸಮಸ್ಯೆಗಳು ಉಂಟಾಗುತ್ತಿವೆ ಎಂದು ಅವರ ಭಾವ ಮಂಜುನಾಥ್ ಅವರು ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಗ್ಗೆಯೇ ಒಂದಷ್ಟು ಪೂಜೆಗಳನ್ನು ಮಾಡಿಸಿ, ಆಶೀರ್ವಾದ ಪಡೆದಿರುತ್ತಾರೆ. ಅವರಿಗೆ ಇರುವ ದುಷ್ಟಶಕ್ತಿಗಳ ಪೀಡೆ ನಿವಾರಣೆಯಾಗಬೇಕು ಅಂತ ಶಿವನಲ್ಲಿ ವಿಶೇಷವಾದ ಅರ್ಚನೆ ಮಾಡಿಸಲಾಗುತ್ತದೆ ಎಂದು ಹೇಳಿದ್ದಾರೆ. ಮನುಷ್ಯನಿಗೆ ಶನಿಪೀಡೆ ಬರುತ್ತದೆ. ದಶಾಭುಕ್ತಿ ಲೆಕ್ಕ ಹಾಕಿದಾಗ ಅಂತಹ ದೋಷಗಳು ಕಂಡುಬಂದರೆ ಶಿವನಿಗೆ ವಿಶೇಷ ಅರ್ಚನೆ ಮಾಡಿಸಲಾಗುತ್ತದೆ. ಅದೇ ರೀತಿ ಇಂದು ಒಂದಷ್ಟು ಪೂಜೆ ಆಗಿದೆ. ದರ್ಶನ್ ಅವರಿಗೆ ಗ್ರಹಗತಿ ಚೆನ್ನಾಗಿ ಬರಲಿ ಅಂತ ಆಶೀರ್ವಾದ ಮಾಡ್ತೀವಿ. ದರ್ಶನ್ ಜಾತಕದ ವಿಷಯ, ವೈಯಕ್ತಿಕ ಜೀವನವನ್ನು ನಾನು ರಿವೀಲ್ ಮಾಡೋದಿಲ್ಲ. ದೇವರ ಪೂಜೆ ಮಾಡುವುದು, ಆಶೀರ್ವಾದ ಮಾಡುವುದು ನಮ್ಮ ಕೆಲಸ ಎಂದು ಭಟ್ ಹೇಳಿದ್ದಾರೆ.

ಚಿತ್ರಕಲೆಯಲ್ಲಿ ಕಲಾವಿದನ ನೈಜತೆ ಮುಖ್ಯ: ಸುಬ್ರಹ್ಮಣ್ಯಂ

ಬೆಂಗಳೂರು: ಚಿತ್ರಕಲೆಗೆ ತನ್ನದೇಯಾದ ನೈಜ ಶ್ರೀಮಂತ ಪರಂಪರೆಯಿದ್ದು, ಅದನ್ನು ಅಧ್ಯಯನಶೀಲವಾಗಿ ನೋಡುವ ಮನಸ್ಥಿತಿ ಬಹಳ ಮುಖ್ಯವಾಗಿದೆ ಎಂದು ಕಲಾ ವಿಮರ್ಶಕ ಸುಬ್ರಹ್ಮಣ್ಯಂ ವೇಣುಗೋಪಾಲ್ ಅಭಿಪ್ರಾಯ ಪಟ್ಟಿದ್ದಾರೆ.

ಜಯನಗರದ ಯುವಪಥದಲ್ಲಿ ಸಂಸ್ಕಾರ ಭಾರತಿ ಮತ್ತು ಹೊಯ್ಸಳ ಚಿತ್ರಕಲಾ ಪರಿಷತ್ ಏರ್ಪಡಿಸಿದ್ದ ಹೊಯ್ಸಳ ಕುಂಚ ಕಲಾದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಚಿತ್ರಕಲೆ ಹೀಗೆ ಎಂದು ವ್ಯಾಖ್ಯಾನ ನೀಡುವುದು ಸರಿಯಾದದ್ದು ಅಲ್ಲ. ಒಬ್ಬೊಬ್ಬರು ಒಂದೊಂದು ದೃಷ್ಟಿಯಲ್ಲಿ ಅದನ್ನು ನೋಡುವ ನೈಜತೆಯನ್ನು ಸದಾ ನಾವು ಉಳಿಸಿಕೊಳ್ಳಬೇಕು. ಚಿತ್ರಕಲೆ ರಚನೆಯಾದ ಮೇಲೆ ಅದನ್ನು ಹಾಗೆ ಬಿಡಬೇಕು. ಅಭಿಪ್ರಾಯಗಳನ್ನು ಆದರಿಸಿ ಮಾಪಾರ್ಡು ಮಾಡಲು ಹೋಗಬಾರದು ಎಂದರು.

ಇತ್ತೀಚಿನ ತಲೆಮಾರಿನ ಚಿತ್ರ ಕಲಾವಿದರು ವಾಸ್ತವತೆ ಅರ್ಥ ಮಾಡಿಕೊಂಡು ಈ ಕ್ಷೇತ್ರದಲ್ಲಿ ಮುಂದುವರಿಯುವ ಚಿಂತನೆ ಮಾಡಬೇಕು. ಯಾವಾಗಲೂ ಬದುಕು ನಮಗೆ ಬಹಳ ಮುಖ್ಯ. ಅದರ ಜತೆಗೆ ಚಿತ್ರಕಲೆ ಹವ್ಯಾಸಿ ವೃತ್ತಿಯಾಗಿ ಅಳವಡಿಸಿಕೊಳ್ಳುವುದು ಸೂಕ್ತ ಎಂದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಪ್ರತಿಯೊಬ್ಬರಿಗೂ ಪ್ರತಿಭೆ ಇರುತ್ತದೆ. ಅವರವರ ಕುಂಚದಲ್ಲಿ ಅರಳಿರುವ ಚಿತ್ರಕಲೆಗೆ ಬೆಲೆ ಕಟ್ಟಲು ಆಗದು. ಸಮಾಜಕ್ಕೆ ಮುಖಾಮುಖಿಯಾಗುವ ಚಿತ್ರಕಲೆಯನ್ನು ರಚಿಸುವಂತೆ ಸಲಹೆ ನೀಡಿ, ಇತಿಹಾಸದ ಕಾಲಘಟ್ಟದಿಂದಲೂ ಚಿತ್ರಕಲೆಗೆ ಮಹತ್ವದೆ ಇದೆ. ಅವರ ಭಾವನೆಗಳು ಮತ್ತು ಕಲ್ಪನೆಗಳನ್ನು ಕುಂಚದ ಮೂಲಕ ವಿನ್ಯಾಸಗೊಳಿಸಲು, ವಾಸ್ತವತೆಗೆ ಕನ್ನಡಿ ಹಿಡಿಯಲು ಚಿತ್ರಕಲೆಗೆ ಸಾಧ್ಯವಿದೆ. ಈ ನಿಟ್ಟಿನಲ್ಲಿ ವೃತ್ತಿಪರತೆಯಿಂದ ಕಲಾವಿದರು ಹೆಚ್ಚು ಅಧ್ಯಯನಶೀಲರಾಗಬೇಕು ಎಂದು ಸಲಹೆ ನೀಡಿದರು.

ಚಿತ್ರಕಲಾ ಪ್ರದರ್ಶನ ಜುಲೈ 3 ತನಕ ಪ್ರತಿದಿನ 11 ಗಂಟೆಗೆ ವೀಕ್ಷಣೆಗೆ ಲಭ್ಯವಿರಲಿದೆ. ಕಾರ್ಯಕ್ರಮದಲ್ಲಿ ಡಿಎಸ್‌ಸಿಆರ್‌ಟಿ ಉಪ ನಿರ್ದೇಶಕ ಡಾ.ಎಂ.ಎನ್.ಕಟ್ಟಿ , ಸಂಸ್ಕಾರ ಭಾರತಿಯ ಆನೂರು ಅನಂತ ಕೃಷ್ಣ ಶರ್ಮ, ಹೊಯ್ಸಳ ಚಿತ್ರಕಲಾ ಪರಿಷತ್ ಸಂಯೋಜಕ ಕೆ.ಎನ್.ಶಂಕರಪ್ಪ ಇದ್ದರು.

ಮುಂದಿನ ಮೂರು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕೆಲ ದಿನಗಳಿಂದ ವಿರಾಮ ನೀಡಿದ್ದ ಮಳೆರಾಯ ಮತ್ತೆ ಆಗಮಿಸುವ ಸೂಚನೆ ನೀಡಿದ್ದು, ಮುಂದಿನ ಮೂರು ದಿನಗಳ ಕಾಲ ರಾಜ್ಯಾದ್ಯಂತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂದಿನ 3 ದಿನಗಳ ಕಾಲ ಕರ್ನಾಟಕದಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ಜೂನ್ 20ರವರೆಗೆ ರಾಜ್ಯದಲ್ಲಿ ಮಳೆ ಮುಂದುವರೆಯಲಿದೆ. ಅಂತೆಯೇ ಗಂಟೆಗೆ 40 ರಿಂದ50 ಕಿ.ಮೀ ವೇಗದಲ್ಲಿ ಬಿರುಗಾಳಿ ಸಹಿತ ಮಳೆಯಾಗಲಿದೆ. ಪ್ರಮುಖವಾಗಿ ಕರಾವಳಿ ಕರ್ನಾಟಕ ಮತ್ತು ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಯಂತೆ ಭಾರೀ ಮಳೆಯಾಗಲಿದ್ದು, ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಳೆ ಎಚ್ಚರಿಕೆ ನೀಡಲಾಗಿದೆ. ಉತ್ತರ ಒಳನಾಡಿನ ಬೆಳಗಾವಿ, ಬಾಗಲಕೋಟೆ, ಕಲಬುರಗಿ, ವಿಜಯಪುರ ಮತ್ತು ಕೊಪ್ಪಳ ಜಿಲ್ಲೆಗಳಲ್ಲೂ ಮಳೆಯಾಗುವ ಎಚ್ಚರಿಕೆ ನೀಡಲಾಗಿದೆ.

ದಕ್ಷಿಣ ಭಾರತದ ಕೆಲ ರಾಜ್ಯಗಳಲ್ಲಿ ಕಳೆದ ಕೆಲ ದಿನಗಳಿಂದ ನಿರಂತರವಾಗಿ ಮಳೆಯಾಗುತ್ತಿದೆ, ಉತ್ತರ ಭಾರತದ ಬಹುತೇಕ ಭಾಗಗಳಲ್ಲಿ ಜನರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಬೆಂಗಳೂರು ಸೇರಿದಂತೆ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ನಿರಂತರ ಮಳೆಯಾಗುತ್ತಿದೆ. ಈಗ ಮುಂದಿನ ಕೆಲವು ದಿನ ಇದೇ ರೀತಿ ಮಳೆಯಾಗುವ ಮುನ್ಸೂಚನೆ ಇದೆ. ಇನ್ನೊಂದೆಡೆ ಬೆಂಗಳೂರಿನಲ್ಲಿ ಮಳೆಯಿಂದ ಎದುರಾಗಬಹುದಾದ ಸಮಸ್ಯೆ ಬಗ್ಗೆ ಮುನ್ನೆಚ್ಚರಿಕೆ ವಹಿಸಲಾಗಿದೆ. ಇನ್ನು 5 ದಿನಗಳಲ್ಲಿ ಬೆಂಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಮುಂಗಾರು ಚುರುಕುಗೊಳ್ಳಲಿದೆ ಎನ್ನಲಾಗಿದೆ.

ಹಳ್ಳಿಕಾರ್ ತಳಿ ಉಳಿಯಬೇಕು: ಲಿಂಬಾವಳಿ

ಬೆಂಗಳೂರು: ಭಾರತದ ಗೋವು ಪರಂಪರೆಯಲ್ಲಿ ಅಳಿವನಂಚಿನಲ್ಲಿರುವ ತಳಿಗಳಲ್ಲಿ ಒಂದಾದ ಹಳ್ಳಿಕಾರ್ ತಳಿಯನ್ನು ಉಳಿಸಿ, ಪೋಷಿಸಬೇಕಾಗಿದೆ ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಕೆ.ಆರ್.ಪುರ ಸಮೀಪದ ರಾಮಗೊಂಡನ ಹಳ್ಳಿಯಲ್ಲಿ ಹಳ್ಳಿಕಾರ್ ಹೋರಿಗಳ ಮೆರವಣಿಗೆ ಮತ್ತು ವಿವಿಧ ಕ್ಷೇತ್ರಗಳ ಬಸಪ್ಪನವರುಗಳ ಮತ್ತು ಶ್ರೀ ದುಗ್ಗಮ್ಮ ದೇವಿ ದೀಪೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ರೈತರ ಜೀವನಾಡಿಯಾ ಗಿರುವ ಹಳ್ಳಿಕಾರ್ ತಳಿ ನಶಿಸಲು ಬಿಡದೆ ಪೋಷಿಸುವ ಹೊಣೆ ಹೊರಬೇಕು. ಹಳ್ಳಿಕಾರ್ ತಳಿ ರಕ್ಷಣೆಗೆ ನನ್ನಿಂದಾದ ಸಹಕಾರ ನೀಡುತ್ತೇನೆ ಎಂದರು.

ಕಾರ್ಯಕ್ರಮ ಆಯೋಜಕ ರಾಮಗೊಂಡನಹಳ್ಳಿ ಸಂಜೀವ್ ಮಾತನಾಡಿ, ಹಳ್ಳಿಕಾರ್ ರಾಸುಗಳನ್ನು ಉಳಿಸುವ ಉದ್ದೇಶದಿಂದ ಬೀಜದ ಹೋರಿಗಳ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಮೂಲೆಗಳಿಂದ ರಾಸುಗಳ ಜೊತೆಗೆ ಮಾಲಿಕರು ಪಾಲ್ಗೊಂಡಿದ್ದರು. ಮಾಲಿಕರಿಗೆ ಒಂದು ಗ್ರಾಂ ಚಿನ್ನ ಬಹುಮಾನ ರೂಪವಾಗಿ ನೀಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ, ನಟ ಧ್ರುವಸರ್ಜಾ, ಎನ್.ನಾರಾಯಣಸ್ವಾಮಿ, ಸಂಜೀವ್, ಎಲ್.ರಾಜೇಶ್ ಇದ್ದರು.

ಕೆ.ಆರ್.ಪುರ ಸಮೀಪದ ರಾಮಗೊಂಡನಹಳ್ಳಿಯಲ್ಲಿ ಹಳ್ಳಿಕಾರ್ ಹೋರಿಗಳ ಮೆರವಣಿಗೆ ಮತ್ತು ವಿವಿಧ ಕ್ಷೇತ್ರಗಳ ಬಸಪ್ಪನವರುಗಳ ಮತ್ತು ಶ್ರೀ ದುಗ್ಗಮ್ಮ ದೇವಿ ದೀಪೋತ್ಸವ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಅರವಿಂದ ಲಿಂಬಾವಳಿ ಮಾತನಾಡಿದರು.

ಫ್ಲೋರಿಡಾ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಸಹಕಾರ, ಸಂಶೋಧನೆ ಹಾಗೂ ಸಾಂಸ್ಕೃತಿಕ ವಿಚಾರ ವಿನಿಮಯಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯ ಭಾನುವಾರ ಒಡಂಬಡಿಕೆ ಮಾಡಿಕೊಂಡಿದೆ. ಈ ವೇಳೆ ಪಿಇಎಸ್ ಗ್ರೂಪ್‌ನ ಸಿಇಒ ಪ್ರೊ. ಜವಾಹರ್ ದೊರೆಸ್ವಾಮಿ ಹಾಗೂ ಫ್ಲೋರಿಡಾ ವಿವಿಯ ಡಾ. ಕೆನ್ನಥ್ ಜೆ ಫುರ್ಟನ್ ಸೇರಿದಂತೆ ಎರಡು ವಿವಿಯ ಪ್ರಮುಖರಿದ್ದರು.

ಮಾರಕಾಸ್ತ್ರಗಳಿಂದ ಕೊಚ್ಚಿ ಯುವಕನ ಕೊಲೆ

ಹೊಸಕೋಟೆ: ಹೊಸಕೋಟೆ ತಾಲ್ಲೂಕಿನ ಬೆಂಗಳೂರು-ಚೆನ್ನೈ ರಾಷ್ಟ್ರೀಯ ಹೆದ್ದಾರಿ-75ರ ಮೈಲಾಪುರ ಸಮೀಪ ಯುವಕನೊಬ್ಬನನ್ನು ಮಾರಕಾಸ್ತ್ರಗಳಿಂದ ಕೊಲೆ ಮಾಡಲಾಗಿದೆ. ತಾಲ್ಲೂಕಿನ ಗಂಗಾಪುರ ಗ್ರಾಮದ

ನವೀನ್ ನಾಯಕ್(27) ಕೊಲೆಯಾದ ಯುವಕ. ತರಕಾರಿ ವ್ಯಾಪಾರಿಯಾಗಿದ್ದ ನವೀನ್ ನಾಯಕ್ ಶನಿವಾರ ರಾತ್ರಿ ತರಕಾರಿ ತರಲು ಕೆ.ಆರ್.ಪುರ ಮಾರಕಟ್ಟೆಗೆ ಹೋಗಿದ್ದರು. ತರಕಾರಿ ಖರೀದಿಸಿ ಭಾನುವಾರ ಬೆಳಗಿನ ಜಾವ ಸ್ವಗ್ರಾಮಕ್ಕೆ ಮರಳುವ ವೇಳೆ ಘಟನೆ ನಡೆದಿದೆ. ಮೈಲಾಪುರ ಗ್ರಾಮದ ಬಳಿ ಹೆದ್ದಾರಿಯಲ್ಲಿ ಕಾರೊಂದು ಅಡ್ಡಾದಿಡ್ಡಿ ಹೋಗು ತ್ತಿದ್ದನ್ನು ನವೀನ್ ನಾಯಕ್ ಪ್ರಶ್ನಿಸಿದ್ದಾರೆ.

ಇದರಿಂದ ಕುಪಿತಗೊಂಡ ಕಾರಿನಲ್ಲಿದ್ದವರು ಜಗಳಕ್ಕೆ ಇಳಿದರು. ಜಗಳ ವಿಕೋಪಕ್ಕೆ ತಿರುಗಿ ನವೀನ್ ನಾಯಕ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿದ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮೃತರ ಸಂಬಂಧಿಕರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ತೀರ್ಪುಗಳು ಹೇಗೆ ಬರುತ್ತವೆಂದು ಜನರಿಗೆ ಗೊತ್ತಿದೆ: ಗೋಪಾಲಗೌಡ

ಬೆಂಗಳೂರು: ನ್ಯಾಯಮೂರ್ತಿಗಳು ಹೇಗೆ ತೀರ್ಪು ನೀಡುತ್ತಾರೆ? ತೀರ್ಪುಗಳ ನಂತರ ಹೇಗೆ ರಾಜ್ಯಪಾಲರು ಸರಕಾರದ ವಿವಿಧ ಹುದ್ದೆಗಳಿಗೆ ಹೇಗೆ ನೇಮಕಗೊಂಡಿದ್ದಾರೆ ಎಂಬುದು ದೇಶದ ಜನರಿಗೆ ಗೊತ್ತಿದೆ ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದ್ದಾರೆ.

ನಗರದ ಗಾಂಧಿಭವನದಲ್ಲಿ ಭಾನುವಾರ ಕಾಡುಮಲ್ಲೇಶ್ವರ ಗೆಳೆಯರ ಬಳಗದ ವತಿಯಿಂದ ನಿವೃತ್ತ ಐಪಿಎಸ್ ಅಧಿಕಾರಿ ಸಿ. ಚಂದ್ರಶೇಖರ್‌ರ ಕಾವೇರಿ ವಿವಾದ ಒಂದು ಐತಿಹಾಸಿಕ ಹಿನ್ನೋಟ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಪಶ್ಚಿಮ ಬಂಗಾಳದ ಸಿಂಗೂರ್ ಪ್ರಕರಣದಲ್ಲಿ ತಾವು ನೀಡಿದ ತೀರ್ಪು ಜಾಗತಿಕ ಗಮನ ಸೆಳೆಯಿತು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಾವು ನಿವೃತ್ತಿಯಾದ ನಂತರ ಬಂಗಾಳದ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನಾಗಿ ನೇಮಕ ಮಾಡುವುದಾಗಿ ತಿಳಿಸಿದರು. ಆದರೆ ಈ ಹುದ್ದೆಯನ್ನು ತಿರಸ್ಕರಿಸಿದೆ. ಲಾಭದ ಉದ್ದೇಶದಿಂದ ಜೀವಮಾನದಲ್ಲಿ ತೀರ್ಪು ನೀಡಿಲ್ಲ. ರೈತರು, ಬಡವರು, ಶ್ರಮಿಕರ ಪರವಾಗಿ ಸದಾಕಾಲ ನಿಲ್ಲುತ್ತಿದ್ದೆ. ಆದರೆ ಇಂದಿನ ಪರಿಸ್ಥಿತಿ ಸಂಪೂರ್ಣ ಭಿನ್ನವಾಗಿದೆ. ತೀರ್ಪುಗಳನ್ನು ನೀಡಿದ ನಂತರ ಲೋಕಾಯುಕ್ತರು, ರಾಜ್ಯಪಾಲರಾಗುತ್ತಿದ್ದಾರೆ. ಹೇಗೆ ಇಂತಹ ಹುದ್ದೆಗಳಿಗೆ ನೇಮಕಗೊಳ್ಳುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ನ್ಯಾಯಮೂರ್ತಿಗಳು ಪುಸ್ತಕದ ಬದನೆಕಾಯಿಯಾಗಬಾರದು. ಜನರ ಸಮಸ್ಯೆಗಳನ್ನು ಅರ್ಥೈಸಿಕೊಳ್ಳಬೇಕು. ಅರ್ಹತೆ ಆಧಾರದ ಮೇಲೆ ತೀರ್ಪು ನೀಡಬೇಕು. ಸಾಮಾನ್ಯ ಜನತೆ, ದುರ್ಬಲ ವರ್ಗದವರ ಬಗ್ಗೆ ಚಿಂತನೆ ಮಾಡಬೇಕು ಎಂದರು.



ಕಾವೇರಿಗಾಗಿ ಸುಪ್ರೀಂ ಹುದ್ದೆ ಬಿಡಲು ಸಿದ್ದನಿದ್ದೆ

ಕಾವೇರಿ ನ್ಯಾಯಮಂಡಳಿ ಐ ತೀರ್ಪು ವಿರುದ್ಧವಾಗಿ ವಿಧಾನಸಭೆಯಲ್ಲಿ ನಿರ್ಣಯ ಕೈಗೊಂಡಾಗ ಸರಕಾರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗಿತ್ತು. ಸರಕಾರವೇ ಪತನಗೊಳ್ಳುವ ಆತಂಕದಲ್ಲಿತ್ತು. ಆಗ ಕಾಂಗ್ರೆಸ್ ಸರಕಾರ ಅಧಿಕಾರದಲ್ಲಿತ್ತು. ಒಂದು ದಿನ ಕಾನೂನು ಸಚಿವರು, ಕಾನೂನು ಕಾರ್ಯದರ್ಶಿಗಳು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿದ್ದ ತಮ್ಮನ್ನು ಭೇಟಿಯಾಗಲು ಮನೆಗೆ ಬಂದಿದ್ದರು. ಆಗ ಕಾವೇರಿ ವಿಚಾರದಲ್ಲಿ ರಾಜ್ಯದ ಹಿತ ರಕ್ಷಣೆ ಮಾಡಲು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇನೆ. ಈ ವಿಚಾರಕ್ಕಾಗಿ ತಾವು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ರಾಜೀನಾಮೆ ನೀಡಲು ಸಹ ಸಿದ್ದ ಎಂದು ಹೇಳಿದ್ದೆ. ಸರಕಾರ, ರೈತರು, ಜನರ ಪರ ನಿಲ್ಲುತ್ತೇನೆ ಎಂದು ಹೇಳಿದೆ. ಸರಕಾರಕ್ಕೆ ಭುಜಕ್ಕೆ ಭುಜಕೊಟ್ಟು ನಿಂತೆ. ನಂತರ ನಮ್ಮ ಸಹ ನ್ಯಾಯಮೂರ್ತಿಗಳಿಗೆ ಕಾವೇರಿ ವಿವಾದದ ವಿಷಯವನ್ನು ಚೆನ್ನಾಗಿ ಅರ್ಥೈಸಿಕೊಂಡು ಕೂಲಂಕಷವಾಗಿ ಪರಿಶೀಲನೆ ಮಾಡುವಂತೆ ಸಲಹೆ ಮಾಡಿದ್ದಾಗಿ ಸ್ಮರಿಸಿದರು.

ಸರಕಾರ ಕಳೆದ ಸೆಪ್ಟೆಂಬರ್‌ನಲ್ಲಿ ಕಾವೇರಿ ನೀರು ಕುರಿತ ಬಿಕ್ಕಟ್ಟು ಬಗೆಹರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ ಕರೆದಿದ್ದರು. ಸಭೆಗೂ ಮುನ್ನ ಕಾವೇರಿ ವಿಚಾರದಲ್ಲಿ ವಾದಮಾಡಲು ವಕೀಲರಿಗೆ 142 ಕೋಟಿ ರು ವೆಚ್ಚ ಮಾಡಲಾಗಿತ್ತು. ಈ ಹಣದಲ್ಲಿ ಮತ್ತೊಂದು ಅಣೆಕಟ್ಟೆ ನಿರ್ಮಿಸಬಹುದಾಗಿತ್ತು ಎಂದು ನೇರವಾಗಿಯೇ ಹೇಳಿದೆ. ಆಗ ಈ ವಿಚಾರವನ್ನು ಮತ್ತೊಮ್ಮೆ ಚರ್ಚಿಸೋಣ ಎಂದಿದ್ದರು. ಈಗ ಕಾವೇರಿ ವಿವಾದ ಕುರಿತಂತೆ ಈ ಕೃತಿ ಸಮಗ್ರ ಚಿತ್ರಣವನ್ನು ಕಟ್ಟಿಕೊಟ್ಟಿದೆ. ಬೆಂಗಳೂರಿನಲ್ಲಿ ಕಾವೇರಿ ನೀರು ಕುಡಿಯುತ್ತಿದ್ದರೂ ಕಾವೇರಿ ವಿವಾದದ ಬಗ್ಗೆ ಅರಿವು ಇಲ್ಲದವರು ಇದ್ದಾರೆ. ಈ ದೇಶದಲ್ಲಿ ವಿದ್ಯಾರ್ಥಿ ಮತ್ತು ಯುವಸಮೂಹ ದಿಕ್ಕು ತಪ್ಪುತ್ತಿದೆ. ಇದರಿಂದ ಅಪಾಯಕಾರಿ ರಾಜಕೀಯಪಲ್ಲಟಗಳಿಗೆ ಕಾರಣವಾಗಿದೆ. ರಾಜಕೀಯದ ನೆಲೆಯನ್ನು ಅರ್ಥಮಾಡಿಕೊಂಡು ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾಡುಮಲ್ಲೇಶ್ವರ ಗೆಳೆಯರ ಬಳಗ ಅಧ್ಯಕ್ಷ ಬಿ.ಕೆ. ಶಿವರಾಂ ಮಾತನಾಡಿ, ಬ್ರಿಟಿಷರ ಕಾಲದಿಂದ ಹಿಡಿದು ಈಗಿನ ವರೆಗೆ ಸಮಗ್ರ ಚಿತ್ರಣ ನೀಡುವ ಕೃತಿ ಇದಾಗಿದೆ. ಕಾವೇರಿ ವಿವಾದದ ಬಗ್ಗೆ ಜನರ ಕಣ್ತೆರೆಸಲಿದೆ ಎಂದು ಹೇಳಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ನಾಡೋಜ ಡಾ. ಡಬ್ಲ್ಯು.ಪಿ. ಕೃಷ್ಣ, ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು, ಪ್ರಕಾಶಕ ಅಭಿರುಚಿ ಗಣೇಶ್, ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಸದಸ್ಯರು ಇದ್ದರು.

ಹತ್ತು ಹಲವು ವಿಚಾರಗಳಲ್ಲಿ ರಾಜ್ಯದಿಂದ ಪ್ರಬಲ ವಾದ ಮಂಡನೆಯಾಗಿಲ್ಲ. ಕೇಂದ್ರ ಸರಕಾರ ಕೂಡ ರಾಜ್ಯಕ್ಕೆ ನ್ಯಾಯ ನೀಡುತ್ತಿಲ್ಲ. ಇದೀಗ ಇಡ್ಲಿ ತಿಂದರೆ ಜಿ.ಎಸ್.ಟಿ ಪಾವತಿಸುವ ಪರಿಸ್ಥಿತಿ ಇದೆ. ಬರಗಾಲ ಬಂದಾಗ ಕೇಂದ್ರ ಸರಕಾರ ಸಕಾಲಕ್ಕೆ ಹಣ ಕೊಡಲಿಲ್ಲ. ಭಾರತ ಚೆನ್ನಾಗಿ ಅಭಿವೃದ್ಧಿಯಾಗುತ್ತಿದೆ ಎಂದು ಬೇರೆ ದೇಶದಲ್ಲಿ ಕೊಚ್ಚಿಕೊಳ್ಳುವುದು ಮಾತ್ರ ಕಡಿಮೆಯಾಗಿಲ್ಲ.

- ವಿ. ಗೋಪಾಲಗೌಡ, ನಿವೃತ್ತ ನ್ಯಾಯಮೂರ್ತಿ

ಸಮಾಚಾರ ಸಣ್ಣದಲ್ಲ

ಸೆಸ್ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯ

ಬೆಂಗಳೂರು: ಕೇಂದ್ರ ಸರಕಾರ ವರ್ಷಕ್ಕೆ 2,50,000 ಕೋಟಿ ರು.ಗಳಷ್ಟು ಅಗಾಧ ಸೆಸ್ ಸಂಗ್ರಹಿಸುತ್ತಿದ್ದರೂ ಅದರ ಹಂಚಿಕೆಯಲ್ಲಿ ಕರ್ನಾಟಕದಂತಹ ರಾಜ್ಯಗಳಿಗೆ ಅನ್ಯಾಯ ಮಾಡುತ್ತಿದೆ ಎಂದು ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಆಕ್ಷೇಪಿಸಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಸೆಸ್ ಪಾವತಿಯಲ್ಲಿ ಕರ್ನಾಟಕ, ತಮಿಳುನಾಡು, ತೆಲಂಗಾಣದಂತಹ ರಾಜ್ಯಗಳು ಮುಂಚೂಣಿಯಲ್ಲಿವೆ. ಆದರೆ, ಇದಕ್ಕೆ ಪ್ರತಿಯಾಗಿ ಕೇಂದ್ರ ಸರಕಾರದಿಂದ ಈ ರಾಜ್ಯಗಳಿಗೆ ನ್ಯಾಯೋಚಿತ ಪಾಲು ಬರುತ್ತಿಲ್ಲ. ಬದಲಿಗೆ ಹೆಚ್ಚಿನ ಪಾಲೆಲ್ಲ ಉತ್ತರಪ್ರದೇಶ ಮತ್ತು ಬಿಹಾರದಂತಹ ರಾಜ್ಯಗಳಿಗೆ ಹೋಗುತ್ತಿದೆ. ಇದು ಖಂಡಿತವಾಗಿಯೂ ಪ್ರಶ್ನಾರ್ಹ ಎಂದು ಹೇಳಿದ್ದಾರೆ. ತಮ್ಮ ಹೇಳಿಕೆಯನ್ನು ಸಚಿವ ಪಾಟೀಲ್," ತಮಿಳುನಾಡು ಮತ್ತು ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳಾದ ಎಂ ಕೆ ಸ್ಟಾಲಿನ್ ಮತ್ತು ರೇವಂತ್ ರೆಡ್ಡಿ ಮುಂತಾದವರಿಗೆ ಟ್ಯಾಗ್ ಮಾಡಿದ್ದಾರೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕರ್ನಾಟಕದಂತಹ ರಾಜ್ಯಗಳು ತಮಗೆ ಬರಬೇಕಾದ ತೆರಿಗೆ ಪಾಲಿಗಾಗಿ ಸುಪ್ರೀಂಕೋರ್ಟ್ ಮೆಟ್ಟಿಲೇರಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಾಕಬೇಕಾದ ಪ್ರಮೇಯ ಬರುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಚೈತ್ರಾ-ಪ್ರತಿಭಾ ರಂಗಪ್ರವೇಶ

ಬೆಂಗಳೂರು: ವಿದ್ಯಮಾನ್ಯ ನಗರದ ಆರಾಧನಾ ನೃತ್ಯ ಮತ್ತು ಸಂಗೀತ ಶಾಲೆ ವತಿಯಿಂದ ಭಾನುವಾರ ಎ.ಡಿ.ಎ ರಂಗಮಂದಿರದಲ್ಲಿ ಗುರು ಚೈತ್ರಾ ಹಾಗೂ ಪ್ರತಿಭಾ ಅವರ ರಂಗಪ್ರವೇಶ ನಡೆಯಿತು.

ಪುಷ್ಪಾಂಜಲಿಯೊಂದಿಗೆ ಪ್ರಾರಂಭವಾದ ನೃತ್ಯಾರಾಧನೆ ನಂತರ ಶ್ರೀ ಶಂಕರಾಚಾರ್ಯರ ಅರ್ಧ ನಾರೀಶ್ವರ ಸ್ತೋತ್ರವನ್ನು ಪ್ರಸ್ತುತಪಡಿಸಲಾಯಿತು. ಮಾತೃ ಸ್ವರೂಪಿಣಿ ಜಗನ್ಮಾತೆ, ಭಸ್ಮ ವಿಭೂಷಿತ ಪರಶಿವ, ಗಂಧ, ಚಂದನ ಲೇಪಿತೆ ಶಿವೆ, ಸರ್ಪಾಲಂಕಾರ ಶಿವ ಹೀಗೆ ಎರಡೂ ವಿರೋಧಿ ಶಕ್ತಿಗಳ ಸಂಗಮದ ಅಭಿನಯವನ್ನು ಚೈತ್ರ ಮತ್ತು ಪ್ರತಿಭಾರವರು ಬಹಳ ಸುಂದರವಾಗಿ ಅಭಿನಯಿಸಿದರು. ನಂತರದ ವರ್ಣ. ಶಂಕರ- ಮೀನಾಕ್ಷಿಯರ ಪರಿಣಯ. ಈ ನೃತ್ಯ 45 ನಿಮಿಷಗಳ ಅಭಿನಯ. ಡಾ. ಸುಪರ್ಣಾ ವೆಂಕಟೇಶ್ ಅವರ ನಾಟ್ಯ ಸಂಯೋಜನೆ ಅದ್ಬುತವಾಗಿ ಮೂಡಿಬಂತು. ಕಾರ್ಯಕ್ರಮಕ್ಕೆ ಅಭಿಷೇಕ್ ನಟುವಾಂಗ, ಮೇಘಾ, ಮೃದಂಗ ವಿದ್ವಾನ್ ವಿನಯ್ ನಾಗರಾಜ್, ಕೊಳಲು ವಿದ್ವಾನ್ ಮಹೇಶ್ ಸ್ವಾಮಿ, ವೀಣೆ ವಿದ್ವಾನ್ ಪ್ರಶಾಂತ್ ರುದ್ರಪಟ್ನಾ, ರಿದಂ ಪ್ಯಾಡ್ ವಿದ್ವಾನ್ ಕಾರ್ತಿಕ್ ಸಾಥ್ ನೀಡಿದರು.

ತೈಲ ಬೆಲೆ ಇಳಿಸದಿದ್ದರೆ ವ್ಯಾಪಕ ಪ್ರತಿಭಟನೆ

ಬೆಂಗಳೂರು: ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಿರುವುದನ್ನು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆಗಳ ಒಕ್ಕೂಟ ಖಂಡಿಸಿದ್ದು, ರಾಜ್ಯಾದ್ಯಂತ ಪ್ರತಿಭಟನೆ ನಡೆಸುತ್ತೇವೆ ಎಂದು ಕರ್ನಾಟಕ ರಾಜ್ಯ ಸಾರಿಗೆ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ನಟರಾಜ್ ಶರ್ಮ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಟ್ರೋಲ್ ದರ ಇಳಿಸದಿದ್ದರೆ ಮೊದಲು ಬೆಂಗಳೂರು ಬಂದ್ ಮಾಡುತ್ತೇವೆ. ನಂತರ ಕರ್ನಾಟಕ ಬಂದ್ ಮಾಡುತ್ತೇವೆ. ಶಕ್ತಿ ಯೋಜನೆಯಿಂದ ಖಾಸಗಿ ಸಾರಿಗೆ ಉದ್ಯಮ ನೆಲಕಚ್ಚಿದೆ. ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆಯಿಂದ ದೊಡ್ಡ ಹೊಡೆತ ಬಿದ್ದಿದೆ. ತೈಲ ದರ ಏರಿಕೆ ಮಾಡಿದರೆ ಗ್ರಾಹಕರಿಗೆ ಸೇವೆ ನೀಡೋದು ಹೇಗೆ? ರೋಡ್ ಟ್ಯಾಕ್ಸ್, ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಹೆಚ್ಚಳ ಮಾಡಿದರೆ, ಪ್ರಯಾಣಿಕರ ಮೇಲೆ ಹೆಚ್ಚಿನ ದರ ಹಾಕಬೇಕಾಗುತ್ತದೆ ಎಂದರು.

ಯಶೋಧರಮ್ಮ ದಾಸಪ್ಪ ಪ್ರಶಸ್ತಿ ಮೀನಾಕ್ಷಿ ಆಯ್ಕೆ

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2024ನೇ ಸಾಲಿನ ಯಶೋಧರಮ್ಮ ದಾಸಪ್ಪ ಪ್ರಶಸ್ತಿಗೆ ಮಹಿಳಾ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಆಯ್ಕೆಯಾಗಿದ್ದಾರೆ. ಪ್ರಶಸ್ತಿಯು 15 ಸಾವಿರ ನಗದು ಒಳಗೊಂಡಿದೆ. ಮೀನಾಕ್ಷಿ ಬಾಳಿ ಅವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಸಮಾಜವಾದಿ ಚಿಂತನೆಗಳಿಂದ ಆಕರ್ಷಿತರಾಗಿ ಜನಪರ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶೋಷಿತ, ದಮನಿತರ ನೋವಿಗೆ ಮಿಡಿಯಲೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಹೋರಾಟಗಳಲ್ಲಿ ಮುನ್ನುಗ್ಗಿದರು. 2005ರಲ್ಲಿ ಹೆಣ್ಣು ಭ್ರೂಣಹತ್ಯೆ ವಿರೋಧಿ ಆಂದೋಲನವನ್ನು ಹುಟ್ಟುಹಾಕಿ, ರಾಜ್ಯದಾದ್ಯಂತ ಸಂಚರಿಸಿ ಅರಿವು ಮೂಡಿಸಿದರು. ಸದ್ಯ ರಾಜ್ಯ ಜನವಾದಿ ಸಂಘಟನೆಯ ಅಧ್ಯಕ್ಷರಾಗಿದ್ದಾರೆ ಎಂದು ಜನಶಕ್ತಿ ಕೇಂದ್ರದ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ. ಜೂ. 25ರಂದು ಕನ್ನಡಭವನದ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

{ ವಿ.ಸೋಮಣ್ಣ } ಕೇಂದ್ರ ಸಚಿವ

ಕನಕಪುರ ತಾಲೂಕಿನ ಮೂಲಕ ಆಗಬೇಕಿರುವ ರೈಲ್ವೆ ಯೋಜನೆಗೆ ರಾಜ್ಯ ಸರಕಾರ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಸಂಪೂರ್ಣ ಸಹಕಾರ ನೀಡಿದರೆ ರೈಲ್ವೆ ಯೋಜನೆ ಮಾಡಲಾಗುವುದು. ಮೇಕೆದಾಟು ಯೋಜನೆಯನ್ನು ಎರಡು ರಾಜ್ಯಗಳೊಂದಿಗೆ ಮಾತುಕತೆ ನಡೆಸಿ ಯೋಜನೆ ಪ್ರಾರಂಭಿಸಲಾಗುವುದು.

ಜನ ಸಾಮಾನ್ಯರಿಗೂ ಅರ್ಥವಾಗುವಂತೆ ವ್ಯಾಖ್ಯಾನ | ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅಭಿಮತ

ಈಶಾವಾಸ್ಯ ಶ್ಲೋಕದ ಅರ್ಥ ಈಗ ಅರ್ಥವಾಗುತ್ತಿದೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಣ್ಣವನಿದ್ದಾಗ ಈಶಾವಾಸ್ಯ ಉಪನಿಷತ್ತಿನ ಶ್ಲೋಕ ಅರ್ಥವಾಗುತ್ತಿರಲಿಲ್ಲ. ಆದರೆ ಕ್ರಮೇಣ ಅರ್ಥವಾಗಲು ಆರಂಭವಾಯಿತು. ಇದನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಮಾಡಲು ಕನ್ನಡದಲ್ಲಿ ವ್ಯಾಖ್ಯಾನ ಮಾಡಿದ್ದೇನೆ ಎಂದು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಹೇಳಿದರು.

ಮಹಾಲಕ್ಷ್ಮೀಪುರದ ಬಿಜಿಎಸ್ ಸಭಾಂಗಣದಲ್ಲಿ ತಮ್ಮ ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಚಿಕ್ಕವನಿದ್ದಾಗ ಗುರುಕುಲದಲ್ಲಿ ಬಾಯಿ ಪಾಠ ಮಾಡಿದ್ದ ಈಶಾವಾಸ್ಯ ಉಪನಿಷತ್ತಿನ ಮಂತ್ರಗಳು ದೊಡ್ಡವನಾದಂತೆ ಕ್ರಮೇಣ ಕಾಡತೊಡಗಿದವು. ಆದ್ದರಿಂದ ಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಉಪನಿಷತ್ತು ವ್ಯಾಖ್ಯಾನ ಮಾಡಿದ್ದೇನೆ ಎಂದರು.

ಗುರುಕುಲದಲ್ಲಿ ಕಲಿಯುತ್ತಿದ್ದಾಗ ಈಶಾವಾಸ್ಯ ಉಪನಿಷತ್ತಿನ ಶ್ಲೋಕಗಳನ್ನು ಗುರುಗಳು ಹೇಳಿಕೊಡುತ್ತಿದ್ದರು. ಆಗ ನನಗೆ ಅರ್ಥವಾಗುತ್ತಿರಲಿಲ್ಲ, ಒಮ್ಮೆ ಗುರುಗಳನ್ನು ಕೇಳಿದೆ ಈ ಶ್ಲೋಕಗಳು ಅರ್ಥವಾಗುತ್ತಿಲ್ಲಯೆಂದ. ಅದಕ್ಕೆ ಕಂಠ ಪಾಠ ಮಾಡು ಕ್ರಮೇಣ ಅರ್ಥವಾಗುತ್ತವೆ ಎಂದು ಹೇಳಿದ್ದರು. ಕ್ರಮೇಣ ಬಿದ್ದ ಹಲವು ಪೆಟ್ಟುಗಳಿಂದ ಉಪನಿಷತ್ತು ಅರ್ಥವಾಯಿತು. ಇದನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಕನ್ನಡದಲ್ಲಿ ಬರೆದಿದ್ದೇನೆ. ಇದೊಂದು ಮಹೋನ್ನತ ಕೃತಿಯಲ್ಲ. ಆದರೆ ಜ್ಞಾನಮಿತಿಯಲ್ಲಿ ಪಾಮರರಿಗೂ ಅರ್ಥವಾಗುವಂತೆ ಬರೆದಿದ್ದೇನೆ. ಪಂಡಿತರು ಕೃತಿ ಬಗ್ಗೆ ವಿಮರ್ಶೆ ಮಾಡಬಹುದು. ಕೃತಿಯಲ್ಲಿ ತಪ್ಪಿದ್ದರೆ ಅದು ನನಗೆ ಸೇರಿದ್ದು. ಒಳ್ಳೆಯದಿದ್ದರೇ ಅದು ನನ್ನ ಗುರುಗಳಿಗೆ ಸೇರಿದ್ದು ಎಂದು ಹೇಳಿದರು.

ಪ್ರಾಮಾಣಿಕ ಕರ್ತವ್ಯದಿಂದ ಭ್ರಷ್ಟಾಚಾರ ಕಡಿಮೆ

ನ್ಯಾ. ಶಿವರಾಜ್ ಪಾಟೀಲ್ ಅವರು ಮಾತನಾಡಿ, ಒಂದು ಪೀಠ ಹಾಗೂ ಮಠದ ಒಡೆತನ ವಹಿಸಿಕೊಂಡವರು ಪೀಠಾಧಿಪತಿಗಳಾಗುತ್ತಾರೆ. ಕಲೆ, ಸಾಹಿತ್ಯ, ಸಂಸ್ಕೃತಿ ಹಾಗೂ ಸಮಾಜ ಸೇವೆಗಳನ್ನು ಮಾಡಿದ ಪೀಠಾಧಿಪತಿಗಳು ನಿಜವಾದ ಸ್ವಾಮೀಜಿಗಳಾಗುತ್ತಾರೆ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಅವರು ಸ್ವಾಮೀಜಿಗಳಾಗಿದ್ದಾರೆ. ಅಧಿಕಾರ ಪಡೆದವರು ಅಧಿಕಾರ ನೀಡಿದ ಭಗವಂತನಿಗೆ ಮೊದಲು ಕೃತಜ್ಞತೆ ಸಲ್ಲಿಸಬೇಕು. ನಂತರ ಸಿಕ್ಕಿರುವ ಅಧಿಕಾರದಿಂದ ಅಹಂಕಾರಪಡದೆ ಜನರ ಸೇವೆಗೆ ಮುಂದಾಗಬೇಕು. ಹಾಗೂ ಪ್ರಮಾಣಿಕವಾಗಿ ಕರ್ತವ್ಯ ನಿರ್ವಹಿಸಬೇಕು. ಇದನ್ನು ಅಧಿಕಾರದಲ್ಲಿರುವವರು ಪಾಲಿಸದರೆ ಸಮಾಜದಲ್ಲಿ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಹಾಗೂ ಗಣ್ಯರು ಡಾ. ಗುರುರಾಜ ಕರಜಗಿ ಅವರ ಈಶಾವಾಸ್ಯ ಉಪನಿಷತ್ತು, ಬೆರಗಿನ ಬೆಳಕು ಭಾಗ-3 ಮತ್ತು ಭಾಗ-4 ಪುಸ್ತಕಗಳನ್ನು ಬಿಡುಗಡೆ ಮಾಡಿದರು. ಈ ವೇಳೆ ಶಾಸಕ ಸಿ.ಟಿ. ರವಿ, ಆದಿಚುಂಚನಗಿರಿ ಶಾಖಾ ಮಠದ ಕಾರ್ಯದರ್ಶಿಗಳು ಹಾಗೂ ಇತರರು ಇದ್ದರು.

ಮಹಾಲಕ್ಷ್ಮೀಪುರದ ಬಿಜಿಎಸ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಖ್ಯಾತ ಶಿಕ್ಷಣ ತಜ್ಞ ಡಾ. ಗುರುರಾಜ ಕರಜಗಿ ಅವರ ಕೃತಿಗಳನ್ನು ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ, ಶಾಸಕ ಸಿ.ಟಿ. ರವಿ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಗಣ್ಯರು ಬಿಡುಗಡೆಗೊಳಿಸಿದರು.

ಶಾಂತಿ ಮಂತ್ರ ಬೆರಗು ಹುಟ್ಟಿಸುತ್ತದೆ

ಈಶಾವಾಸ್ಯ ಉಪನಿಷತ್ತು ಕೇವಲ 18 ಶ್ಲೋಕಗಳನ್ನು ಹೊಂದಿದೆ. ಆದರೆ ವಿಶಾಲವಾದ ಅರ್ಥವನ್ನು ಧ್ವನಿಸುತ್ತದೆ. ಅದರಲ್ಲಿ ಬರುವ ಶಾಂತಿ ಮಂತ್ರದ ಶ್ಲೋಕ ನನ್ನಲ್ಲಿ ಬೆರಗು ಹುಟ್ಟಿಸುತ್ತದೆ. ಪ್ರವೃತ್ತಿ ಹಾಗೂ ನಿವೃತ್ತಿ ಇದ್ದಾಗ ಸಾಕ್ಷಾತ್ಕಾರವಾಗುತ್ತದೆ. ಈ ಕೃತಿಯನ್ನು ನನ್ನ ಗುರುಗಳಾದ ಶ್ರೀಸಿದ್ದೇಶ್ವರ ಮಹಾಸ್ವಾಮಿಗಳಿಗೆ ಅರ್ಪಿಸಿದ್ದೇನೆ. ಒಮ್ಮೆ ಅವರನ್ನು ಭೇಟಿಯಾದ ವೇಳೆ ಈ ಕೃತಿ ಬಗ್ಗೆ ಮಾತನಾಡಿದ್ದೆ. ಅವರು ಬೇಗ ಪ್ರಕಟ ಮಾಡಿ ಕೊಡಿ ಓದುತ್ತೇನೆ ಎಂದಿದ್ದರು. ಆದರೆ ಅವರು ಈಗ ಇಲ್ಲ. ಹೀಗಾಗಿ ಅವರಿಗೆ ಅರ್ಪಿಸಿದ್ದೇನೆ ಎಂದು ಖ್ಯಾತ ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ನುಡಿದರು.



ಪತ್ರಕರ್ತರಾಗಿ ಸುದ್ದಿ ಬರೆಯುವುದು ಸುಲಭ. ಆದರೆ ಅಂಕಣ ಬರೆಯುವುದು ಬಹಳ ಕಷ್ಟ. ಡಾ. ಗುರುರಾಜ ಕರಜಗಿ ಅವರು ಹಲವು ಪತ್ರಿಕೆಗಳಲ್ಲಿ ಉತ್ತಮ ಅಂಕಣಗಳನ್ನು ಬರೆದಿದ್ದಾರೆ. ಇಷ್ಟು ಅಂಕಣ ಬರೆಯಲು ಅವರಿಗೆ ಹೇಗೆ ಸಾಧ್ಯವಾಯಿತು ಎಂಬುದೇ ಆಶ್ಚರ್ಯ. ಅವರು ಓರ್ವ ಪತ್ರಕರ್ತನಿಗಿಂತ ಹೆಚ್ಚು ಬರೆದಿದ್ದಾರೆ ಮತ್ತು ಓದಿಕೊಂಡಿದ್ದಾರೆ. ಕೇವಲ ವಿದ್ವಾಂಸರಿಗೆ ಮಾತ್ರ ಸೀಮಿತವಾಗಿದ್ದ ಈಶಾವಾಸ್ಯ ಉಪನಿಷತ್ತನ್ನು ಸಾಮಾನ್ಯರು ಓದುವಂತೆ ಕರಜಗಿ ಮಾಡಿದ್ದಾರೆ.

- ವಿಶ್ವೇಶ್ವರ ಭಟ್, ವಿಶ್ವವಾಣಿ ಪ್ರಧಾನ ಸಂಪಾದಕ

ಆತ್ಮಹತ್ಯೆ ತಡೆಗೆ ಸ್ಕ್ರೀನ್ ಡೋರ್

ಬೆಂಗಳೂರು: ನಮ್ಮ ಮೆಟ್ರೋವು ಪ್ರಯಾಣಿಕರ ಸುರಕ್ಷತೆ ಹಿನ್ನೆಲೆಯಲ್ಲಿ ಮೊದಲ ಬಾರಿಗೆ ರೈಲುನಿಲ್ದಾಣದಲ್ಲಿ ಪ್ಲಾಟ್ ಫಾರಂ ಸ್ಕ್ರೀನ್ ಡೋರ್ ಅಳವಡಿಸಲು ಮುಂದಾಗಿದೆ.

ನಮ್ಮ ಮೆಟ್ರೋ ರೈಲು ಕಾರ್ಯಾಚರಣೆ ನಡೆಸುತ್ತಿರುವ ಹಸಿರು ಮತ್ತು ನೀಲಿ ಮಾರ್ಗದ ಪ್ರತಿಯೊಂದು ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಿದ್ದರೂ ಮೆಟ್ರೋದಲ್ಲಿ ಆತ್ಮಹತ್ಯೆಯತ್ನದಂತಹ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಅಲ್ಲದೆ ಬಹುತೇಕ ಪ್ರಯಾಣಿಕರು ಮೆಟ್ರೋ ರೈಲು ಏರುವ ಭರದಲ್ಲಿ ಅಪಘಾತ ಮಾಡಿಕೊಳ್ಳುತ್ತಿದ್ದು, ಈ ಪ್ರಕರಣ ಗಳನ್ನು ತಪ್ಪಿಸಲು ಗಾಜಿನ ಪ್ಲಾಟ್‌ಫಾರ್ಮ್ ಸ್ಕ್ರೀನ್ ಡೋರ್‌ಗಳ ಮೊರೆ ಹೋಗಿದೆ. ಇವು ಮೆಟ್ರೋ ರೈಲಿನ ಪ್ರವೇಶ ದ್ವಾರದಲ್ಲಷ್ಟೆ ತೆರೆದುಕೊಳ್ಳಲಿವೆ. ಅಲ್‌ಸ್ಟಾಮ್ ಟ್ರಾನ್ಸ್ ಪೋರ್ಟ್ ಇಂಡಿಯಾ ಸಂಸ್ಥೆ ಮೆಟ್ರೋ ನಿಲ್ದಾಣಗಳಲ್ಲಿ ಪಿಎಸ್‌ಡಿ ಅಳವಡಿಕೆಗೆ ಕರೆದಿದ್ದ ಟೆಂಡರ್ ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಕಾಳೇನ ಅಗ್ರಹಾರ - ನಾಗವಾರ ಮಾರ್ಗದ (ಗುಲಾಬಿ ಮಾರ್ಗ- 21 ಕಿ.ಮೀ) ನಿಲ್ದಾಣಗಳಲ್ಲಿ ಮತ್ತು ಸೆಂಟ್ರಲ್ ಸಿಲ್ಕ್‌ಬೋರ್ಡ್ - ಕೆ.ಆರ್.ಪುರ- ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಮಾರ್ಗ (ನೀಲಿ ಮಾರ್ಗ- 56 ಕಿ.ಮೀ) ನಿಲ್ದಾಣಗಳಲ್ಲಿ ಪಿಎಸ್‌ಡಿಗಳನ್ನು ಅಳವಡಿಸಲಾಗುತ್ತಿದೆ. ಇದಕ್ಕೆ 857 ಕೋಟಿ ರು. ವೆಚ್ಚ ಮಾಡಲಾಗುತ್ತಿದೆ.

ಗುಲಾಬಿ ಮಾರ್ಗದಲ್ಲಿ ಪೂರ್ಣ ಎತ್ತರದ ಪ್ಲಾಟ್‌ಫಾರ್ಮ್ ಪರದೆಯ ಬಾಗಿಲುಗಳನ್ನು ಹಾಗೂ ನೀಲಿಮಾರ್ಗದಲ್ಲಿ ಅರ್ಧ ಎತ್ತರದ ಪ್ಲಾಟ್‌ಫಾರ್ಮ್ ಸ್ಕ್ರೀನ್ ಗೇಟ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಗುತ್ತಿಗೆ ಸಂಸ್ಥೆಯೇ 5 ವರ್ಷಗಳ ಕಾಲ ನಿರ್ವಹಣೆ ಮಾಡಲಿದ್ದು, ಭದ್ರತಾ ಸಿಬ್ಬಂದಿಗೆ ತರಬೇತಿ ಕೂಡ ನೀಡಲಿದೆ. ಈ ಯೋಜನೆಗೆ ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ (ಜೆಐಸಿಎ) ಆರ್ಥಿಕ ಸಹಕಾರ ನೀಡುತ್ತಿದೆ.

ಬಕ್ರೀದ್: ಸಂಚಾರ ನಿರ್ಬಂಧ

ಬೆಂಗಳೂರು: ಬಕ್ರೀದ್ ಹಬ್ಬ ನಾಡಿನೆಲ್ಲೆಡೆ ಸೋಮವಾರ ಆಚರಿಸಲಾಗುತ್ತಿದ್ದು, ಈ ಹಿನ್ನಲೆಯಲ್ಲಿ ಪೊಲೀಸ್ ಇಲಾಖೆ ನಗರದ ಕೆಲ ಮಾರ್ಗ ಗಳಲ್ಲಿ ಸಂಚಾರವನ್ನು ನಿಷೇಧಿಸಿದ್ದು, ಪರ್ಯಾಯ ಮಾರ್ಗ ಬಳಸುವಂತೆ ಸೂಚಿಸಲಾಗಿದೆ.

ರಸ್ತೆ ಸಂಚಾರಕ್ಕೆ ನಿರ್ಬಂಧ: ಬನ್ನೇರುಘಟ್ಟ ರಸ್ತೆಯ ಗುರಪ್ಪನಪಾಳ್ಯ ಮತ್ತು ಸುತ್ತಮುತ್ತ ಸಾಮೂಹಿಕ ಪ್ರಾರ್ಥನೆ ಸಲ್ಲಿಸುವುದರಿಂದ ಸಾರ್ವಜನಿಕರ ವಾಹನ ಸಂಚಾರವನ್ನು ಬೆಳಗ್ಗೆ 8 ಗಂಟೆಯಿಂದ ಸಂಚಾರವನ್ನು ನಿಷೇಧಿಸಲಾಗಿದೆ. ಸಾಗರ್ ಆಸ್ಪತ್ರೆ ಜಂಕ್ಷನ್‌ನಿಂದ ಗುರಪ್ಪನಪಾಳ್ಯ, ರೆಡ್ಡಿ ಆಸ್ಪತ್ರೆ ಜಂಕ್ಷನ್ 39ನೇ ಕ್ರಾಸ್‌ನಿಂದ ಗುರಪ್ಪನಪಾಳ್ಯ ಜಂಕ್ಷನ್, ಜೇಡಿ ಮರ ಜಂಕ್ಷನ್‌ನಿಂದ ಗುರಪ್ಪನಪಾಳ್ಯ ಜಂಕ್ಷನ್‌ವರೆಗೆ ವಾಹನಗಳನ್ನು ನಿಷೇಧಿಸಲಾಗಿದೆ. ಮೈಸೂರು ರಸ್ತೆಯಿಂದ ಟೌನ್‌ಹಾಲ್ ಕಡೆಗೆ ಹೋಗುವ ವಾಹನಗಳು ಕಿಮ್ಕೋ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ವಿಜಯ ನಗರ ಜಂಕ್ಷನ್ ಕಡೆಗೆ ಸಾಗಬಹುದಾಗಿದೆ. ಟೌನ್‌ಹಾಲ್‌ನಿಂದ ಮೈಸೂರು ರಸ್ತೆಗೆ ಬಿಜಿಎಸ್ ಮೇಲ್ಸೇತುವೆಯ ಕೆಳಗೆ ಸರ್ವಿಸ್ ರಸ್ತೆಯನ್ನು ತೆಗೆದುಕೊಂಡು ಪಶುವೈದ್ಯಕೀಯ ಜಂಕ್ಷನ್‌ನಲ್ಲಿ ಬಲತಿರುವು ಪಡೆದು ಗೂಡ್ಸ್‌ಶೆಡ್ ರಸ್ತೆಯನ್ನು ತಲುಪಬಹುದು ಅಥವಾ ಶಿರಸಿ ಜಂಕ್ಷನ್‌ನಲ್ಲಿ ಬಲತಿರುವು ಪಡೆದು ಜೆಜೆ ನಗರ ಟ್ಯಾಂಕ್‌ಬಂಡ್ ರಸ್ತೆಯಿಂದ ಹೊರಟರೆ ಹುಣಸೇಮರ ಮಾರ್ಗವನ್ನು ತೆಗೆದುಕೊಳ್ಳಬಹುದು.

ಪರ್ಯಾಯ ಮಾರ್ಗ

ಡೈರಿ ವೃತ್ತದಿಂದ ಬನ್ನೇರುಘಟ್ಟ ರಸ್ತೆ ಕಡೆಗೆ ಚಲಿಸುವ ವಾಹನಗಳು ಸ್ವಾಗತ್ ಜಂಕ್ಷನ್‌ನಲ್ಲಿ ಬಲಕ್ಕೆ ತಿರುಗಬೇಕು. ಈಸ್ಟ್ ಎಂಡ್ ಜಂಕ್ಷನ್‌ನಲ್ಲಿ ಚಲಿಸಬಹುದು. ಈಸ್ಟ್ ಎಂಡ್ ಜಂಕ್ಷನ್‌ನಲ್ಲಿ ಬಲತಿರುವು ಪಡೆದು 28ನೇ ಮೇನ್ ಜಂಕ್ಷನ್‌ನಲ್ಲಿ ಎಡಕ್ಕೆ ತಿರುವು ಪಡೆದು 8ನೇ ಮುಖ್ಯ ರಸ್ತೆಯಲ್ಲಿ ಚಲಿಸಿ ಡೆಲ್ಮಿಯಾ ಜಂಕ್ಷನ್ ಕಡೆಗೆ ಎಡಕ್ಕೆ ತಿರುವು ಪಡೆದುಕೊಂಡು ಜೆಡಿ ಮರ ಜಂಕ್ಷನ್ ಕಡೆಗೆ ಚಲಿಸಿ ನಂತರ ಬಲಕ್ಕೆ ಬನ್ನೇರುಘಟ್ಟ ಮುಖ್ಯ ರಸ್ತೆಗೆ ಸಂಪರ್ಕ ಪಡೆದು ಮುಂದೆ ಸಾಗಬಹುದಾಗಿದೆ.

ಓಲಾ, ಉಬರ್, ಹೋಟೆಲ್ ಮಾಲೀಕರಿಂದ ದರ ಏರಿಕೆ?

ಬೆಂಗಳೂರು: ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಹೆಚ್ಚಳದ ಬೆನ್ನಲ್ಲೇ ಹೋಟೆಲ್ ಮಾಲೀಕರು ಹಾಗೂ ಓಲಾ, ಉಬರ್ ಕೂಡಾ ಬೆಲೆ ಏರಿಸಲು ಚಿಂತನೆ ನಡೆಸಿದ್ದಾರೆ.

ತೈಲಬೆಲೆ ಏರಿಕೆಗೆ ರಾಜ್ಯದೆಲ್ಲೆಡೆ ಭಾರೀ ವಿರೋಧ ವ್ಯಕ್ತವಾಗಿದ್ದು, ರಾಜ್ಯ ಸರಕಾರದ ನಡೆಗೆ ಹೋಟೆಲ್ ಮಾಲೀಕರು ಬೇಸರ ವ್ಯಕ್ತಪಡಿಸಿದ್ದು, ಆಹಾರದ ಬೆಲೆ ಏರಿಕೆ ಯ ಬಗ್ಗೆ ಚಿಂತನೆ ನಡೆಸಿದ್ದಾರೆ. ರಾಜ್ಯ ಹೋಟೆ ಲ್ ಮಾಲೀಕರ ಸಂಘಟನೆಯ ರಾಜ್ಯಾಧ್ಯಕ್ಷ ಚಂದ್ರಶೇಖರ್ ಮಾತನಾಡಿ, 1 ತಿಂಗಳ ಬಳಿಕ ಸಾಧಕ ಬಾಧಕ ನೋಡಿ ಬೆಲೆ ಏರಿಕೆಯ ಕುರಿತು ಚಿಂತನೆ ನಡೆಸಿದ್ದು, ಬೆಲೆ ಏರಿಕೆಯಿಂದ ಹೋಟೆಲ್ ಉದ್ಯಮದ ಮೇಲೆ ಪರೋಕ್ಷವಾಗಿ ಬಿಸಿತಟ್ಟಲಿದೆ. ತರಕಾರಿ, ಗೂಡ್ಸ್ ಹಾಗೂ ಇತರೆ ಅಗತ್ಯ ಸಾಮಾನುಗಳ ಸಾರಿಗೆ ವೆಚ್ಚ ಹೆಚ್ಚಾಗುತ್ತದೆ. ಸರಕಾರ ಈ ಸಂದರ್ಭದಲ್ಲಿ ಬೆಲೆ ಹೆಚ್ಚಳ ಮಾಡಬಾರದಿತ್ತು ಎಂದು ಹೇಳಿದರು. ಓಲಾ- ಉಬರ್ ಮಾಲೀಕರು ಮತ್ತು ಚಾಲಕರ ಸಂಘದ ಅಧ್ಯಕ್ಷ ತನ್ವೀರ್ ಪಾಷಾ ಮಾತನಾಡಿ, ಪೆಟ್ರೋಲ್, ಡಿಸೇಲ್ ಮೇಲಿನ ದರ ಏರಿಕೆಯಿಂದ ನಮಗೆ ದೊಡ್ಡಮಟ್ಟದಲ್ಲಿ ಪರಿಣಾಮ ಉಂಟಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರದಿಂದ ನಿರಂತರವಾಗಿ ಟೋಲ್ ಮತ್ತು ಹೊಸ ವಾಹನಗಳ ಮೇಲಿನ ದರ ಏರಿಕೆ ಮಾಡುತ್ತಿದೆ. ಸರಕಾರ ವಾಣಿಜ್ಯ ಚಾಲಕರ ಮೇಲೆ ಕರುಣೆ ತೋರಬೇಕು. ದರ ಏರಿಕೆ ಮಾಡುವ ಮುನ್ನ ಚಾಲಕರ ಮತ್ತು ಮಾಲೀಕರ ಬಗ್ಗೆ ಪರಿಶೀಲನೆ ಮಾಡಬೇಕಿತ್ತು ಎಂದರು.

ಈ ಬಾರಿ ಶೇ.15ರಿಂದ 25ರಷ್ಟು ದರ ಹೆಚ್ಚು ಮಾಡುವ ಸಾಧ್ಯತೆ

ರಾಜ್ಯದಲ್ಲಿ ಬಸ್ ಪ್ರಯಾಣ ದರ ಹೆಚ್ಚಳ?

ಬೆಂಗಳೂರು: ರಾಜ್ಯ ಸರಕಾರವು ಡೀಸೆಲ್ ಹಾಗೂ ಪೆಟ್ರೋಲ್ ಬೆಲೆಯೇರಿಕೆ ಬೆನ್ನಲ್ಲೇ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್ ದರವನ್ನು ಹೆಚ್ಚಿಸಲು ಮುಂದಾಗಿದೆ ಎನ್ನಲಾಗುತ್ತಿದೆ.

ಮುಂದಿನ ಗುರುವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಬಸ್ ದರ ಪರಿಷ್ಕರಣೆ ಕುರಿತು ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದ್ದು, ಈ ಬಾರಿ ಶೇ.15ರಿಂದ 25ರಷ್ಟು ದರ ಹೆಚ್ಚು ಮಾಡುವ ಸಾಧ್ಯತೆಯಿದೆ. ಈಗಾಗಲೇ ಶೇ.25ರಿಂದ 35ರಷ್ಟು ಟಿಕೆಟ್ ದರ ಹೆಚ್ಚಿಸುವ ಪ್ರಸ್ತಾವನೆಯನ್ನು ಸಾರಿಗೆ ಇಲಾಖೆ ಸಲ್ಲಿಸಿದ್ದು, ಅಂತಿಮವಾಗಿ ದರ ಪರಿಷ್ಕರಣೆ ತೀರ್ಮಾನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಗೆದುಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಲೋಕಸಭಾ ಚುನಾವಣೆಗೂ ಮುನ್ನವೇ ಟಿಕೆಟ್ ದರ ಹೆಚ್ಚಳಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಆದರೆ ಚುನಾವಣಾ ಸಮಯದಲ್ಲಿ ದರ ಹೆಚ್ಚಳವು ಮತದಾರರ ಆಕ್ರೋಶಕ್ಕೆ ಕಾರಣವಾಗಬಹುದು ಎನ್ನುವ ಕಾರಣದಿಂದ ಸರಕಾರವು ತನ್ನ ನಿಲುವಿನಿಂದ ಹೊರಬಂದಿತ್ತು. ಇದೀಗ ಚುನಾವಣೆಯು ಮುಗಿದಿದ್ದು, ಪ್ರತೀ ಲೀಟರ್ ಡೀಸೆಲ್‌ಗೆ 3 ರು. ಹಾಗೂ ಪೆಟ್ರೋಲ್‌ಗೆ 3.50 ರು. ಮಾರಾಟ ತೆರಿಗೆಯನ್ನು ಹೆಚ್ಚಳ ಮಾಡಲಾಗಿದ್ದು, ಶನಿವಾರದಿಂದ ಪರಿಷ್ಕೃತ ದರ ಜಾರಿಯಾಗಿದೆ. ಈಗ ಸಾರಿಗೆ ಇಲಾಖೆಯಲ್ಲಿ ಉಂಟಾಗುತ್ತಿರುವ ನಷ್ಟವನ್ನು ಸರಿದೂಗಿಸಲು ಸರಕಾರ ಬಸ್ ದರವನ್ನು ಹೆಚ್ಚಳ ಮಾಡುವ ಅನಿವಾರ್ಯತೆಗೊಳಗಾಗಿದೆ. ಡಿಸೇಲ್ ಹಾಗೂ ಪೆಟ್ರೋಲ್ ದರವನ್ನು ಹೆಚ್ಚಳ ಮಾಡುವುದರಿಂದ ಕೆಎಸ್‌ಆರ್‌ಟಿಸಿಗೆ ವಾರ್ಷಿಕವಾಗಿ 65ಕೋಟಿ ರು. ಹಾಗೂ ಬಿಎಂಟಿಸಿಗೆ 32ಕೋಟಿ ರು. ಹೊರೆಯಾಗುತ್ತದೆ. ಕೆಎಸ್‌ಆರ್‌ಟಿಸಿ ಪ್ರತಿದಿನ ಬಸ್‌ಗಳ ಕಾರ್ಯಾಚರಣೆಗೆ 6.2 ಲಕ್ಷ ಲೀಟರ್ ಡೀಸೆಲ್ ಖರೀದಿಸುತ್ತಿದೆ. ಇದರಿಂದ ತಿಂಗಳಿಗೆ 5.4 ಕೋಟಿ ಹಾಗೂ ವಾರ್ಷಿಕ 5 65 ಕೋಟಿಗೆ ಹೆಚ್ಚಳವಾಗಲಿದೆ. ಹೀಗಾಗಿ ಬಸ್ ದರ ಏರಿಸುವುದು ಗ ಅನಿವಾರ್ಯ. ಬಿಎಂಟಿಸಿಗೂ ದಿನಕ್ಕೆ 8.7 ಲಕ್ಷ ರು. ಮೌಲ್ಯದ ಬೆಲೆಯ ಡೀಸೆಲ್ ಖರೀದಿಸಬೇಕಾಗುತ್ತದೆ. ವಾರ್ಷಿಕವಾಗಿ ನಮಗೆ 32 ಕೋಟಿ ರು.ಬೇಕು. ಪ್ರತಿ ಕಿ.ಮೀ.ಗೆ ನಿರ್ವಹಣಾ ವೆಚ್ಚ 66 ರಿಂದ 78 ರು. ಆಗುತ್ತದೆ. ಇದರಿಂದ ಸಂಸ್ಥೆ ನಿರ್ವಹಣೆ ಕಷ್ಟವಾಗುತ್ತದೆ ಎಂದು ಅಧಿಕಾರಿಗಳು ಅಳಲು ತೋಡಿಕೊಂಡಿದ್ದಾರೆ.

ಆರ್ಥಿಕ ಸಂಕಷ್ಟದಲ್ಲಿ ನಿಗಮಗಳು

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ವ ಮೇಲೆ ಮಹಿಳೆಯರಿಗೆ ಸಾರಿಗೆ ಮತ್ತು ಬಿಎಂಟಿಸಿ ಬಸ್ಸುಗಳಲ್ಲಿ ರಾಜ್ಯಾದ್ಯಂತ ಉಚಿತವಾಗಿ ಪ್ರಯಾಣಿಸಲು ಶಕ್ತಿ ಯೋಜನೆಯನ್ನು ಜಾರಿಗೆ ತಂದಿತು. ಈ ಯೋಜನೆ ಜಾರಿಗೆ ಬಂದ ಮೇಲೆ ಬಸ್ಸುಗಳಿಗೆ ಆದಾಯವಿಲ್ಲದೆ, ಈಶಾನ್ಯ ಸಾರಿಗೆ ಸಂಸ್ಥೆ, ವಾಯವ್ಯ, ನೈರುತ್ಯ ಹಾಗೂ ಬಿಎಂಟಿಸಿ ಸಂಸ್ಥೆಗಳು ಕನಿಷ್ಟ ಪಕ್ಷ ಅ ಸಿಬ್ಬಂದಿಗೆ ವೇತನ ನೀಡಲೂ ಸಾಧ್ಯವಾಗದ ಸ್ಥಿತಿ ಬಂದಿ ದೆ. ಸಂಸ್ಥೆ ನಷ್ಟದಲ್ಲಿಲ್ಲ ಎಂದು ಸರಕಾರ ಹೇಳಿಕೊಳ್ಳುತ್ತಿದೆ ಯಾದರೂ ವಾಸ್ತವ ಪ ಚಿತ್ರಣ ಬೇರೆಯದೇ ಇದೆ. 2020 ರಲ್ಲಿ ಕೊನೆಯ ಬಾರಿಗೆ ಟಿಕೆಟ್ ದರವನ್ನು ಪರಿಷ್ಕರ ಣೆ ಮಾಡಲಾಗಿತ್ತು. ಅಂದು ಡಿಸೇಲ್ ದರ 61 ರು. ಇದ್ದರೆ, ಈ ಪೆಟ್ರೋಲ್ ದರ 90 ರು. ಇತ್ತು. ಪ್ರಸ್ತುತ ರಾಜ್ಯದಲ್ಲಿ ಡಿಸೇಲ್ ದರ ಶನಿವಾರದಿಂದ ಅ ಬೆಂಗಳೂರಿನಲ್ಲಿ 88.93 ಪೈಸೆ ಇದ್ದರೆ, ಪೆಟ್ರೋಲ್ ದರ 102.83 ಪೈಸೆ ಇದೆ. ಕೇವಲ ನಾಲ್ಕು ವರ್ಷಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುವು ದರಿಂದ ದರ ಅ ಹೆಚ್ಚಳ ಮಾಡುವುದು ಅನಿವಾರ್ಯ ಎಂದು ಅಧಿಕಾರಿಗಳೇ ಹೇಳುತ್ತಾರೆ.

ಪ್ರತಿಪಕ್ಷ ನಾಯಕ ಆರ್.ಅಶೋಕ್ ಟೀಕೆ

ಸೇಡು ತೀರಿಸಿಕೊಳ್ಳಲು ದರ ಏರಿಕೆ

ಬೆಂಗಳೂರು: ಲೋಕಸಭೆ ಚುನಾವಣೆಯಲ್ಲಿ ಸೋತ ಸೇಡನ್ನು ತೀರಿಸಿಕೊಳ್ಳಲು ಕಾಂಗ್ರೆಸ್ ಸರಕಾರ ತೈಲ ದರವನ್ನು ಏರಿಕೆ ಮಾಡಿದೆ. ಈ ಮೂಲಕ ಜನರ ತಲೆ ಮೇಲೆ ಚಪ್ಪಡಿ ಕಲ್ಲು ಹಾಕಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರಕಾರ ಒಂದು ವರ್ಷದಲ್ಲಿ ಎಲ್ಲ ಬಗೆಯ ಬೆಲೆ ಏರಿಕೆಯ ಭಾಗ್ಯಗಳನ್ನು ನೀಡಿದೆ. ಹಾಲಿನ ದರ, ಆಲ್ಕೋಹಾಲ್ ದರ, ಸ್ಟಾಂಪ್ ಡ್ಯೂಟಿ, ಮಾರ್ಗಸೂಚಿ ದರ, ವಿದ್ಯುತ್ ದರ ಹಾಗೂ ಈಗ ತೈಲ ಬೆಲೆ ಏರಿಕೆ ಮಾಡಲಾಗಿದೆ. ಹಿಂದಿನ ಬಿಜೆಪಿ ಸರಕಾರದಲ್ಲಿ ಒಂದು ರುಪಾಯಿ ಬೆಲೆ ಏರಿಕೆಯಾದಾಗ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಸ್ಕೂಟರ್ ಶವ ಯಾತ್ರೆ ಮಾಡಿದ್ದರು. ಜನರ ಮೇಲೆ ಸೇಡು ತೀರಿಸಿಕೊಳ್ಳಲು ದರ ಏರಿಸಿದ್ದಾರೆ ಎಂದು ತಿಳಿಸಿದ್ದಾರೆ.

ನ್ಯಾಯವಾಗಿ ಬಜೆಟ್‌ನಲ್ಲಿ ತೈಲ ದರ ಏರಿಸದೇ ಚುನಾವಣೆಯಲ್ಲಿ ಸೋತ ನಂತರ ಕಳ್ಳದಾರಿಯಿಂದ ದರ ಏರಿಸಿ ಜನರ ಮೇಲೆ ಸೇಡು ತೀರಿಸಿಕೊಂಡಿದ್ದಾರೆ. ಸಂಸತ್ತಿನಲ್ಲಿ 100 ಸೀಟು ಪಡೆಯಲಾಗದ ಕಾಂಗ್ರೆಸ್ ಪೆಟ್ರೋಲ್ ದರವನ್ನು 100 ರು.ಗೂ ಹೆಚ್ಚು ಮಾಡಿದೆ. ರಾಹುಲ್ ಗಾಂಧಿ ಹೇಳಿದಂತೆ ಟಕಾಟಕ್ ಎಂದು ತೈಲ ದರ ಏರಿಸಿದ್ದಾರೆ. ಹಿಂದೆ ಬಿಜೆಪಿ ಸರಕಾರ ಏಳು ರು. ಕಡಿಮೆ ಮಾಡಿತ್ತು. ಕಾಂಗ್ರೆಸ್‌ಗೆ ಮಾನವಿದ್ದರೆ ದರ ಏರಿಕೆ ವಾಪಾಸ್ ಪಡೆಯಲಿ ಎಂದು ಆಗ್ರಹಿಸಿದರು.

ಆಸ್ತಿ ಮಾರಾಟ

ಪಾಪರ್ ಆಗಿರುವ ಕಾಂಗ್ರೆಸ್ ಸರಕಾರ ಬಿಡಿಎ ಆಸ್ತಿಗಳ ಮಾರಾಟಕ್ಕೆ ಮುಂದಾ ಗಿದೆ. ಬಿಬಿಎಂಪಿ ಹಾಗೂ ಜಲಮಂಡಳಿ ಯ ಆಸ್ತಿಗಳನ್ನು ಕೂಡ ಮಾರಾಟ ಮಾಡಲು ಸಿದ್ಧತೆ ಮಾಡಿಕೊಂಡಿದ್ದಾರೆ. ರಾಜ್ಯದ ಆರ್ಥಿಕ ಶಿಸ್ತನ್ನು ಸರ್ವನಾಶ ಮಾಡಿದ್ದಾರೆ. ಇನ್ನೂ ಒಂದು ವರ್ಷದಲ್ಲಿ ವಿಧಾನಸೌಧವನ್ನೂ ಅಡಮಾನ ಇಡು ತ್ತಾರೆ ಎಂದರು. ಸರಕಾರಿ ನೌಕರರು ಮತ ನೀಡಿಲ್ಲವೆಂಬ ಕಾರಣಕ್ಕೆ ವೇತನ ಹೆಚ್ಚಿ ಸಿಲ್ಲ. 7 ನೇ ವೇತನ ಆಯೋಗದ ವರದಿ ಜಾರಿ 'ನಾಳೆ ಬಾ' ಎಂಬ ಸ್ಥಿತಿಗೆ ಬಂದಿದೆ. 143 ಶಾಸಕರ ಕ್ಷೇತ್ರದಲ್ಲಿ ಬಿಜೆಪಿಗೆ ಹೆಚ್ಚು ಮತ ಬಂದಿದೆ. ಅದಕ್ಕಾಗಿ ತೈಲ ದರ ಏರಿಸಿದ್ದಾರೆ. ಇದರಿಂದ ಕಾಂಗ್ರೆಸ್ ಶಾಸ ಕರು ಕೂಡ ಬೇಸರಗೊಂಡಿದ್ದಾರೆ. ಜಿಪಂ ಹಾಗೂ ಬಿಬಿಎಂಪಿ ಚುನಾವಣೆಯಲ್ಲಿ ಜನರು ಕಾಂಗ್ರೆ ಸ್‌ಗೆ ಪಾಠ ಕಲಿಸಲಿದ್ದಾರೆ ಎಂದರು.

ದಕ್ಷಿಣ ಭಾರತ ಉತ್ಸವದಲ್ಲಿ 4200 ಕೋಟಿ ಬಂಡವಾಳ ಹೂಡಿಕೆ | ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು

ಶಕ್ತಿ ಯೋಜನೆಯಿಂದ ಪ್ರವಾಸೋದ್ಯಮಕ್ಕೆ ಶಕ್ತಿ: ಎಚ್‌ಕೆಪಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಯಾದಾಗಿನಿಂದ, ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ 'ಶಕ್ತಿ' ಬಂದಿದೆ ಎಂದು ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ್ ಅಭಿಪ್ರಾಯಪಟ್ಟರು.

ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ದಕ್ಷಿಣ ಭಾರತ ಉತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಶಕ್ತಿ ಯೋಜನೆಯಿಂದಾಗಿ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಶೇ.50ರಷ್ಟು ಹೆಚ್ಚಾಗಿದೆ. ಈ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಮೂಲ ಸೌಕರ್ಯಗಳ ಅಭಿವೃದ್ಧಿಗೆ ವ್ಯಾಪಕ ಅವಕಾಶವಿದೆ ಎಂದು ಹೇಳಿದರು.

ದಕ್ಷಿಣ ಭಾರತ ಉತ್ಸವದ ಮೂಲಕ ಕರ್ನಾಟಕಕ್ಕೆ ಸುಮಾರು 4200 ಕೋಟಿ ರು. ಹೂಡಿಕೆ ಹರಿದುಬಂದಿದೆ. ಮುಂದಿನ ದಿನದಲ್ಲಿ ಇನ್ನಷ್ಟು ಹಣವನ್ನು ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಬಳಸಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರಕಾರವೂ ಅಗತ್ಯ ನೆರವನ್ನು ನೀಡಲಿದೆ ಭರವಸೆ ನೀಡಿದರು.

ದಕ್ಷಿಣ ಭಾರತ ರಾಜ್ಯಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಅಭಿವೃದ್ಧಿಗೆ ವಿಪುಲ ಅವಕಾಶಗಳಿವೆ. ಅವುಗಳಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಎಫ್‌ಕೆಸಿಸಿಐ ಆಯೋಜಿಸಿರುವ ಈ ಕಾರ್ಯಕ್ರಮ ಬಹಳ ಮಹತ್ವದ್ದಾಗಿದೆ. ಈ ಉತ್ಸವದ ಮೂಲಕ ಸುಮಾರು 4200 ಕೋಟಿಗಳಷ್ಟು ಹೂಡಿಕೆಯ ಪ್ರಸ್ತಾವನೆಗಳಿಗೆ ಒಡಂಬಡಿಕೆ ಆಗುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ಎಫ್‌ಕೆಸಿಸಿಐ ಪದಾಧಿಕಾರಿಗಳ ಕಾರ್ಯ ಅಭಿನಂದನೆಗೆ ಅರ್ಹವಾಗಿದೆ. ಶಕ್ತಿ ಯೋಜನೆಯ ಅನುಷ್ಠಾನದ ನಂತರ ರಾಜ್ಯದಲ್ಲಿ ಎಲ್ಲಾ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಶೇ.50ರಷ್ಟು ಹೆಚ್ಚಾಗಿದೆ.

ಈ ಕ್ಷೇತ್ರಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸುವುದು ಕೇವಲ ಸರಕಾರದಿಂದ ಸಾಧ್ಯವಿಲ್ಲ. ಈ ಕ್ಷೇತ್ರಗಳಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಇಲ್ಲಿನ ಹೂಡಿಕೆ ಯಿಂದ ಬಹಳಷ್ಟು ಉಪಯೋಗವನ್ನು ಉದ್ದಿಮೆದಾರರು ಪಡೆದುಕೊಳ್ಳಬಹುದಾಗಿದೆ ಎಂದರು. ಕಾರ್ಯಕ್ರಮದಲ್ಲಿ ಬಂಡವಾಳ ಹೂಡಿಕೆಗೆ ಮುಂದಾದ ಕೆಲವು ಉದ್ದಿಮೆದಾರರಿಗೆ ಒಡಂಬಡಿಕೆಯ ಪತ್ರಗಳನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಹಾಗೂ ಪ್ರವಾಸೋದ್ಯಮ ಸಚಿವರಾದ ಡಾ. ಎಚ್.ಕೆ ಪಾಟೀಲ ವಿತರಿಸಿದರು. ಈ ವೇಳೆ ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ ವಿ ರಾಮ್ ಪ್ರಸಾತ್ ಮನೋಹರ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ ದಕ್ಷಿಣ ಭಾರತ ಉತ್ಸವದ ಸಮಾರೋಪ ಸಮಾರಂಭದಲ್ಲಿ ಬಂಡವಾಳ ಹೂಡಿಕೆಗೆ ಮುಂದಾದ ಕೆಲವು ಉದ್ದಿಮೆದಾರರಿಗೆ ಒಡಂಬಡಿಕೆಯ ಪತ್ರಗಳನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಹಾಗೂ ಪ್ರವಾಸೋದ್ಯಮ ಸಚಿವ ಡಾ. ಎಚ್.ಕೆ ಪಾಟೀಲ ವಿತರಿಸಿದರು.

ಹೆಚ್ಚಿನ ಹೂಡಿಕೆಗೆ ಪ್ರೋತ್ಸಾಹ

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, ದಕ್ಷಿಣ ಭಾರತ ರಾಜ್ಯಗಳನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವ ಪ್ರಯತ್ನಕ್ಕೆ ಯಶಸ್ಸು ದೊರೆತಿದೆ. ಕೈಗಾರಿಕಾ ಉತ್ಪಾದನೆ, ಕೃಷಿಯ ನಂತರ ಹೆಚ್ಚಿನ ಉದ್ಯೋಗಾವಕಾಶಗಳನ್ನ ಮತ್ತು ಹೂಡಿಕೆಯ ಅವಕಾಶ ಇರುವುದು ಪ್ರವಾಸೋದ್ಯಮ ಕ್ಷೇತ್ರದಲ್ಲಿ. ಈ ಉತ್ಸವದ ಮೂಲಕ ಎಫ್‌ಕೆಸಿಸಿಐ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡುವಂತೆ ಉದ್ದಿಮೆದಾರರನ್ನು ಪ್ರೋತ್ಸಾಹಿಸಿದೆ. ಮುಂದಿನ ದಿನಗಳಲ್ಲೂ ಎಫ್‌ಕೆಸಿಸಿಐ ವತಿಯಿಂದ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗೆ ಪ್ರೋತ್ಸಾಹ ನೀಡಲು ಆದ್ಯತೆ ನೀಡಲಾಗುವುದು ಎಂದರು.

ಸಾಮಾನ್ಯರ ಟೂರಿಸಂಗೂ ಒತ್ತು

ಪ್ರವಾಸೋದ್ಯಮ ಎಂದರೆ ಕೇವಲ ಲಕ್ಷುರಿ ಪ್ರವಾಸೋದ್ಯಮ ಅಲ್ಲ, ಸಾಮಾನ್ಯ ಜನರ ಪ್ರವಾಸೋದ್ಯಮಕ್ಕೂ ಸರಕಾರ ಆದ್ಯತೆ ನೀಡುತ್ತದೆ. ದಕ್ಷಿಣ ಭಾರತ ಸಾಂಸ್ಕೃತಿಕ ಪ್ರವಾಸೋದ್ಯಮದ ಪ್ರಮುಖ ತಾಣವಾಗಿದೆ. ಈ ಉತ್ಸವದ ಮೂಲಕ ದಕ್ಷಿಣ ಭಾರತ ರಾಜ್ಯಗಳ ಐತಿಹಾಸಿಕ, ಪಾರಂಪರಿಕ, ಸ್ಮಾರಕ ಸಂಪನ್ಮೂಲಗಳಲ್ಲಿನ ಅವಕಾಶಗಳನ್ನ ತೋರಿಸುವ ವೇದಿಕೆಯನ್ನು ನೀಡಲಾಗಿದೆ. ಎಲ್ಲರೂ ಜೊತೆಗೂಡಿ ವಿಶ್ವ ಪ್ರವಾಸೋದ್ಯಮ ಭೂಪಟದಲ್ಲಿ ಉತ್ತಮ ಸ್ಥಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾ ಗೋಣ ಎಂದು ಸಚಿವ ಎಚ್.ಕೆ. ಪಾಟೀಲ್ ಹೇಳಿದರು.

ಸಮಾಚಾರ ಸಣ್ಣದಲ್ಲ

ಬಾಲಕಿ ಕೊಲೆ: ಆರೋಪಿ ಬಂಧನ

ಕೊಪ್ಪಳ: ಎರಡು ತಿಂಗಳ ನಂತರ ಏಳು ವರ್ಷದ ಬಾಲಕಿ ಕೊಲೆ ಪ್ರಕರಣವನ್ನು ಕೊಪ್ಪಳ ಪೊಲೀಸರು ಭೇದಿಸಿದ ಘಟನೆ ನಡೆದಿದೆ. ಗುಟ್ಕಾ ತಂದು ಕೊಡಲಿಲ್ಲ ಎಂದು ಬಾಲಕಿಯನ್ನ ಹತ್ಯೆ ಮಾಡಿದ್ದ ಆರೋಪಿ ಸಿದ್ದಲಿಂಗಯ್ಯ (51) ಎಂಬಾತನನ್ನು ಪೊಲೀಸರು ಬಂದಿಸಿದ್ದಾರೆ.

ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದ ಅನುಶ್ರೀ (07)ಕೊಲೆಯಾಗಿದ್ದ ಬಾಲಕಿ. ಕಳೆದ ಏಪ್ರಿಲ್ 18 ರಂದು ಮಧ್ಯಾಹ್ನ ಬಾಲಕಿ ನಾಪತ್ತೆಯಾಗಿದ್ದಳು. ಏಪ್ರಿಲ್ 20 ರಂದು ಕೊಪ್ಪಳ ಮಹಿಳಾ ಪೊಲೀಸ್ ಠಾಣೆಯಲ್ಲಿ ಬಾಲಕಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಆದರೆ ಏಪ್ರಿಲ್ 21 ರಂದು ಬಾಲಕಿ ಶವ ಆಕೆಯ ಮನೆ ಸಮೀಪದ ಪಾಳು ಬಿದ್ದ ಮನೆಯಲ್ಲಿ ಪತ್ತೆಯಾಗಿತ್ತು. ಸಾಕ್ಷಿ ಸಿಗದಂತೆ ಬಾಲಕಿಯ ಶವವನ್ನು ಗೊಬ್ಬರದ ಚೀಲದಲ್ಲಿ ಕಟ್ಟಿ ಎಸೆಯಲಾಗಿತ್ತು. ಈ ಕುರಿತು ತನಿಖೆ ಆರಂಭಿಸಿದ್ದ ಪೊಲೀಸರು ಎರಡು ತಿಂಗಳ ನಂತರ ಬಾಲಕಿಯ ಕೊಲೆ ಪ್ರಕರಣವನ್ನು ಭೇದಿಸಿದ್ದಾರೆ.

ಗುಂಡಿನ ದಾಳಿ; ರೌಡಿಶೀಟರ್ ಸಾವು

ವಿಜಯಪುರ: ಭೀಮಾ ತೀರದಲ್ಲಿ ಮತ್ತೆ ಗುಂಡಿನ ದಾಳಿ ನಡೆದಿದ್ದು ದುಷ್ಕರ್ಮಿಗಳ ದಾಳಿಯಲ್ಲಿ ನಟೋರಿಯಸ್ ರೌಡಿಶೀಟರ್ ಕೊಲೆಯಾಗಿದೆ.ವಿಜಯಪುರ ಜಿಲ್ಲೆಯ ಚಡಚಣ ಪಟ್ಟಣದ ನೀವರಗಿ ರಸ್ತೆಯಲ್ಲಿ ಈ ದಾಳಿ ನಡೆದಿದ್ದು, ರೌಡಿಶೀಟರ್ ಅಶೋಕ ಮಲ್ಲಪ್ಪ ಗಂಟಗಲ್ಲಿ ಎಂಬಾತನನ್ನು ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ಕೊಲೆಗೈದಿದ್ದಾರೆ. ಅಶೋಕ ಮಲ್ಲಪ್ಪ ಗಂಟಗಲ್ಲಿ ಮನೆ ಬಳಿ ಇದ್ದಾಗ ದುಷ್ಕರ್ಮಿಗಳು ಗುಂಡಿನ ದಾಳಿ ನಡೆಸಿ ರೌಡಿಶೀಟರ್‌ನ ಕೊಲ್ಲಲಾಗಿದೆ. ಮನೆಯಿಂದ ಚಟಚಟಣ ಪಟ್ಟಣಕ್ಕೆ ಆಗಮಿಸುತ್ತಿದ್ದ ವೇಳೆ ಹಂತಕರು ದಾಳಿ ಮಾಡಿದ್ದಾರೆ. ಅಶೋಕ ಬೆನ್ನಿಗೆ ಮೂರಕ್ಕೂ ಅಧಿಕ ಗುಂಡಿಗಳು ತಾಗಿದ್ದರಿಂದ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಪೊಲೀಸ್ ಮೂಲಗಳ ಪ್ರಕಾರ ಮೃತ ಅಶೋಕ ಮಲ್ಲಪ್ಪ ಗಂಟಗಲ್ಲಿ ಕೂಡ ಸ್ಥಳೀಯವಾಗಿ ನಟೋರಿಯಸ್ ಆಗಿದ್ದ. ಕೊಲೆ ಹಾಗೂ ಇತರೆ ಕೇಸ್‌ಗಳಲ್ಲಿ ಅಪರಾಧಿಯಾಗಿದ್ದ. ಇತ್ತೀಚೆಗೆ ಜೈಲಿನಿಂದ ಪೆರೋಲ್ ಮೇಲೆ ಹೊರಬಂದಿದ್ದ ಈತನನ್ನು ಹಳೆ ದ್ವೇಷದಿಂದ ಕೊಲೆ ಮಾಡಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದ್ದು, ಕೊಲೆಗೀಡಾದ ಅಶೋಕ ಪತ್ನಿ ಚಡಚಣ ಪಟ್ಟಣದ ವಾರ್ಡ್ ನಂಬರ್ 2ರ ಬಿಜೆಪಿ ಸದಸ್ಯೆ ಎಂದು ತಿಳಿದುಬಂದಿದೆ.

ರೈತನ ಮೇಲೆ ಕರಡಿ ಹಿಂಡಿನ ದಾಳಿ

ದಾವಣಗೆರೆ: ಸಾಕು ನಾಯಿಗಳು ರೈತನ ಜೀವ ಉಳಿಸಿದ ಘಟನೆ ಜಗಳೂರು ತಾಲೂಕಿನ ಬೈರನಾಯಕನ ಹಳ್ಳಿಯಲ್ಲಿ ನಡೆದಿದೆ. ಜಮೀನಿನಲ್ಲಿ ರೈತ ಹನುಮಂತಪ್ಪ ಎಂಬವರು ಕೆಲಸ ಮಾಡುವಾಗ ನಾಲ್ಕು ಕರಡಿಗಳು ಏಕಕಾಲದಲ್ಲಿ ದಾಳಿ ಮಾಡಿವೆ.



ಇದನ್ನು ಗಮನಿಸಿದ ಸಾಕು ನಾಯಿಗಳು ಜೋರಾಗಿ ಬೊಗಳಿ ಕರಡಿಗಳನ್ನು ಬೆದರಿಸಿ ರೈತನನ್ನು ರಕ್ಷಿಸಿವೆ.ಕರಡಿಗಳ ದಾಳಿಯಿಂದ ಗಂಭೀರವಾಗಿ ಗಾಯ ಗೊಂಡ ರೈತ ಹನುಮಂತಪ್ಪನನ್ನು ಆಸ್ಪತ್ರೆಗೆ ರವಾನಿಸಿ ಚಿಕಿತ್ಸೆ ಕೊಡಿಸಲಾಗಿದ್ದು, ಪ್ರಾಣಾಪಾಯ ದಿಂದ ಪಾರಾಗಿದ್ದಾರೆ. ರಂಗಯ್ಯನ ದುರ್ಗ ಅರಣ್ಯಕ್ಕೆ ಹೊಂದಿಕೊಂಡ ಜಮೀನಿನಲ್ಲಿ ಈ ಘಟನೆ ನಡೆದಿದೆ. ಈ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕರಡಿಗಳಿದ್ದು, ಇಲ್ಲೊಂದು ಕರಡಿಧಾಮ ಮಾಡುವಂತೆ ಸ್ಥಳೀಯರು ಅರಣ್ಯ ಇಲಾಖೆಗೆ ಆಗ್ರಹಿಸಿದ್ದಾರೆ. ಜಗಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮಕ್ಕಳು ಅಸ್ವಸ್ಥ: ಇಬ್ಬರ ಮೇಲೆ ಕೇಸ್

ಶಹಾಪುರ: ದೋರನಹಳ್ಳಿ ಗ್ರಾಮದಲ್ಲಿ ಸರಕಾರಿ ಶಾಲೆಗಳಲ್ಲಿ ಬಿಸಿಯೂಟ ಸೇವಿಸಿ 100ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥರಾದ ಪ್ರಕರಣದಲ್ಲಿ ಶಹಾಪುರದ ಎನ್‌ಜಿಓನ ಅಧ್ಯಕ್ಷರು ಸೇರಿ ಇಬ್ಬರ ಮೇಲೆ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಕ್ಷರ ದಾಸೋಹ ಯೋಜನೆ ಸಹಾಯಕ ಅಧಿಕಾರಿ ಬಿನಾಜಿ ಅವರು ನೀಡಿದ ದೂರಿನ ಅನ್ವಯ ನಿರ್ಮಲಾ ದೇವಿ ಮಹಿಳಾ ಮಂಡಳಿ ಎನ್‌ಜಿಓ ಅಧ್ಯಕ್ಷರಾದ ರುದ್ರಮ್ಮ ದರ್ಶನಾಪುರ ಸೇರಿ ಇಬ್ಬರ ಮೇಲೆ ಗುಣಮಟ್ಟದ ಆಹಾರ ವಿತರಣೆ ಮಾಡದೆ ಕಳಪೆ ಮಟ್ಟದ ಆಹಾರ ವಿತರಣೆ ಮಾಡಿರುವ ಆರೋಪದ ಹಿನ್ನಲೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಕಾರದಿಂದ ಜನರ ಜೇಬಿಗೆ ಕತ್ತರಿ: ಟೀಕೆ

ಬೀದರ್: ಸರಕಾರ ಗ್ಯಾರಂಟಿ ಯೋಜನೆಗಳ ಜಾರಿಯಲ್ಲಿ ಎಡವಿದ್ದು, ಆರ್ಥಿಕ ದಿವಾಳಿ ಹಂತಕ್ಕೆ ಬಂದು ನಿಂತಿದ್ದ ಕಾರಣ ಈಗ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿ ಜನರ ಜೇಬಿಗೆ ಕತ್ತರಿ ಹಾಕುತ್ತ ಹಗಲು ದರೋಡೆ, ಸುಲಿಗೆ ದಂಧೆಗೆ ಇಳಿದಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ, ಡಾ.ಶೈಲೇಂದ್ರ ಬೆಲ್ದಾಳೆ ಆರೋಪಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿ ಲೀಟರ್ ಪೆಟ್ರೋಲ್ 3 ಹಾಗೂ ಡೀಸೆಲ್ 3.50 ಹೆಚ್ಚಿಸಿ ರಾಜ್ಯ ಕಾಂಗ್ರೆಸ್ ಸರಕಾರ ಮತ್ತೊಮ್ಮೆ ತನ್ನ ಜನವಿರೋಧಿ ನೀತಿಯನ್ನು ಸಾಬೀತುಪಡಿಸಿದೆ. ಗ್ಯಾರಂಟಿ ಯೋಜನೆಗಳಿಗೆ ಅನುದಾನ ಕ್ರೋಢೀಕರಿಸುವಲ್ಲಿ ಹೆಣಗಾಡುತ್ತಿದೆ. ಕಳೆದ ಒಂದು ವರ್ಷದಿಂದ ಹೊಸ ಕೆಲಸ ಆಗುತ್ತಿಲ್ಲ. ಒಂದೊಂದಾಗಿ ದರ ಏರಿಕೆ ಮಾಡುತ್ತ ಜನಸಾಮಾನ್ಯರಿಗೆ ಹೈರಾಣು ಮಾಡುತ್ತಿದ್ದಾರೆ ಎಂದರು.

ಕಿತ್ತೂರು ತಾಲೂಕಿನ ತಿಗಡೊಳ್ಳಿ ಗ್ರಾಮದಲ್ಲಿ ಘಟನೆ | ನಕಲಿ ವೈದ್ಯ ಅಬ್ದುಲ್ ಲಾಡಖಾನ್ ಬಂಧನ

ಬೆಳಗಾವಿಯಲ್ಲಿ ಭ್ರೂಣಹತ್ಯೆ ಪತ್ತೆ

ವಿನಾಯಕ ಮಠಪತಿ ಬೆಳಗಾವಿ

ನಕಲಿ ವೈದ್ಯನೋರ್ವ ಹಣದ ಆಸೆಯಿಂದ ಭ್ರೂಣಹತ್ಯೆ ಹಾಗೂ ಕಳ್ಳ ಸಾಗಣೆ ಮಾಡುತ್ತಿದ್ದ ಪ್ರಕರಣ ಬೆಳಕಿಗೆ ಬಂದಿದ್ದು, ಆರೋಪಿ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದಾರೆ. ಅಲ್ಲದೆ, ಆರೋಪಿಯ ತೋಟದಲ್ಲಿ ಮೂರು ಭ್ರೂಣಗಳ ಅವಶೇಷಗಳನ್ನು ಹೊರತೆಗೆಯಲಾಗಿದೆ.

ಕಿತ್ತೂರು ಪಟ್ಟಣದಲ್ಲಿ ನಕಲಿ ವೈದ್ಯಕೀಯ ವೃತ್ತಿ ನಡೆಸುತ್ತಿದ್ದ ಆರೋಪಿ ಅಬ್ದುಲ್ ಲಾಡಖಾನ್ ಭ್ರೂಣಹತ್ಯೆ ನಡೆಸುತ್ತಿದ್ದನೆಂದು ಆರೋಪಿಸಲಾಗಿದೆ. ತಿಗಡೊಳ್ಳಿ ಗ್ರಾಮದ ತೋಟದಮನೆಯ ಆವರಣದಲ್ಲಿ ಹೂತಿದ್ದ ಮೂರು ಭ್ರೂಣಗಳ ಅವಶೇಷಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ನಕಲಿ ವೈದ್ಯ ಅಬ್ದುಲ್ ಲಾಡಖಾನ್ ಗೆ ಸಂಬಂಧಿಸಿದ ತೋಟದಲ್ಲಿ ಭ್ರೂಣಗಳ ಅವಶೇಷ ಹೊರತಗೆದ ಅಧಿಕಾರಿಗಳು.

ಭಾನುವಾರ ಬೆಳಗಾವಿ ಜಿಲ್ಲಾ ವೈದ್ಯಾಧಿಕಾರಿ ಡಾ. ಮಹೇಶ್ ಕೋಣಿ, ಎಸಿ ಪ್ರಭಾವತಿ ಪಕೀರಪುರ ಹಾಗೂ ಬೈಲಹೊಂಗಲ ಡಿವೈಎಸ್ಪಿ ರವಿ ನಾಯ್ಕ ಒಳಗೊಂಡ ಅಧಿಕಾರಿಗಳ ತಂಡ ತಿಗಡೊಳ್ಳಿಯಲ್ಲಿ ಕಾರ್ಯಾಚರಣೆ ನಡೆಸಿತು. ಈ ಸಂದರ್ಭದಲ್ಲಿ ನಕಲಿ ವೈದ್ಯ ಅಬ್ದುಲ್ ಲಾಡಖಾನ್ ಬಳಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದ ರೋಹಿತ್ ಕುಪ್ಪಸಗೌಡರ್ ಭ್ರೂಣ ಹೂತಿಟ್ಟಿದ್ದ ಕುರಿತು ಮಾಹಿತಿ ನೀಡಿದ್ದ. ಸ್ಥಳ ಪರಿಶೀಲನೆ ನಡೆಸಿದ್ದ ವೇಳೆ, ಮೂರು ಭ್ರೂಣಗಳ ಅವಶೇಷ ಪತ್ತೆಯಾಗಿದ್ದು, ನವಜಾತ ಶಿಶು ಮಾರಾಟ ಹಾಗೂ ಭ್ರೂಣಹತ್ಯೆ ಪ್ರಕರಣದಲ್ಲಿ ನಕಲಿವೈದ್ಯ ಲಾಡಖಾನ್ ಸೇರಿ ಐವರನ್ನು ಪೊಲೀಸರು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ತನಿಖೆಗೆ ಬೆಳಗಾವಿ ಜಿಲ್ಲಾಧಿಕಾರಿ ನಿತೇಶ್ ಪಾಟೀಲ್ ವಿಶೇಷ ತನಿಖಾ ತಂಡ ರಚಿಸಿದ್ದಾರೆ.

20 ವರ್ಷಗಳಿಂದ ನಕಲಿ ವೈದ್ಯನ ದರ್ಬಾರ್: ಕಳೆದ 20 ವರ್ಷಗಳಿಂದ ರಿಯಾಜ್ ಕ್ಲಿನಿಕ್ ನಡೆಸುತ್ತಿದ್ದ ಅಬ್ದುಲ್ ಲಾಡಖಾನ್ ಸರಕಾರದಿಂದ ಯಾವುದೇ ಪ್ರಮಾಣಪತ್ರ ಪಡೆದಿರಲಿಲ್ಲ. ರಾಜಾರೋಷವಾಗಿ ಶಿಶು ಕಳ್ಳಸಾಗಣೆ ಹಾಗೂ ಭ್ರೂಣಹತ್ಯೆ ನಡೆಸುತ್ತಿದ್ದರೂ ಅಧಿಕಾರಿಗಳ ಗಮನಕ್ಕೆ ಬಾರದಿರುವುದು ವಿಪರ್ಯಾಸ.

ಮಹಿಳೆಯಿಂದ ಕರಾಳ ಪ್ರಕರಣ ಬೆಳಕಿಗೆ

ಬೆಳಗಾವಿಯ ರಾಮತೀರ್ಥ ನಗರದಲ್ಲಿ ಮಕ್ಕಳ ರಕ್ಷಣಾ ಘಟಕದ ಕೈಗೆ ಸಿಕ್ಕಿಬಿದ್ದಿದ್ದ ಮಹಿಳೆಯಿಂದ ಇಡೀ ಪ್ರಕರಣದ ಜಾಲವೇ ಪೊಲೀಸರ ಗಮನಕ್ಕೆ ಬಂದಿತ್ತು. ಕಿತ್ತೂರಿನ ನಕಲಿವೈದ್ಯ ಅಬ್ದುಲ್ ಲಾಡಖಾನ್ ಬಳಿ 60 ಸಾವಿರಕ್ಕೆ ಶಿಶುವನ್ನು ಪಡೆದಿದ್ದ ಮಹಾದೇವಿ ಎಂಬ ಮಹಿಳೆ 1.40 ಲಕ್ಷ ರು.ಗೆ ಮಾರಾಟ ಮಾಡಲು ಯತ್ನಿಸಿದ್ದಳು. ಮಾಳಮಾರುತಿ ಠಾಣೆಯ ಪೊಲೀಸರು ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಪ್ರಕರಣ ದ ಕುರಿತು ಕರಾಳಮುಖ ಬಯಲಾಗಿತ್ತು. ಅಬ್ದುಲ್ ಗಫಾರ್ ಲಾಡಖಾನ್ ಕಿತ್ತೂರಿ ನಲ್ಲಿ ಆಸ್ಪತ್ರೆ ಇಟ್ಟುಕೊಂಡು ಗರ್ಭಿಣಿ ಯರನ್ನು ಟಾರ್ಗೆಟ್ ಮಾಡುತ್ತಿದ್ದ. ಮಕ್ಕಳನ್ನು ತಿರಸ್ಕರಿಸಿದವರಿಂದ ನವಜಾತ ಶಿಶು ಪಡೆದು, ಆರೈಕೆಮಾಡಿ ಬೇರೆಯವರಿಗೆ ಮಾರಾಟ ಮಾಡುತ್ತಿದ್ದ. ಒಂದು ವೇಳೆ ಶಿಶು ಮೃತಪಟ್ಟರೆ ತನ್ನ ತೋಟದಮನೆ ಹಿಂದಿನ ಜಾಗದಲ್ಲಿ ಹೂಳುತ್ತಿದ್ದ ಎಂಬುದು ಪೊಲೀಸ್ ತನಿಖೆಯಲ್ಲಿ ಬಯಲಾಗಿದೆ.

ಕೇಂದ್ರದಲ್ಲಿ ಸರಕಾರ ಹೆಚ್ಚು ದಿನ ಉಳಿಯದು

ಬಿಜೆಪಿ ನಾಯಕರ ಅಹಂಕಾರಕ್ಕೆ ತಕ್ಕ ಶಿಕ್ಷೆ

ಯಲಬುರ್ಗಾ: ಕಳೆದ ಲೋಕಸಭೆ ಚುನಾವಣೆಯಲ್ಲಿ ದೇಶದ ಪ್ರಬುದ್ಧ ಮತದಾರರು ಬಿಜೆಪಿ ನಾಯಕರ ದುರಹಂಕಾರಕ್ಕೆ ತಕ್ಕ ಶಿಕ್ಷೆ ನೀಡಿದ್ದಾರೆ ಎಂದು ಸಚಿವ ಶಿವರಾಜ ತಂಗಡಗಿ ಟೀಕಿಸಿದ್ದಾರೆ.

ಪಟ್ಟಣದ ಬುದ್ಧ-ಬಸವ-ಅಂಬೇಡ್ಕರ್ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಲೋಕಸಭೆ ಚುನಾವಣೆ ಗೆಲುವಿನ ಹಿನ್ನೆಲೆ ಯಲಬುರ್ಗಾ ವಿಧಾನಸಭೆ ಕ್ಷೇತ್ರದ ಮತದಾರರು ಮತ್ತು ಕಾಂಗ್ರೆಸ್ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮದಲ್ಲಿ ಸಚಿವ ತಂಗಡಗಿ ಮಾತನಾಡಿದರು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ 400 ಸ್ಥಾನ ಗೆಲ್ಲುವುದಾಗಿ ಹೇಳಿಕೊಂಡಿತ್ತು. ರಾಮನನ್ನು ಮುಂದಿಟ್ಟುಕೊಂಡು ಅಬ್ಬರದ ಪ್ರಚಾರ ಮಾಡಿದ್ದರು. ಆದರೆ, ಅವರ ದುರಹಂಕಾರ, ಅತಿಯಾದ ಆತ್ಮವಿಶ್ವಾಸಕ್ಕೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಈ ಮೂಲಕ ಅಭಿವೃದ್ಧಿ ಪರ ಚಿಂತನೆ ಮಾಡುವಂತೆ ಎಚ್ಚರಿಕೆ ನೀಡಿದ್ದಾರೆ. ಪ್ರಧಾನಿ ಮೋದಿ ಅವರ ಮೇಲೆ ಜನರು ವಿಶ್ವಾಸ ಕಳೆದುಕೊಂಡಿದ್ದಾರೆ. ಈಗಾಗಿ ಈ ಸರಕಾರ ಹೆಚ್ಚು ದಿನ ಉಳಿಯುವುದಿಲ್ಲ ಎಂದು ಸಚಿವರು ಭವಿಷ್ಯ ನುಡಿದರು.

ಸಿಎಂ ಸಿದ್ದರಾಮಯ್ಯ ಅವರ ಆಡಳಿತ ದೇಶದಲ್ಲಿಯೇ ಮಾದರಿಯಾಗಿದೆ. ಗ್ಯಾರಂಟಿ ಯೋಜನೆಗಳು ಯಾವುದೇ ಸಮಸ್ಯೆ ಇಲ್ಲದಂತೆ ಮುಂದುವರೆಯುತ್ತವೆ. ಜನರು ವದಂತಿ ಮತ್ತು ಬಿಜೆಪಿಗರ ಸುಳ್ಳು ಪ್ರಚಾರಕ್ಕೆ ಕಿವಿಗೊಡಬಾರದು.

-ಶಿವರಾಜ ತಂಗಡಗಿ, ಸಚಿವ

ಸರಕಾರದ ವಿರುದ್ಧ ಸಿ.ಸಿ ಪಾಟೀಲ್ ಗಂಭೀರ ಆರೋಪ

ಕಾಂಗ್ರೆಸ್ ಸರಕಾರದಲ್ಲಿ 60-70% ಕಮೀಷನ್

ಗದಗ: ಕಾಂಗ್ರೆಸ್ ಸರಕಾರದಲ್ಲಿ 60-70% ಕಮೀಷನ್ ನಡೆಯುತ್ತಿದೆ ಎಂದು ಮಾಜಿ ಸಚಿವ ಸಿ.ಸಿ ಪಾಟೀಲ್ ಸರಕಾರದ ವಿರುದ್ಧ ಗಂಭೀರ ಆರೋಪ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಲಿನಿಂದ ಹಿಡಿದು ಎಲ್ಲಾ ದರ ಹೆಚ್ಚಾಗಿದೆ ಅಂದರೆ 40%ಕ್ಕೆ ಆಗಲ್ಲ. ಕಾಂಗ್ರೆಸ್ ಸರಕಾರದಲ್ಲಿ 69-70% ಕಮೀಷನ್ ನಡೆದಿದೆ. ಒಂದೂ ಅಭಿವೃದ್ಧಿ ಕೆಲಸ ಇಲ್ಲ, ಎಲ್ಲಿ ಹೋಯ್ತು ಹಣ ಎಂದು ಪ್ರಶ್ನಿಸಿದ್ದಾರೆ.

ಲೋಕಸಭಾ ಚುನಾವಣೆ ಫಲಿತಾಂಶ ನಂತರ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆ ಶಿವಕುಮಾರ್ ಏನೂ ತಿಳಿಯದ ಪರಿಸ್ಥಿತಿಯಲ್ಲಿ ಒದ್ದಾಡುತ್ತಿದ್ದಾರೆ. ಹೀಗಾಗಿ ಯಡಿಯೂರಪ್ಪ ವಿರುದ್ಧ ದ್ವೇಷದ ರಾಜಕೀಯ ಮಾಡುತ್ತಿದ್ದಾರೆ. ಯಡಿಯೂರಪ್ಪ ವಿರುದ್ಧ 3 ತಿಂಗಳ ಹಿಂದೆ ದಾಖಲಾದ ಪ್ರಕರಣ ಇದು. ಈಗ ಅರೆಸ್ಟ್ ವಾರಂಟ್ ತರುವ ಮೂಲಕ ದ್ವೇಷದ ರಾಜಕೀಯ ಮಾಡಿದ್ದಾರೆ. ಸರಕಾರದ ನಿರ್ಧಾರ ತೀವ್ರವಾಗಿ ಖಂಡಿಸುತ್ತೇವೆ ಎಂದರು.

ಗ್ಯಾರಂಟಿ ಬಗ್ಗೆ ನಮ್ಮ ಅಪಸ್ವರ ಇಲ್ಲ. ಸಿದ್ದರಾಮಯ್ಯ 12 ಬಾರಿ ಬಜೆಟ್ ಮಂಡನೆ ಮಾಡಿದ್ದಾರೆ. ಗ್ಯಾರಂಟಿಗಳಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿದ್ದೇವೆ ಎಂದಿದ್ದಾರೆ. ಹಣ ಮೀಸಲು ಇಟ್ಟಿದ್ದೇ ಆದರೆ ಒಂದು ವರ್ಷದಿಂದ ಅಭಿವೃದ್ಧಿ ಯಾಕೆ ಇಲ್ಲ?, ಸರಕಾರದ ಈ ಕಾರ್ಯವೈಖರಿ ಖಂಡನೀಯ.

-ಸಿ.ಸಿ ಪಾಟೀಲ್ , ಮಾಜಿ ಸಚಿವ

ಮಾನವ ಸಮಾಜ ತಲೆ ತಗ್ಗಿಸುವಂತಹ ಕಗ್ಗೊಲೆ

ಚಿತ್ರದುರ್ಗ: ನಟ ದರ್ಶನ್ ಟೀಂನಿಂದ ಹತ್ಯೆಗೀಡಾದ ರೇಣುಕಾಸ್ವಾಮಿ ಮನೆಗೆ ರಂಭಾಪುರಿಶ್ರೀಗಳು ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ರೇಣುಕಾಸ್ವಾಮಿ ಕಗ್ಗೊಲೆ ಇಡೀ ಮಾನವ ಪ್ರಪಂಚ ತಲೆತಗ್ಗಿಸುವಂತಹದ್ದು. ಮನುಷ್ಯ ತಪ್ಪು ಮಾಡುವುದು ಸಹಜ. ಆದರೆ ಅದನ್ನು ಯಾವ ರೀತಿ ತಿದ್ದಿ ತೀಡಿ ಹೇಳಬೇಕಾದಂತದ್ದು, ಪ್ರಜ್ಞೆ ಉಳ್ಳಂತವರು ಆ ಕೆಲಸ ಮಾಡಬೇಕಾಗಿತ್ತು ಎಂದರು. ಒಂದು ಕ್ಷುಲ್ಲಕ ಕಾರಣಕ್ಕೆ ನಟ ದರ್ಶನ್ ಮತ್ತವನ ಹಿಂಬಾಲಕರು ಸೇದ ಬರ್ಬರವಾಗಿ ಮಾಡಿದ ಹತ್ಯೆಯನ್ನು ಖಂಡಿಸುವುದಾಗಿ ಹೇಳಿದರು. ರೇಣುಕಾಸ್ವಾಮಿ ಕೊಲೆಯಿಂದಾಗಿ ಎಲ್ಲೆಲ್ಲೂ ಭಯದ ವಾತಾವರಣ ನಿರ್ಮಾಣವಾಗಿದೆ. ಆದರೆ, ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪೊಲೀಸರು ಧಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ತನಿಖಾ ವೈಖರಿ ಮೆಚ್ಚುಗೆಗೆ ಪಾತ್ರವಾಗಿದೆ. ಕೊಲೆಯ ವಿಚಾರದ ತನಿಖೆ ಸಾಕಷ್ಟು ಪ್ರಗತಿ ಸಾಧಿಸಿದೆ . ಈ ತನಿಖೆಯಲ್ಲಿ ಯಾವುದೇ ರಾಜಕಾರಣಿಗಳು ಹಸ್ತಕ್ಷೇಪ ಮಾಡ ದೇ ನಿಷ್ಪಕ್ಷಪಾತವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ತಪ್ಪಿತಸ್ಥರು ಎಷ್ಟೇ ದೊಡ್ಡವರಾದರೂ ಅವರಿಗೆ ಕಾನೂನಿನ ಅಡಿ ತಕ್ಕ ಶಿಕ್ಷೆ ಆಗಬೇಕು ಎಂದು ಹೇಳಿದರು.

ಎಲ್ಲ ವರ್ಗದ ಸಮಾಜದವರು, ಮಾಧ್ಯಮದವರು ಈ ಘಟನೆಯನ್ನು ಖಂಡಿಸಿರುವುದು ಮನ ತುಂಬಿ ಬಂದಿದೆ. ಇತ್ತೀಚಿನ ಸರಕಾರದಲ್ಲಿ, ಹುಬ್ಬಳ್ಳಿಯಲ್ಲಿ ಅಂಜಲಿ ಹಿರೇಮಠ, ಸ್ನೇಹಾ ಸೇರಿದಂತೆ ಅನೇಕ ಅಮಾಯಕ ಜೀವಗಳು ಬಲಿಯಾಗಿರುವುದು ದುರಾದೃಷ್ಟಕರ.

- ರಂಭಾಪುರಿಶ್ರೀ, ರಂಭಾಪುರಿ ಮಠ

ಜಯಮೃತ್ಯುಂಜಯ ಸ್ವಾಮೀಜಿ ಅಭಿಮತ

ಕಲಾವಿದರು ಮಾದರಿಯಾಗಿರಲಿ

ಚಿಕ್ಕೋಡಿ: ಯಾವುದೇ ಕಲಾವಿದರು ಆಗಿರಬಹುದು. ಅವರ ಬದುಕು ಮತ್ತು ಬರಹ ಒಂದೇ ಆಗಿರಬೇಕು. ಪರದೆ ಮೇಲಿನ ನಟನೆಗೂ ಬದುಕಿಗೂ ಸಾಮೀಪ್ಯವಾಗುವಂತೆ ಬದುಕುವ ಪ್ರಯತ್ನ ಮಾಡಬೇಕು ಎಂದು ಪಂಚಮಸಾಲಿ ಸಮಾಜದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮೀಜಿ ಪ್ರತಿಕ್ರಿಯಿಸಿದರು.

ಪರದೆ ಮೇಲೆ ಒಂದು ನಟನೆ, ಪರದೆ ಹಿಂಭಾಗ ಒಂದು ನಟನೆ ಮಾಡಿದಾಗ ಇಂತಹ ಅವಘಡ ಆಗುತ್ತವೆ ಎಂದು ನಟ ದರ್ಶನ್ ಮತ್ತು ಅವರ ಸಹಚರರಿಂದ ನಡೆದಿರುವ ಕೊಲೆ ಆರೋಪ ಪ್ರಕರಣದ ಕುರಿತು ಸ್ವಾಮೀಜಿ ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಚಿತ್ರ ನಟ ಡಾ. ರಾಜ್‌ಕುಮಾರ್, ವಿಷ್ಣುವರ್ಧನ್ ಅವರಂತ ನಟರನ್ನು ಆದರ್ಶವಾಗಿ ತೆಗೆದುಕೊಳ್ಳಬೇಕು. ಸದ್ಯಕ್ಕೆ ನಡೆಯುತ್ತಿರುವ ಇಂತಹ ಅವಘಡಗಳಿಗೆ ಅವಕಾಶ ಕೊಡದೆ ಪ್ರತಿಯೊಬ್ಬ ನಟರು ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದು ಕಲಾವಿದರಿಗೆ ಶ್ರೀಗಳು ಕಿವಿಮಾತು ಹೇಳಿದರು. ಯಾವುದೇ ವ್ಯಕ್ತಿ ತಪ್ಪು ಮಾಡಿದರೆ ಕಾನೂನು ಕ್ರಮ ಕೈಗೊಳ್ಳಬೇಕು. ಕಾನೂನಿಗೆ ಎಲ್ಲರೂ ಸಮಾನರು ಎಂದು ಹೇಳಿದರು.

ಮೀಸಲಿಗಾಗಿ ಉಗ್ರ ಹೋರಾಟ

ಕಾಂಗ್ರೆಸ್ ಸರಕಾರ ಬಂದು ಒಂದು ವರ್ಷವಾಗಿದೆ. ಮೀಸಲು ವಿಚಾರದಲ್ಲಿ ಸರಕಾರ ನಮಗೆ ಯಾವುದೇ ಸಹಕಾರ ಕೊಟ್ಟಿಲ್ಲ. ಇದರಿಂದ ನಮಗೂ ಕೂಡ ನೋವಿದೆ. ಬಿಜೆಪಿ ಸರಕಾರದ ಅವಧಿಯಲ್ಲಿ ಯಡಿಯೂರಪ್ಪನವರು ಮಾತು ತಪ್ಪಿದ್ದರಿಂದ ಪಾದಯಾತ್ರೆ ಮಾಡಬೇಕಾಯಿತು. ನಾವು ನಮ್ಮ ಮೀಸಲಾತಿ ಪಡೆದುಕೊಳ್ಳುವುದಕ್ಕೆ ಈ ಸರಕಾರದ ವಿರುದ್ಧ ಉಗ್ರ ಹೋರಾಟವನ್ನು ಮಾಡುತ್ತೇವೆ ಎಂದು ಸ್ವಾಮೀಜಿ ಹೇಳಿದರು.

ಸಚಿವ ಕೃಷ್ಣ ಭೈರೇಗೌಡ ಅಸಮಾಧಾನ

ಡಿಸಿಎಂ ಕುರ್ಚಿ ಬಗ್ಗೆ ಬಹಿರಂಗ ಚರ್ಚೆ ಬೇಡ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಮತ್ತೆ ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸುವ ವಿಚಾರ ಚರ್ಚೆ ಮುನ್ನೆಲೆಗೆ ಬಂದಿದ್ದು, ಸತೀಶ್ ಜಾರಕಿಹೊಳಿ ಈ ಮೊದಲು 3 ಡಿಸಿಎಂ ಸ್ಥಾನಗಳನ್ನು ಸೃಷ್ಟಿಸುವಂತೆ ಒತ್ತಡಗಳು ಇದ್ದವು ನಾನೇನು ಕೇಳಲ್ಲ ಎಂಬ ಸತೀಶ್ ಜಾರಕಿಹೊಳಿ ಹೇಳಿಕೆಗೆ ಸಚಿವ ಕೃಷ್ಣ ಭೈರೇಗೌಡ ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ, ಸಿಕ್ಕ ಹುದ್ದೆಗೆ ತೃಪ್ತಿ ಪಡೋಣ ಡಿಸಿಎಂ ಹುದ್ದೆ ಸೃಷ್ಟಿ ಬಗ್ಗೆ ಪಕ್ಷ ನಿರ್ಧರಿಸುತ್ತದೆ ಎಂದು ಹೇಳಿದ್ದಾರೆ. ಈ ಇಬ್ಬರು ಸಚಿವರು ಪ್ರತ್ಯೇಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ್ದು, ಉಪಮುಖ್ಯಮಂತ್ರಿ ಹುದ್ದೆ ಕೊಡಿ ಎಂದು ನಾನೇನು ಕೇಳಲ್ಲ ಈ ಮೊದಲು 3 ಡಿಸಿಎಂ ಸ್ಥಾನಗಳನ್ನು ಸೃಷ್ಟಿಸುವಂತೆ ಒತ್ತಡಗಳು ಇದ್ದವು ಎಂದು ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ಇನ್ನು ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ವಿಚಾರ ಪಕ್ಷದ ವೇದಿಕೆಯಲ್ಲಿ ಚರ್ಚೆಯಾಗಬೇಕು. ಇದು ಸಾರ್ವಜನಿಕವಾಗಿ ಚರ್ಚಿಸುವ ವಿಷಯವಲ್ಲ. ಎಷ್ಟು ಜನರನ್ನು ಉಪಮುಖ್ಯಮಂತ್ರಿ ಮಾಡಬೇಕು ಎಂಬುದನ್ನು ಪಕ್ಷ ನಿರ್ಧರಿಸುತ್ತದೆ. ಸಿಕ್ಕ ಸ್ಥಾನಕ್ಕೆ ತೃಪ್ತಿ ಪಡೋಣ ಡಿಸಿಎಂ ಆಗಬೇಕು ಎನ್ನುವವರು ಪಕ್ಷದಲ್ಲಿ ಯಾರನ್ನು ಭೇಟಿ ಯಾಗಬೇಕು ಅವರನ್ನು ಭೇಟಿಯಾಗಿ ಅಲ್ಲಿ ಕೇಳಿಕೊಳ್ಳಬೇಕು. ಸಾರ್ವಜನಿಕವಾಗಿ ಚರ್ಚೆ ಮಾಡುವಂತದಲ್ಲ ಎಂದು ಹೇಳುವ ಮೂಲಕ ಡಿಸಿಎಂ ಹುದ್ದೆ ಸೃಷ್ಟಿ ಬಗ್ಗೆ ನಡೆದಿರುವ ಬಹಿರಂಗ ಚರ್ಚೆಗೆ ಸಚಿವ ಕೃಷ್ಣ ಭೈರೇಗೌಡ ಅಸಮಾಧಾನ ಹೊರ ಹಾಕಿದ್ದಾರೆ.

ಬಡವರ ಅಭಿವೃದ್ಧಿಗೆ ತೈಲ ದರ ಏರಿಕೆ: ಖಂಡ್ರೆ

ಕಲಬುರಗಿ: ನಮ್ಮ ಸರಕಾರ ಜನಪರವಾದ ಆಡಳಿತ ಕೊಡುತ್ತಿದ್ದು, 52 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿಗಾಗಿ ಮೀಸಲಿಟ್ಟಿದ್ದೇವೆ. ಬಡವರಿಗಾಗಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಲು ತೆರಿಗೆ ಹಣ ಬಳಕೆಯಾಗುತ್ತದೆ' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ಸಮರ್ಥಿಸಿಕೊಂಡರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನೆರೆಯ ತೆಲಂಗಾಣ, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇನ್ನೂ ಕಡಿಮೆ ಇದೆ. ಒಮ್ಮೆ ಇತಿಹಾಸವನ್ನು ಗಮನಿಸಿ ನೋಡಿ ಎಂದರು. ಕರ್ನಾಟಕಕ್ಕಿಂತ ದೆಹಲಿ, ಜಾರ್ಖಂಡ್ ರಾಜ್ಯದಲ್ಲಿ ಕಡಿಮೆ ದರ ಇದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ನಮ್ಮ ಪಕ್ಷದ ರಾಜ್ಯ ಯಾವುದು ಇದೆ ಹೇಳಿ? ಯಾವಾಗಲೂ ಪಕ್ಷದ ರಾಜ್ಯಗಳಲ್ಲಿ ನಮಗಿಂತ ಹೆಚ್ಚಿನ ದರ ಇದೆ. ಅನಿವಾರ್ಯ ಕಾರಣಕ್ಕಾಗಿ ಬಹಳ ಅತ್ಯಲ್ಪ ದರ ಏರಿಕೆ ಮಾಡಿದ್ದೇವೆ. ಬಿಜೆಪಿಯವರು ರಾಜಕೀಯ ಮಾಡುವುದನ್ನು ಬಿಟ್ಟು ಕೇಂದ್ರ ಸರಕಾರವು ತನ್ನ ಪಾಲಿನ ಸುಂಕ ತಗ್ಗಿಸುವಂತೆ ಒತ್ತಾಯಿಸಿ ಬೀದಿಗೆ ಇಳಿದು ಹೋರಾಟ ಮಾಡಲಿ ಎಂದು ತಾಕೀತು ಮಾಡಿದರು.

ಬಳ್ಳಾರಿಯ ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆ ಸಂಬಂಧ ಈ ಹಿಂದೆ ಸಲ್ಲಿಕೆಯಾದ ವರದಿಯನ್ನು ತರಿಸಿಕೊಂಡು, ಅಧ್ಯಯನ ಮಾಡಿ ಪ್ರತಿ ಕ್ರಿಯಿಸುತ್ತೇನೆ.

-ಈಶ್ವರ್ ಖಂಡ್ರೆ, ಸಚಿವ

ಮಲಪ್ರಭಾ, ಕೃಷ್ಣಾ ನದಿಯ ಅಚ್ಚುಕಟ್ಟಿನ ಪ್ರದೇಶದಲ್ಲಿ 10 ದಿನಗಳಿಂದ ಸುರಿದ ಮಳೆಯಿಂದ ನಾರಾಯಣಪುರ ಜಲಾಶಯದ ಹಿನ್ನೀರಿನ ಕೃಷ್ಣಾ, ಮಲಪ್ರಭಾ ನದಿಯ ಸಂಗಮವಾದ ಕೂಡಲಸಂಗಮದ ಬಸವಣ್ಣನ ಐಕ್ಯ ಮಂಟಪ ಬಳಿ ನೀರಿನ ಜಲರಾಶಿ ಮೈದುಂಬಿದೆ.

ಇವಿಎಂ ಹ್ಯಾಕಿಂಗ್ ಸಾಧ್ಯ ಎಂದ ಮಸ್ಕ್

← ಮೊದಲಪುಟದಿಂದ

ಮುಂಬೈ ವಾಯುವ್ಯ ಲೋಕಸಭಾ ಕ್ಷೇತ್ರದ ಮತ ಎಣಿಕೆ ಕೇಂದ್ರದಲ್ಲಿ ಏಕನಾಥ ಶಿಂದೆ ಬಣದ ಶಿವಸೇನೆ ಸಂಸದ ರವೀಂದ್ರ ವೈಕರ್ ಸಂಬಂಧಿ ಮಂಗೇಶ್ ಪಂಡಿಲ್ಕರ್ ಎಂಬಾತ ಮತ ಎಣಿಕೆ ಕೇಂದ್ರದಲ್ಲಿ ಮೊಬೈಲ್ ಬಳಸಿದ್ದಾನೆ. ಇವಿಎಂಗೆ ಆತನ ಫೋನ್ ಸಂಪರ್ಕದಲ್ಲಿದ್ದು ಒಟಿಪಿ ಕೂಡ ಜನರೇಟ್ ಮಾಡಲಾಗಿದೆ ಎಂದು ವರದಿಯಾಗಿದೆ. ಮತ ಎಣಿಕೆ ಕೇಂದ್ರದಲ್ಲಿ ಮೊಬೈಲ್ ಬಳಕೆ ಮಾಡಿರುವ ಆರೋಪದಡಿ ಮಂಗೇಶ್ ವಿರುದ್ಧ ಕೇಸ್ ದಾಖಲಾಗಿದೆ. ಈ ವಿಚಾರವನ್ನೂ ರಾಹುಲ್ ಪ್ರಸ್ತಾಪಿಸಿದ್ದಾರೆ. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, 'ಸಮಸ್ಯೆ ನಿವಾರಣೆಗೆ ತಂತ್ರಜ್ಞಾನ ಬೇಕು, ತಂತ್ರಜ್ಞಾನವೇ ಸಮಸ್ಯೆಯಾದರೆ ಮೊದಲು ಅದರ ಬಳಕೆ ನಿಲ್ಲಿಸಬೇಕು. ಇವಿಎಂ ಹ್ಯಾಕ್ ಮಾಡಬಹುದು ಎಂಬ ಬಗ್ಗೆ ತಂತ್ರಜ್ಞರೇ ಆತಂಕ ವ್ಯಕ್ತಪಡಿಸಿರುವಾಗ ಇವಿಎಂ ಬಳಕೆಗೆ ಬಿಜೆಪಿ ಯಾಕೆ ಒತ್ತು ನೀಡುತ್ತಿದೆ? ಇದನ್ನು ಬಿಜೆಪಿ ಸ್ಪಷ್ಟಪಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ಜಾನುವಾರು ಅಕ್ರಮ ಸಾಗಣೆಗೆ ತಡೆ

ದಾಂಡೇಲಿ: ಹಳಿಯಾಳ ತಾಲೂಕಿನ ಅಡಿಕೆ ಹೊಸೂರು ಗ್ರಾಮದಿಂದ ಅಕ್ರಮವಾಗಿ ಜಾನುವಾರು ಸಾಗಾಟ ಮಾಡಿಕೊಂಡು ಬರುತ್ತಿದ್ದ ವಾಹನವನ್ನು ಜಾನುವಾರು ಸಹಿತ ವಶಪಡಿಸಿಕೊಂಡ ಘಟನೆ ದಾಂಡೇಲಿ ನಗರದ ಹಳಿಯಾಳ ರಸ್ತೆಯ 3ನಂ ಗೇಟ್ ಹತ್ತಿರ ರವಿವಾರ ನಡೆದಿದೆ.

ಟಾಟಾ ಎಸಿ ವಾಹನದಲ್ಲಿ ಹಳಿಯಾಳ ತಾಲೂಕಿನ ಅಡಿಕೆ ಹೊಸೂರು ಗ್ರಾಮದಿಂದ ಅಕ್ರಮವಾಗಿ ಎರಡು ಜಾನುವಾರುಗಳನ್ನು ದಾಂಡೇಲಿಗೆ ಸಾಗಾಟ ಮಾಡಲಾಗುತ್ತಿತ್ತು ಎನ್ನಲಾಗಿದೆ. ನಗರದ ಹಳಿಯಾಳ ರಸ್ತೆಯ 3ನಂ ಗೇಟ್ ಹತ್ತಿರ ವಾಹನವನ್ನು ತಡೆದು ನಿಲ್ಲಿಸಿದಾಗ ಅಕ್ರಮ ಜಾನುವಾರು ಸಾಗಾಟ ಬೆಳಕಿಗೆ ಬಂದಿದೆ. ಜಾನುವಾರು ಸಹಿತ ವಾಹನವನ್ನು ನಗರ ಠಾಣೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಕೃತ್ಯಕ್ಕೆ ಬಳಸಲಾದ ವಾಹನ ಮತ್ತು ಜಾನುವಾರುಗಳ ಮಾಲಕ ಅಡಿಕೆ ಹೊಸೂರು ಗ್ರಾಮದ ಶರೀಫ್ ಸಿದ್ದಿ ಎಂಬವನಾಗಿದ್ದು, ಈ ಘಟನೆಯ ಬಗ್ಗೆ ಶರೀಫ್ ಸಿದ್ದಿಯವನಲ್ಲಿ ಮಾತನಾಡಿಸಿದಾಗ ಮಾಧ್ಯಮಕ್ಕೆ ತನ್ನದೇ ಜಾನುವಾರು ಹಾಗೂ ತನ್ನದೇ ವಾಹನ ಎಂದು ಹೇಳಿದ್ದಾನೆ. ಈ ಬಗ್ಗೆ ದಾಂಡೇಲಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತೈಲ ಬೆಲೆ ನಮ್ಮಲ್ಲೇ ಕಡಿಮೆ

← ಮೊದಲಪುಟದಿಂದ

ಬಿಜೆಪಿಯ ಡಬಲ್ ಎಂಜಿನ್ ಸರಕಾರದ ಅವಧಿಯಲ್ಲಿ ರಾಜ್ಯದ ಸಂಪನ್ಮೂಲಗಳನ್ನು ಇತರೆ ರಾಜ್ಯಗಳಿಗೆ ಹಂಚಿಕೆ ಮಾಡುವ ದುರುದ್ದೇಶದಿಂದ ಕೇಂದ್ರ ಸರಕಾರ ರಾಜ್ಯದ ಬಿಜೆಪಿ ಸರಕಾರವನ್ನು ಬಳಸಿಕೊಂಡು ಕರ್ನಾಟಕದಲ್ಲಿ ಮೌಲ್ಯವರ್ಧಿತ ತೆರಿಗೆ ದರವನ್ನು ಕಡಿತಗೊಳಿಸುವಂತೆ ಮಾಡಿ, ತನ್ನ ಪಾಲಿನ ತೆರಿಗೆ ಹೆಚ್ಚಳ ಮಾಡುವ ಮೂಲಕ ಲಕ್ಷಾಂತರ ಕೋಟಿ ಸಂಗ್ರಹಿಸಿತ್ತು ಎಂದು ಟೀಕಿಸಿದ್ದಾರೆ.

ರಸ್ತೆ ಬದಿಯಲ್ಲೇ ಅಂತ್ಯಕ್ರಿಯೆ

ರಾಮನಗರ: ಡಿಸಿಎಂ ತವರು ಜಿಲ್ಲೆ ರಾಮನಗರದಲ್ಲಿ ಅಂತ್ಯ ಸಂಸ್ಕಾರಕ್ಕೆ ಶ್ಮಶಾನವಿಲ್ಲದೆ ಜನತೆ ಪರದಾಡುವ ಸ್ಥಿತಿ ನಿರ್ಮಾಣಗೊಂಡಿದೆ. ಇದಕ್ಕೆ ಸಾಕ್ಷಿ ಎಂಬಂತೆ ರವಿವಾರ ತಾಲೂಕಿನ ಕೋನಮುದ್ದನಹಳ್ಳಿ ಗ್ರಾಮದಲ್ಲಿ ಸಾವಿಗೀಡಾದ ವ್ಯಕ್ತಿ ಅಂತ್ಯಸಂಸ್ಕಾರಕ್ಕೆ ಸ್ಥಳವಿಲ್ಲದೆ ಗ್ರಾಮಸ್ಥರು ರಸ್ತೆ ಬದಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಿದ್ದಾರೆ.

ಗ್ರಾಮದ ರುದ್ರಯ್ಯ (60) ಅನಾರೋಗ್ಯದಿಂದ ಮೃತಪಟ್ಟಿದ್ದು, ಅವರ ಕುಟುಂಬಕ್ಕೆ ಸ್ವಂತ ಜಮೀನಿಲ್ಲದೇ ಅಂತ್ಯಸಂಸ್ಕಾರಕ್ಕೆ ಜಾಗವಿಲ್ಲದೇ ರಸ್ತೆ ಬದಿಯಲ್ಲಿ ಸಂಸ್ಕಾರ ಮಾಡಿದ್ದಾರೆ. 8 ವರ್ಷಗಳಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರೂ, ಇದುವರೆಗೂ ಶ್ಮಶಾನ ಮಂಜೂರು ಮಾಡಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಆರೋಪ

ಬೆಲೆ ಏರಿಕೆಯೇ ಕಾಂಗ್ರೆಸ್ ಕೊಡುಗೆ

ಬೆಂಗಳೂರು: ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಬೆಲೆ ಏರಿಕೆ, ತೆರಿಗೆ ಹೆಚ್ಚಳವನ್ನು ಜನರಿಗೆ ಕೊಡುಗೆಯಾಗಿ ನೀಡಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಆರೋಪಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯನ್ನು ತೀವ್ರವಾಗಿ ಖಂಡಿಸಲಿದ್ದು, ಸೋಮವಾರ ಬೆಂಗಳೂರಿನ ಫ್ರೀಡಂ ಪಾರ್ಕನಲ್ಲಿ ಪ್ರತಿಭಟಿಸಲಿದ್ದು, ಬಿಜೆಪಿ ವತಿಯಿಂದ ಎಲ್ಲ ಜಿಲ್ಲಾ ಕೇಂದ್ರಗಳು, ತಾಲ್ಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಿದ್ದು, ಪರಿಷ್ಕೃತ ದರವನ್ನು ಸಂಪೂರ್ಣವಾಗಿ ಹಿಂದಕ್ಕೆ ಪಡೆಯುವಂತೆ ಆಗ್ರಹಿಸಿದರು.

ಕಾಂಗ್ರೆಸ್ ಸರಕಾರವು ಆಸ್ತಿ ತೆರಿಗೆ ಹೆಚ್ಚಳ, ಕುಡಿಯುವ ನೀರಿನ ದರ ಏರಿಕೆ, ವಿದ್ಯುತ್ ದರ ಏರಿಕೆ ಮಾಡಿದೆ. ವಾಹನಗಳ ತೆರಿಗೆ, ಆಸ್ತಿ ತೆರಿಗೆಯನ್ನೂ ಹೆಚ್ಚಿಸಲಾಗಿದೆ. ಸಾಲ ಪಡೆಯಲು ಬ್ಯಾಂಕಿಗೆ ಹೋದರೆ ರಿಜಿಸ್ಟ್ರೇಶನ್ ದರ ವನ್ನೂ ಹೆಚ್ಚಿಸಲಾಗಿದೆ ಎಂದು ದೂರಿದರು. ಹಣದುಬ್ಬರ, ಬೆಲೆ ಏರಿಕೆ ವಿರುದ್ಧ ಹೋರಾಟ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸಿನವರು, ಚುನಾವಣೆ ವೇಳೆ ಬೆಲೆ ಇಳಿಸುವ ಭರವಸೆ ಕೊಟ್ಟಿದ್ದರು. ಇದೀಗ ರಾಜ್ಯದ ಜನತೆಗೆ ಕಾಂಗ್ರೆಸ್ಸಿನವರದು ಬೆಲೆ ಏರಿಕೆಯ ಗ್ಯಾರಂಟಿ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ್ ಮಾತನಾಡಿದರು.

ಹಿಂದೆ ಒಂದು ರು. ಹೆಚ್ಚಳ ಮಾಡಿದ್ದಾಗ ಹಣಕಾಸು ಸಚಿವರಾಗಿದ್ದ ಸಿದ್ದರಾಮಯ್ಯನವರು ಎಲ್ಲ ವಸ್ತುಗಳ ಬೆಲೆ ಏರಿಕೆ ಆಗಲಿದೆ ಎಂದು ಪ್ರಬಲವಾಗಿ ವಿರೋಧಿಸಿದ್ದರು. ಈಗ ವಿದ್ಯುತ್ ದರವನ್ನು ಶೇ.100ರಿಂದ 150 ರಷ್ಟು ಏರಿಸಿದ್ದಾರೆ. ಯಾವ ರೀತಿ ಸಮಜಾಯಿಷಿ ಕೊಡುತ್ತಾರೆ? ಸ್ವಾತಂತ್ರ್ಯ ಬಂದ ಬಳಿಕ ಎಂದೂ ಕಾಣದಂತ ಕೆಟ್ಟ ಆಡಳಿತ. ಕೆಟ್ಟ ನಿರ್ಧಾರ, ದರ ಏರಿಕೆಗಳನ್ನು ಏಕಾಏಕಿ ಮಾಡುತ್ತಿದ್ದು, ಯಾವುದೇ ಸಮಾಲೋಚನೆ, ಮಾತುಕತೆ ಇಲ್ಲದೆ, ಸ್ಪಷ್ಟತೆ ಇಲ್ಲದೆ ಅಧಿಕಾರದ ದುರ್ಬಳಕೆ ಆಗುತ್ತಿದೆ ಎಂದು ದೂರಿದರು.

ಬಿಜೆಪಿ ಆಡಳಿತದಲ್ಲಿ ದರ ಕಡಿಮೆ

ಬಿಜೆಪಿ ಆಡಳಿತ ನಡೆಸುವ ಹರಿಯಾಣ ರಾಜ್ಯದಲ್ಲಿ 95.54 ರು., ಉತ್ತರ ಪ್ರದೇ ಶದಲ್ಲಿ 94.55 ರು., ಗುಜರಾತ್‌ನಲ್ಲಿ 94.50 ರು., ಅಸ್ಸಾಂ 97 ರು., ದರಯಿದೆ. ಆದರೆ, ಕಾಂಗ್ರೆಸ್ ಆಡಳಿತ ಮಾಡುವ ರಾಜ್ಯಗಳಲ್ಲಿ 103 ರು, 107 ರು, ತೆಲಂಗಾ ಣದಲ್ಲಿ 109.50 ರು, ಬಿಜೆಪಿಯೇತರ ಆಡಳಿತ ಇರುವ ಕೇರಳದಲ್ಲಿ 105.68 ರು., ದರ ವಿದೆ ಎಂದು ಮಾಜಿ ಡಿಸಿಎಂ ಡಾ.ಸಿ.ಎನ್. ಅಶ್ವತ್ಥನಾರಾಯಣ್ ತಿಳಿಸಿದರು.

ಸಮಾಚಾರ ಸಣ್ಣದಲ್ಲ

ಲಾರಿ - ಕಾರು ನಡುವೆ ಡಿಕ್ಕಿ: ಇಬ್ಬರು ಸಾವು

ಕಲಬುರಗಿ: ಲಾರಿ ಮತ್ತು ಕಾರಿನ ನಡುವೆ ನಡೆದ ಭೀಕರ ಅಪಘಾತದಲ್ಲಿ ಯಾದಗಿರಿ ಜಿಲ್ಲಾಧಿಕಾರಿ ಕಚೇರಿಯ ಕ್ಲರ್ಕ್ ಸೇರಿದಂತೆ ಇಬ್ಬರು ದುರ್ಮರಣ ಹೊಂದಿದ್ದು, ಓರ್ವ ಗಾಯಗೊಂಡಿರುವ ಘಟನೆ ವಿಜಯಪುರ-ಕಲಬುರಗಿ ರಸ್ತೆಯ ನೆಲೋಗಿ ಕಮಾನ ಹತ್ತಿರ ನಡೆದಿದೆ. ಯಾದಗಿರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಫಸ್ಟ್ ಗ್ರೇಡ್ ಕ್ಲರ್ಕ್ ಆಗಿ ಸೇವೆ ಸಲ್ಲಿಸುತ್ತಿದ್ದ ಕಾಂತಯ್ಯ ಸ್ವಾಮಿ (34) ಮತ್ತು ಖಾಸಗಿ ಕಂಪ್ಯೂಟರ್ ಆಪರೇಟರ್ ಲೋಕೇಶ ಹಾಸನ್ (35) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಘಟನೆ ಯಲ್ಲಿ ಓರ್ವನಿಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶನಿವಾರ ತಡರಾತ್ರಿ ಈ ಘಟನೆ ನಡೆದಿದೆ. ಎಎಸ್ಪಿ ಬಿಂದುರಾಣಿ, ಸಿಪಿಐ ರಾಜಾಸಾಬ ಹಾಗೂ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಈ ಕುರಿತು ನೆಲೋಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃಷ್ಣಮೃಗ ಮಾಂಸ ಸಾಗಣೆ: ಏಳು ಬಂಧನ

ಜಮಖಂಡಿ: ಕೃಷ್ಣಮೃಗವನ್ನು ಬೇಟೆಯಾಡಿ ಕಾರಿನಲ್ಲಿ ಸಾಗಿಸುತ್ತಿದ್ದ ಏಳು ಮಂದಿ ಆರೋಪಿಗಳನ್ನು ಇಲ್ಲಿನ ಉಪವಲಯ ಅರಣ್ಯಾಧಿಕಾರಿಗಳು ವಶಕ್ಕೆ ಪಡೆದು,



ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ರಾಯಬಾಗ ತಾಲೂಕಿನ ಕಡಕಬಾವಿ ಗ್ರಾಮದ ಸುಭಾಷ ಸಿದ್ದಪ್ಪ ಪಿಡಾಯಿ (23), ಬ್ಯಾಕೋಡ ಗ್ರಾಮದ ಸುರೇಶ ನಿಂಗಪ್ಪ ಪಕಾಂಡೆ (21), ಚೇತನ ಹಣಮಂತ ಬಿದರಿ (24), ಕಂಕಣವಾಡಿ ಗ್ರಾಮದ ನಿಂಗಪ್ಪ ಲಕ್ಷ್ಮಣ ಪಡತಾರೆ (24), ದೇವಪ್ಪರಟ್ಟಿ ಗ್ರಾಮದ ಪ್ರಜ್ವಲ ಬಾಳಪ್ಪ ಮೆಳವಂಕಿ (18), ರಬಕವಿ-ಬನಹಟ್ಟಿ ತಾಲೂಕಿನ ಹಳಿಂಗಳಿ ಗ್ರಾಮದ ಶಬ್ಬಿರ್ ಅಬ್ದುಲ್ಲಾಬ್ ಗುಡ್ಡದಮನಿ (25), ರಮಜಾ ನಸಾಬ್ ಇಮಾಮ್ಸಾಬ್ ಅಲಸ್ (25) ಬಂಧಿತರು. ಹಳಿಂಗಳಿ ಗ್ರಾಮದ ಲಾಲಸಾಬ್ ಸರ್ದಾರ್ ಸಾಬ್ ಗುಡ್ಡದಮನಿ, ಹನಗಂಡಿ ಗ್ರಾಮದ ರಮಜಾನ್ಸಾಬ್ ಇಸ್ಮಾಯಿಲ್ಸಾಬ್ ಅಲಾಸ್ ತಪ್ಪಿಸಿಕೊಂಡಿದ್ದಾರೆ ಎಂದು ಅರಣ್ಯಾಧಿಕಾರಿ ತಿಳಿಸಿದ್ದಾರೆ.

ವಿದ್ಯುತ್ ತಂತಿ ತಗುಲಿ ರೈತ, ಎತ್ತು ಸಾವು

ಕೊಪ್ಪಳ: ಹೊಲದಲ್ಲಿ ಕೆಲಸ ಮಾಡುತ್ತಿದ್ದ ರೈತನೊಬ್ಬ ತನ್ನ ಎತ್ತಿನೊಂದಿಗೆ ಇದ್ದ ಸಂದರ್ಭ ಆಕಸ್ಮಿಕ ವಿದ್ಯುತ್ ತಗುಲಿ ಸಾವನ್ನಪ್ಪಿದ ಘಟನೆ ಸಮೀಪದ ಚಿಕ್ಕತ್ಮಿನಾಳ ಗ್ರಾಮದಲ್ಲಿ ನಡೆದಿದೆ. ರೈತ ಬಸವರಾಜ್ ವೆಂಕಪ್ಪ ಸಾಸಲಮರಿ (38) ಹೊಲದಲ್ಲಿ ಎಡೆ ಒಡೆಯುತ್ತಿದ್ದಾಗ ವಿದ್ಯುತ್ ತಂತಿ ಸ್ಪರ್ಶಿಸಿ ತನ್ನ ಎತ್ತಿನೊಂದಿಗೆ ಮೃತಪಟ್ಟಿದ್ದಾರೆ. ಪೊಲೀಸ್ ಇಲಾಖೆ ಹಾಗೂ ಕೆಇಬಿ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆಯ ಬಗ್ಗೆ ತಿಳಿಯುತ್ತಿದ್ದಂತೆ, ಶಾಸಕ ದೊಡ್ಡನಗೌಡ ಪಾಟೀಲ್ ಸ್ಥಳೀಯ ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು.

ಹೆಣ್ಣು ಮಗು ಅಕ್ರಮ ಹಸ್ತಾಂತರ: ಎಫ್ಐಆರ್

ಹಾವೇರಿ: ಹೆಣ್ಣು ಮಗುವನ್ನು ಅಕ್ರಮವಾಗಿ ಬೇರೆಯವರಿಗೆ ಹಸ್ತಾಂತರ ಮಾಡಿದ್ದ ಆರೋಪದಡಿ ನಾಲ್ವರ ವಿರುದ್ಧ ಬ್ಯಾಡಗಿ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದ್ದು, ಕೃತ್ಯಕ್ಕೆ ಸಂಬಂಧಪಟ್ಟಂತೆ ಪೊಲೀಸರು



ತನಿಖೆ ಆರಂಭಿಸಿದ್ದಾರೆ. ದಾವಣಗೆರೆ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎಸ್. ಕವಿತಾ ಅವರು ಹೆಣ್ಣು ಮಗು ಹಸ್ತಾಂತರ ಸಂಬಂಧ ದೂರು ನೀಡಿದ್ದಾರೆ. ಬ್ಯಾಡಗಿಯ ಇಸ್ಲಾಂಪೂರ ಓಣಿಯ ಜೈತುನಬಿ ಎಂ. ಸೌದಾಗರ, ಲಕ್ಷ್ಮೇಶ್ವರ ತಾಲೂಕಿನ ಬಾಲೇಹೊಸೂರಿನ ಕುಸುಮಾ, ದಾವಣಗೆರೆ ತಾಲೂಕಿನ ದೊಡ್ಡಭಾತಿಯ ಮಂಜುಳಾ ದಾಸಪ್ಪನವರ ಹಾಗೂ ಅವರ ಪತಿ ರಾಜಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. ಆರೋಪಿ ಜೈತುನಬಿ, ಆರೋಗ್ಯ ಇಲಾಖೆಯಿಂದ ಹೆರಿಗೆ ತರಬೇತಿ ಪಡೆದಿದ್ದಾರೆ. ಸುಮಾರು 40 ವರ್ಷಗಳಿಂದ ಸರಳ ಹಾಗೂ ಸಾಮಾನ್ಯ ಹೆರಿಗೆ ಮಾಡಿಸುವಲ್ಲಿ ಹೆಸರು, ಪ್ರಶಸ್ತಿ ಪಡೆದಿದ್ದು ಬ್ಯಾಡಗಿ ಪುರಸಭೆಯ ಮಾಜಿ ಸದಸ್ಯರೂ ಆಗಿದ್ದಾರೆ ಎಂದು ತಿಳಿಸಿದರು.

ವಿರಾಮ
ಪ್ರತಿ ಭಾನುವಾರ

{ಆರ್.ಅಶೋಕ್} ಪ್ರತಿಪಕ್ಷ ನಾಯಕ

ಸರಕಾರಿ ನೌಕರರಿಗೆ ವೇತನ ಹೆಚ್ಚಳ ಮಾಡಬೇಕು. ರೈತರಿಗೆ ಹಾಲಿನ ಪ್ರೋತ್ಸಾಹ ದನ ನೀಡಿಲ್ಲ. ಇನ್ನೂ ಮಕ್ಕಳಿಗೆ ಪಠ್ಯಪುಸ್ತಕ ನೀಡಿಲ್ಲ. ತರಕಾರಿ ಬೆಲೆ ಏರಿದೆ, ಟಿ-ಕಾಫಿ ಬೆಲೆ ಏರಿಕೆ ಆಗಲಿದೆ. ಆಟೋ,ಗೂಡ್ಸ್ ವೆಹಿಕಲ್ ದರ ಹೆಚ್ಚಳ ಮಾಡುತ್ತಾರೆ. ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿ ಬೆಲೆ ಹೆಚ್ಚಳ ಆಗುತ್ತೆ ಅಂತ ಗೊತ್ತಿಲ್ಲವಾ ನಿಮಗೆ?. ಸಿದ್ದರಾಮಯ್ಯ ನಿಮಗೆ ಜ್ಞಾನ ಇಲ್ಲವಾ?.

ಸರಕಾರದ ತೀರ್ಮಾನವನ್ನು ಸಮರ್ಥಿಸಿಕೊಂಡ ಸಿಎಂ | ಬಿಜೆಪಿಯಿಂದ ವಿರೋಧ, ಉಗ್ರ ಹೋರಾಟದ ಎಚ್ಚರಿಕೆ | ಹೋಟೆಲ್, ಬಸ್ ದರ ಏರಿಕೆಗೆ ಚಿಂತನೆ ನಡೆಸಿರುವ ಸಂಘಟನೆಗಳು

ಪರ ವಿರೋಧ ಚರ್ಚೆಗೆ ವೇದಿಕೆಯಾದ ದರ ಏರಿಕೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡಿರುವ ಬೆನ್ನಲ್ಲೇ, ಬಿಜೆಪಿ ನಾಯಕರು ಸರಕಾರದ ವಿರುದ್ಧ ವಾಗ್ದಾಳಿ ಆರಂಭಿಸಿದ್ದು, ಕೂಡಲೇ ಆದೇಶವನ್ನು ಹಿಂಪಡೆಯಲು ಆಗ್ರಹಿಸಿದ್ದಾರೆ. ಈ ನಡುವೆ ದರ ಏರಿಕೆ ಅನಿವಾರ್ಯ ಎನ್ನುವ ಮಾತನ್ನು ಕಾಂಗ್ರೆಸ್ ನಾಯಕರು ಆಡುತ್ತಿದ್ದು, ಪರ-ವಿರೋಧ ಚರ್ಚೆ ಜೋರಾಗಿದೆ.

ಬಿಜೆಪಿ ಸರಕಾರದ ಅವಧಿಯಲ್ಲಿನ ಅವೈಜ್ಞಾನಿಕ ತೀರ್ಮಾನದಿಂದ ರಾಜ್ಯದ ರಾಜಸ್ವ ಗುರಿಯನ್ನೇ ತಲುಪದ ರೀತಿಯಾಗಿತ್ತು. ಆದ್ದರಿಂದ ರಾಜ್ಯ ಸರಕಾರ ಅನಿವಾರ್ಯವಾಗಿ ಪೆಟ್ರೋಲ್-ಡೀಸೆಲ್ ದರ ಏರಿಕೆ ಮಾಡಿದೆ ಎಂದು ಕಾಂಗ್ರೆಸ್ ನಾಯಕರು ದರ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ.

ಡೀಸೆಲ್ ದರದಲ್ಲಿ ಭಾರಿ ಏರಿಕೆಯಾಗಿರುವುದರಿಂದ ಮುಂದಿನ ದಿನದಲ್ಲಿ ಸಾರಿಗೆ ಸಂಸ್ಥೆಗಳ ಬಸ್ ದರ, ಹೋಟೆಲ್‌ಗಳಲ್ಲಿ ತಿಂಡಿ ದರ ಸೇರಿದಂತೆ ಪ್ರತಿಯೊಂದು ಕ್ಷೇತ್ರದ ಮೇಲೆಯೂ ದರ ಏರಿಕೆ ಪರಿಣಾಮ ಬೀರಲಿದೆ ಎನ್ನುವುದು ಸ್ಪಷ್ಟವಾಗಿದೆ. ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ದರ ಏರಿಕೆಯಿಂದ ಯಾರಿಗೂ ಅನ್ಯಾಯವಾಗಿಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ದರ ಇಳಿಸದಿದ್ದರೆ ಹೋರಾಟ: ಪೆಟ್ರೋಲ್ ಮತ್ತು ಡೀಸೆಲ್ ದರಗಳನ್ನು ಅವೈಜ್ಞಾನಿಕವಾಗಿ ಏರಿಕೆ ಮಾಡಿರುವುದನ್ನು ಇಂಡಿಯನ್ ವೆಹಿಕಲ್ ಡ್ರೈವರ್ ಅಸೋಸಿಯೇಷನ್ ಖಂಡಿಸಿದ್ದು, ಕೂಡಲೇ ದರ ಏರಿಕೆ ಕೈಬಿಡದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರಿಗೆ ಮನವಿ ಸಲ್ಲಿಸಿದ್ದು, ತಕ್ಷಣವೇ ದರ ಇಳಿಕೆ ಮಾಡಬೇಕು ಎಂದು ಅಸೋಸಿಯೇಷನ್ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ ಆಗ್ರಹಿಸಿದ್ದಾರೆ. ಕ್ಯಾಬ್, ಟ್ಯಾಕ್ಸಿ ಕಾರುಗಳು, ಸರಕು ಸಾಗಾಣೆ ಹಾಗೂ ಖಾಸಗಿ ಬಸ್, ಹಾಲಿನ ವಾಹನಗಳು, ಜೆಸಿಬಿ, ಟ್ಯಾಂಕರ್‌ಗಳು ಒಳಗೊಂಡಂತೆ 83 ಲಕ್ಷಕ್ಕೂ ಅಧಿಕ ಹಳದಿ ಬೋರ್ಡ್ ವಾಹನಗಳು ರಾಜ್ಯದಲ್ಲಿ ಸಂಚರಿಸುತ್ತವೆ. ದರ ಏರಿಕೆಯಿಂದ ಎಲ್ಲಾ ವಸ್ತುಗಳ ಬೆಲೆ ಹೆಚ್ಚಳಕ್ಕೆ ದಾರಿಯಾಗುತ್ತದೆ. ವಾಣಿಜ್ಯ ವಾಹನಗಳ ಮಾಲೀಕರು ಮತ್ತು ಚಾಲಕರಿಗೆ ದರ ಏರಿಕೆ ಬರೆ ಎಳೆದಂತಾಗಿದೆ ಎಂದು ಅವರು ತಿಳಿಸಿದ್ದಾರೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಸಾಗಾಣೆ ವಲಯದ ಮೇಲೆ ಹೊರೆ ಹೇರಿರುವುದು ಸರಿಯಲ್ಲ. ಬೆಲೆ ಏರಿಕೆಯಿಂದ ಬಸವಳಿದಿರುವ ಜನ ಸಾಮಾನ್ಯರ ಬದುಕಿಗೆ ಸರಕಾರ ಕೊಳ್ಳಿಯಿಟ್ಟಿದೆ. ಯಾವುದೇ ಸುಳಿವು ನೀಡದೇ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆ ಹೆಚ್ಚಿಸಿರುವುದು ಅತ್ಯಂತ ಖಂಡನೀಯ ಎಂದಿದ್ದಾರೆ.

ಚುನಾವಣೆಗೂ ದರ ಏರಿಕೆಗೂ ಸಂಬಂಧವಿಲ್ಲ

ಇನ್ನು ಲೋಕಸಭಾ ಚುನಾವಣೆಯ ಹಿನ್ನಡೆಯಿಂದ ಪೆಟ್ರೋಲ್-ಡೀಸೆಲ್ ದರ ಏರಿಕೆ ಮಾಡಲಾಗಿದೆ ಎನ್ನುವ ಪ್ರತಿಪಕ್ಷ ನಾಯಕ ಅಶೋಕ್ ಆರೋಪಕ್ಕೆ ವಿಜಯಪುರದಲ್ಲಿ ಪ್ರತಿಕ್ರಿಯಿಸಿರುವ ಸಿಎಂ ಸಿದ್ದರಾಮಯ್ಯ,

ಪೆಟ್ರೋಲ್ ಬೆಲೆ ಏರಿಕೆಗೂ ಚುನಾವಣಾ ಫಲಿತಾಂಶಕ್ಕೂ ಸಂಬಂಧವಿಲ್ಲ. ಪ್ರಜಾಪ್ರಭುತ್ವದಲ್ಲಿ ಸೋಲು ಗೆಲುವು ಇದ್ದದ್ದೇ. ಕರ್ನಾಟಕದಲ್ಲಿ ನಾವು ನಿರೀಕ್ಷೆ ಮಾಡಿದಷ್ಟು ಸ್ಥಾನಗಳು ಬಂದಿಲ್ಲ. ಕರ್ನಾಟಕದಲ್ಲಿ ಕಳೆದ ಚುನಾವಣೆಗೆ ಹೋಲಿಕೆ ಮಾಡಿದರೆ, ಹೆಚ್ಚು ಸ್ಥಾನವನ್ನು ಗಳಿಸಿದ್ದೇವೆ. ಬಿಜೆಪಿ ಕಳೆದ ಬಾರಿ 25 ಇದ್ದದ್ದು ಈ ಬಾರಿ 19 ಕ್ಕೆ ಇಳಿದಿದ್ದಾರೆ. ನಮಗೆ 13% ಮತ ಹಂಚಿಕೆಯಾಗಿದೆ. ನಾವು ಸೋತಿದ್ದೇವೆಯೇ ಎಂದು ಪ್ರಶ್ನಿಸಿದರು. ನಮ್ಮ ಲೆಕ್ಕಾಚಾರದ ಪ್ರಕಾರ, ನಿರೀಕ್ಷೆ ಮಾಡಿದಷ್ಟು ಸ್ಥಾನಗಳು ಬಂದಿಲ್ಲ ಅಷ್ಟೇ ಎಂದರು.

ಬಿಜೆಪಿ ನಿಲುವಿನಿಂದ ರಾಜ್ಯಕ್ಕೆ ಅನ್ಯಾಯ

ಪೆಟ್ರೋಲ್-ಡೀಸೆಲ್ ದರ ಏರಿಕೆಯನ್ನು ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಸಂಬಂಧ ಸುದೀರ್ಘ ಪ್ರಕಟಣೆಯನ್ನು ಹೊರಡಿಸಿದ್ದಾರೆ. ರಾಜ್ಯ ಸರಕಾರವು ಪೆಟ್ರೋಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.29.84 ಹಾಗೂ ಡೀಸೆಲ್ ಮೇಲಿನ ತೆರಿಗೆಯನ್ನು ಶೇ.18.44ಕ್ಕೆ ಹೆಚ್ಚಳ ಮಾಡಿದೆ. ಈ ಏರಿಕೆಯ ನಂತರವೂ ಕರ್ನಾಟಕವು ತೈಲೋತ್ಪನ್ನಗಳ ಮೇಲೆ ವಿಧಿಸುತ್ತಿರುವ ತೆರಿಗೆ ದಕ್ಷಿಣ ಭಾರತದ ರಾಜ್ಯಗಳಿಗಿಂತ ಹಾಗೂ ನಮ್ಮ ರಾಜ್ಯದ ಆರ್ಥಿಕತೆಯ ಗಾತ್ರಕ್ಕೆ ಹೋಲುವ ಮಹಾರಾಷ್ಟ್ರ ರಾಜ್ಯಕ್ಕಿಂತಲೂ ಕಡಿಮೆಯಿದೆ. ಮಹಾರಾಷ್ಟ್ರದಲ್ಲಿ ಪೆಟ್ರೋಲ್ ಮೇಲೆ ಶೇ.25ರಷ್ಟು ವ್ಯಾಟ್‌ನೊಂದಿಗೆ ಹೆಚ್ಚುವರಿ ತೆರಿಗೆ 5.12 ರುಪಾಯಿದೆ. ಡೀಸೆಲ್ ಮೇಲೆ ಶೇ.21ರಷ್ಟಿದೆ. ಇದಕ್ಕೆ ಹೋಲಿಸಿದರೆ ರಾಜ್ಯದಲ್ಲಿನ ಪರಿಷ್ಕೃತ ದರವೂ ಜನರಿಗೆ ಹೊರೆಯಾದ ರೀತಿ ಕಾಣಿಸುತ್ತಿಲ್ಲ.

ಮೌಲ್ಯವರ್ಧಿತ ತೆರಿಗೆ ಹೆಚ್ಚಳದ ಹೊರತಾಗಿಯೂ, ರಾಜ್ಯದಲ್ಲಿ ಡೀಸೆಲ್ ಬೆಲೆ ಗುಜರಾತ್ ಹಾಗೂ ಮಧ್ಯಪ್ರದೇಶಗಳಿಗಿಂತ ಕಡಿಮೆಯಿದೆ. ಪೆಟ್ರೋಲಿಯಂ ಉತ್ಪನ್ನಗಳ ದರ ಜನರಿಗೆ ಹೊರೆಯಾಗದ ರೀತಿಯಲ್ಲಿ ಲಭ್ಯವಾಗಿಸಲು ನಾವು ಬದ್ಧರಿದ್ದೇವೆ. ಬಿಜೆಪಿಯ ಡಬ್ಬಲ್ ಎಂಜಿನ್ ಸರಕಾರದ ಅವಧಿಯಲ್ಲಿ ರಾಜ್ಯದ ಸಂಪನ್ಮೂಲಗಳನ್ನು ಇತರೆ ರಾಜ್ಯಗಳಿಗೆ ಹಂಚಿಕೆ ಮಾಡುವ ದುರುದ್ದೇಶದಿಂದ ಕೇಂದ್ರ ಸರಕಾರ ರಾಜ್ಯದ ಬಿಜೆಪಿ ಸರಕಾರವನ್ನು ಬಳಸಿಕೊಂಡು ಕರ್ನಾಟಕದಲ್ಲಿ ಮೌಲ್ಯವರ್ಧಿತ ತೆರಿಗೆ ದರವನ್ನು ಕಡಿತಗೊಳಿಸುವಂತೆ ಮಾಡಿ, ತನ್ನ ಪಾಲಿನ ತೆರಿಗೆ ಹೆಚ್ಚಳ ಮಾಡುವ ಮೂಲಕ ಲಕ್ಷಾಂತರ ಕೋಟಿ ಸಂಗ್ರಹಿಸಿತ್ತು. ಈ ಅನರ್ಥ ನೀತಿಯಿಂದಾಗಿ ರಾಜ್ಯದ ರಾಜಸ್ವ ಸಂಗ್ರಹಕ್ಕೆ ದೊಡ್ಡ ಹೊಡೆತ ಬಿದ್ದರೆ, ಇದೇ ವೇಳೆ ಕೇಂದ್ರವು ಕನ್ನಡಿಗರಿಗೆ ದ್ರೋಹ ಬಗೆದು ಭರಪೂರ ತೆರಿಗೆ ಸಂಗ್ರಹಿಸಿತ್ತು.

ಕೇಂದ್ರ ಸರಕಾರವು ಪೆಟ್ರೋಲ್ ಮೇಲಿನ ಅಬಕಾರಿ ಸುಂಕವನ್ನು 9.21 ರು.ಗಳಿಂದ 32.98ಗೆ ಹಾಗೂ ಡೀಸೆಲ್ ಮೇಲೆ 3.45 ರು.ಗಳಿಂದ 31.84ಕ್ಕೆ ಹೆಚ್ಚಳ ಮಾಡಿತ್ತು. ಇದು ನಿಜವಾಗಿಯೂ ಜನರ ಮೇಲಿನ ಹೊರೆ. ಆಗಾಗ್ಗೆ ಕೇಂದ್ರ ಸರಕಾರವು ತೆರಿಗೆ ಕಡಿತಗೊಳಿಸಿದ ಹೊರತಾಗಿಯೂ ಈಗಿನ ಅಬಕಾರಿ ಸುಂಕ ಪೆಟ್ರೋಲ್ ಮೇಲೆ 19.9 ಹಾಗೂ ಡೀಸೆಲ್ ಮೇಲೆ 15.8 ಇದೆ. ನರೇಂದ್ರ ಮೋದಿ ಅವರ ಸರಕಾರ ಜನಹಿತದ ದೃಷ್ಟಿಯಿಂದ ಈ ತೆರಿಗೆಯನ್ನು ಇಳಿಕೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯ ಸರಕಾರದ ಮೌಲ್ಯವರ್ಧಿತ ತೆರಿಗೆಯಲ್ಲಾದ ಬದಲಾವಣೆಯಿಂದ ಸಂಗ್ರಹವಾಗುವ ಹಣವು ನಾಡಿನ ಜನರ ಮೂಲಭೂತ ಸೇವೆಗಳು ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಬಳಸಲ್ಪಡುತ್ತದೆ ಎಂಬ ಗ್ಯಾರಂಟಿಯನ್ನು ನಾನು ನೀಡುತ್ತೇನೆ. ನಾವು ಸರ್ವರ ಹಿತಕಾಯಲು ಮತ್ತು ಜವಾಬ್ದಾರಿಯುತ ಸರಕಾರವಾಗಿ ಮುನ್ನಡೆಯಲು ಬದ್ಧರಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಕಿವಿಯಲ್ಲಿ ಹೂವು, ಕೈಯಲ್ಲಿ ಚಿಪ್ಪು ಹಿಡಿದು ವಿಭಿನ್ನವಾಗಿ ಧರಣಿ | ಕಾಂಗ್ರೆಸ್ ಸರಕಾರದ ವಿರುದ್ಧ ಆಕ್ರೋಶ

ಪೆಟ್ರೋಲ್, ಡೀಸೆಲ್ ದರ ಏರಿಕೆ: ಬಿಜೆಪಿಯಿಂದ ಕಿಡಿ

ಚಿಕ್ಕಮಗಳೂರು: ಚುನಾವಣೆ ಮುಗಿಯುತ್ತಿದ್ದಂತೆ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಿರುವುದನ್ನು ಖಂಡಿಸಿ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ಕಿವಿಯಲ್ಲಿ ಹೂವು ಮತ್ತು ಕೈಯಲ್ಲಿ ಚಿಪ್ಪು ಹಿಡಿದು ವಿಭಿನ್ನವಾಗಿ ನಗರದಲ್ಲಿ ಭಾನುವಾರ ಪ್ರತಿಭಟನೆ ನಡೆಸಿದರು.

ವಿಧಾನ ಪರಿಷತ್ತಿನ ಸದಸ್ಯ ಸಿ.ಟಿ.ರವಿ ನೇತೃತ್ವದಲ್ಲಿ ನಗರದ ಆಜಾದ್ ಪಾರ್ಕ್ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ಕಾರ್ಯಕರ್ತರು, ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿ ಇದ್ದಾಗ ಕಾಂಗ್ರೆಸ್‌ನವರು ಸ್ಕೂಟರ್ ಶವಯಾತ್ರೆ ನಡೆಸಿದ್ದರು. ಈಗ ಕೇಂದ್ರ ಸರಕಾರವು ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆ ಮಾಡಿದರೆ ರಾಜ್ಯ ಸರಕಾರ ಏರಿಕೆ ಮಾಡಿದೆ. ಜತೆಗೆ ಅಬಕಾರಿ ಸುಂಕಗಳ ಹೆಚ್ಚಳ, ಆಸ್ತಿ ನೋಂದಣಿ ಶುಲ್ಕ, ಪಹಣಿ ಶುಲ್ಕ, ಜನನ ಮತ್ತು ಮರಣ ಪ್ರಮಾಣ ಪತ್ರದ ಶುಲ್ಕಗಳನ್ನು ಹೆಚ್ಚಳ ಮಾಡಲಾಗಿದೆ ಎಂದು ಸಿ.ಟಿ.ರವಿ ಹೇಳಿದರು.

ಕಿವಿಯಲ್ಲಿ ಹೂವು ಮತ್ತು ಕೈಯಲ್ಲಿ ಚಿಪ್ಪು ಹಿಡಿದು ವಿಭಿನ್ನವಾಗಿ ಪ್ರತಿಭಟನೆ ನಡೆಸಿದ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು.

ಜನರ ಪಾಲಿಗೆ ಕಾಂಗ್ರೆಸ್ ಶಾಪ

ಜನರ ಪಾಲಿಗೆ ಕಾಂಗ್ರೆಸ್ ಶಾಪವಾಗಿದ್ದು, ಏರಿಕೆ ಮಾಡಿರುವ ಎಲ್ಲಾ ಬೆಲೆಗಳನ್ನು ಇಳಿಸಬೇಕು. ಇಲ್ಲದಿದ್ದರೆ ಅಧಿಕಾರದಿಂದ ಇಳಿಯಬೇಕು. ಬೆಲೆ ಇಳಿಸದಿದ್ದರೆ ಜನಾಂದೋಲನದ ಮೂಲಕ ಕಾಂಗ್ರೆಸ್ ಅಧಿಕಾರದ ಗದ್ದುಗೆಯಿಂದ ಇಳಿಸಿ ಸ್ಮಶಾನಕ್ಕೆ ಕಳುಹಿಸುವ ಕೆಲಸವನ್ನು ನಾವು ಮಾಡುತ್ತೇವೆ. ಲೋಕಸಭೆ ಚುನಾವಣೆಗೆ ಮುನ್ನ ಬಿಜೆಪಿ ವಿರುದ್ಧವಾಗಿ ಚೊಂಬಿನ ಜಾಹೀರಾತನ್ನು ಕಾಂಗ್ರೆಸ್ ನೀಡಿತ್ತು. ಈಗ ಜನರ ಕಿವಿಗೆ ಹೂವಿಟ್ಟು, ಚಿಪ್ಪನ್ನು ಕೈಗೆ ನೀಡಿದೆ. ಭ್ರಷ್ಟಾಚಾರ ಮಾಡುವುದು, ಬೆಲೆ ಏರಿಕೆ ಮಾಡುವುದು ಕಾಂಗ್ರೆಸ್ ನೀತಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ ಜನರಿಂದ ಕಾಂಗ್ರೆಸ್‌ಗೆ ತಕ್ಕ ಉತ್ತರ

ಕಾಂಗ್ರೆಸ್ ಜನರ ಕೈಗೆ ಚೊಂಬು ಕೊಟ್ಟಿದೆ

ಹುಬ್ಬಳ್ಳಿ: ಕಾಂಗ್ರೆಸ್ ಸರಕಾರ ಪೆಟ್ರೋಲ್,

ಡೀಸೆಲ್ ಹಾಗೂ ಮದ್ಯದ ದರ ಏರಿಕೆ ಮಾಡಿದ್ದು, ಈ ಸರಕಾರ ಯಾರ ಪರವಾಗಿ ಕೆಲಸ ಮಾಡುತ್ತಿದೆ. ಇದೊಂದು ಜನ ವಿರೋಧಿ ಸರಕಾರವಾಗಿದ್ದು, ಜನರಿಗೆ ಚೊಂಬು ಕೊಟ್ಟಿದೆ ಎಂದು ವಿಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ರಾಜ್ಯ ಸರಕಾರದ ವಿರುದ್ಧ ಹರಿಹಾಯ್ದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಜನರ ಕೈಗೆ ಬೆಲೆ ಏರಿಕೆಯ ಚೊಂಬು ಕೊಟ್ಟಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನರು ತಕ್ಕ ಉತ್ತರ ನೀಡಿದ್ದಾರೆ. ಇದೀಗ ಅದೇ ಕಾರಣಕ್ಕೆ ಬೆಲೆ ಏರಿಕೆ ಮಾಡಿ, ಜನರ ಜೇಬಿಗೆ ಕತ್ತರಿ ಹಾಕಿದೆ. ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆ ಜನರ ದಿನನಿತ್ಯದ ಜೀವನದ ಮೇಲೆ ಸಾಕಷ್ಟು ಪ್ರಭಾವ ಬೀರುತ್ತದೆ. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಬೆಲೆ ಕಡಿಮೆ ಇದೆ ಎಂದು ಸರಕಾರ ಹೇಳುತ್ತಿರುವುದು ನಾಚಿಕೆಗೇಡಿನ ವಿಚಾರ. ಗ್ಯಾರಂಟಿ ಮೂಲಕ ಜನರಿಗೆ ಅಕ್ಷಯ ಪಾತ್ರೆ ನೀಡುತ್ತೇವೆಂದು ರಾಜ್ಯದ ಜನತೆಗೆ ಚೊಂಬು ಕೊಟ್ಟಿದ್ದಾರೆ ಎಂದು ಲೇವಡಿ ಮಾಡಿದರು.

ಸರಕಾರ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆಯಲಿ

ಚಿಕ್ಕೋಡಿ: ಲೋಕಸಭಾ ಚುನಾವಣೆಯಲ್ಲಿ ಜನರು ಬಿಜೆಪಿ ಮೇಲೆ ವಿಶ್ವಾಸವಿಟ್ಟು ವೋಟ್ ಹಾಕಿದ್ದಕ್ಕೆ ಪ್ರತೀಕಾರವಾಗಿ ಕಾಂಗ್ರೆಸ್ ಸರಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡಿದೆ ಎಂದು ಶಾಸಕ ರಮೇಶ್ ಜಾರಕಿಹೊಳಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಜನರು ಕಷ್ಟದಲ್ಲಿರುವಾಗ ಬೆಲೆ ಏರಿಕೆ ಮಾಡಬಾರದಿತ್ತು. ಸರಕಾರ ಈ ಬೆಲೆ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಆಗ್ರಹಿಸುತ್ತೇವೆ. ಸರಕಾರ ಒಂದು ಕೈಯಿಂದ ಕೊಡುವುದು, ಇನ್ನೊಂದು ಕೈಯಿಂದ ಕಿತ್ತುಕೊಳ್ಳುವುದನ್ನು ಮಾಡುತ್ತಿದೆ. ಸಾಮಾನ್ಯಜನರ ಮೇಲೆ ಆರ್ಥಿಕ ಹೊರೆ ಸರಿಯಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳು ಸರಿಯಾದ ನಿರ್ಧಾರ ಕೈಗೊಳ್ಳಬೇಕು ಎಂದು ಹೇಳಿದರು.

ಲಕ್ಷ್ಮಣ್ ಸವದಿ ಅವರಿಗೆ ಬಿಜೆಪಿಯವರು ಆಹ್ವಾನ ಕೊಟ್ಟಿಲ್ಲ. ಇಂಥ ಸಾವಿರಾರು ಜನ ಕಾರ್ಯಕರ್ತರು ನಮ್ಮ ಪಕ್ಷದಲ್ಲಿದ್ದಾರೆ. ಅವರೇ ಬರಬೇಕು ಅಂಥ ಏನಿಲ್ಲ. ಪಕ್ಷ ಯಾವ ನಿರ್ಧಾರ ತೆಗೆದುಕೊಳ್ಳುತ್ತದೆ ಅದನ್ನು ಸ್ವಾಗತಿಸುತ್ತೇನೆ. ಪಕ್ಷದಿಂದ ಪಕ್ಷಕ್ಕೆ ಜಂಪ್ ಮಾಡುವ ನಾಯಕರ ಬಗ್ಗೆ ಎರಡೂ ರಾಷ್ಟ್ರೀಯ ಪಕ್ಷಗಳು ಸರಿಯಾದ ನಿರ್ಣಯ ತೆಗೆದುಕೊಳ್ಳಬೇಕು ಎಂದು ಆಗ್ರಹಿಸುತ್ತೇನೆ.
-ರಮೇಶ್ ಜಾರಕಿಹೊಳಿ, ಶಾಸಕ

ಅಥಣಿಯಲ್ಲಿ ಮಾಜಿ ಶಾಸಕರೊಂದಿಗೆ ಸಭೆ ನಡೆಸಿರುವ ವಿಚಾರವಾಗಿ ಪ್ರತಿಕ್ರಿಯಿಸಿ, ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗೆ ತಳಮಟ್ಟದಿಂದ ಪಕ್ಷ ಕಟ್ಟಿ ಗೆಲ್ಲಿಸಲು ಒತ್ತುಕೊಟ್ಟಿದ್ದೇವೆ. ಬೇರೆ ವಿಚಾರಗಳನ್ನು ಚರ್ಚೆ ಮಾಡಿಲ್ಲ ಎಂದರು.

ದಿವಾಳಿ ಸರಕಾರದಿಂದ ಜನರಿಗೆ ಬೆಲೆ ಏರಿಕೆಯ ಬರೆ

ಹುಬ್ಬಳ್ಳಿ: ರಾಜ್ಯದಲ್ಲಿ ಸಿಎಂ ಸಿದ್ದರಾಮಯ್ಯ

ನೇತೃತ್ವದ ಸರಕಾರ ದಿವಾಳಿ ಎದ್ದಿದೆ. ಹೀಗಾಗಿ ಜನರ ಮೇಲೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯ ಬರೆ ಹಾಕಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಕುಟುಕಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಚುನಾವಣೆ ಮುನ್ನ ಬೆಲೆ ಏರಿಕೆ ಇಟ್ಟುಕೊಂಡು ರಾಜಕಾರಣ ಮಾಡಿತ್ತು. ಇವತ್ತು ಪೆಟ್ರೋಲ್, ಡೀಸೆಲ್ ದರ 3 ರು. ಹೆಚ್ಚಾಗಿದ್ದು ನೋಡಿದರೆ ಕರ್ನಾಟಕದಲ್ಲಿ ಅತೀ ಹೆಚ್ಚು ಬೆಲೆಯಾಗಿದೆ. ಸಾರಿಗೆ ಮೇಲೂ ಇದರ ಪರಿಣಾಮ ಬೀರಲಿದೆ ಎಂದರು. ಟಕಾ ಟಕಾ ಅಂತಾ ಪ್ರಣಾಳಿಕೆ ಮಾಡಿದರು. ಇದಕ್ಕೆ ಯಾವುದೇ ಯೋಜನೆ ಇರಲಿಲ್ಲ. ಯೋಚನಾ ರಹಿತವಾಗಿ ಮಾಡಿರುವುದಕ್ಕೆ ಹೀಗಾಗಿದೆ. ಬೆಲೆ ಏರಿಕೆ ಮಾಡಿರುವುದು ಅತ್ಯಂತ ಖಂಡನೀಯ ಎಂದರು.

ರಾಜ್ಯದ ಜನತೆಗೆ ಬರೆ ಎಳೆಯುವ ಕೆಲಸ: ಬಿ.ವೈ.ವಿಜಯೇಂದ್ರ ಟೀಕೆ

ಗ್ಯಾರಂಟಿಗೆ ಹಣ ಹೊಂದಿಸಲು ಬೆಲೆ ಏರಿಕೆ

ಹಾಸನ: ಲೋಕಸಭೆ ಚುನಾವಣೆ ಫಲಿತಾಂಶ ಬಂದ ಕೂಡಲೇ ಕಾಂಗ್ರೆಸ್ ಸರಕಾರ ಯಾರೂ ಊಹಿಸದಂತೆ ರಾಜ್ಯದಲ್ಲಿ ಪೆಟ್ರೋಲ್, ಡೀಸೆಲ್‌ನ ಬೆಲೆಯನ್ನು ಹೆಚ್ಚಳ ಮಾಡಿ ರಾಜ್ಯದ ಜನತೆಗೆ ಬರೆ ಎಳೆಯುವ ಕೆಲಸ ಮಾಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೆಟ್ರೋಲ್, ಡೀಸೆಲ್ ಬೆಲೆಯನ್ನು ಏಕಾಏಕಿ 3.50 ರು. ಹೆಚ್ಚಳ ಮಾಡಿರುವ ರಾಜ್ಯ ಸರಕಾರದ ನಡೆ ಖಂಡನೀಯ. ಬಿಜೆಪಿ ಈಗಾಗಲೆ ರಾಜ್ಯಾದ್ಯಂತ ಹೋರಾಟ ಮಾಡಲು ಕರೆ ಕೊಟ್ಟಿದ್ದು, ಇಂದು ರಾಜ್ಯದ ಪ್ರತೀ ಜಿಲ್ಲಾ ಕೇಂದ್ರಗಳಲ್ಲಿ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.



ಗ್ಯಾರಂಟಿಗಳಿಗೆ ಹಣವನ್ನು ಒದಗಿಸಲು ಸಾಧ್ಯವಾಗದೇ ಇಂತಹ ಕೆಲಸಗಳನ್ನು ಮಾಡುತ್ತಿದ್ದಾರೆ. ಪೆಟ್ರೋಲ್ ಬೆಲೆ 3 ರು. ಡೀಸೆಲ್ ಬೆಲೆ 3.50ರು. ಏರಿಕೆ ಮಾಡಿರುವುದು ಸರಿಯಲ್ಲ. ಈಗಲೂ ಕೂಡ ಕಾಲ ಮಿಂಚಿಲ್ಲ ನಿಮ್ಮ ತೀರ್ಮಾನವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕು ಎಂದು ಈ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಆಗ್ರಹಿಸುತ್ತೇನೆ.
ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಲೋಕಸಭಾ ಚುನಾವಣೆಯ ಫಲಿತಾಂಶದ ನಂತರ ರಾಜ್ಯದಲ್ಲಿ ಕಾಂಗ್ರೆಸ್ ಹತಾಶೆಗೊಂಡಿದೆ. ಸರಕಾರ ಬೇಜಾವಾಬ್ದಾರಿತನದಿಂದ ನಡೆದುಕೊಳ್ಳುತ್ತಿದೆ. ರಾಜ್ಯ ಸರಕಾರಕ್ಕೆ ಜನರು ಶಾಪ ಹಾಕುತಿದ್ದಾರೆ. ಬರಗಾಲದಿಂದ ಈಗತಾನೆ ಹೊರಬಂದ ರೈತರು ಕಂಗಾಲಾಗಿದ್ದಾರೆ ಎಂದರು.

ಅಭಿವೃದ್ಧಿ ಶೂನ್ಯ ಸರಕಾರ: ಸಿಎಂ ತಮ್ಮ ಕೈಗಳನ್ನು ಕಟ್ಟಿ ಹಾಕಿ ಕೊಂಡಿದ್ದಾರೆ. ಕಾಂಗ್ರೆಸ್ ಸರಕಾರದಿಂದ ರಾಜ್ಯದ ಜನತೆಗೆ ಯಾವುದೇ ಒಂದು ಹೊಸ ಯೋಜನೆ ಕೊಡಲು ಸಾಧ್ಯವಾಗಿಲ್ಲ. ಗ್ಯಾರಂಟಿ, ಗ್ಯಾರಂಟಿ ಎಂದು ಹೇಳಿಕೊಂಡು ಹಣ ಹೊಂದಿಸಲು ಸಾಧ್ಯವಾಗದೆ ಸಾಲ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಜನತೆ ನಿರೀಕ್ಷೆ ಹುಸಿ ಮಾಡಿದ ಸರಕಾರ

ರಾಜ್ಯದ ಜನರು ಅವರ ಮೇಲೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ರಾಜ್ಯದ ಅಭಿವೃದ್ಧಿಗೆ ಹೊಸ ಸರಕಾರ ಕಾರ್ಯನಿರ್ವಹಿಸುತ್ತದೆ ಎಂದು ಕನಸು ಕಟ್ಟಿಕೊಂಡಿದ್ದಾರೆ. ಆದರೆ ಶಾಸಕರು ತಮ್ಮ ಕ್ಷೇತ್ರಗಳಲ್ಲಿ ಸರಕಾರಿ ಶಾಲೆ, ರಸ್ತೆ ಅಭಿವೃದ್ಧಿ, ಆಸ್ಪತ್ರೆ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತಿಲ್ಲ. ಶಾಸಕರು ತಮ್ಮ ಕ್ಷೇತ್ರದಲ್ಲಿ ತಲೆ ಎತ್ತಿ ಓಡಾಡದ ಪರಿಸ್ಥಿತಿಯನ್ನು ಕಾಂಗ್ರೆಸ್ ಸರಕಾರ ನಿರ್ಮಾಣ ಮಾಡಿದೆ ಎಂದು ಬಿ.ವೈ. ವಿಜಯೇಂದ್ರ ದೂರಿದರು.

ರಾಜ್ಯ ಸರಕಾರದ ವಿರುದ್ಧ ಸಂಸದ ಬಿ.ವೈ.ರಾಘವೇಂದ್ರ ಆರೋಪ

ತೆರಿಗೆ ಹೆಚ್ಚಳದಿಂದ ಮತದಾರರ ಮೇಲೆ ಸೇಡು

ಶಿವಮೊಗ್ಗ: ರಾಜ್ಯ ಸರಕಾರ ಜನಸಾಮಾನ್ಯರ ಮೇಲೆ ಸೇಡಿನ ರಾಜಕಾರಣ ಮಾಡುತ್ತಿದೆ ಎಂದು ಸಂಸದ ರಾಘವೇಂದ್ರ ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಾಮಾನ್ಯರ ಕಷ್ಟಗಳನ್ನು ಅರ್ಥ ಮಾಡಿ ಕೊಳ್ಳದೆ ಚುನಾವಣೆಯ ಅನಂತರದಲ್ಲಿ ಮತದಾರರ ಮೇಲೆ ಸೇಡು ತೀರಿಸಿಕೊಳ್ಳಲು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಹೆಚ್ಚಳ ಮಾಡಿದೆ ಎಂದು ಗಂಭೀರವಾಗಿ ಆರೋಪಿಸಿದರು.

ಸರಕಾರ ಏಕಾಏಕಿ ಮಾರಾಟ ತೆರಿಗೆ ಏರಿಕೆ ಮಾಡಿದರೆ ಜನಸಾಮಾನ್ಯರ ಮೇಲೆ ಹೆಚ್ಚಿನ ತೆರಿಗೆ ಹೊರೆಯಾಗುತ್ತದೆ. ಅದು ಸಾಮಾನ್ಯ ಜನರ ಮೇಲೆ ಭಾರವಾಗಿ ಪರಿಣಮಿಸುತ್ತದೆ. ಪೆಟ್ರೋಲ್ ಹಾಗೂ ಡೀಸೆಲ್ ತೆರಿಗೆ ಏರಿಕೆ, ವಿವಿಧ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ವ್ಯಾಪಾರ ವಹಿವಾಟುಗಳ ಮೇಲೆ ನೇರ ಪರಿಣಾಮ ಬೀರುತ್ತದೆ ಎಂಬುದು ಸರಕಾರಕ್ಕೆ ಗೊತ್ತಿದೆ.

ಸರಕಾರದ ನಡೆ ಅನುಮಾನ ಹುಟ್ಟಿಸುತ್ತಿದೆ. ಮತದಾರರ ಮೇಲೆ ಸೇಡು ತೀರಿಸಿಕೊಳ್ಳಲು ತೆರಿಗೆ ಹೆಚ್ಚಳ ಮಾಡಿದೆ. ಪೆಟ್ರೋಲ್ ಹಾಗೂ ಡೀಸೆಲ್ ತೆರಿಗೆ ಹೆಚ್ಚಳ ಮಾಡಿದರೆ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗುತ್ತದೆ. ಇದು ಸರಕಾರಕ್ಕೂ ಗೊತ್ತಿದೆ. ಜನಸಾಮಾನ್ಯರ ದಮನ ನೀತಿಯನ್ನು ಅನುಸರಿಸುವುದುರ ಮೂಲಕ ಅವರ ಬದುಕನ್ನು ನರಕ ಮಾಡುವುದು ಎಷ್ಟು ಸರಿ?
- ಬಿ.ವೈ.ರಾಘವೇಂದ್ರ, ಸಂಸದ

ಬೆಸ್ತ ಸಮಾಜದ ಪ್ರಗತಿಗೆ ಬದ್ಧ

ಬೆಳಗಾವಿ: ಕೋಳಿ ಬೆಸ್ತ ಸಮಾಜವನ್ನು ಎಸ್‌ಟಿ ವರ್ಗಕ್ಕೆ ಸೇರಿಸಲು ಸಂಸತ್ತಿನಲ್ಲಿ ಧ್ವನಿ ಎತ್ತುತ್ತೇನೆ ಎಂದು ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಹೇಳಿದ್ದಾರೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ ಕೋಳಿ ಬೆಸ್ತ ಸಮಾಜ ಜಿಲ್ಲಾ ಸಂಘದ ವತಿಯಿಂದ ಹಮ್ಮಿಕೊಂಡಿದ್ದ ಮಹಿಳಾ ಸಮಾವೇಶದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ತಂದೆ ಹಾಗೂ ಸಚಿವರಾದ ಸತೀಶ್ ಜಾರಕಿಹೊಳಿ ಅವರು ಕೂಡ ಕೋಳಿ- ಬೆಸ್ತ ಸಮಾಜವನ್ನು ಎಸ್ಟಿ ಸಮಾಜಕ್ಕೆ ಸೇರಿಸಬೇಕೆಂಬ ನಿಲುವು ಹೊಂದಿದ್ದಾರೆ. ಅದರಂತೆ ನಾನು ಕೂಡ ಸದಾ ನಿಮ್ಮ ಸಮಾಜದ ಪ್ರಗತಿಯನ್ನು ಬಯಸುತ್ತೇನೆ. ಲೋಕಸಭೆ ಚುನಾವಣೆಯಲ್ಲಿ 45 ದಿನಗಳ ನನ್ನ ಪ್ರಚಾರ ಸಭೆಯಲ್ಲಿ ಮಹಿಳೆಯರು ನನ್ನ ಬಳಿ ಸಾಕಷ್ಟು ಮನವಿಗಳನ್ನು ಸಲ್ಲಿಸಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಮಹಿಳೆಯರ ಅಭಿಪ್ರಾಯದಂತೆ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಜಕೀಯಕ್ಕೆ ಬರಬೇಕೆಂಬುದು ನನ್ನ ಆಶಯ. ಈ ಚುನಾವಣೆಯಲ್ಲಿ ದೇಶದಲ್ಲಿ 30 ಕ್ಕಿಂತ ಕಡಿಮೆ ವಯಸ್ಸಿನವರು ನನ್ನನ್ನು ಸೇರಿ ಐದು ಜನ ಮಹಿಳೆಯರು ಸಂಸತ್ತಿನಲ್ಲಿ ಕಾಲಿಟ್ಟಿದ್ದು ಖುಷಿಯ ಸಂಗತಿ ಎಂದರು.

ಸರಕಾರದ ವಿರುದ್ಧ ಎಚ್.ಡಿ.ಕುಮಾರಸ್ವಾಮಿ ಕಿಡಿ

ದುರಾಡಳಿತ ವಿರುದ್ಧ ಜನ ದಂಗೆ ಏಳಲಿ

ಮಂಡ್ಯ: ಪೆಟ್ರೋಲ್, ಡೀಸೆಲ್ ದರ ಏರಿಕೆ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಪ್ರತಿಭಟನೆ ಮಾಡುವುದಕ್ಕಿಂತ, ರಾಜ್ಯ ಸರಕಾರದ ದುರಾಡಳಿತ ವಿರುದ್ಧ ಜನ ದಂಗೆ ಏಳಬೇಕು ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಕ್ಷೇತ್ರದ ಕಾಲಭೈರವೇಶ್ವರ ಸ್ವಾಮಿಯ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಪಂಚ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲು ಬೆಲೆ ಏರಿಕೆ ಮಾಡಿರುವುದಾಗಿ ಕಾಂಗ್ರೆಸ್ ಸಚಿವರೇ ಒಪ್ಪಿಕೊಂಡಿದ್ದಾರೆ. ಜನರಿಂದಲೇ ದುಡ್ಡು ವಸೂಲಿ ಮಾಡಿ, ಜನರಿಗೆ ಹಣ ನೀಡಲು ಮುಂದಾಗಿದ್ದಾರೆ. ಈ ಬಗ್ಗೆ ಜನ ಪ್ರತಿಭಟಿಸುವ ಮೂಲಕ ಸರಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕು ಎಂದರು.

ಆದಿಚುಂಚನಗಿರಿ ಮಠಕ್ಕೆ ತೆರಳಿ ಶ್ರೀಗಳನ್ನು ಗೌರವಿಸಿ, ಆಶೀರ್ವಾದ ಪಡೆದರು. ನಂತರ ಕೆಲಕಾಲ ಶ್ರೀಗಳೊಂದಿಗೆ ಉಭಯಕುಶಲೋಪರಿ ನಡೆಸಿ, ಮಠದಲ್ಲೇ ಪ್ರಸಾದ ಸ್ವೀಕರಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಸುರೇಶಗೌಡ ಮತ್ತು ಜಿಲ್ಲೆಯ ಜೆಡಿಎಸ್ ನಾಯಕರು ಇದ್ದರು.

ನಾಗಮಂಗಲ ತಾಲೂಕಿನ ಆದಿಚುಂಚನಗಿರಿ ಮಠಕ್ಕೆ ಭಾನುವಾರ ಭೇಟಿ ನೀಡಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ನಿರ್ಮಲಾನಂದನಾಥ ಸ್ವಾಮೀಜಿ ಅವರೊಂದಿಗೆ ಮಾತುಕತೆ ನಡೆಸಿದರು.

ಗುಟ್ಟು ಬಿಟ್ಟು ಕೊಡದ ಎಚ್‌ಡಿಕೆ

ಚನ್ನಪಟ್ಟಣ ಉಪಚುನಾವಣೆಯಲ್ಲಿ ನಿಖಿಲ್ ಸ್ಪರ್ಧೆಯ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ, ಇನ್ನೂ ಅದಕ್ಕೆ ಕಾಲಾವಕಾಶವಿದೆ ಬನ್ನಿ ಎಂದು ಎಚ್‌ಡಿಕೆ ಹೇಳುವ ಮೂಲಕ ಅಭ್ಯರ್ಥಿ ಯಾರು ಎಂಬ ಬಗ್ಗೆ ಗುಟ್ಟು ಬಿಟ್ಟುಕೊಡಲಿಲ್ಲ. ಕಾಲಭೈರವನ ದರ್ಶನ ಮಾಡಿ ನಿರ್ಮಲಾನಂದನಾಥ ಶ್ರೀಗಳ ಆಶೀರ್ವಾದ ಪಡೆದಿದ್ದೇನೆ. ಒಕ್ಕಲಿಗ ಸಮಾಜ ಮತ್ತು ರಾಜ್ಯಕ್ಕೆ ಗೌರವ ತರುವಂತೆ ಕೆಲಸ ಮಾಡಲು ಶಕ್ತಿ ಕೊಡುವಂತೆ ದೇವರಲ್ಲಿ ಪ್ರಾರ್ಥಿಸಿದ್ದೇನೆ ಎಂದರು.

ವೇತನ ಆಯೋಗ ಜಾರಿ ಆಗದಿದ್ದರೆ ಹೋರಾಟ

ಲಿಂಗಸುಗೂರು: ಏಳನೇ ವೇತನ ಆಯೋಗ ವರದಿಯನ್ನು ಯಥಾವತ್ತಾಗಿ ಈ ತಿಂಗಳು ಅಂತ್ಯದೊಳಗೆ ಸರಕಾರ ಜಾರಿ ಮಾಡದಿದ್ದರೆ ಮುಂದಿನ ಹೋರಾಟಕ್ಕೆ ರೂಪರೇಷೆಗಳನ್ನು ಸಿದ್ಧಪಡಿಸಲಾಗುವುದು ಎಂದು ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಹೇಳಿದರು.

ಜಿಲ್ಲಾಮಟ್ಟದ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿ, ಬೊಮ್ಮಾಯಿ ಸರಕಾರದ ಅವಧಿಯಲ್ಲಿ 2022ರ ಜುಲೈನಲ್ಲೇ ರಾಜ್ಯ ಸರಕಾರಿ ನೌಕರರಿಗೆ 7ನೇ ವೇತನ ಆಯೋಗದ ಶಿಫಾರಸು ಜಾರಿ ಆಗಬೇಕಿತ್ತು. ಶೇ.40 ಮೂಲ ವೇತನ ಹೆಚ್ಚಿಸಬೇಕೆಂಬ ಬೇಡಿಕೆಗೆ ಸರಕಾರ ಮಧ್ಯಂತರ ಪರಿಹಾರವಾಗಿ ಶೇ.17ರಷ್ಟು ಮಾತ್ರ ಹೆಚ್ಚಿಸಿತ್ತು. ಈಗಿನ ಸರಕಾರ ಅಸ್ತಿತ್ವಕ್ಕೆ ಬಂದ ಮೇಲೆ 7ನೇ ವೇತನ ಆಯೋಗ ಮತ್ತೆ ಸಾಧಕ ಬಾಧಕ ಅಧ್ಯಯನ ನಡೆಸಿ ಕಳೆದ ಮಾರ್ಚ್‌ನಲ್ಲೇ ಸಿಎಂ ಸಿದ್ದರಾಮಯ್ಯಗೆ ವರದಿ ನೀಡಿದೆ ಎಂದರು. ಆದರೆ, ಅಂದಿನಿಂದಲೇ ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವರದಿ ಬಗ್ಗೆ ಯಾವುದೇ ಕ್ರಮವನ್ನು ಸರಕಾರ ಕೈಗೊಂಡಿಲ್ಲ ಎಂದರು.

ವಿಶ್ವವಾಣಿ

ಸಂಪಾದಕೀಯ

ಬೆಲೆ ಏರಿಕೆ ಜನಸಾಮಾನ್ಯರಿಗೆ ಬರೆ

ಲೋಕಸಭೆ ಚುನಾವಣೆಯು ಪೂರ್ಣಗೊಂಡ ಬೆನ್ನಲ್ಲೇ ರಾಜ್ಯದಲ್ಲಿ ಬೆಲೆ ಏರಿಕೆ ಶಕೆ ಆರಂಭವಾಗಿದೆ. ರಾಜ್ಯಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಚಿಲ್ಲರೆ ಮಾರಾಟ ದರವನ್ನು ಕ್ರಮವಾಗಿ ಮೂರು ಮತ್ತು ಮೂರೂವರೆ ರು.ಗಳಷ್ಟು ಹೆಚ್ಚಿಸಿದೆ. ಪೆಟ್ರೋಲ್ ಮೇಲಿನ ಮೌಲ್ಯವರ್ಧಿತ ತೆರಿಗೆಯನ್ನು ಶೇ.25.92 ರಿಂದ 29.84ಕ್ಕೆ ಮತ್ತು ಡೀಸೆಲ್ ಮೇಲಿನ ತೆರಿಗೆಯನ್ನು ಶೇ. 14.3ರಿಂದ 18.4ಕ್ಕೆ ಹೆಚ್ಚಳ ಮಾಡಿರುವ ಕಾರಣ ಗ್ರಾಹಕರ ಜೇಬಿಗೆ ಹೆಚ್ಚುವರಿ ದರದ ಭಾರ ಬಿದ್ದಿದೆ. ರಾಜ್ಯದಲ್ಲಿ ಸುಮಾರು ಎರಡೂವರೆ ವರ್ಷಗಳ ಬಳಿಕ ಇಂಧನ ದರ ಏರಿಕೆಯಾಗಿದೆ. ಈ ಹಿಂದೆ 2021ರ ನವೆಂಬರ್‌ನಲ್ಲಿ ಪೆಟ್ರೋಲ್ ದರ 100 ರು.ಗಳ ಗಡಿ ದಾಟಿದಾಗ ಆಕ್ರೋಶ ವ್ಯಕ್ತವಾಗಿತ್ತು. ಇದೀಗ ರಾಜ್ಯದಲ್ಲಿ ಆಡಳಿತ ಪಕ್ಷದ ಸ್ಥಾನದಲ್ಲಿ ಕುಳಿತಿರುವ ಕಾಂಗ್ರೆಸ್ ಅಂದು ಬೀದಿಗಿಳಿದು ಪ್ರತಿಭಟನೆ ನಡೆಸಿತ್ತು.ಜನರ ಆಕ್ರೋಶಕ್ಕೆ ಮಣಿದು ಕೇಂದ್ರ ಸರಕಾರ ಮತ್ತು ಬಸವರಾಜ ಬೊಮ್ಮಾಯಿ ಸರಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ದರವನ್ನು ಕ್ರಮವಾಗಿ 12 ರು. ಮತ್ತು 17 ರೂ. ತನಕ ಇಳಿಸಿತ್ತು. ಇದರಿಂದ ಬೆಂಗಳೂರಿನಲ್ಲಿ 114 ರು.ಗಳಿದ್ದ ಪೆಟ್ರೋಲ್ ದರ 100ರ ಗಡಿಗೆ ಬಂದಿತ್ತು. 104.50 ರು.ಗಳಿದ್ದ ಡೀಸೆಲ್ ಬೆಲೆ 85 ರು.ಗಳಿಗೆ ಇಳಿದಿತ್ತು. ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲದ ಬೆಲೆ ಇದೀಗ ಬ್ಯಾರಲ್‌ಗೆ 80 ಡಾಲರ್‌ನಷ್ಟಿದೆ. ಈ ದೃಷ್ಟಿಯಿಂದ ನೋಡಿದರೆ ಇಂಧನ ಬೆಲೆ ಗಣನೀಯವಾಗಿ ಇಳಿಯಬೇಕಿತ್ತು. ಆದರೆ ಕೇಂದ್ರ ಮತ್ತು ರಾಜ್ಯಸರಕಾರಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಗಣನೀಯವಾಗಿ ತೆರಿಗೆ ವಿಧಿಸುವ ಮೂಲಕ ಇದನ್ನು ಬೊಕ್ಕಸ ತುಂಬುವ ಮಾರ್ಗವಾಗಿ ಕಂಡುಕೊಂಡಿವೆ. ಇಂಧನ ಬೆಲೆಯನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕೆಂಬ ಕೂಗು ಹಿಂದಿನಿಂದಲೂ ಇದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆಯ ನೂತನ ಸಚಿವ ಹರ್ದೀಪ್ ಸಿಂಗ್ ಪುರಿ ಅವರೂ ರಾಜ್ಯಗಳ ಒಪ್ಪಿಗೆ ಪಡೆದು ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಗ್ಯಾರಂಟಿ ಯೋಜನೆಗಳ ಜಾರಿಗೆ ವಾರ್ಷಿಕ ಸುಮಾರು 52 ಸಾವಿರ ಕೋಟಿ ರು.ಗಳಷ್ಟು ಹಣ ವ್ಯಯಿಸಬೇಕಾದ ರಾಜ್ಯಸರಕಾರ ಈಗ ತೆರಿಗೆ ಏರಿಕೆಯತ್ತಲೇ ಕಣ್ಣು ನೆಟ್ಟಿರುವುದರಿಂದ ಇದಕ್ಕೆ ಒಪ್ಪಿಗೆ ಸೂಚಿಸುವುದು ಸಂಶಯ. ಈಗಾಗಲೇ ವಿದ್ಯುತ್, ಆಸ್ತಿ ಮಾರ್ಗ ಸೂಚಿ ದರ, ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಅಬಕಾರಿ ಸೆಸ್, ವಾಣಿಜ್ಯ ತೆರಿಗೆಯನ್ನು ಏರಿಸಿರುವುದು ಜನಸಾಮಾನ್ಯರಿಗೆ ಹೊರೆಯಾಗಿದೆ. ಮಳೆ ವ್ಯತ್ಯಯದ ಕಾರಣ ತರಕಾರಿ ಮತ್ತು ಬೇಳೆ ಕಾಳುಗಳ ದರವೂ ವಿಪರೀತ ಮಟ್ಟಕ್ಕೆ ಏರಿದೆ. ಇಂತಹ ಪರಿಸ್ಥಿತಿಯಲ್ಲಿ ಇಂಧನ ಬೆಲೆ ಏರಿಕೆಗೆ ಮುಂದಾಗಿರುವುದು ದುರದೃಷ್ಟಕರ.

ಸೊಂಪಾದಕೀಯ

ಭಾಯ್‌ಗಳ ಬಾಯ್ ಚಪಲ

ರಾಡಿಗಳ ಹಾವಳಿ ಎಲ್ಲಿಲ್ಲ ಹೇಳಿ. ಅದರಲ್ಲೂ ಮಹಾನಗರಗಳಲ್ಲಿ ಇಂಥವರ ಪುಂಡಾಟಿಕೆ ಹೆಚ್ಚು ಪೊಲೀಸರ ಮುಂದೆ ಬಾಯಿ ಮುಚ್ಚಿಕೊಂಡು, ಕೈ ಕಟ್ಟಿಕೊಂಡು ನಿಂತಿದ್ದರೂ ಹೊರಗೆ ಬಂದ ತಕ್ಷಣ ಇವರು ಬಾಲ ಬಿಚ್ಚೋದು ಕಾಮನ್ ಅದರಲ್ಲೂ ಬೆಂಗಳೂರಿನ ಕೆಲವು ಏರಿಯಾಗಳಲ್ಲಿ ಇಂಥವರ ಹಾವಳಿ ಹೆಚ್ಚು ವ್ಯಾಪಾರಿಗಳೇ ಇವರ ಪ್ರಮುಖ ಟಾರ್ಗೆಟ್, ಅಂಗಡಿಗಳಿಗೆ ಹೋಗಿ ಹಫ್ತಾ ವಸೂಲಿ ಮಾಡೋದು ಇವರ ಪರಂಪರಾಗತ ಸಂಪ್ರದಾಯ. ಆದರೆ ಇತ್ತೀಚೆಗೆ ಇದಲ್ಲದೆ ಇನ್ನೊಂದು ಶುರುವಾಗಿದೆ. ಅದು 'ಏನೋ ನನ್ ಹತ್ತಿರನೇ ದುಡ್ಡು ಇಸ್ಕೋತೀಯಾ? ಅನ್ನೋದು ಹೌದು, ನಗರದ ಕೆಲವು ಏರಿಯಾಗಳ ರೌಡಿಗಳು ತಮಗಿರುವ ಸಣ್ಣಪುಟ್ಟ ಕೆಟ್ಟ ಹೆಸರುಗಳನ್ನೇ ಬಲಸಿಕೊಂಡು ಅಂಗಡಿಗಳಲ್ಲಿ ದೌರ್ಜನ್ಯ ನಡೆಸುತ್ತಾರೆ. ಇತ್ತೀಚಿಗೆ ಕೆಂಪಾಪುರ ಆಗ್ರಹಾರದ ಬೇಕರಿಯೊಂದರಲ್ಲಿ ರೌಡಿಯೊಬ್ಬ ತಿಂದ ಆಹಾರಕ್ಕೆ ಕಾಸು ಕೊಡದೆ, ಚಾಕು ತೋರಿಸಿ ಮಾಲೀಕರನ್ನು ಹೆದರಿಸಿದ ಘಟನೆ ನಡೆದಿದೆ. ಬೇಡರಿಗೆ ಬಂದು ನಪ್ಪು, ಚಿಪ್ಪು ತಿಂದು ಲಿಪ್ಪು ಒರಿಸಿಕೊಂಡು ಹೊರಟ ಪುಡಿ ರೌಡಿಯನ್ನು ಹಣ ಕೇಳಿದಾಗ, ಅಂಗಡಿಯನ್ನೇ ಪುಟ ಪುಡಿ ಮಾಡ್ತೀನಿ ಅಂತ ಬೆದರಿಕೆ ಹಾಕಿದ್ದಾನೆ. ಜತೆಗೆ ಈ ಮಹಾನುಭಾವ ಈ ಹೋಟೆಲು, ಕಬಾಬ್, ಚಾಟ್ಸ್ ಅಂಗಡಿಗಳಿಗೆ ಹೋಗಿ, ತಿಂದು ಬಿಲ್ ಕೇಳಿದರೆ ಕೊಲ್ಲೋದಾಗಿ ಧಮಕಿ ಹಾಕ್ತಾ ಇದ್ದನಂತೆ, ಹಾಗಾಗಿ ಮೊದಲು ಅದೇ ಕೆಲಸ ಮಾಡಿ ಈಗ ಪೊಲೀಸರ ಅತಿಥಿ ಆಗಿದ್ದಾನೆ. ಬೇಕರಿ ಮಾಲೀಕನ ಜತೆ ಜಗಳ ಆಡಿದ್ದಲ್ಲದೆ, ಅವನನ್ನು ಪ್ರಶ್ನೆ ಮಾಡಿದ ಅಂಗಡಿಯ ಗ್ರಾಹಕರಿಗೂ ಬೆದರಿಕೆ ಹಾಕಿ ಅಲ್ಲಿಂದ ಎಸ್ಕೇಪ್ ಆಗಿದ್ದಾನೆ. ಆದರೆ ಇವನು ಮಾಡಿದ ಕಾರ್ಯಕ್ರಮ ಅಲ್ಲಿದ್ದ ಸಿಸಿಟಿವಿಯಲ್ಲಿ ರೆಕಾರ್ಡ್ ಆಗಿದ್ದರಿಂದ ಈಗ ಬೇಕರಿಯಲ್ಲಿ ತಿಂದಿದಕ್ಕೆ ಪೊಲೀಸ್ ಸ್ಟೇಷನ್ನಲ್ಲಿ ಬಿಲ್ ಕಟ್ಟಬೇಕಾಗಿ ಪಾನಮತ್ತನಾಗಿ ಬಂದಿದ್ದು, ಎಣ್ಣೆ ಏಟಿನಲ್ಲಿ ತಿಂದಿದ್ದಕ್ಕೆ ಕಸು ಕೊಡಲು ತಗಾದೆ ಮಾಡಿದ್ದಾನೆ. ಆದರೆ ಇದನ್ನು ಕೇಳಿದ ಮೇಲೆ ಮೂಡುವ ಪ್ರಶ್ನೆ ಅಂದ್ರೆ, ಅಲ್ಲಿಗೆ ಬರುವಾಗ ಕುಡ್ಕೊಂಡ್ ಬಂದಿದ್ದನಲ್ಲ, ಅದಕ್ಕೆ ಬಾರಾಮ ಬಿಲ್ ಕೊಟ್ಟು ಬಂದಿದ್ದು ಇದ್ದು ಅನ್ನೋದು.

ಸಂಪಾದಕರ ಸದ್ಯಶೋಧನೆ

ಹತ್ತಿರವಿದ್ದರೂ ದೂರ

ನಮ್ಮ ನಡುವಿನ ಉತ್ತಮ ವಾಗ್ಮಿ, ಅಂಕಣಕಾರ, ಸಂಸ್ಕೃತಿ ಚಿಂತಕ, ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಅವರ 'ಈಶಾವಾಸ್ಯ ಉಪನಿಷತ್' ಮತ್ತು 'ಬೆರಗಿನ ಬೆಳಕು ಭಾಗ - ಮೂರು ಮತ್ತು ನಾಲ್ಕು' ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಉಪನಿಷತ್ತುಗಳು ವಿದ್ವಾಂಸರಿಗೆ, ಸಂಸ್ಕೃತ ಬಲ್ಲವರಿಗೆ ಮಾತ್ರ ಎಂಬ ಸ್ಥಾಪಿತ ಅಭಿಪ್ರಾಯವನ್ನು ಈ ಕೃತಿಯಲ್ಲಿ ಡಾ.ಕರಜಗಿ ಹೋಗಲಾಡಿಸಿದ್ದಾರೆ. ವಚನ ಮತ್ತು ಮಂಕುತಿಮ್ಮನ ಕಗ್ಗದ ಮೂಲಕ ಮತ್ತು ಅನೇಕ ದೃಷ್ಟಾಂತ, ಪ್ರಸಂಗಗಳ ಮೂಲಕ ಉಪನಿಷತ್ತಿನ ಸಾರವನ್ನು ಮೊಗೆದು ಕೊಟ್ಟಿದ್ದಾರೆ ಮತ್ತು ಅದನ್ನು ಸರಳವಾಗಿ ವಿವರಿಸಿದ್ದಾರೆ. ಈ ಕೃತಿಯಲ್ಲಿ ಒಂದೆಡೆ ಅವರು ಒಂದು ಪ್ರಸಂಗವನ್ನು ಪ್ರಸ್ತಾಪಿಸಿ, ಜೀವನದಲ್ಲಿ ನಾವು ಅನೇಕ ಮಹಾನುಭಾವರನ್ನು ಹತ್ತಿರದಿಂದ ಕಂಡರೂ ಅವರ ಮಹತ್ವವನ್ನು ಅರಿಯಲು ಹೇಗೆ ವಿಫಲರಾಗುತ್ತೇವೆ ಎಂಬುದನ್ನು ವಿವರಿಸಿದ್ದಾರೆ. ಅದನ್ನು ಅವರ ಬಾಯಲ್ಲಿಯೇ ಕೇಳೋಣ. ನಾನು ಲಂಡನ್ನಲ್ಲಿದ್ದಾಗ ಅಲ್ಲಿಯ ಬಹು ದೊಡ್ಡ ಅಧಿಕಾರಿಯೊಬ್ಬರು ನನ್ನನ್ನು ತಮ್ಮ ಮನೆಗೆ ರಾತ್ರಿಯ ಊಟಕ್ಕೆ ಆಮಂತ್ರಿಸಿದರು. ನಾನು ಖುಷಿಯಿಂದ ಹೋದೆ. ಊಟ, ಮಾತುಕತೆ ಎಲ್ಲ ಮುಗಿದ ಮೇಲೆ, ಅವರು ನನ್ನನ್ನು ಕಳುಹಿಸಲು ಕಾರಿನ ಬಳಿಗೆ ಬಂದರು. ಇನ್ನೇನು ನಾನು ಕಾರು ಹತ್ತಬೇಕು ಎನ್ನುವಾಗ ಅವರು, 'ಸರ್, ನಾನು ನಿಮ್ಮ ಕೈಗಳನ್ನು ಕುಲುಕಬಹುದೇ?' ಎಂದು ಕೇಳಿದರು. 'ನಾನು, ಧಾರಾಳವಾಗಿ, ಅದಕ್ಕೇನಂತೆ?' ಎಂದು ಕೈಕುಲುಕಿದೆ. ಅವರು ನನ್ನ ಬಲಗೈಯನ್ನು ತಮ್ಮ ಎರಡೂ ಕೈಗಳಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಹಣೆಗೆ ಒತ್ತಿಕೊಂಡರು. ಅವರ ಕಣ್ಣಲ್ಲಿ ನೀರು! ನಾನು, 'ಯಾಕೆ, ಏನಾಯಿತು?' ಎಂದು ಕೇಳಿದೆ. ಅವರು ಹೇಳಿದರು, 'ಸರ್, ನನ್ನಂತಹ ನತದೃಷ್ಟ ಮನುಷ್ಯ ಮತ್ತೊಬ್ಬನಿಲ್ಲ. ನಾನು ಹುಟ್ಟಿದ್ದು ಬೆಂಗಳೂರಿನ ಗಾಂಧೀಬಜಾರ್ ಪ್ರದೇಶದಲ್ಲಿ. ನಮ್ಮ ಮನೆ ಡಿ.ವಿ.ಗುಂಡಪ್ಪನವರ ಮನೆಯಿಂದ ಮೂರನೆಯದು. ನಾನು ಬಾಲ್ಯದಲ್ಲಿ ದಿನವೂ ಡಿ.ವಿ.ಜಿ ಅವರ ಮನೆಯ ಮುಂದೆ ಹಾದು ಹೋಗುತ್ತಿದ್ದೆ. ಅವರೂ ನಮ್ಮ ಮನೆಯ ಮುಂದೆ ಹೋಗುತ್ತಿದ್ದರು. ಯಾರೋ ಬೊಚ್ಚುಬಾಯಿಯ ತಾತ, ಮುದುಕಪ್ಪ ಹೋಗುತ್ತಾರೆ ಎನ್ನುತ್ತಿದ್ದೆವು. ಕೆಲವೊಮ್ಮೆ ಅವರನ್ನು ನೋಡಿ ಲಘು ಹಾಸ್ಯ ಮಾಡಿ ನಗುತ್ತಿದ್ದೆವು. ಅವರು ಯಾರು, ಅವರ ಖ್ಯಾತಿ ಏನು, ಅವರು ಎಷ್ಟು ದೊಡ್ಡವರು ಎಂಬ ಕಲ್ಪನೆಯೂ ನನಗಿರಲಿಲ್ಲ. ಒಂದು ದಿನವೂ ಅವರನ್ನು ಪರಿಚಯ ಮಾಡಿಕೊಳ್ಳುವ, ಅವರ ಹತ್ತಿರ ಹೋಗಿ ಮಾತಾಡುವ ಗೋಜಿಗೆ ಹೋಗಲಿಲ್ಲ. ಅವರಿಗೆ ನಮಸ್ಕಾರ ಮಾಡಲಿಲ್ಲ. ಅವರನ್ನು ಮಾತನಾಡಿಸಲಿಲ್ಲ. ಅವರ ನಿಧನರಾದಾಗ ಅವರು ಅದೆಷ್ಟು ದೊಡ್ಡ ವ್ಯಕ್ತಿ ಎಂಬುದು ಗೊತ್ತಾಯಿತು. ಅವರ ನಿಧನಸುದ್ದಿ ಪತ್ರಿಕೆಗಳಲ್ಲಿ ದೊಡ್ಡದಾಗಿ ವರದಿಯಾಯಿತು. ಈಗ ನನಗೆ ಅವರ ಹಿರಿಮೆ ತಿಳಿದಿದೆ. ನಾನು ಅವರ ಆಕೃತಿಗಳನ್ನು ಓದಿದ ಬಳಿಕ ಅವರ ಪಾಂಡಿತ್ಯವೇನು ಎಂಬುದು ಗೊತ್ತಾಗಿದೆ. ಆದರೆ ಈಗ ಅವರಿಲ್ಲ. ನೀವು ಅವರನ್ನು ಕಂಡವರು, ಮಾತನಾಡಿಸಿದವರು, ಒಡನಾಡಿದವರು, ಸ್ಪರ್ಶಿಸಿದವರು. ಅದಕ್ಕೇ ನಿಮ್ಮ ಕೈ ಹಿಡಿದುಕೊಂಡರೆ, ಅವರ ಸ್ಪರ್ಶದ ಕೊಂಚವಾದರೂ ತೃಪ್ತಿ ಸಿಕ್ಕಿತು ನನಗೆ.' ಪಕ್ಕದಲ್ಲೇ ಇದ್ದೂ ತಿಳಿಯದ ಪರಿಸ್ಥಿತಿ ಇದು. ಶ್ರೀನಿವಾಸಶಾಸ್ತ್ರಿಗಳು ಭಾರತ ಕಂಡ ಅತ್ಯಂತ ಮೇಧಾವಿ ಹಾಗೂ ಭಾರತೀಯ ಸಂಸ್ಕೃತಿ, ಪರಂಪರೆಗಳ ಬಗ್ಗೆ ಖಚಿತವಾಗಿ ತಿಳಿಸಬಲ್ಲ ಜ್ಞಾನಿಗಳಾಗಿದ್ದರು. ಅವರನ್ನು ಕಾಣಲು ಬೆಂಗಳೂರಿನವರೊಬ್ಬರು ಹೋದಾಗ ಡಿ.ವಿ.ಜಿಯವರ ಬಗ್ಗೆ ಮಾತು ಬಂತಂತೆ. ಆಗ ಶಾಸ್ತ್ರಿಗಳು ಹೇಳಿದರು, 'ನೀವು ಪುಣ್ಯಾತ್ಮರಪ್ಪ. ಅವರ ಹತ್ತಿರವೇ ಇದ್ದೀರಿ, ಅವರನ್ನು ಮೇಲಿಂದ ಮೇಲೆ ಕಾಣುತ್ತೀರಿ. ನಾನು ಮಾತ್ರ ನಿತ್ಯ ಅವರ ಯಾವುದಾದರೂ ಬರಹವನ್ನು ಓದುತ್ತಲೇ ಅವರನ್ನು ನೆನಪಿಸಿಕೊಳ್ಳುತ್ತೇನೆ.' ಇವರು ಜ್ಞಾನಿಗಳು. ವಾಸ್ತವಿಕವಾಗಿ ದೂರದಲ್ಲಿದ್ದರೂ ಅಂತರ್ಯದಲ್ಲಿ ಹತ್ತಿರವೇ ಇದ್ದವರು. ಹೀಗೆ ತಿಳಿದವರು ದೂರವಿದ್ದರೂ ಹತ್ತಿರವಿರುತ್ತಾರೆ, ತಿಳಿಯದವರು ಪಕ್ಕದಲ್ಲಿಯೇ ಇದ್ದರೂ ದೂರವಾಗಿರುತ್ತಾರೆ.

ಮಿಸ್ಟರ್ ಕೂಲ್ ಆಗಿದ್ದಾರೆ ಸಿದ್ದು

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ದಿಲ್ಲಿಯ ಬಿಜೆಪಿ ಕಂಪೌಂಡಿನಿಂದ ಕುತೂಹಲಕಾರಿ ಸುದ್ದಿಯೊಂದು ತೇಲಿ ಬಂದಿದೆ.ಆಂಧ್ರದ ಚಂದ್ರಬಾಬು ನಾಯ್ಡು ಮತ್ತು ಬಿಹಾರದ ನಿತೀಶ್ ಕುಮಾರ್ ಎಂಬ ಜೋಡೆತ್ತುಗಳನ್ನು ಪ್ರಧಾನಿ ನರೇಂದ್ರ ಮೋದಿ ಹೇಗೆ ನಿಯಂತ್ರಣಕ್ಕೆ ತೆಗೆದುಕೊಂಡರು? ಎಂಬುದೇ ಈ ಸುದ್ದಿ. ಅಂದ ಹಾಗೆ ಜೂನ್ ನಾಲ್ಕರಂದು ಲೋಕಸಭಾ ಚುನಾವಣೆಯ ಫಲಿತಾಂಶ ಪ್ರಕಟವಾಯಿತಲ್ಲ?ಇದು ಸ್ಪಷ್ಟವಾಗುತ್ತಾ ಹೋದಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಒಂದು ವಿಷಯ ಕ್ಲಿಯರ್ ಆಗಿದೆ. ಅದೆಂದರೆ ಬಿಜೆಪಿ ಸ್ವಯಂಬಲದಿಂದ ಅಧಿಕಾರಕ್ಕೆ ಬರುವುದಿಲ್ಲ. ಎನ್‌ಡಿಎ ಮಿತ್ರ ಪಕ್ಷಗಳ ಜತೆ ಸೇರಿ ಸರಕಾರ ರಚಿಸಿದರೂ ಆ ಇಬ್ಬರು ಮಿತ್ರರು ಮಾತ್ರ ಸಮಯ ನೋಡಿ ಆಟ ಆಡಲು ಹಿಂಜರಿಯುವುದಿಲ್ಲ ಎಂಬುದು. ಅರ್ಥಾತ್, ಸಂಯುಕ್ತ ಜನತಾದಳದ ನಾಯಕ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಮತ್ತು ಆಂಧ್ರದ ತೆಲುಗುದೇಶಂ ಪಕ್ಷದ ನಾಯಕ ಚಂದ್ರಬಾಬು ನಾಯ್ಡು ತಮಗಿರುವ ಬಲದಿಂದ ಕೇಂದ್ರ ಸರಕಾರವನ್ನು ಇಕ್ಕಟ್ಟಿಗೆ, ಮುಜುಗರಕ್ಕೆ ಈಡು ಮಾಡುತ್ತಾರೆ ಎಂಬುದು ನರೇಂದ್ರಮೋದಿ ಅವರ ಅನುಮಾನ.

ಹಾಗಂತಲೇ ಅವತ್ತು ಅಮಿತ್ ಶಾ, ಜಗತ್ ಪ್ರಕಾಶ್ ನಡ್ಡಾ ಸೇರಿದಂತೆ ಪಕ್ಷದ ಹಲವು ನಾಯಕರ ಜತೆ ತುರ್ತು ಸಮಾಲೋಚನೆ ನಡೆಸಿದ ನರೇಂದ್ರ ಮೋದಿ ಈ ಸಭೆಯಲ್ಲಿ ಒಂದು ತೀರ್ಮಾನ ಪ್ರಕಟಿಸಿದ್ದಾರೆ.ಈ ಹಂತದಲ್ಲಿ ನಾವು ಸರಕಾರ ರಚಿಸುವುದು ಬೇಡ ಎಂಬುದು ಅವರ ತೀರ್ಮಾನ. ಕಾರಣ? ಹೇಗಿದ್ದರೂ ಬಿಜೆಪಿಗೆ ಸರಕಾರ ರಚಿಸಲು ಅಗತ್ಯವಾದ 273 ಸೀಟು ಬಂದಿಲ್ಲ. ಹೀಗಾಗಿ ನಾವು ಸರಕಾರ ರಚಿಸುವ ಬದಲು ಕಾಂಗ್ರೆಸ್ ನೇತೃತ್ವದ ಇಂಡಿಯ ಮೈತ್ರಿಕೂಟಕ್ಕೆ ಅವಕಾಶ ಕೊಡೋಣ. ಸದ್ಯಕ್ಕೆ ಚಂದ್ರಬಾಬು ನಾಯ್ಡು, ನಿತೀಶ್ ಕುಮಾರ್ ಅವರೆಲ್ಲ ಆ ಒಕ್ಕೂಟಕ್ಕೇ ಬೆಂಬಲ ಕೊಡಲಿ.

ಅಂದ ಹಾಗೆ ಚುನಾವಣೆಯ ಸಂದರ್ಭದಲ್ಲಿ ರಾಹುಲ್ ಗಾಂಧಿ ಜನರಿಗೆ ಬೇಕಾದಷ್ಟು ಭರವಸೆ ನೀಡಿದ್ದಾರೆ. ದೇಶದ ಪ್ರತಿ ಗೃಹಿಣಿಯ ಖಾತೆಗೆ ವರ್ಷಕ್ಕೆ ಒಂದು ಲಕ್ಷ ರುಪಾಯಿ ಹಾಕುತ್ತೇವೆ ಎಂದಿದ್ದಾರೆ. ಇದೇ ರೀತಿ ಅವರು ಕೊಟ್ಟಿರುವ ಹಲವು ಭರವಸೆಗಳನ್ನು ಈಡೇರಿಸಲು ಕನಿಷ್ಟವೆಂದರೂ ಐವತ್ತು ಲಕ್ಷ ಕೋಟಿ ರುಪಾಯಿ ಬೇಕು ಅಂದರೆ? ಕೇಂದ್ರ ಸರಕಾರದ ವಾರ್ಷಿಕ ಬಜೆಟ್ ಗಾತ್ರಕ್ಕಿಂತ ಈ ಭರವಸೆಗಳ ಗಾತ್ರ ದೊಡ್ಡದು.

ಹೀಗಾಗಿ ಕಾಂಗ್ರೆಸ್ ನೇತೃತ್ವದ ಇಂಡಿಯ ಒಕ್ಕೂಟ ಮೊದಲು ಸರಕಾರ ರಚಿಸಲು ಬಿಡೋಣ. ನಾವು ಪ್ರತಿಪಕ್ಷದ ಸ್ಥಾನದಲ್ಲಿ ಕುಳಿತು ಅವರೇನು ಆಡಳಿತ ಕೊಡುತ್ತಾರೋ ನೋಡೋಣ ಅಂತ ಮೋದಿ ವಿವರಿಸಿದಾಗ ಸಭೆಯಲ್ಲಿದ್ದ ಎಲ್ಲರೂ ಮೌನವಾಗಿ ತಲೆ ಆಡಿಸಿದ್ದಾರೆ. ಇದಾದ ಕೆಲವೇ ಕ್ಷಣಗಳಲ್ಲಿ ಮೋದಿಯವರ ತೀರ್ಮಾನ ನಿತೀಶ್ ಕುಮಾರ್ ಮತ್ತು ಚಂದ್ರಬಾಬು ನಾಯ್ಡು ಅವರಿಗೆ ತಲುಪಿದೆ. ಯಾವಾಗ ಈ ವಿಷಯ ತಮ್ಮ ಕಿವಿಗೆ ಬಿತ್ತೋ? ಆಗ ಹೌಹಾರಿದ ಈ ನಾಯಕರು ನೇರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸಂಪರ್ಕಿಸಿದ್ದಾರೆ. ಅಷ್ಟೇ ಅಲ್ಲ, ಯಾವ ಕಾರಣಕ್ಕೂ ಇಂಡಿಯ ಮೈತ್ರಿಕೂಟಕ್ಕೆ ಸರಕಾರ ರಚಿಸುವ ಆಫರ್ ಹೋಗುವುದು ಬೇಡ. ನಾವಾದರೂ ಅಷ್ಟೇ. ಯಾವ ಕಾರಣಕ್ಕೂ ಆ ಕೂಟದ ಬೆಂಬಲಕ್ಕೆ ನಿಲ್ಲುವುದಿಲ್ಲ.

ಯಾಕೆಂದರೆ ಕಾಂಗ್ರೆಸ್ ನೇತೃತ್ವದಲ್ಲಿ ಇಂಡಿಯ ಒಕ್ಕೂಟ ಸ್ಥಿರ ಸರಕಾರ ರಚಿಸಲು ಸಾಧ್ಯವೇ ಇಲ್ಲ. ಒಂದು ವೇಳೆ ಅವರು ಸರಕಾರ ರಚಿಸಿದರೆ ಮಿತ್ರಪಕ್ಷಗಳ ಮಾರಾಮಾರಿಯ ಮಧ್ಯೆ ಆ ಸರಕಾರ ಉರುಳುತ್ತದೆ. ಇವತ್ತು ಎಲ್ಲಕ್ಕಿಂತ ಮುಖ್ಯವಾಗಿ ದೇಶಕ್ಕೆ ಬೇಕಿರುವುದು ಸ್ಥಿರ ಸರಕಾರ. ಅಂತಹ ಸರಕಾರವನ್ನು ಕೊಡಲು ನಿಮ್ಮ ನೇತೃತ್ವದ ಬಿಜೆಪಿಗೆ ಮಾತ್ರ ಸಾಧ್ಯ. ಹೀಗಾಗಿ ನಾವೇನು ಎನ್‌ಡಿಎ ಮಿತ್ರಪಕ್ಷಗಳಿದ್ದೇವೆ. ನಾವು ನಿಮ್ಮನ್ನೇ ನಂಬಿದ್ದೇವೆ. ಅಷ್ಟೇ ಅಲ್ಲ, ದೃಢವಾಗಿ ನಿಮ್ಮ ಜತೆ ನಿಲ್ಲುತ್ತೇವೆ ಎಂದಿದ್ದಾರೆ.

ಹೀಗೆ ಚಂದ್ರಬಾಬು ನಾಯ್ಡು ಮತ್ತು ನಿತೀಶ್ ಕುಮಾರ್ ಅವರಾಡಿದ ಮಾತು ಕೇಳಿ ಮೋದಿ ಮುಖದಲ್ಲಿ ಮಂದಹಾಸ ಮಿನುಗಿದೆ. ಯಾವಾಗ ಈ ಬೆಳವಣಿಗೆ ನಡೆಯಿತೋ? ಇದಾದ ನಂತರ ನಾಯ್ಡು, ನಿತೀಶ್ ಹೇಗೆ ಮೋದಿಯವರ ಅಕ್ಕ ಪಕ್ಕ ನಿಂತರು? ಒತ್ತಡ ಹೇರುವ ಗೋಜಿಗೆ ಹೋಗದೆ ಹೇಗೆ ಕೇಂದ್ರ ಸಂಪುಟದಲ್ಲಿ ತಮಗೆ ಸಿಕ್ಕ ಪಾಲನ್ನು ಪಂಚಾಮೃತ ಅಂತ ಒಪ್ಪಿಕೊಂಡರು ಎಂಬುದು ರಹಸ್ಯವೇನಲ್ಲ. ಅದೇನೇ ಇರಲಿ, ಒಟ್ಟಿನಲ್ಲಿ ತಮ್ಮ ನೇತೃತ್ವದ ಸರಕಾರಕ್ಕೆ ಮಿತ್ರರಿಂದ ಆಗಬಹುದಾದ ತೊಂದರೆಗಳನ್ನು ಊಹಿಸಿದ ಮೋದಿಯವರು ನಿತೀಶ್ ಮತ್ತು ಚಂದ್ರಬಾಬು ನಾಯ್ಡು ಅವರಿಗೆ ತಿರುನಲ್ವೇಲಿ ಹಲ್ವ ತಿನ್ನಿಸಿದ್ದಾರೆ. ಹೀಗೆ ಅವರು ತಿನ್ನಿಸಿದ ಹಲ್ವದ ಘಮ ದೇಶದೆಲ್ಲೆಡೆ ಹರಡುತ್ತಿದೆ ಮತ್ತು ಎನ್‌ಡಿಎ ಸರಕಾರ ಅಪಾಯದಿಂದ ಬಚಾವಾಗಿದೆ ಎಂಬುದನ್ನು ಸಂಕೇತಿಸುತ್ತಿದೆ.

ಸಿದ್ದು ಮಿಸ್ಟರ್ ಕೂಲ್ ಆಗಿದ್ದೇಕೆ?

ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದ ಹಲವು ಸಚಿವರಿಗೆ ಚಿಂತೆ ಶುರುವಾಗಿದೆ. ಕಾರಣ? ಸಿದ್ದರಾಮಯ್ಯ ಇದ್ದಕ್ಕಿದ್ದಂತೆ ಮಿಸ್ಟರ್ ಕೂಲ್ ಆಗಿರುವುದು. ಈ ಹಿಂದೆ ತಮ್ಮ ನಿರ್ಧಾರಗಳಿಗೆ ಯಾರೇ ವ್ಯತಿರಿಕ್ತ ಹೆಜ್ಜೆ ಇಟ್ಟರೂ ಭುಸುಗುಡುತ್ತಿದ್ದ, ತಕ್ಷಣ ತಿರುಗೇಟು ನೀಡುತ್ತಿದ್ದ ಸಿದ್ದರಾಮಯ್ಯ ಈಗ ಯಾವುದಕ್ಕೂ ತಲೆ ಕೆಡಿಸಿಕೊಳ್ಳುತ್ತಿಲ್ಲವಂತೆ. ಇತ್ತೀಚೆಗೆ ವಿಧಾನಪರಿಷತ್ತಿನ ಟಿಕೆಟ್ ಹಂಚಿಕೆ ವಿಚಾರವಾಗಿ ವರಿಷ್ಠರ ಜತೆ ಮಾತನಾಡಲು ಅವರು ದೆಹಲಿಗೆ ಹೋಗಿದ್ದರಲ್ಲ?ಈ ಸಂದರ್ಭದಲ್ಲಿ ಅವರು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರನ್ನು ಭೇಟಿ ಮಾಡಿದ್ದಾರೆ.ಹೀಗೆ ಭೇಟಿ ಮಾಡಿದವರು, ಪರಿಷತ್ತಿಗೆ ಹೋಗಬೇಕಾದವರು ಯಾರು? ಅಂತ ಪಟ್ಟಿ ಕೊಟ್ಟಿದ್ದಾರೆ. ಅವರು ಕೊಟ್ಟ ಪಟ್ಟಿಯನ್ನು ಒಮ್ಮೆ ನೋಡಿದ ಖರ್ಗೆಯವರು, ಓಕೆ, ಇದನ್ನು ರಾಹುಲ್ ಗಾಂಧಿ ಅವರ ಗಮನಕ್ಕೆ ತಂದು ಕ್ಲಿಯರ್ ಮಾಡಿಸುತ್ತೇನೆ ಎಂದಿದ್ದಾರೆ.

ಇದಾದ ನಂತರ ಬೆಂಗಳೂರಿಗೆ ವಾಪಸ್ಸಾದ ಸಿದ್ದರಾಮಯ್ಯ ಅವರಿಗೆ ಹೈಕಮಾಂಡ್ ಪ್ರಕಟಿಸಿದ ಪಟ್ಟಿ ಸಿಕ್ಕಿದೆ. ಅಷ್ಟೇ ಅಲ್ಲ, ಈ ಪಟ್ಟಿಯಲ್ಲಿ ತಾವು ಹೇಳಿದ ಕೆಲವರಿಗೆ ಟಿಕೆಟ್ ಸಿಕ್ಕಿಲ್ಲ ಎಂಬುದು ಗಮನಕ್ಕೆ ಬಂದಿದೆ. ಆದರೆ ಇಷ್ಟಾದರೂ ಸಿದ್ದರಾಮಯ್ಯ ದುಸುರಾ ಮಾತನಾಡದೆ ಮೌನವಾಗಿದ್ದಾರೆ. ಹಿಂದೆಲ್ಲ ಆಗಿದ್ದರೆ ರಪ್ಪಂತ ತಿರುಗೇಟು ಹೊಡೆಯುತ್ತಿದ್ದ ಸಿದ್ದರಾಮಯ್ಯ ಈಗೇಕೆ ತಣ್ಣಗಿದ್ದಾರೆ? ಎಂಬುದೇ ಹಲವು ಸಚಿವರ ಅನುಮಾನ.

ಇದೇ ರೀತಿ ಅಧಿಕಾರಕ್ಕೆ ಬಂದ ಶುರುವಿನಲ್ಲಿ, ನಾನೇ ಐದು ವರ್ಷ ಮುಖ್ಯಮಂತ್ರಿ ಅಂತ ಗುಟುರು ಹಾಕುತ್ತಿದ್ದ ಅವರು ಈಗ ಈ ವಿಷಯದಲ್ಲೂ ಸೈಲೆಂಟ್ ಆಗಿದ್ದಾರೆ. ಅವರ ಈ ಮೌನವೇ ಸಚಿವರಾದ ಜಿ.ಪರಮೇಶ್ವರ್, ಸತೀಶ್ ಜಾರಕಿಹೊಳಿ, ಕೆ.ಎನ್.ರಾಜಣ್ಣ ಸೇರಿದಂತೆ ಹಲ ಸಚಿವರ ಅನುಮಾನಕ್ಕೆ ಕಾರಣವಾಗಿದೆಯಲ್ಲದೆ, ದಿಲ್ಲಿ ರಾಜಕಾರಣದಲ್ಲಿ ನಡೆದಿರಬಹುದಾದ ಸೀಕ್ರೇಟಿನ ಬಗ್ಗೆ ಚರ್ಚಿಸುವಂತೆ ಮಾಡಿದೆ.

ಸದ್ಯದ ಸ್ಥಿತಿಯಲ್ಲಿ ಸಿಎಂ ಪಟ್ಟದ ಹಂಚಿಕೆ ಬಗ್ಗೆ ವರಿಷ್ಠರಿಂದ ಹಿಡಿದು ಯಾರೊಬ್ಬರೂ ಚಕಾರವೆತ್ತುತ್ತಿಲ್ಲ. ಆದರೂ ಸಿದ್ದರಾಮಯ್ಯ ಅವರ ಇತ್ತೀಚಿನ ಕೂಲ್ ಕೂಲ್ ನಡವಳಿಕೆ ಈ ಸಚಿವರ ಅನುಮಾನಕ್ಕೆ ಕಾರಣವಾಗಿದೆ. ಒಂದು ವೇಳೆ ಮೇಡಂ ಸೋನಿಯಾಗಾಂಧಿ ಮತ್ತು ರಾಹುಲ್ ಗಾಂಧಿ ಅವರೇನಾದರೂ ಅಧಿಕಾರ ಹಂಚಿಕೆಗೆ ಸಹಕರಿಸಿ ಅಂತ ಹೇಳಿದರೆ ಸಿದ್ದರಾಮಯ್ಯ ಅದನ್ನು ಪುರಸ್ಕರಿಸಬಹುದು ಎಂಬುದು ಈ ಸಚಿವರ ಅನುಮಾನ.

ಹೀಗಾಗಿಯೇ ಮುಂದಿನ ದಿನಗಳು ಹೇಗಿರಬಹುದು? ಎಂಬುದನ್ನು ಊಹಿಸಿ ಕಾರ್ಯಾಚರಣೆಗಿಳಿದಿರುವ ಸಚಿವರ ಪಡೆ, ಅಧಿಕಾರ ಹಂಚಿಕೆಯ ಸನ್ನಿವೇಶ ಉದ್ಭವಿಸಿದರೆ ಏನು ಮಾಡಬೇಕು? ಅಂತ ಬ್ಲೂ ಪ್ರಿಂಟು ರೆಡಿ ಮಾಡುತ್ತಿದೆ.

ಒಂದು ವೇಳೆ ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ರಾಷ್ಟ್ರ ರಾಜಕಾರಣದಿಂದ ಮರಳಿದರೆ ಯಾವ ಹೆಜ್ಜೆ ಇಡಬೇಕು? ಅಥವಾ ಅವರು ಬರದೆ ಹೋದರೆ ಯಾವ ಹೆಜ್ಜೆ ಇಡಬೇಕು? ಎಂಬುದು ಈ ಬ್ಲೂ ಪ್ರಿಂಟಿನ ಸೆಂಟರ್ ಪಾಯಿಂಟು.

ಮಂತ್ರಿ ರಾಜಣ್ಣ ಗೇಮ್ ಪ್ಲಾನು

ಇನ್ನು ಕೆಪಿಸಿಸಿ ಅಧ್ಯಕ್ಷ ಪಟ್ಟಕ್ಕೇರಲು ಟ್ರೈ ಕೊಡುತ್ತಿರುವ ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೊಸ ಗೇಮ್ ಪ್ಲಾನಿನೊಂದಿಗೆ ದಿಲ್ಲಿಗೆ ದೌಡಾಯಿಸಲಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಪಕ್ಷ ನಿರೀಕ್ಷಿತ ಸಾಧನೆ ಮಾಡದಿರಲು ಕಾರಣವೇನು? ಮತ್ತು ಭವಿಷ್ಯದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಕೂಟವನ್ನು ಹಣಿಯಲು ಅನುಸರಿಸಬೇಕಾದ ತಂತ್ರವೇನು? ಎಂಬ ಬಗ್ಗೆ ಕೆ.ಎನ್.ರಾಜಣ್ಣ ರಿಪೋರ್ಟು ರೆಡಿ ಮಾಡಿದ್ದಾರೆ.

ಅಂದ ಹಾಗೆ ಹಳೆ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಹೀನಾಯ ಸೋಲು ಅನುಭವಿಸಿದರೂ ಒಕ್ಕಲಿಗರ ಪ್ರಾಬಲ್ಯವಿರುವ ಹಾಸನದಲ್ಲಿ ಗೆಲುವು ಗಳಿಸಿತ್ತು. ಮೈತ್ರಿಕೂಟದ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಎದುರು ಕಾಂಗ್ರೆಸ್ಸಿನ ಶ್ರೇಯಸ್ ಪಟೇಲ್ ಗೆಲುವು ಸಾಧಿಸಲು ಹಲ ಕಾರಣಗಳಿದ್ದರೂ ಹಾಸನ ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ಕೆ.ಎನ್.ರಾಜಣ್ಣ ಅನುಸರಿಸಿದ ಒಂದು ತಂತ್ರ ದೊಡ್ಡ ಮಟ್ಟದಲ್ಲಿ ಫಲ ನೀಡಿದೆ.

ಅರ್ಥಾತ್, ಹಾಸನದ ರಣಾಂಗಣದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸೈನ್ಯ ಒಗ್ಗೂಡಿ ಕೆಲಸ ಮಾಡದಂತೆ ಸಚಿವ ರಾಜಣ್ಣ ನೋಡಿಕೊಂಡಿದ್ದರು. ಇದಕ್ಕಾಗಿ ತಮ್ಮ ಸಂಪರ್ಕಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಅವರು ಮೈತ್ರಿಕೂಟದ ನಾಯಕರು ವಿರುದ್ಧ ನೆಲೆಯಲ್ಲಿ ನಿಲ್ಲುವಂತೆ ಮಾಡಿದರು. ಈ ಮಧ್ಯೆ ಪ್ರಜ್ವಲ್ ರೇವಣ್ಣ ವಿರುದ್ಧದ ಪೆನ್ ಡ್ರೈವ್ ಕೆಲಸ ಮಾಡಿದ್ದು ನಿಜವಾದರೂ, ಆಳದಲ್ಲಿ ರಾಜಣ್ಣ ಅನುಸರಿಸಿದ ಗೇಮ್ ಪ್ಲಾನು ಪಕ್ಷದ ಅಭ್ಯರ್ಥಿಯ ಗೆಲುವಿಗೆ ಮುಖ್ಯ ಕಾರಣವಾಯಿತು. ಹೀಗಾಗಿ ಇದೇ ಗೇಮ್ ಪ್ಲಾನಿನ ವಿವರವನ್ನು ದಿಲ್ಲಿಗೆ ಕೊಂಡೊಯ್ಯಲು ಸಜ್ಜಾಗುತ್ತಿರುವ ಅವರು: ರಣಾಂಗಣದಲ್ಲಿ ಬಿಜೆಪಿ–ಜೆಡಿಎಸ್ ಸೈನ್ಯ ಒಗ್ಗೂಡದಂತೆ ನೋಡಿಕೊಳ್ಳಬೇಕು ಅಂತ ವರಿಷ್ಠರಿಗೆ ವಿವರಿಸಲಿದ್ದಾರೆ.

ರಾಜಣ್ಣ ಅವರ ಪ್ರಕಾರ, ಈ ತಂತ್ರವನ್ನು ಅನುಸರಿಸಿದರೆ ಮುಂದಿನ ವಿಧಾನಸಭೆ ಚುನಾವಣೆಯ ವೇಳೆಗೆ ಬಿಜೆಪಿ ಮತ್ತು ಜೆಡಿಎಸ್ ಪರಸ್ಪರ ವಿರುದ್ಧ ನೆಲೆಗಳಲ್ಲಿ ನಿಲ್ಲಲಿವೆ. ಅಂದ ಹಾಗೆ ಲೋಕಸಭೆ ಚುನಾವಣೆಯ ಫಲಿತಾಂಶ ಪ್ರಕಟವಾಗಿ ಕೇಂದ್ರ ಸಂಪುಟ ರಚನೆಯಾದ ನಂತರ ಬಿಜೆಪಿಯ ಲಿಂಗಾಯತ ಪಡೆ ಕುದಿಯುತ್ತಿದೆ. ಕಾರಣ? ಮೋದಿ–ಅಮಿತ್ ಶಾ ಜೋಡಿ ಯಡಿಯೂರಪ್ಪ ಅವರನ್ನು ನಿರ್ಲಕ್ಷಿಸಿ ಜೆಡಿಎಸ್ ನಾಯಕ ಕುಮಾರಸ್ವಾಮಿ ಅವರಿಗೆ ಪ್ರಾಮಿನೆನ್ಸು ನೀಡುತ್ತಿದ್ದಾರೆ. ಹೀಗಾಗಿ ಜೆಡಿಎಸ್ ಎಂದರೆ ಕುದಿಯುತ್ತಿರುವ ಯಡಿಯೂರಪ್ಪ ಟೀಮು ಮುಂದಿನ ದಿನಗಳಲ್ಲಿ ಜೆಡಿಎಸ್ ವಿರುದ್ಧ ತಿರುಗಿ ಬೀಳಲಿದೆ. ಈ ಸನ್ನಿವೇಶವನ್ನು ನಾವು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಅದೇ ಕಾಲಕ್ಕೆ ಅಹಿಂದ ವರ್ಗಗಳನ್ನು ಕನ್ಸಾಲಿಡೇಟ್ ಮಾಡಬೇಕು ಎಂಬುದು ರಾಜಣ್ಣ ಅವರ ಗೇಮ್ ಪ್ಲಾನು.

ಹೀಗೆ ರೆಡಿ ಮಾಡಿರುವ ಗೇಮ್ ಪ್ಲಾನಿನೊಂದಿಗೆ ದಿಲ್ಲಿಗೆ ದೌಡಾಯಿಸಲಿರುವ ಅವರು, ಇದನ್ನು ಸಾಧಿಸಲು ನನಗೆ ಕೆಪಿಸಿಸಿ ಅಧ್ಯಕ್ಷ ಪದವಿ ಕೊಡಿ ಎಂಬ ಪ್ರಸ್ತಾಪವನ್ನು ವರಿಷ್ಠರ ಮುಂದಿಟ್ಟು ಬರಲಿದ್ದಾರೆ.

ಬಹುಮತವಿಲ್ಲದ ಎನ್‌ಡಿಎ ಸರಕಾರವಾ?

ಅಭಿಮತ

ಪ್ರಕಾಶ್ ಶೇಷರಾಘವಾಚಾರ್
sprakashbjpgmail.com

ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಘೀಳಿಡುವ ಇಂಡಿ ಮೈತ್ರಿಕೂಟದ ನಾಯಕರುಗಳು ಹೊಸ ಸರಕಾರ ರಚನೆಯಾದ ತರುವಾಯ ಮೋದಿಯವರಿಗೆ ಬಹುಮತವಿಲ್ಲ ಇದೊಂದು ಅಕ್ರಮವಾಗಿ ರಚನೆಯಾಗಿರುವ ಸರಕಾರ ಎಂದು ಅವಾಸ್ತವಿಕ ವಾದವನ್ನು ಮಂಡಿಸುತ್ತಿದ್ದಾರೆ. ಅಷ್ಟೇಕೆ, ನೂತನವಾಗಿ ಮೂರನೆಯ ಬಾರಿ ಪ್ರಧಾನಿಯಾದ ಮೋದಿಯವರಿಗೆ ಶುಭ ಕೋರುವ ಸೌಜನ್ಯವನ್ನು ತೋರಿಲ್ಲ.

ಮಮತಾ ಬ್ಯಾನರ್ಜಿಯವರು ಪ್ರಮಾಣ ವಚನ ಸ್ವೀಕಾರ ಸಮಾರಂಭದ ಸಮಯದಲ್ಲಿ ತಮ್ಮ ಕೊಠಡಿಯಲ್ಲಿ ದೀಪ ಆರಿಸಿ ಕತ್ತಲಲ್ಲಿ ಕೂತಿದ್ದರಂತೆ. ಚುನಾವಣೆಯ ಸೋಲನ್ನು ಒಪ್ಪಿಕೊಳ್ಳುವ ಉದಾರತೆ ತೋರದಿರುವ ನಡವಳಿಕೆಯು ಯಾವ ಮಾನದಂಡದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿಯುತ್ತದೆ? ಪ್ರಜಾಪ್ರಭುತ್ವದ ರಕ್ಷಕರು ಎಂದು ಕರೆದುಕೊಳ್ಳುವವರು ಸ್ಪಷ್ಟನೆ ಕೊಡಬೇಕಾಗಿದೆ.

ಹದಿನೆಂಟನೆಯ ಲೋಕಸಭಾ ಚುನಾವಣೆಯು ಎನ್‌ಡಿಎ ಮತ್ತು ಇಂಡಿಯಾ ಮೈತ್ರಿಕೂಟಗಳ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿತ್ತು. ಇಂಡಿಯಾ ಕೂಟದ ಪಕ್ಷಗಳಾದ ಆಮ್ ಆದ್ಮಿ ಪಾರ್ಟಿ, ಎಡರಂಗ ಮತ್ತು ಟಿಎಂಸಿ ಪಂಜಾಬ್, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಸ್ವತಂತ್ರವಾಗಿ ಸ್ಪರ್ಧೆ ಮಾಡಿದ್ದವು. ಎನ್‌ಡಿಎ ಮೈತ್ರಿಕೂಟದಲ್ಲಿ ಈ ರೀತಿಯ ವಿರೋಧಾಭಾಸವಾಗಲಿ ಮತ್ತು ಪರಸ್ಪರ ಸ್ಪರ್ಧೆಯಿಲ್ಲದೆ ಚುನಾವಣೆಯನ್ನು ಒಂದಾಗಿ ಎದುರಿಸಿತ್ತು. ಚುನಾವಣೆಯಲ್ಲಿ ಸುಲಭವಾಗಿ ಮೋದಿ ಜಯ ಕಟ್ಟಿಟ್ಟ ಬುತ್ತಿ ಎಂಬ ನಿರೀಕ್ಷೆ ಸುಳ್ಳಾಗಿ ಜೂನ್ 4 ರಂದು ಎನ್‌ಡಿಎ 292 ಸ್ಥಾನಗಳಲ್ಲಿ ಮತ್ತು ಬಿಜೆಪಿ 241 ಸ್ಥಾನಗಳಿಗೆ ತೃಪ್ತಿ ಪಟ್ಟಿಕೊಳ್ಳಬೇಕಾಯಿತು. ಇಂಡಿಯಾ ಮೈತ್ರಿಕೂಟವು ಎಲ್ಲರ ನಿರೀಕ್ಷೆಯನ್ನು ಮೀರಿ 240 ಸ್ಥಾನಗಳಲ್ಲಿ ಗೆಲುವು ಸಾಧಿಸಿತು. ಇದರಲ್ಲಿ ಕಾಂಗ್ರೆಸ್ ಗೆದಿದ್ದು ಕೇವಲ 99 ಸ್ಥಾನಗಳು ಮಾತ್ರ.

ಕಾಂಗ್ರೆಸ್ ನಾಯಕರಿಗೆ ಎನ್‌ಡಿಎ ಜಯವನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲದಿರುವುದು ಅವರ ಪ್ರತಿಕ್ರಿಯೆಗಳು ಹೇಳುತ್ತಿದೆ. ಖರ್ಗೆಯವರ ಪ್ರಕಾರ ಪ್ರಮಾದದಿಂದ ಎನ್‌ಡಿಎ ಸರಕಾರ ರಚನೆಯಾಗಿದೆಯಂತೆ. ಮೋದಿಜಿಗೆ ಜನಾದೇಶವಿಲ್ಲ, ಈ ಸರಕಾರ ಯಾವಾಗ ಬೇಕಾದರೂ ಬೀಳಬಹುದು ಭವಿಷ್ಯವನ್ನೂ ನುಡಿದಿದ್ದಾರೆ. 2024 ರ ಲೋಕಸಭೆ ಚುನಾವಣೆಯಲ್ಲಿ ಮೋದಿಯವರಿಗೆ ಜನಾದೇಶವಿಲ್ಲ ಇವರು ಮೂರನೆಯ ಒಂದು ಭಾಗದ ಪ್ರಧಾನಿ ಎಂದು ಕಾಂಗ್ರೆಸ್ ವಕ್ತಾರ ಜೈರಾಮ್ ರಮೇಶ್‌ರವರು ಈಗ ದಿನ ಬೆಳಗಾದರೆ ಹಾಡುತ್ತಿರುವ ಹಾಡು. ಇವರ ಅಧಿನಾಯಕಿ ಸೋನಿಯಾ ಗಾಂಧಿಯವರು ತನ್ನ ಪಕ್ಷ ಮತ್ತು ಅದರ ಮಿತ್ರಪಕ್ಷಗಳೆರಡನ್ನೂ ಹೊರಗಿಟ್ಟು ಕೇವಲ ತನ್ನ ಹೆಸರಿನಲ್ಲಿ ಜನಾದೇಶವನ್ನು ಬಯಸಿದ ಪ್ರಧಾನಿ ರಾಜಕೀಯವಾಗಿ ನೈತಿಕ ಸೋಲನ್ನು ಅನುಭವಿಸಿದ್ದಾರೆ. ವಾಸ್ತವವಾಗಿ, ಅವರು ಬಯಸಿದ ಜನಾದೇಶವನ್ನು ಕಳೆದುಕೊಂಡಿದ್ದಾರೆ ಮತ್ತು ಆ ಮೂಲಕ ನಾಯಕತ್ವದ ಹಕ್ಕನ್ನು ಕಳೆದು ಕೊಂಡಿದ್ದಾರೆ, ಎಂದು ತೀರ್ಪು ನೀಡಿದ್ದಾರೆ. ಇಂಡಿಯಾ ಮೈತ್ರಿಕೂಟದ ಸದಸ್ಯರಿಗೆ ಸೋಲನ್ನು ಸ್ವೀಕರಿಸುವ ಔದಾರ್ಯವಿಲ್ಲದೆ ತರ್ಕರಹಿತವಾಗಿ ಟೀಕಿಸುತ್ತಿದ್ದಾರೆ.

ಕಾಂಗ್ರೆಸ್ ಮತ್ತು ಸೋನಿಯಾ ಗಾಂಧಿಯವರಿಗೆ ಇತಿಹಾಸದ ನೆನಪು ಮಾಸಿರುವಂತೆ ಕಾಣುತ್ತಿದೆ. 1996 ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಜಯಿಸಿದ್ದು ಕೇವಲ 140 ಸೀಟುಗಳು ಮಾತ್ರ. ವಾಜಪೇಯಿಯವರ ಹದಿಮೂರು ದಿನಗಳ ಸರಕಾರ ಪತನವಾದ ತರುವಾಯ ರಚನೆಯಾದ ಯುನೈಟೆಡ್ ಫ್ರಂಟ್ ನೇತೃತ್ವದ ಸರಕಾರಕ್ಕೆ ಕಾಂಗ್ರೆಸ್ ಬೆಂಬಲವನ್ನು ನೀಡಿ ದೇವೇಗೌಡರನ್ನು ಪ್ರಧಾನಿ ಮಾಡುತ್ತದೆ. ಒಂಭತ್ತು ತಿಂಗಳಲ್ಲಿ ದೇವೇಗೌಡರ ನಡುವೆ ಮತ್ತು ಅಂದಿನ ಕಾಂಗ್ರೆಸ್ ಅಧ್ಯಕ್ಷ ಸೀತಾರಾಮ್ ಕೇಸರಿಯವರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಐ.ಕೆ.ಗುಜ್ರಾಲ್ ನೂತನ ಪ್ರಧಾನಿಯಾಗಿ ಆಯ್ಕೆಯಾಗುತ್ತಾರೆ.

ರಾಜೀವ್ ಗಾಂಧಿ ಹತ್ಯೆಯ ತನಿಖೆಗೆ ನೇಮಕವಾಗಿದ್ದ ಜೈನ್ ಆಯೋಗವು ತನ್ನ ವರದಿಯನ್ನು ಸಲ್ಲಿಸುತ್ತದೆ. ಯುನೈಟೆಡ್ ಫ್ರಂಟ್ ಸರಕಾರದ ಪಾಲುದಾರನಾಗಿದ್ದ ಡಿಎಂಕೆ ರಾಜೀವ್ ಗಾಂಧಿ ಹತ್ಯೆಯ ಉಗ್ರಗಾಮಿಗಳನ್ನು ಅಪರೋಕ್ಷವಾಗಿ ಬೆಂಬಲಿಸಿತ್ತು ಎಂಬ ಸ್ಫೋಟಕ ವರದಿಯನ್ನು ನೀಡುತ್ತದೆ. ಕೂಡಲೇ ಕಾಂಗ್ರೆಸ್ ಐ.ಕೆ.ಗುಜ್ರಾಲ್ ರವರಿಗೆ ಡಿಎಂಕೆಯನ್ನು ಸರಕಾರದಿಂದ ಕೈಬಿಡಬೇಕು ಎಂದು ತಾಕೀತು ಮಾಡುತ್ತದೆ ಆದರೆ ಇದಕ್ಕೆ ಅವರು ಸುತರಾಂ ಒಪ್ಪದ ಕಾರಣ ಸರಕಾರಕ್ಕೆ ತನ್ನ ಬೆಂಬಲವನ್ನು ಹಿಂಪಡೆಯುತ್ತದೆ. ಮಧ್ಯಂತರ ಚುನಾವಣೆಯನ್ನು ತಡೆಯಲು ಕೇವಲ 140 ಸ್ಥಾನ ಗೆದಿದ್ದ ಕಾಂಗ್ರೆಸ್ ಸರಕಾರ ರಚನೆಗೆ ರಾಷ್ಟ್ರಪತಿಗಳ ಮುಂದೆ ತನ್ನ ಹಕ್ಕು ಪ್ರತಿಪಾದಿಸುತ್ತದೆ. ಆದರೆ ಸಂಖ್ಯಾಬಲವಿಲ್ಲದೆ ಅದರ ಮನವಿ ತಿರಸ್ಕೃತವಾಗುತ್ತದೆ. ಅಂದು ಕಾಂಗ್ರೆಸ್ ನಾಯಕರಿಗೆ ಅಧಿಕಾರ 1996 ರ ಸೋಲು ಬಾಧಿಸಲಿಲ್ಲ ಮತ್ತು ನೈತಿಕತೆಯು ಕಾಡಲಿಲ್ಲ. ಪ್ರಾಯಶಃ ಕಾಂಗ್ರೆಸ್ ಪಾರ್ಟಿಯು ನಾವು ಇದೆಲ್ಲವನ್ನೂ ಮೀರಿದವರು ಎಂದು ನಂಬಿರುವಂತೆ ಕಾಣುತ್ತದೆ.

1998ರಲ್ಲಿ ವಾಜಪೇಯಿ ಸರಕಾರ ಒಂದು ಮತದಿಂದ ಪತನವಾಗುತ್ತದೆ. ವಿರೋಧ ಪಕ್ಷಗಳು ಪರ್ಯಾಯ ಸರಕಾರ ರಚನೆಯ ಕಸರತ್ತು ಆರಂಭಿಸುತ್ತವೆ. ಸೋನಿಯಾಗಾಂಧಿ ರಾಷ್ಟ್ರಪತಿಗಳ ಬಳಿ ಹೋಗಿ ತಮಗೆ ಸರಕಾರ ರಚಿಸಲು ಬೇಕಾದ ಬಹುಮತವಿದೆ ಎಂದು ಸರಕಾರ ರಚನೆಗೆ ಆಹ್ವಾನ ನೀಡಲು ಮನವಿ ಸಲ್ಲಿಸುತ್ತಾರೆ. ರಾಷ್ಟ್ರಪತಿ ಭವನದ ಹೊರಗೆ ಬಂದು ತಮಗೆ 272 ಸದಸ್ಯರ ಬೆಂಬಲವಿದೆ ಎಂದು ಪತ್ರಕರ್ತರ ಮುಂದೆ ಘೋಷಿಸುತ್ತಾರೆ.

ರಾಷ್ಟ್ರಪತಿಗಳು ಬೆಂಬಲಿಸುವವರ ಪಟ್ಟಿ ಕೇಳಿದಾಗ ಸೋನಿಯಾವರು 272 ಸದಸ್ಯರ ವಿವರ ಕೊಡಲಾಗುವುದಿಲ್ಲ. ಸಂವಿಧಾನದ ಅತ್ಯುನ್ನತ ಹುದ್ದೆಗೆ ಸುಳ್ಳು ಹೇಳುವಾಗ ಇವರಿಗೆ ನೈತಿಕತೆಯು ಕಿಂಚಿತ್ತು ಕಾಡುವುದಿಲ್ಲ, ನಮ್ಮ ಬಳಿ 272 ಸದಸ್ಯರ ಬೆಂಬಲವಿದೆ ಎಂದು ದೇಶಕ್ಕೆ ತಪ್ಪು ಮಾಹಿತಿ ನೀಡುವಾಗ ತಮ್ಮಿಂದ ಬಹು ದೊಡ್ಡ ಪ್ರಮಾದವಾಗುತ್ತಿದೆ ಎಂಬ ತಪ್ಪಿತಸ್ಥ ಭಾವನೆಯೂ ಇವರಿಗೆ ಕಾಡುವುದಿಲ್ಲ. ಗಾಂಧಿ ಕುಟುಂಬದವರಾದ ಕಾರಣ ರಾಷ್ಟ್ರಪತಿಯವರಿಗೆ ಮತ್ತು ದೇಶದ ಜನತೆಗೆ ಸುಳ್ಳು ಹೇಳುವ ಹಕ್ಕು ನಮಗಿದೆಯೆಂದು ಅವರ ಭಾವನೆ.

2004 ರಲ್ಲಿ ವಾಜಪೇಯಿ ಸರಕಾರ ಬಹುಮತ ಪಡೆಯುವುದು ಖಚಿತ ಎಂಬ ವಿಶ್ವಾಸವಿದ್ದಾಗ ಎನ್‌ಡಿಎ 181 ಸ್ಥಾನ ಮಾತ್ರ ಪಡೆದು ಆಘಾತಕಾರಿಯಾಗಿ ಸೋತಿತು. ಗೆಲ್ಲುವುದಿಲ್ಲ ಎಂದು ನಿಶ್ಚಯಿಸಿದ್ದ ಯುಪಿಎ ಮೈತ್ರಿಕೂಟಕ್ಕೆ 218 ಸ್ಥಾನ ಪಡೆದು ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಎಡರಂಗದ 59 ಮತ್ತು ಸಮಾಜವಾದಿ ಪಾರ್ಟಿಯ 39 ಸದಸ್ಯರ ಬಾಹ್ಯ ಬೆಂಬಲದ ಆಧಾರದ ಮೇಲೆ ಸರಕಾರ ರಚಿಸಿದರು. ಸೋನಿಯಾ ಗಾಂಧಿಯವರಿಗೆ ಬಹುಮತವಿಲ್ಲದೆ ಮನಮೋಹನ ಸಿಂಗ್ ನೇತೃತ್ವದಲ್ಲಿ ಸರಕಾರ ರಚಿಸಲು ಯಾವ ನೈತಿಕತೆಯ ಪ್ರಶ್ನೆ ಅಡ್ಡಿ ಬರಲಿಲ್ಲ.

2008 ರಲ್ಲಿ ಎಡರಂಗ ಪಕ್ಷಗಳು ಅಣು ಒಪ್ಪಂದವನ್ನು ವಿರೋಧಿಸಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂದಕ್ಕೆ ಪಡೆಯುತ್ತದೆ. ಯುಪಿಎ ಸರಕಾರ ವಿಶ್ವಾಸಮತ ಯಾಚನೆ ಮಾಡಿದಾಗ ಬಹುಮತ ಪಡೆಯಲು ಹಣ ನೀಡಿ ಓಟು ಪಡೆದ ಗಂಭೀರ ಆರೋಪ ಎದುರಿಸುತ್ತದೆ.ಆಗ ಇವರಿಗೆ ಅದ್ಯಾಕೊ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗೌರವಿಸಿ ರಾಜಿನಾಮೆ ಕೊಡಬೇಕು ಎಂದು ಅನ್ನಿಸುವುದೇ ಇಲ್ಲ.

2009 ರಲ್ಲಿ ನಡೆದ ಚುನಾವಣೆಯಲ್ಲಿಯೂ ಯುಪಿಎಗೆ ಪೂರ್ಣ ಬಹುಮತ ದೊರೆಯಲಿಲ್ಲ. ಆದರೆ ಈ ಬಾರಿ ಅದರ ಸ್ಥಿತಿಯು ಸುಧಾರಿಸಿ ಯುಪಿಎ 262 ಸೀಟುಗಳನ್ನು ಗಳಿಸಿತ್ತು. ಕಾಂಗ್ರೆಸ್ ಪಾರ್ಟಿ ಕೇವಲ 206 ಸೀಟುಗಳಲ್ಲಿ ಜಯ ಸಾಧಿಸಿತ್ತು. ಈ ಬಾರಿಯು ಚುನಾವಣಾ ನಂತರದ ಹೊಂದಾಣಿಕೆಯಿಂದ ಸರಕಾರ ರಚನೆ ಮಾಡಬೇಕಾಯಿತು.

2009ರಲ್ಲಿ ಮನಮೋಹನ್ ಸಿಂಗ್ ರವರ ನೇತೃತ್ವದಲ್ಲಿ ಚುನಾವಣೆ ನಡೆದಿದ್ದರೂ ಗಾಂಧಿ ಕುಟುಂಬ ಅವರಿಗೆ ಲೋಕಸಭೆಗೆ ಸ್ಪರ್ಧಿಸಲು ಅನುಮತಿಯನ್ನು ನೀಡುವುದಿಲ್ಲ. ಪಾಪ, ಸಿಂಗ್‌ರವರಿಗೆ ತಾವು ಲೋಕಸಭೆಗೆ ನಿಲ್ಲುತ್ತೇನೆ ಎಂದು ಗಟ್ಟಿಯಾಗಿ ಒತ್ತಾಯ ಮಾಡುವ ಧೈರ್ಯವು ಇರಲಿಲ್ಲ. ಸೋನಿಯಾರವರಿಗೆ ಚುನಾವಣೆಯ ಗೆಲುವಿನ ಶ್ರೇಯಸ್ಸು ಕೇವಲ ತಮ್ಮ ಕುಟುಂಬಕ್ಕೆ ಮಾತ್ರ ಸಲ್ಲಬೇಕು ಎಂದು ಮುನ್ನೆಚ್ಚರಿಕೆ ವಹಿಸಿರುತ್ತಾರೆ.

1984 ನಂತರ ಕಾಂಗ್ರೆಸ್ ಪಾರ್ಟಿ ಒಮ್ಮೆಯೂ ಏಕಾಂಗಿಯಾಗಿ ಬಹುಮತ ಪಡೆಯಲು ಸಾಧ್ಯವಾಗಿಲ್ಲ. 2014ರಲ್ಲಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ 282 ಸೀಟುಗಳನ್ನು ಗೆಲ್ಲುವ ಮೂಲಕ ಹೊಸ ದಾಖಲೆಯನ್ನು ಬರೆಯಿತು. ಮತ್ತೇ 2019 ರಲ್ಲಿ 303 ಸ್ಥಾನಗಳಿಸಿ ಸರಕಾರ ರಚಿಸಿತು. ಸ್ವತಃ ತನಗೆ ಬಹುಮತವಿದ್ದರು ಮಿತ್ರಪಕ್ಷಗಳೊಂದಿಗೆ ಸರಕಾರವನ್ನು ರಚನೆ ಮಾಡಿದ್ದರು.

2024 ರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟ ರಚಿಸಿಕೊಂಡು ಚುನಾವಣೆಯನ್ನು ಎದುರಿಸಿದ್ದು. ಚುನಾವಣಾ ಪೂರ್ವ ಮೈತ್ರಿಕೂಟವು 294 ಸ್ಥಾನಗಳಲ್ಲಿ ಜಯಭೇರಿ ಸಾಧಿಸಿದೆ ಇದಕ್ಕೆ ವ್ಯತಿರಿಕ್ತವಾಗಿ ಇಂಡಿಯಾ ಮೈತ್ರಿಕೂಟವು ಚುನಾವಣಾ ಪೂರ್ವ ಮೈತ್ರಿಯಲ್ಲಿ ಗೆದ್ದಿರುವುದು ಕೇವಲ 202 ಸ್ಥಾನಗಳು ಮಾತ್ರ. ಟಿಎಂಸಿ, ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳು ಕೇರಳದಲ್ಲಿ ಮತ್ತು ಆಮ್ ಆದ್ಮಿ ಪಾರ್ಟಿ ಪಂಜಾಬ್‌ನಲ್ಲಿ ಸ್ವತಂತ್ರವಾಗಿ ಸ್ಪರ್ಧೆ ಮಾಡಿ 32 ಸೀಟಿನಲ್ಲಿ ಜಯ ಸಾಧಿಸಿವೆ.

1996 ರಲ್ಲಿ ಮತ್ತು 2008ರಲ್ಲಿ ಬಹುಮತ ಖರೀದಿಸಿ ವಾಮ ಮಾರ್ಗದಲ್ಲಿ ಸರಕಾರ ಉಳಿಸಿಕೊಂಡ ಆರೋಪ ಹೊತ್ತಿರುವವರು ಇಂದು ಎನ್‌ಡಿಎ ಸರಕಾರಕ್ಕೆ ಬಹುಮತವಿಲ್ಲದೆ ಸರಕಾರ ರಚಿಸಿರುವುದು ಅನೈತಿಕ ನಡೆ ಎಂದು ಟೀಕಿಸುತ್ತಿರುವುದು ಇವರ ಡೋಂಗಿ ನೈತಿಕತೆಯ ರಾಜಕಾರಣಕ್ಕೆ ಕನ್ನಡಿ ಹಿಡಿದಿದೆ.

ಪ್ರಜಾಪ್ರಭುತ್ವ ಅಪಾಯದಲ್ಲಿದೆ ಎಂದು ಪ್ರಚಾರ ಮಾಡುವವರು ಇಂದು ಚುನಾವಣೆಯಲ್ಲಿ ಪರಾಭವಗೊಂಡು ಹತಾಶೆಯಿಂದ ಹೊಸ ಸರಕಾರದ ಬಹುಮತವನ್ನು ಅಸಂಬದ್ಧ ವಾದದ ಮೂಲಕ ವ್ಯಾಖ್ಯಾನಿಸುತ್ತಿರುವುದು ಕಾಂಗ್ರೆಸ್ ನಾಯಕರು ಸದಾ ಪಾಲಿಸುವ ಅನೂಕೂಲಕ್ಕೆ ತಕ್ಕ ನೀತಿಗೆ ಮತ್ತೊಂದು ಉದಾಹರಣೆಯಾಗಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಬದಲಾವಣೆಗೆ ಸಾಧ್ಯವಿಲ್ಲವೇ?

ಜನಪ್ರಿಯ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರಕಾರ ಪ್ರಮಾಣವಚನ ಸ್ವೀಕಾರ ಸಮಾರಂಭ ಕೆಲ ದಿನಗಳ ಹಿಂದೆ ರಾಷ್ಟ್ರಪತಿ ಭವನದ ಆವರಣದಲ್ಲಿ ಏರ್ಪಟ್ಟಿತ್ತು. ಮೋದಿಯವರು ಸೇರಿ 72 ಮಂದಿ ಪ್ರಮಾಣ ವಚನ ಸ್ವೀಕರಿಸಿದರು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಯಾವ ಪ್ರಮಾಣ ವಚನ ಪರಿಪಾಠ ಆರಂಭವಾಯಿತೋ ಅದೇ ಮುಂದುವರೆದಿದೆ. ಈ ಸಮಾರಂಭ ಎರಡು ತಾಸುಗಳಿಗೂ ಹೆಚ್ಚು ನಡೆಯಿತು. ಸಮಾರಂಭಕ್ಕೆ ಶಿಷ್ಟಾಚಾರ ತುಂಬಾ. ತಡವಾಗಿ ಬರುವಂತಿಲ್ಲ. ಆಹ್ವಾನಿತರು ನಿಗದಿತ ಸಮಯಕ್ಕೆ ಮುಂಚೆಯೇ ಬಂದು ಆಸನ ಆಕ್ರಮಿಸಬೇಕು. ಸಮಾರಂಭ ಮುಗಿಯುವ ತನಕ ಎದ್ದು ಹೋಗುವಂತಿಲ್ಲ. ರಾಷ್ಟ್ರಪತಿಗಳು 'ನಾನು' ಎಂದು ಹೇಳಿ ಮುಂದಿನದನ್ನು ನಿಯೋಜಿತ ಮಂತ್ರಿಗಳಿಗೆ ಓದಲು ಬಿಡುತ್ತಾರೆ. ಎರಡು ಸಾರ್ತಿ ಇದು ನಡೆಯುತ್ತೆ. ಕಡೆಗೆ ಸಂಪುಟ ಕಾರ್ಯದರ್ಶಿಗಳ ಸಮಕ್ಷಮದಲ್ಲಿ ಸಹಿ ಮಾಡುವುದರೊಂದಿಗೆ ಅಂತ್ಯವಾಗುತ್ತೆ. ಹೀಗೆ ಒಬ್ಬರ ನಂತರ ಒಬ್ಬರು. ಯಾರ್ಯಾರು ಮಂತ್ರಿಗಳು ಎನ್ನುವುದು ಮೊದಲೇ ಗೊತ್ತಿರುತ್ತದೆ. ನೋಡುವವರಿಗೂ ಕುತೂಹಲವಿಲ್ಲ. ನೋಡು ನೋಡುತ್ತಿದ್ದಂತೆ ಒಂದು ಹಂತದಲ್ಲಿ ಕ್ಲೀಷೆ ಶುರುವಾಗುತ್ತೆ. ಯಾವಾಗ ಸಮಾರಂಭ ಮುಗಿಯತ್ತೋ ಅಂತ. ಈ ಸಮಾರಂಭಕ್ಕೆ ಸಾಕ್ಷಿಯಾಗಲು ನೆರೆ ಹೊರೆ ರಾಷ್ಟ್ರಗಳ ಮುಖ್ಯಸ್ಥರು ತಮ್ಮ ತಮ್ಮ ದೇಶ, ದೇಶವಾಸಿಗಳನ್ನು ಬಿಟ್ಟು ಮೂಕ ಪ್ರೇಕ್ಷಕರಾಗಿ ಕುಳಿತು ಬಿಟ್ಟಿದ್ದರು. ಕಡೆಗೆ ಗ್ರೂಪ್ ಫೋಟೋ ನಂತರವೇ ಇವರ ನಿರ್ಗಮನ. ದೇಶದ ಸಾಧು ಸಂತರು, ಮಠಾಧಿಪತಿಗಳು, ಪೀಠಾಧಿಪತಿಗಳು ಕಾಷಾಯ ವಸ್ತ್ರ, ದಂಡ, ಕಮಂಡಲು ಭೂಷಿತರಾಗಿ ಅಧ್ಯಯನ, ಅಧ್ಯಾಪನ, ಜಪ, ತಪ, ಪೂಜೆ, ಪಾಠ , ಪ್ರವಚನ ಎಲ್ಲವನ್ನೂ ಬದಿಗೊತ್ತಿ ಬಂದಿದ್ದರು. ಇವರಲ್ಲಿ ಎಷ್ಟೋ ಮಂದಿಗೆ ತಾವು ಮೋದಿಯವರಿಗೆ ಹತ್ತಿರ ಇದ್ದೇವೆ ಎಂದು ತೋರಿಕೊಳ್ಳುವ ತವಕ. ಇನ್ನು ಸಮಯವನ್ನು ಯಥೇಚ್ಛವಾಗಿ ಪೋಲು ಮಾಡುವವರ ಬಗ್ಗೆ ಹೇಳುವುದೇ ಬೇಡ.

ಮೋದಿಯವರು ಅಧಿಕಾರಕ್ಕೆ ಬಂದಮೇಲೆ ಅನೇಕ ಕ್ರಾಂತಿಕಾರಕ ಬದಲಾವಣೆಗಳನ್ನು ತಂದಿದ್ದಾರೆ. ಪ್ರಮಾಣವಚನ ಸಮಾರಂಭ ಚಿಕ್ಕದಾಗಿ ಚೊಕ್ಕವಾಗಿದ್ದರೆಷ್ಟು ಚೆನ್ನ. ಪ್ರಧಾನ ಮಂತ್ರಿಯಾದವರು ಒಬ್ಬರೇ ಪ್ರಮಾಣ ವಚನ ಸ್ವೀಕರಿಸಲಿ. ಉಳಿದವರು ಸರದಿಗೆ ಹತ್ತರಂತೆ ನಿಂತು, ತಮ್ಮ ತಮ್ಮ ಹೆಸರನ್ನು ಹೇಳಿಕೊಳ್ಳಲಿ. ಬಹಿರಂಗವಾಗಿ ಸಹಿಹಾಕಲು ಕ್ಯೂ ನಿಲ್ಲಬೇಕಿಲ್ಲ. ತೆರೆಯ ಮರೆಯಲ್ಲಿ ಸಂಸದೀಯ ಕಾರ್ಯದರ್ಶಿಗಳ ಕೊಠಡಿಯಲ್ಲಿ ಸಹಿ ಹಾಕಲಿ. ಸಮಾರಂಭವೂ ಬೇಗನೆ ಮುಗಿಯುತ್ತೆ ಸುಮಾರು ಅರ್ಧ ಘಂಟೆ ಸಾಕು. ಯಾರಿಗೂ ಕ್ಲೀಷೆ ಎನಿಸುವುದಿಲ್ಲ. ಮೋದಿಯವರು ಸಮಯಕ್ಕೆ ಎಷ್ಟು ಪ್ರಾಧಾನ್ಯ ಕೊಡುತ್ತಾರೆ ಎಂದು ಹೇಳಬೇಕಿಲ್ಲ. ಅವರ ಅಧಿಕಾರ ಅವಧಿಯಲ್ಲಿ ಒಮ್ಮೆಯೂ ಒಂದು ದಿವಸವೂ ರಜೆ ಹಾಕಿಲ್ಲ. ತಾಯಿ ಸತ್ತಾಗ ಆ ಗಳಿಗೆ ಮಟ್ಟಿಗೆ ತಾಯಿಯ ಪಾರ್ಥಿವ ಶರೀರ ದರ್ಶನಕ್ಕೆ ಬಂದು, ಚಿತೆಗೆ ಹೋಗುವ ಮುನ್ನ ಕಳೇಬರಕ್ಕೆ ಹೆಗಲು ಕೊಟ್ಟು ಅಗ್ನಿ ಸ್ಪರ್ಶವಾದೊಡನೆ ದೆಹಲಿಗೆ ವಾಪಸ್ಸಾದರು. ಅಷ್ಟು ಕಾರ್ಯ ಪ್ರಜ್ಞೆ, ದೇಶ ಪ್ರಜ್ಞೆ. ಇಂತಹ ನಾಯಕ ಮತ್ತೊಬ್ಬ ಸದ್ಯಕ್ಕೆ ಈ ದೇಶಕ್ಕೆ ಸಿಗಲು ಸಾಧ್ಯವಿಲ್ಲ. ಇಂತಹ ಮೋದಿಯವರು ಪ್ರಮಾಣವಚನ ಸಮಾರಂಭವನ್ನು ಸೂಕ್ತ ಬದಲಾವಣೆಗಳೊಂದಿಗೆ ಜಾರಿಗೆ ತಂದು ಎಲ್ಲರ ಮನ ಗೆಲ್ಲಲಿ.

-ಶ್ರೀನಿವಾಸ ರಾಘವೇಂದ್ರ, ಮೈಸೂರು

ಹಾದಿ ತಪ್ಪುತ್ತಿರುವ ಯುವಜನತೆ

ಅದೊಂದು ಕಾಲ ಇತ್ತು, ರಾಜಕುಮಾರ್ ಚಲನಚಿತ್ರ ಅಂದರೆ ಜನ, ಒಂದು ಆದರ್ಶ ಪರಿಪಾಲನೆಗಾಗಿ, ಭಕ್ತಿಗಾಗಿ, ಮನರಂಜನೆಗಾಗಿ, ವೀಕ್ಷಿಸುತ್ತಿದ್ದರು. ರಾಜಕುಮಾರ್ ಚಲನಚಿತ್ರಗಳಲ್ಲಿ ಲಾಂಗು, ಮಚ್ಚು, ಕುಡಿತ ಹಿಂಸೆ, ಕ್ರೌರ್ಯ, ಅಶ್ಲೀಲ ಸಂಭಾಷಣೆ ಧೂಮಪಾನ ವಿಜೃಂಭಿಸುತ್ತಿರಲಿಲ್ಲ. ಬಂಗಾರದ ಮನುಷ್ಯ, ಕಸ್ತೂರಿ ನಿವಾಸ ಇನ್ನು ಅನೇಕ ಚಲನಚಿತ್ರಗಳು ಜನ ಮಾನಸದಲ್ಲಿ ಇಂದು ಅಚ್ಚಹಸುರಾಗಿವೆ. ಚಲನಚಿತ್ರ ನೋಡಿದ ಅನೇಕ ಜನತೆ, ಜೀವನವನ್ನು ಬಂಗಾರದಂತ ಮನುಷ್ಯನ ರೀತಿ ಬದುಕಿ ತೋರಿಸಿದ್ದಾರೆ. ಆಹಾ ಅಂದಿನ ಚಲನಚಿತ್ರಗಳು ಐತಿಹಾಸಿಕ, ಸಾಮಾಜಿಕ ಜನ ಜೀವನವನ್ನು ಅದ್ಭುತವಾಗಿ ವಿವರಿಸುತ್ತಿದ್ದವು, ಅಂದಿನ ಸಾಹಿತ್ಯ, ಸಂಭಾಷಣೆ, ಹಾಡುಗಳು, ಮನಸ್ಸಿಗೆ ಮುದ ನೀಡುತ್ತಿದ್ದವು. ಪುನೀತ್, ಅಂಬರೀಶ್, ವಿಷ್ಣುವರ್ಧನ್, ರಮೇಶ್, ಶಂಕರ್ ನಾಗ್, ಅನಂತನಾಗ್ ನಂತಹ ಉತ್ತಮ ನಟರು ಚಲನಚಿತ್ರಗಳನ್ನು ಕೊಟ್ಟಿದ್ದಾರೆ. ದಶಕಗಳಲ್ಲಿ ಕನ್ನಡ ಚಿತ್ರರಂಗ ಕಂಡು ಕೇಳಿ ಕೇಳರಿಗೆದಷ್ಟು ಪ್ರಪಾತಕ್ಕೆ ಇಳಿದಿದ್ದೇಕೆ? ಮಚ್ಚು ಲಾಂಗುಗಳ ವಿಜೃಂಭಣೆ, ಹಿಂಸೆ, ರೌಡಿಸಂ, ಅಶ್ಲೀಲ ಮಾತುಗಳು ನಾಯಕನಟ. ಮಾಡಿದ್ದೆಲ್ಲ ಸ್ವೀಕರಿಸುವ ಮಟ್ಟಿಗೆ ಅದು ಚಲನಚಿತ್ರವಾಗಿರಲಿ, ನೈಜ ಜೀವನವಾಗಿರಲಿ ಆನೆ ಹೋಗಿದ್ದೆ ದಾರಿ ಎನ್ನುವಂತಾಗಿದೆ. ಅಭಿಮಾನ ವರ್ಗ ಅಭಿಮಾನಿಗಳ ವರ್ಗ ಅಂತ ಹೇಳುವಾಗ ಇಲ್ಲ ನಟ ಕೊಲೆ ಮಾಡ್ಲಿ, ಶೋಷಣೆ ಮಾಡ್ಲಿ, ಯಾರಿಗಾದರೂ ಒದೆಯಲಿ ಎಲ್ಲದಕ್ಕೂ ಜೈಕಾರ ಎನ್ನುವಂತಾಗಿದೆ. ಚಿತ್ರರಂಗದಲ್ಲಂತೂ ಅಭಿಮಾನಿಗಳನ್ನು ನಟರು ಮಾಡಿದ ತಪ್ಪನ್ನು ಖಂಡಿಸುವ ಹಾಗೆ ಇಲ್ಲ, ರಾಜಕಾರಣಿಗಳು ಎಲ್ಲೋ ಒಬ್ಬರನ್ನು ಬಿಟ್ಟರೆ, ಎಲ್ಲರಲ್ಲೂ ನೀರವ ಮೌನ, ಟೀಕಿಸಿದರೆ ಅವರಿಗೆ ಬೆದರಿಕೆ ಕಾರ್ಯಗಳು.

ಟಿವಿ ಮಾಧ್ಯಮದ ಕೆಲವು ಸಂಪಾದಕರಿಗೆ ಬೆದರಿಕೆ ಕರೆಗಳು ಸಂದೇಶಗಳು ಹೋಗುತ್ತಿವೆ. ಕರ್ನಾಟಕದ ಪ್ರಸಿದ್ಧ ಸಂಪಾದಕರೊಬ್ಬರು ಇಂಥ ಕೆಟ್ಟ ವಿಕೃತಿಗಳ ವಿರುದ್ಧ ತಮ್ಮ ಸಂಪಾದಕೀಯದಲ್ಲಿ ಅರ್ಧ ಪುಟವನ್ನು ಪ್ರತಿಭಟನ ರೂಪದಲ್ಲಿ ಖಾಲಿ ಬಿಟ್ಟಿದ್ದಾರೆ, ತನ್ನ ಹೆತ್ತ ತಂದೆ ತಾಯಿಗಳಿಗೆ ಗೌರವ ಕೊಡದ, ಅವರ ಹಾರೈಕೆ ಮಾಡದ, ಕೆಲವು ಮಂದಿ ಈ ಕ್ರಿಮಿನಲ್ ನಟರಿಗೆ ಜೈ ಜೈ ಅನ್ನುತಿದ್ದಾರೆ. ಇಲ್ಲಿ ಪೊಲೀಸ್ ಇಲಾಖೆ ಮಾತ್ರ, ಯಾರಿಗೂ ಬೆದರದೆ ಜಗ್ಗದೆ ತನ್ನ ಕರ್ತವ್ಯ ನಿಭಾಯಿಸಿದೆ. ನಮ್ಮ ಯುವ ಜನತೆಗೆ ಸ್ವಾಮಿ ವಿವೇಕಾನಂದ, ಭಗತ್ ಸಿಂಗ್, ಚಂದ್ರಶೇಖರ್ ಆಜಾದ್, ಡಿವಿಜಿ, ಕುವೆಂಪು, ಡಾಕ್ಟರ್ ರಾಜಕುಮಾರ್ ಆದರ್ಶ ವ್ಯಕ್ತಿಗಳಾಗಬೇಕಿತ್ತು. ನಾವು ಮೆದುಳಿಗೆ ಯಾವ ಆಹಾರ ಕೊಡ್ತೀವೋ ಅದೇ ರೀತಿ ವರ್ತಿಸುತ್ತೇವೆ. ನಿಜಕ್ಕೂ ಈ ಎಲ್ಲ ಬೆಳವಣಿಗೆಗಳನ್ನು ನೋಡಿದ ಮೇಲೆ ಕೆಲವು ಯುವಜನತೆ, ಹಾದಿ ತಪ್ಪುತ್ತಿದೆ ಆದರ್ಶ ತಪ್ಪುತ್ತಿದೆ. ಸರಳ ಜೀವನ ತಪ್ಪುತ್ತಿದೆ ಆದರ್ಶ ಎನ್ನುವ ಪದಕ್ಕೆ ಅರ್ಥವೇ ಗೊತ್ತಿಲ್ಲ ಎನಿಸುತ್ತಿದೆ ಇವರನ್ನು ದಾರಿಗೆ ತರುವವರು ಯಾರು? ಕತ್ತಲಿನಿಂದ ಬೆಳಕಿನೆಡೆಗೆ ಹೋಗಬೇಕಿದ್ದ ಕೆಲವು ಯುವ ಸಮೂಹ ಬೆಳಕಿನಿಂದ ಕತ್ತಲೆಯಡೆಗೆ, ಹೋಗ್ತಾ ಇದ್ದಾರೆ ಎನಿಸುತ್ತಿದೆ ಇಲ್ಲಿ ನೈಜತೆಗಿಂತ ತಳುಕು ಬಳುಕಿಗೆ ಮಾರುಹೋಗುತ್ತಿದ್ದಾರೆ ಬಂಗಾರದಂತ ಬಾಳು ಮಣ್ಣಾಗುತ್ತಿದೆ ಅಯ್ಯೋ ಇದನ್ನು ತಡೆದು ನಿಲ್ಲಿಸಬೇಕಾಗಿದೆ ಆದರ್ಶದ ದಿಕ್ಕನ್ನು ಸರಿಯಾಗಿ ಗುರುತು ಹಚ್ಚಬೇಕಾಗಿದೆ ಓ ಬನ್ನಿ ತರುಣರೇ ಬೆಳಕಿಗೆ.

- ಎಂ ಪರಮೇಶ್ವರ ಹಿರಿಯೂರು

ಅಕ್ಷರಕ್ಕೆ ಸಂದ ಗೌರವ

ಈ ಭಾನುವಾರದ ವಿಶ್ವೇಶ್ವರ ಭಟ್‌ರ ಅಂಕಣ ಖಾಲಿ ಇರುವುದು ಅಕ್ಷರಕ್ಕೆ ಸಂದ ಗೌರವ ಎಂದರೆ ತಪ್ಪಾಗಲಾರದು. ಮಾನವ ಸಂವೇದನೆಗಳಿಗೆ ಮೀರಿದ ಪೈಶಾಚಿಕ ಕೃತ್ಯವನ್ನು ಎಸಗಿರುವ ವ್ಯಕ್ತಿ ಸಾರ್ವಜನಿಕ ಜೀವನದಲ್ಲಿ ಇರುವವನು ಎಂದಾಗ ಅದು ಬಹಳ ಅಪಾಯಕಾರಿ ಬೆಳವಣಿಗೆ. ಇದಕ್ಕಿಂತ ಹೆಚ್ಚಾಗಿ ಚಲನಚಿತ್ರದಂತಹ ಶಕ್ತಿಶಾಲಿ ಮಾಧ್ಯಮದ ಭಾಗವಾಗಿರುವ ಒಬ್ಬ ವ್ಯಕ್ತಿ ಇಂತಹ ಹೇಯ ಕೃತ್ಯವನ್ನು ಎಸೆಗಿರುವದು ಯುವಪೀಳಿಗೆಯ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರಬಹುದು ಎಂಬುದು ಊಹೆಗೆ ಬಿಟ್ಟ ವಿಚಾರ. ಕಲ್ಪನೆಗೂ ಮೀರಿದ ಹಿಂಸಾ ಪ್ರವೃತ್ತಿಯ ವಿಪರೀತವಾಗಿರುವ ಈ ಘಟನೆ ಸಂಪಾದಕರ ಅಂಕಣದಲ್ಲಿ ಪ್ರಸ್ತಾಪಗೊಳ್ಳುವದಕ್ಕೆ ಯೋಗ್ಯವಲ್ಲ ಎಂದು ನನ್ನ ಅನಿಸಿಕೆ. ಅಂಕಣವನ್ನು ಬರೆಯದೇ ಖಾಲಿ ಬಿಟ್ಟ ವಿಶ್ವೇಶ್ವರ ಭಟ್ ರವರು ತಮ್ಮ ಗೌರವವನ್ನು ಇನ್ನಷ್ಟು ಹೆಚ್ಚಿಸಿಕೊಂಡಿದ್ದಾರೆ.

-ವಿದ್ಯಾ ಶಂಕರ್ ಶರ್ಮ

ಭಟ್ಟರ್ ಸ್ಕಾಚ್

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ತೆನೆ ಹೊತ್ತ ಮಹಿಳೆ ಮುಂದೆ ಏನು ಹೊರಬೇಕಾಗಿ ಬರಬಹುದು?
– ಉಕ್ಕು !

● **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ನಿದ್ದೆ ಕದಿಯುವವಳು ನಿದ್ರಾ ಸುಂದರಿಯೇ?
– ಹಾಗಾದ್ರೆ ಹಾಸಿಗೆ, ಚಾದರ ಇಲ್ಲದೇ ಮಲಗಿದವನ ಕನಸಿನಲ್ಲಿ ಬಂದವಳು ನಿರಾಭರಣ ಸುಂದರಿಯಾ?!

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕುಮಾರಣ್ಣ ಮಂತ್ರಿಯಾದ ಸಂದರ್ಭದಲ್ಲಿ ಅವರಿಗೆ ಯಾವ ಬಿರುದು ಕೊಡಬಹುದು?
– ಉಕ್ಕಿನ ಖಾತೆ ಸಚಿವರಾಗಿದ್ದಕ್ಕೆ 'ಉಕ್ಕಿನ ಮನುಷ್ಯ' ಎನ್ನಬಹುದು!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಡಿ ಗ್ಯಾಂಗ್ ಬಂದ ನಂತರ ಕನ್ನಡದ ಉಳಿದ ನಟರು ಮಂಕಾಗಿದ್ದಾರಾ?
– ದರ್ಶನ್ ಆರ್ಭಟ ನೋಡಿ ಮಂಕಾದವನು ನಿಜವಾದ ಡಿ ಗ್ಯಾಂಗ್ ಮುಖ್ಯಸ್ಥ ದಾವೂದ್!

● **ಸತೀಶ್ ಎಲ್.ವಿ., ಮೈಸೂರು**
ಭಟ್ರೇ, ನಿಮಗೆ ಯಾರಿಗಾದರೂ ಹೊಡೆಯುವಷ್ಟು ಕೋಪ ಬಂದರೆ?
– ನಾನಿರುವ ಆರ್.ಆರ್ .ನಗರದಲ್ಲಿಯೇ ಶೆಡ್ ಇದೆಯಲ್ಲ?!

● **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ಅಣ್ಣನ ಮಗ ಜೈಲು ಸೇರಿರುವ ಹೊತ್ತಲ್ಲೇ ಚಿಕ್ಕಪ್ಪ ಕೇಂದ್ರ ಸಚಿವ ಆದರಲ್ಲ?
– ನೋಡ್ತಾ ಇರು...ಚಿಕ್ಕಪ್ಪನ ಮಗ ಶಾಸಕನೂ ಆಗಬಹುದು!

● **ರಾಮು ಮಲ್ಲಿಕಟ್ಟೆ, (ಇಮೇಲ್ ಮೂಲಕ)**
ಭಟ್ರೇ, ದರ್ಶನ ರೇಣುಕಸ್ವಾಮಿಯನ್ನು ಅನಾಮತ್ತು ಎತ್ತಿ ಗೋಡೆಗೆ ಹೊಡೆದು ಸಾಯಿಸಿದ ಅಂತಾರಲ್ಲ?
– ಕನ್ನಡ ಸಿನಿಮಾದ ಬಾಹು'ಬಲಿ'!

● **ಸಂದೀಪ ನಾಯಕ, ಬೆಂಗಳೂರು**
ಭಟ್ರೇ, ಕೇಜ್ರಿವಾಲ ಹೇಳುವ ಕಥೆಗಳನ್ನು ಕೇಳಿದರೆ ಕಲ್ಲು ಕರುಗುವುದಂತೆ, ನಿಜವಾ?
– ಆದರೆ ದಿಲ್ಲಿ ಮತದಾರ ಕರಗಲಿಲ್ಲವಲ್ಲ?!

● **ರವೀಶ್ ಗೌಡ, ಹಾಸನ**
ಭಟ್ರೇ, 'ತಂದೆಗೆ ತಕ್ಕ ಮಗ' ಮತ್ತು 'ತಾಯಿಗೆ ತಕ್ಕ ಮಗ' ಎಂಬ ಬಿರುದನ್ನು ಯಾರಿಗೆ ಕೊಡಬಹುದು?
– ಏನ್ ಗೌಡ್ರೇ.. ನಿಮ್ಮೂರ ಮಾಜಿ ಎಂಪಿ ಪ್ರಜ್ವಲ್ ನನ್ನ ಬಿಟ್ಟು ಇನ್ಯಾರಿಗೆ ಕೊಡೋಣ ಹೇಳಿ?!

● **ಸುಂದರ ಸಿ.ಜಿ., (ಇಮೇಲ್ ಮೂಲಕ)**
ಜಮೀನು ಉಳುವ ರೈತನೇ ವಾಸಿ ಅನಿಸುತ್ತೆ ಅಲ್ವಾ ಭಟ್ರೇ?
– ಜಾಮೀನಿಗೆ ಕಾಯುವ ನಟರು, ರಾಜಕಾರಣಿಗಳಿಗಿಂತ ಆತನೇ ವಾಸಿ!

ಅದನ್ನೆಲ್ಲ ಬಿಟ್ಟು ಸಮವಸ್ತ್ರ ಧರಿಸಬೇಕು!

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್

dhyapaa@gmail.com

ವಿದೇಶವಾಸಿ: ಏನು ಸ್ವಾಮೀ, ಕಂಗನಾ ರನೌತ್‌ಗೆ ಯಾರೋ ಕಪಾಳಕ್ಕೆ ಹೊಡೆದರಂತೆ? ಏನು ಕತೆ?

ದೇಶವಾಸಿ: ಅದಾ? ಮೊನ್ನೆ ಮೊನ್ನೆಯಷ್ಟೇ ನಡೆದ ಲೋಕಸಭೆ ಚುನಾವಣೆಯ ಫಲಿತಾಂಶ ಬಂತಲ್ಲ, ಆ ಚುನಾವಣೆಯಲ್ಲಿ ಹಿಮಾಚಲ ಪ್ರದೇಶದ ಮಂಡಿ ಕ್ಷೇತ್ರದಿಂದ ಕಂಗನಾ ಕೂಡ ಸ್ಪರ್ಧಿಸಿದ್ದಳು. ಸುಮಾರು ಐದೂವರೆ ಲಕ್ಷ ಮತ ಪಡೆದು ಪ್ರತಿಸ್ಪರ್ಧಿಯನ್ನು ಎಪ್ಪತ್ತೈದು ಸಾವಿರ ಮತಗಳ ಅಂತರದಿಂದ ಸೋಲಿಸಿ ಗೆದ್ದುಬಂದಳು. ನರೇಂದ್ರ ಮೋದಿಯವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸುವ ಸಮಾರಂಭದಲ್ಲಿ ಭಾಗಿಯಾಗಲು ದೆಹಲಿಗೆ ಹೊರಟಿದ್ದಳು. ಚಂಡೀಗಢದ ವಿಮಾನ ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿಗಳು ತಪಾಸಣೆ ನಡೆಸಬೇಕಿತ್ತು. ಆ ಸಂದರ್ಭದಲ್ಲಿ ಕುಲ್ವಿಂದರ್ ಕೌರ್ ಎಂಬಾಕೆ ಕಂಗನಾಳ ಕೆನ್ನೆಗೆ ಹೊಡೆದಿದ್ದಾಳೆ ಎಂಬ ಆರೋಪವಿದೆ.

ವಿದೇಶವಾಸಿ: ಕೇವಲ ಆರೋಪ ಮಾತ್ರವೇ?

ದೇಶವಾಸಿ: ಬರೀ ಆರೋಪ ಮಾತ್ರವಾಗಿರಲು ಸಾಧ್ಯವಿಲ್ಲ. ಈಗ ಇಲೆಕ್ಟ್ರಾನಿಕ್ ಯುಗ, ಸಾಮಾಜಿಕ ಜಾಲತಾಣಗಳೂ ಅಷ್ಟೇ ಮಜಬೂತಾಗಿರುವಾಗ ವಿಷಯ ವೇಗವಾಗಿಯೂ, ನಿಖರವಾಗಿಯೂ ತಿಳಿಯುತ್ತದೆ. ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಸ್ವತಃ ಕಂಗನಾ ಸಾಮಾಜಿಕ ಜಾಲತಾಣದಲ್ಲಿ ಈ ವಿಷಯ ಹಂಚಿಕೊಂಡಿದ್ದಳು. 'ವಿಮಾನನಿಲ್ದಾಣದಲ್ಲಿ ಸಿಬ್ಬಂದಿಯೊಬ್ಬರು ತನ್ನ ಕಪಾಳಕ್ಕೆ ಹೊಡೆದರು. ಅಭಿಮಾನಿಗಳು ಚಿಂತಿಸಬೇಕಾಗಿಲ್ಲ, ನಾನು ಸುರಕ್ಷಿತವಾಗಿದ್ದೇನೆ. ಆದರೆ ಈ ರೀತಿಯ ನಡವಳಿಕೆ ಭಯ ಹುಟ್ಟಿಸುತ್ತದೆ. ದೇಶದ ಭವಿಷ್ಯದ ಕುರಿತು ಚಿಂತೆಯಾಗುತ್ತಿದೆ' ಎಂದು ಹೇಳಿದಳು.

ವಿದೇಶವಾಸಿ: ಹೊಡೆಯುವುದು ತಪ್ಪು ನಿಜ, ಆದರೆ ಕೆನ್ನೆಗೆ ಹೊಡೆದದ್ದಕ್ಕೆ ದೇಶದ ಭವಿಷ್ಯದ ಬಗ್ಗೆ ಯಾಕೆ ಚಿಂತಿಸಬೇಕು? ಕಂಗನಾಳದ್ದು over acting, Over reacting ಅಂತ ಅನ್ನಿಸುವದಿಲ್ಲವೇ?

ದೇಶವಾಸಿ: ಕಂಗನಾ ಓವರ್ ಆಕ್ಟಿಂಗ್ ಮಾಡುತ್ತಿದ್ದರೆ ಅವಳ ಅಭಿನಯಕ್ಕೆ ನಾಲ್ಕು ಬಾರಿ ರಾಷ್ಟ್ರಪ್ರಶಸ್ತಿ ಬರುತ್ತಿರಲಿಲ್ಲ. ಅವಳ ಮಾತು ಹೆಚ್ಚು ಎನ್ನುವುದಕ್ಕಿಂತ ನೇರ ಎಂದು ಯಾಕೆ ಎಣಿಸಬಾರದು? ಅವಳು ಇದುವರೆಗೆ ಆಡಿದ ಮಾತಿನಲ್ಲಿ ಎಷ್ಟು ಸತ್ಯವಿದೆ, ಎಷ್ಟು ಸುಳ್ಳಿದೆ ಎಂದು ಏಕೆ ಲೆಕ್ಕ ಮಾಡಬಾರದು? ಅವಳ ಮಾತಿನಲ್ಲಿ ಸತ್ಯಾಂಶ ಇದೆಯೇ ಎಂದು ಯಾಕೆ ನೋಡಬಾರದು? ತಾನಿರುವ ಕ್ಷೇತ್ರದ ನ್ಯೂನತೆಯ ಬಗ್ಗೆಯೇ ಅವಳು ಸಾಕಷ್ಟು ಬಾರಿ ಹೇಳಿರುವಾಗ, ನಾವೂ ಒಮ್ಮೆ ಯಾಕೆ ಪರಾಮರ್ಶೆ ಮಾಡಬಾರದು? ಚಿತ್ರರಂಗ ಎಂದರೆ ದೇವಲೋಕ, ಅದೇ ಸ್ವರ್ಗ, ಸ್ಫಟಿಕದಷ್ಟು ಶುಭ್ರ ಎನ್ನುವುದನ್ನು ಯಾರೂ ನಂಬುವುದಿಲ್ಲ. ಮೊದಲೂ ಅಷ್ಟೇ, ಈಗಲೂ ಅಷ್ಟೇ. ಎಲ್ಲ ಕ್ಷೇತ್ರದಲ್ಲಿ ಇರುವಂತೆ ಅಲ್ಲಿಯೂ ಸಾಕಷ್ಟು ಕರಾಳ ಛಾಯೆ ಇದೆ. ಸಿನಿಮಾ ಜಗತ್ತಿನಲ್ಲಿ ಸ್ವಲ್ಪ ಹೆಚ್ಚೇ ಇದೆ ಎಂದರೂ ತಪ್ಪಲ್ಲವೇನೋ. ಜನರು ಬಾಯಿ ಬಿಡುವುದಿಲ್ಲ ಎಂದ ಮಾತ್ರಕ್ಕೆ ಅದು ಮಡಿಯಾಗುವುದಿಲ್ಲ. ಅದರಲ್ಲೂ ಬಾಲಿವುಡ್ ಖಂಡಿತ ಪವಿತ್ರ, ಪಾವನವಲ್ಲ. ಹಿಂದಿ ಚಿತ್ರರಂಗದಲ್ಲಿ ಉಳಿದವರಿಗೆ ಹೋಲಿಸಿದರೆ ಅವಳ ಮಾತು ಸ್ವಲ್ಪ ಹೆಚ್ಚು ಎಂದೆನಿಸಿದರೂ ಹುಚ್ಚು ಎಂದು ಅನಿಸುವುದಿಲ್ಲ.

ವಿದೇಶವಾಸಿ: ಉಳಿದವರು ಎಂದರೆ? ಈ ವಿಷಯದ ಕುರಿತಾಗಿ ಯಾರಾದರೂ ಹುಚ್ಚರಂತೆ ಮಾತಾಡಿದ್ದಾರಾ?

ದೇಶವಾಸಿ: ಅಯ್ಯೋ, ಬರೀ ಹುಚ್ಚಲ್ಲ, ತೀರಾ ಹುಚ್ಚು-ಹುಚ್ಚಾಗಿ ಆಡಿದ್ದಾರೆ.

ವಿದೇಶವಾಸಿ: ಯಾರು? ಹೇಗೆ?

ದೇಶವಾಸಿ: ಈ ವಿಷಯಕ್ಕೆ ಸಂಬಂಧಿಸಿದಂತೆ ಮೊದಲು ಪ್ರತಿಕ್ರಿಯೆ ನೀಡಿದ್ದು 'ವಿಶಾಲ' ಎಂದು ಹೆಸರಿಟ್ಟುಕೊಂಡಿರುವ ಸಂಕುಚಿತ ಬುದ್ಧಿಯ 'ದಡ್ಡ'ಲಾನಿ.

ವಿದೇಶವಾಸಿ: ಯಾರು? ಬಾಲಿವುಡ್‌ನ ಖ್ಯಾತ ಸಂಗೀತ ನಿರ್ದೇಶಕನೇ?

ದೇಶವಾಸಿ: ಸಂಗೀತ ನಿರ್ದೇಶಕ ಹೌದು, ಖ್ಯಾತ-ಗೀತ ಏನೂ ಇಲ್ಲ. ಆತ ಚಿತ್ರರಂಗಕ್ಕೆ ಬಂದು ಬರೊಬ್ಬರಿ ಮೂರು ದಶಕವಾಯಿತು. ಈ ಮೂವತ್ತು ವರ್ಷದಲ್ಲಿ ಆತ ಸಂಗೀತ ನಿರ್ದೇಶಕನಾಗಿ ಕೆಲಸ ಮಾಡಿದ್ದು ಅರವತ್ತು ಚಿತ್ರಗಳಿಗೆ. ಅದೂ ಅವನೊಬ್ಬನೇ ಅಲ್ಲ, ಅದರಲ್ಲಿ ಶೇಖರ್ ಎನ್ನುವವರ ಪಾಲೂ ಇದೆ. ಸಂಗೀತ ಸಂಯೋಜನೆ ಮಾಡಿದ ಒಟ್ಟೂ ಹಾಡುಗಳ ಸಂಖ್ಯೆ ಸುಮಾರು ಮುನ್ನೂರು. ಅಷ್ಟೇ ಅಲ್ಲ, ಮೂರು ಚಿತ್ರದಲ್ಲಿ ಅಭಿನಯವನ್ನೂ ಮಾಡಿದ್ದಾನೆ. ಇಪ್ಪತ್ತೈದು ಹಾಡು ಬರೆದಿದ್ದಾನೆ. ಹಿಂದಿಯಲ್ಲಿ ಸುಮಾರು ಇನ್ನೂರು, ಇತರ ಭಾಷೆಯ ಇಪ್ಪತ್ತೈದು ಸೇರಿಸಿ ಒಟ್ಟೂ ಇನ್ನೂರ ಇಪ್ಪತ್ತೈದರಷ್ಟು ಹಾಡನ್ನೂ ಹಾಡಿದ್ದಾನೆ.

ವಿದೇಶವಾಸಿ: ಸಾಕಲ್ಲವೇ! ಖ್ಯಾತನಾಗಲು ಇನ್ನೇನು ಬೇಕು?

ದೇಶವಾಸಿ: ಕೇವಲ ಸಂಖ್ಯೆಯೇ ಮಾನದಂಡ ಅಲ್ಲವಲ್ಲ. ಆತ ಬರೆದ ಅಥವಾ ರಾಗ ಸಂಯೋಜನೆ ಮಾಡಿದ ಹಾಡುಗಳು ಯಾವವು ಎಂದು ಕೇಳಿದರೆ, ಹತ್ತು ಹಾಡು ಕೂಡಲೇ ನೆನಪಾಗುವುದಿಲ್ಲ. ಆತ ಕನ್ನಡದಲ್ಲೂ ಒಂದೆರಡು ಹಾಡು ಹಾಡಿದ್ದಾನಂತೆ. ಯಾವುದು ಗೊತ್ತೇ? ಇಲ್ಲ, ಅದನ್ನೂ ಗೂಗಲ್ ಮಾಡಿಯೇ ನೋಡಬೇಕು. ಇರಲಿ, ಆತನ ಕೆಲಸಕ್ಕೆ ಇದುವರೆಗೆ ಒಂದೇ ಒಂದು ರಾಷ್ಟ್ರಪ್ರಶಸ್ತಿಯಾಗಲಿ, ರಾಜ್ಯಪ್ರಶಸ್ತಿಯಾಗಲಿ ದಕ್ಕಲಿಲ್ಲ, ಫಿಲ್ಮ್ ಫೇರ್ ಕೂಡ ಸಿಗಲಿಲ್ಲ. ಹೋಗಲಿ, ಕೊನೆ ಪಕ್ಷ ಮಿರ್ಚಿ ಮ್ಯೂಸಿಕ್, ಅಪ್ಸರಾದಂತಹ ಸಣ್ಣ-ಪುಟ್ಟ ಪ್ರಶಸ್ತಿಗಳೂ ಸಿಗಲಿಲ್ಲ. ಇತ್ತೀಚಿನ ದಿನಗಳಲ್ಲಿ ರಿಯಾಲಿಟಿ ಶೋಗಳಿಗೆ ತೀರ್ಪುಗಾರನಾಗಿ ಬರುವ ದಡ್ಡಲಾನಿಗಿಂತ ಎಷ್ಟೋ ಪ್ರತಿಭಾನ್ವಿತ ಸ್ಪರ್ಧಿಗಳೇ ವಾಸಿ. ತಲೆಯ ಮೇಲೂ, ಒಳಗೂ ಮಂಡೆ ಇಲ್ಲದ, ಮಂಡೆಪೆಟ್ಟಿನ ಮನುಷ್ಯ ನಿಂತದ್ದು ಯಾರ ಪರವಾಗಿ ಗೊತ್ತೇ? ಕಳೆದ ಎರಡು ದಶಕದಲ್ಲಿ, ಅಭಿನಯಿಸಿದ ನಲವತ್ತು ಚಿತ್ರಗಳ ಪೈಕಿ ನಾಲ್ಕು ರಾಷ್ಟ್ರಪ್ರಶಸ್ತಿ, ಐದು ಫಿಲ್ಮ್ ಫೇರ್ ಪ್ರಶಸ್ತಿ, ಮೂರು ಇಂಟರ್‌ನ್ಯಾಷನಲ್ ಇಂಡಿಯನ್ ಫಿಲ್ಮ್ ಅಕಾಡೆಮಿ ಪ್ರಶಸ್ತಿ, ಸ್ಕ್ರೀನ್, ಝೀ ಸಿನಿಮಾ, ಸೈಮಾ ಪ್ರಶಸ್ತಿಗಳನ್ನೆಲ್ಲ ಪಡೆದ, ಫೋರ್ಬ್ಸ್ ಇಂಡಿಯಾ ಪ್ರತಿವರ್ಷ ಪ್ರಕಟಿಸುವ ನೂರು ಪ್ರಸಿದ್ಧ ವ್ಯಕ್ತಿಗಳ ಪಟ್ಟಿಯಲ್ಲಿ ಆರು ಬಾರಿ ಸ್ಥಾನ ಪಡೆದ, ಪದ್ಮಶ್ರೀ ಪ್ರಶಸ್ತಿ ವಿಜೇತೆ, ಈಗ ಸಂಸದೆಯೂ ಆಗಿರುವ ಕಂಗನಾ ರನೌತ್‌ಳ ಕೆನ್ನೆಗೆ ಹೊಡೆದವಳ ಪರವಾಗಿ. ಈತನ ಹಾಡಿಗಿಂತ ವಿವಾದಗಳು ಜನಪ್ರಿಯವಾದದ್ದೇ ಹೆಚ್ಚು. 'ಪನಾಮಾ ಪೇಪರ್ ಲೀಕ್' ಕೇಸ್ ಗೊತ್ತಲ್ಲ? ದಡ್ಡಲಾನಿ ಒಡೆತನದಲ್ಲಿರುವ ಸನ್ನಿ ಬ್ಲೆಸಿಂಗ್ ಹೋಲ್ಡಿಂಗ್ ಕಂಪನಿ ಬ್ರಿಟಿಷ್ ವರ್ಜಿನ್ ದ್ವೀಪದಲ್ಲಿ ಹಣ ಹೂಡಿಕೆ ಮಾಡಿದ್ದಾಗಿ ಪನಾಮಾ ವರದಿ ಹೇಳಿತ್ತು. ಅದರಲ್ಲಿ ದಡ್ಡಲಾನಿಯ ಜತೆಗೆ ಅವನ ಕುಟುಂಬದವರ ಹೆಸರೂ ಸೇರಿಕೊಂಡಿತ್ತು. ಅದರಲ್ಲಿ ನಡೆಸಿದ ವಹಿವಾಟಿನ ಕುರಿತಂತೆ ಈಗಲೂ ಜಾರಿ ನಿರ್ದೇಶನಾಲಯ ತನಿಖೆ ನಡೆಸುತ್ತಿದೆ. ಈಗ ಏಳೆಂಟು ವರ್ಷದ ಹಿಂದೆ ಆತ ಟ್ವಿಟರ್‌ನಲ್ಲಿ ಜೈನ ಮುನಿ ತರುಣ್ ಸಾಗರ್ ಅವರನ್ನು ಟೀಕಿಸಿ ವಿವಾದಕ್ಕೆ ಗುರಿಯಾಗಿದ್ದ. ಧಾರ್ಮಿಕ ಭಾವನೆಗೆ ಧಕ್ಕೆ ತಂದ ಕಾರಣದಿಂದ ಆತನ ಮೇಲೆ ಎಫ್‌ಐಆರ್ ದಾಖಲಾಯಿತು. ಪಂಜಾಬ್ ಮತ್ತು ಹರಿಯಾಣ ನ್ಯಾಯಾಲಯ ಆತನಿಗೆ ಛೀಮಾರಿ ಹಾಕಿ ದಂಡವನ್ನೂ ವಿಧಿಸಿದವು. ಈ ಕುರಿತಂತೆ ಆತ ಕ್ಷಮೆಯನ್ನೂ ಕೇಳಿದ್ದ.

ವಿದೇಶವಾಸಿ: ಅದೆಲ್ಲ ಇರಲಿ, ಆತ ಮಾಡಿದ್ದಾದರೂ ಏನು?

ದೇಶವಾಸಿ: ಕಂಗನಾಳ ಕೆನ್ನೆಗೆ ಹೊಡೆದ ಭದ್ರತಾ ಸಿಬ್ಬಂದಿ ಉದ್ಯೋಗ ಕಳೆದುಕೊಂಡರೆ ತಾನು ನೌಕರಿ ಕೊಡುವುದಾಗಿ ಹೇಳಿದ್ದಾನೆ. ಅವನಿಗೇ ಸರಿಯಾದ ಒಂದು ಉದ್ಯೋಗವಿಲ್ಲ, ಇತ್ತೀಚೆಗಂತೂ ವರ್ಷಕ್ಕೆ ಎರಡೋ ಮೂರೋ ಸಿನಿಮಾ ಸಿಕ್ಕರೆ ಹೆಚ್ಚು, ಇನ್ನು ಅವಳಿಗೆ ಯಾವ ನೌಕರಿ ಕೊಟ್ಟಾನು? ಏನು ಅವಳಿಂದ ಹಾಡಿಸುತ್ತಾನಾ? ವಾದ್ಯ ನುಡಿಸಲು ಹೇಳುತ್ತಾನಾ? ಅಥವಾ ಮನೆಕೆಲಸದವಳನ್ನಾಗಿ ನೇಮಿಸಿಕೊಳ್ಳುತ್ತಾನಾ? ಗೊತ್ತಿಲ್ಲ, ಆತ ಕೆಲವೊಮ್ಮೆ ಆಮ್ ಆದ್ಮಿ ಪಕ್ಷದ ಪರವಾಗಿ ಮಾತನಾಡಿದ, ಪ್ರಚಾರ ನಡೆಸಿದ ಪುರಾವೆಗಳಿವೆ. ಅದು ಅವರವರ ಇಷ್ಟ. ಒಂದು ರಾಜಕೀಯ ಪಕ್ಷದ ಕಡೆಗೆ ಒಲವು ಇರಬಾರದು ಎಂದೇನೂ ಇಲ್ಲ, ಕೆಲವು ವರ್ಷದ ಹಿಂದೆ ಅದೇ ಪಕ್ಷದ ಅರವಿಂದ ಕೇಜ್ರಿವಾಲ್ ಮುಖ್ಯಮಂತ್ರಿಯಾಗಿರುವಾಗಲೇ ಒಂದು ವಾರದ ಅವಧಿಯಲ್ಲಿ ಎರಡು ಬಾರಿ ಕಪಾಳಕ್ಕೆ ಏಟು ತಿಂದಿದ್ದ. ಹಾಗಾದರೆ ಕೇಜ್ರಿವಾಲನ ಕಪಾಲಕ್ಕೆ ಹೊಡೆದವರಿಗೂ ನೌಕರಿ ಕೊಡಬೇಕು ಅಲ್ಲವೇ? ದಡ್ಡಲಾನಿ ಕೊಡದಿದ್ದರೆ ಬೇಡ, ಬೇರೆಯವರು ಕೊಟ್ಟರೆ? ಈ ರೀತಿಯ ಪ್ರೋತ್ಸಾಹ ಯಾರಿಗೂ ಶೋಭೆ ತರುವಂಥದ್ದಲ್ಲ. ಯಾವುದೇ ಕಾರಣಕ್ಕೂ ಹಿಂಸೆ ಸರಿಯಾದ ಮಾರ್ಗವಲ್ಲ. ಹಿಂಸೆ ಕೊಲೆಯೇ ಆಗಬೇಕೆಂದೇನೂ ಇಲ್ಲ, ಕೆನ್ನೆಗೆ ಹೊಡೆಯುವುದು, ಕಾಲರ್ ಹಿಡಿಯುವುದು, ಮಸಿ ಬಳಿಯುವುದು ಎಲ್ಲವೂ ಹಿಂಸೆಯ ಮುಖಗಳೇ ಅಲ್ಲವೇ?

ವಿದೇಶವಾಸಿ: ನಿಜ. ಇದು ಸಂಸ್ಕಾರವಂತ ಸಮಾಜದ ಲಕ್ಷಣಗಳಲ್ಲ. ಈಗ ಅವನ ಬೋಳು ತಲೆಯ ಮೇಲೆ ಯಾರಾದರೂ ಮೊಟ್ಟೆ ಒಡೆದರೆ? ಅವರಿಗೂ ಉದ್ಯೋಗ ಕೊಡುತ್ತಾನಂತಾ? ಅದೂ ತಪ್ಪು ತಾನೆ? ಇರಲಿ, ಅವನೊಬ್ಬ ಹೇಳಿದರೆ ಏನಾಯಿತು? ಬೇರೆ ಯಾರಾದರೂ ಮಾತಾಡಿದ್ದಾರಾ?

ದೇಶವಾಸಿ: ಪರ-ವಿರೋಧಗಳು ಸಾಕಷ್ಟಿವೆ. ಕಂಗನಾಳ ಹಳೆಯ ಸ್ನೇಹಿತ ಹೃತಿಕ್ ರೋಷನ್, ಶಬನಾ ಆಜ್ಮಿ, ಸೇರಿದಂತೆ ಅನೇಕರು ಈ ವಿಷಯ ಸರಿಯಲ್ಲ ಎಂದಿದ್ದಾರೆ. ಕೆಲವರು ಕೆನ್ನೆಗೆ ಹೊಡೆದವಳ ಪರವಾಗಿಯೂ ಮಾತಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಹೆಚ್ಚೇನೂ ಹೆಸರಿಲ್ಲದ ನಾಯಕಿಯೊಬ್ಬಳು 'ಆಕೆ ಕೆನ್ನೆಗೆ ಹೊಡೆಯಬೇಕಾದರೆ ಅದರ ಹಿಂದೆ ಎಷ್ಟು ನೋವು ಇದ್ದಿರಬಹುದು ಎಂದು ಊಹಿಸಿಕೊಳ್ಳಿ' ಎಂದಿದ್ದಾಳೆ. ಅದೇ ತರ್ಕ ಎಂದಾದರೆ, ಶ್ರೀಲಂಕಾದಲ್ಲಿ ಭಾರತದ ಅಂದಿನ ಪ್ರಧಾನಿ ರಾಜೀವ್ ಗಾಂಧಿಯವರ ತಲೆಗೆ ಬಂದೂಕಿನಿಂದ ಹೊಡೆದ ಶ್ರೀಲಂಕಾದ ಸೈನಿಕನಿಗೆ ಎಷ್ಟು ನೋವಿರಬೇಡ? ರಾಜೀವ್ ಗಾಂಧಿ, ಇಂದಿರಾ ಗಾಂಧಿಯನ್ನು ಹತ್ಯೆ ಮಾಡಿದವರೂ ತಮಾಷೆಗೆ ಎಂದು ಮಾಡಲಿಲ್ಲ ಅಲ್ಲವೇ? ಅವರೂ ನೊಂದಿದ್ದರು ಎಂದರೆ? ಗಾಂಧಿಗೆ ಗುಂಡುಹೊಡೆದ ಗೋಡ್ಸೆಯದ್ದೂ ತಪ್ಪಿಲ್ಲ, ಅವನಿಗೂ ಅಷ್ಟೇ ನೋವಿತ್ತು ಎಂದರೆ? ಅವಮಾನವಾದರೆ, ಮಾನಹಾನಿಯಾದರೆ ದೇಶದಲ್ಲಿ ಕಾನೂನು ಎನ್ನುವುದು ಇದೆಯಲ್ಲ? ಕಾನೂನನ್ನು ಕೈಗೆ ತೆಗೆದುಕೊಳ್ಳುವುದು ಅಥವಾ ಅಂಥವರನ್ನು ಪ್ರೋತ್ಸಾಹಿಸುವುದು ಎಷ್ಟು ಸರಿ? ಅದರಲ್ಲೂ ರಕ್ಷಣೆಗೆ ನಿಂತ ಸಿಬ್ಬಂದಿಯೇ ಈ ರೀತಿ ಮಾಡಿದರೆ? ಅವರ ಮೇಲೆ ಸಾಮಾನ್ಯ ಜನರಿಗೆ ಹೇಗೆ ಭರವಸೆ ಬರಬೇಕು?

ವಿದೇಶವಾಸಿ: ಏನು? ಕಂಗನಾಳ ಕೆನ್ನೆಗೆ ಹೊಡೆದವರು ಭದ್ರತಾ ಸಿಬ್ಬಂದಿಯೇ?

ದೇಶವಾಸಿ: ಅಲ್ಲದೆ ಇನ್ನೇನು? ಇಷ್ಟು ಹೊತ್ತು ಹೇಳಿದ್ದು ಅರೇಬಿಯನ್ ರಾತ್ರಿಗಳ ಕಥೆಯೇ ಅಥವಾ ಅಲಿಬಾಬಾ ಮತ್ತು ಕಳ್ಳರ ಕಥೆಯೇ? ಕಂಗನಾಳ ಕೆನ್ನೆಗೆ ಹೊಡೆದದ್ದು ಕೇಂದ್ರ ಕೈಗಾರಿಕಾ ಭದ್ರತಾ ಪಡೆ(ಸಿಐಎಸ್ಎಫ್)ಯ ಮಹಿಳಾ ಕಾನ್ಸ್‌ಟೇಬಲ್ ಕುಲ್ವಿಂದರ್ ಕೌರ್. ಸಾಮಾನ್ಯ ಜನ ಮತ್ತು ಭದ್ರತಾ ಸಿಬ್ಬಂದಿಗಳ ನಡುವೆ ಅಂತರವಿದೆ. ಭಾರತೀಯ ಸೇನೆ, ಪೊಲೀಸ್, ಅರೆ ಸೇನಾ ಪಡೆ ಅಥವಾ ಇನ್ಯಾವುದೇ ಭದ್ರತಾ ಪಡೆಯಿರಲಿ ಅವರಲ್ಲಿ ಮುಖ್ಯವಾಗಿ ಇದ್ದದ್ದು, ಇರಬೇಕಾದದ್ದು ಶಿಸ್ತು. ಈ ವಿಭಾಗಗಳೆಲ್ಲ ಹೆಸರಾದದ್ದು, ಅವರು ಅಷ್ಟು ಸಕ್ಷಮವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿದ್ದುದೂ ಅವರಲ್ಲಿರುವ ಶಿಸ್ತಿನಿಂದ. ಅವರ ಶಿಸ್ತನ್ನು ಇಡೀ ದೇಶವೇ ಮಾದರಿಯಾಗಿ ಸ್ವೀಕರಿಸುತ್ತದೆ. ಅಪರಾಧಿಗಳನ್ನು, ದಂಗೆಕೋರರನ್ನು ಹದ್ದುಬಸ್ತಿನಲ್ಲಿ ಇಡಬೇಕಾದವರೇ ಹದ್ದು ಮೀರಿದರೆ? ಶಿಸ್ತನ್ನು ಉಲ್ಲಂಘಿಸಿದರೆ ಅದು ಚಿಂತೆಯ ವಿಷಯ ಅಲ್ಲವೇ? ಇದುವರೆಗೆ ಆ ಸಿಬ್ಬಂದಿಯನ್ನು ಅಮಾನತು ಮಾಡಿದ್ದನ್ನು ಬಿಟ್ಟರೆ ಮುಂದೆ ಯಾವ ಕ್ರಮ ಕೈಗೊಳ್ಳಲಾಯಿತು ಎಂದು ತಿಳಿದಿಲ್ಲ. ಭಾರತ ಸರಕಾರಕ್ಕೆ ಇದು ಗಂಭೀರ ವಿಷಯ ಎಂದು ಅನಿಸುವುದಿಲ್ಲವೇ?

ವಿದೇಶವಾಸಿ: ಅವಳು ಹೊಡೆಯಲು ಕಾರಣವಾದರೂ ಏನು?

ದೇಶವಾಸಿ: ಎರಡು- ಮೂರು ವರ್ಷದ ಹಿಂದೆ ನಡೆದ ರೈತ ಚಳುವಳಿಯ ಸಂದರ್ಭದಲ್ಲಿ ಭಾಗವಹಿಸಿದವರ ಕುರಿತು ಕಂಗನಾ ಒಂದು ಟ್ವೀಟ್ ಮಾಡಿದ್ದರಂತೆ. ಅದರಲ್ಲಿ, ನೂರು-ಇನ್ನೂರು ರುಪಾಯಿ ಪಡೆದು ಇವರು ಚಳುವಳಿಗೆ ಕುಳಿತಿದ್ದಾರೆ ಎಂದು ಬರೆದಿದ್ದಳಂತೆ. ಆ ಪ್ರತಿಭಟನೆಯಲ್ಲಿ ಕುಲ್ವಿಂದರ್ ತಾಯಿ ಕೂಡ ಇದ್ದಳಂತೆ. ಆ ಕಾರಣಕ್ಕೆ ಕೆನ್ನೆಗೆ ಹೊಡೆದೆ ಎಂದಿದ್ದಾಳೆ ಕೌರ್.

ವಿದೇಶವಾಸಿ: ರೈತ ಚಳುವಳಿಗೂ ಕುಲ್ವಿಂದರ್‌ಗೂ ಏನು ಸಂಬಂಧ?

ದೇಶವಾಸಿ: ಅವಳ ಸಹೋದರ ರೈತ ಮುಖಂಡ, ಕಿಸಾನ್ ಮಜ್ದೂರ್ ಸಂಘರ್ಷ ಸಮಿತಿಯ ಸಂಘಟನಾ ಕಾರ್ಯದರ್ಶಿ. ಅವಳ ಇನ್ನೊಬ್ಬ ಸಹೋದರನೂ ಭದ್ರತಾ ಸಿಬ್ಬಂದಿಯಂತೆ, ಅಲ್ಲಿಯೇ ಕೆಲಸ ಮಾಡುತ್ತಿದ್ದಾನಂತೆ. ಅದೆಲ್ಲ ಈಗ ತಿಳಿದುಬರುತ್ತಿರುವ ವಿಷಯ.

ವಿದೇಶವಾಸಿ: ಅವಳ ವಿಷಯದಲ್ಲಿ ಮುಂದೆ ಏನಾದೀತು?

ದೇಶವಾಸಿ: ಮುಂದೇನು? ಅವಳು ಬಿಗ್‌ಬಾಸ್‌ಗೆ ಬರಬಹುದು, ಕ್ರಮೇಣ ರಾಜಕೀಯಕ್ಕೂ ಬರಬಹುದು, ಜನ ಅವಳನ್ನು ಗೆಲ್ಲಿಸಲೂಬಹುದು. ಖಲಿಸ್ತಾನ್ ಪರವಾಗಿರುವ, ಕಾಶ್ಮೀರದ ಪ್ರತ್ಯೇಕತೆ ಬಯಸಿದ ಇಬ್ಬರು ಉಗ್ರರನ್ನು ನಮ್ಮ ಜನ ಲಕ್ಷಕ್ಕೂ ಅಧಿಕ ಮತದಿಂದ ಆರಿಸಲಿಲ್ಲವೇ? ಹಾಗಿರುವಾಗ...

ವಿದೇಶವಾಸಿ: ಓಹೋ, ಇತ್ತೀಚಿನ ಬೆಳವಣಿಗೆ ಏನಾದರೂ ಇದೆಯೇ?

ದೇಶವಾಸಿ: ನಿನ್ನೆ ಚಂಡೀಘಡ ಕೇಂದ್ರಾಡಳಿತ ಪ್ರದೇಶದ ಪೊಲೀಸ್ ಸಿಬ್ಬಂದಿಯೊಬ್ಬ ಸಂಸಾರ ಸಮೇತ ಹಿಮಾಚಲದ ಡಾಲ್ಹೌಸಿಗೆ ಪ್ರವಾಸಕ್ಕೆ ಬಂದಿದ್ದನಂತೆ. ಅಲ್ಲಿಯ ಜನ ತಮ್ಮ ಕ್ಷೇತ್ರದ ಸಂಸದೆ ಕಂಗನಾಳ ಕೆನ್ನೆಗೆ ಹೊಡೆದ ಪ್ರದೇಶದಿಂದ ಬಂದ ಅಧಿಕಾರಿ ಎಂಬ ಕಾರಣಕ್ಕೆ ಪ್ರತಿರೋಧ ಪ್ರಕಟಿಸಿದ್ದಕ್ಕೆ ಹಿಂತಿರುಗಿ ಬರಬೇಕಾಯಿತಂತೆ. ಈ ಕುರಿತಂತೆ ಆತ ದೂರು ದಾಖಲಿಸಿದ್ದಾನಂತೆ. ಅದೇ ಸರಿ, ದೂರು ಕೊಡಬೇಕೇ ವಿನಃ ತಾವು ಅಧಿಕಾರಿಗಳು, ತಮ್ಮ ಬಳಿ ಆಯುಧ ಇದೆ ಎಂದು ಅದನ್ನು ಬಳಸಬಾರದು. ಭದ್ರತಾ ಸಿಬ್ಬಂದಿಯವರಲ್ಲಿ ಸಾಮಾನ್ಯವಾಗಿ ಆಯುಧ ಇರುತ್ತದೆ. ಅಂದು ಆ ಕ್ಷಣದಲ್ಲಿ ಕುಲ್ವಿಂದರ್ ಬಳಿ ಆಯುಧ ಇರಲಿಲ್ಲ. ಒಂದು ವೇಳೆ ಅವಳ ಕೈಯಲ್ಲಿ ಬಂದೂಕು ಇದ್ದಿದ್ದರೆ? ಅವಳು ಅದನ್ನು ಬಳಸಿದ್ದರೆ? ಮಾತಿಗೆ-ಟ್ವೀಟಿಗೆ ಏಟು ಎಂದರೆ ಹೇಗೆ? ಹೀಗೇ ಮುಂದುವರಿದರೆ ಇದು ಎಲ್ಲಿ ನಿಂತೀತು? ದಡ್ಡಲಾನಿಯಂಥ ಬುದ್ಧಿವಂತರೇ ಉತ್ತರ ಹೇಳಬೇಕು!

ವಿದೇಶವಾಸಿ: ನಿಜ, ಯಾರೇ ಆದರೂ ಬೇರೆಯವರ ಮನೆಗೆ ಬೆಂಕಿ ಹಚ್ಚಿ ಚಳಿ ಕಾಯಿಸಿಕೊಳ್ಳಬಾರದು. ಹಾಗೆಯೇ, ಕರ್ತವ್ಯ ನಿರ್ವಹಣೆಗೆ ಭಾವನೆಗಳು ಅಡ್ಡಿಯಾಗಬಾರದು. ಸ್ವಾರ್ಥದ ಲವಲೇಶವೂ ಕರ್ತವ್ಯದಲ್ಲಿ ಇಣುಕಿ ನೋಡಬಾರದು. ಪ್ರೀತಿ, ಪ್ರೇಮ, ಕಾಮ, ವಾತ್ಸಲ್ಯ, ಸಿಟ್ಟು, ಸೇಡು, ಸೆಡವು, ಸಂಬಂಧ, ಬೇಸರ ಯಾವುದೂ ಕರ್ತವ್ಯಕ್ಕೆ ಅಡ್ಡಬರಬಾರದು. ಅದನ್ನೆಲ್ಲ ಬಿಟ್ಟು ಸಮವಸ್ತ್ರ ಧರಿಸಬೇಕು. ಉಳಿದದ್ದನ್ನು ಕಾನೂನು ಪ್ರಕಾರ ಬಗೆಹರಿಸಿಕೊಳ್ಳಬೇಕು.

ಪ್ರಸ್ತುತ

ಅಜಯ್ ಅಂಗಡಿ

ಭಾಜಪದ ಅಂತರಿಕ ವ್ಯವಸ್ಥೆ ಬದಲಾಗಬೇಕಿದೆ

ಹದಿನೆಂಟನೇ ಲೋಕಸಭಾ ಚುನಾವಣೆ ಮುಗಿದು, ಫಲಿತಾಂಶ ಕೂಡ ಬಂದಿದೆ. ಭಾರತೀಯ ಜನತಾ ಪಾರ್ಟಿ ಏಕಾಂಗಿಯಾಗಿ ಬಹುಮತಕ್ಕಿಂತ ಕೊಂಚ ಕಡಿಮೆ ಕ್ಷೇತ್ರಗಳಲ್ಲಿ ಗೆದ್ದರೂ ಎನ್‌ಡಿಎ ಮಿತ್ರಪಕ್ಷಗಳೊಂದಿಗೆ ಸತತ ಮೂರನೇ ಬಾರಿಗೆ ಅಧಿಕಾರದ ಗದ್ದುಗೆಯೇರಿದೆ. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗಿ ಹಳೆಯ ಕಾಂಗ್ರೆಸಿನ ನೆ ಇತಿಹಾಸವನ್ನು ಧೂಳೀಪಟ ಮಾಡಿದ್ದಾರೆ. ಇವೆಲ್ಲವೂ ಭಾರತೀಯರು ಹೆಮ್ಮೆ ಪಡುವಂತಹ ಸಂಗತಿಗಳೇ. ಆದರೆ ಭಾರತೀಯ ಜನತಾ ಪಕ್ಷ ಇನ್ನು ಮುಂದಾದರೂ ತುಸು ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಿರುವುದು ಅನಿವಾರ್ಯ. ದೇಶದ ಗದ್ದುಗೆ ಏರಲು ಯಾವ ರಾಜ್ಯದಲ್ಲಿ ಲೀಡ್ ಬರಬೇಕಿತ್ತೋ ಆ ರಾಜ್ಯಗಳೇ ಬಿಜೆಪಿ ಪಾಳಯಕ್ಕೆ ಕೊಡಲಿ ಪೆಟ್ಟು ಕೊಟ್ಟಿದ್ದು ಯಾರೂ ಊಹಿಸದ ಸಂಗತಿ. ಭಾಜಪದ ಭದ್ರಕೋಟೆಯಾದ ಉತ್ತರ ಪ್ರದೇಶದಲ್ಲೇ ಪಕ್ಷಕ್ಕೆ ಹಿನ್ನಡೆಯಾಗಿರುವುದು ದುಃಖಕರ. ಕಾಂಗ್ರೆಸ್ ನೀಡುತ್ತಿರುವ ಅಸಂಬದ್ಧ ಆಮಿಷಗಳಿಗೆ ಒಂದಷ್ಟು ಜನತೆ ಬಲಿಯಾದರೆ ಬಿಜೆಪಿಯಲ್ಲಿನ ಅಂತರಿಕ ಕಚ್ಚಾಟಗಳು, ಜನವಿರೋಧಿ ಅಲೆಯಿರುವ ಅಭ್ಯರ್ಥಿಗಳಿಗೆ ಟಿಕೆಟ್ ಹಂಚಿಕೆ ಮಾಡಿದ್ದು ಇನ್ನೊಂದೆಡೆ ಬಿಜೆಪಿಯ ಸೋಲಿಗೆ ಮುಖ್ಯ ಕಾರಣ. ಕರ್ನಾಟಕದ ಹಲವೆಡೆ ಬಿಜೆಪಿಯ ಹಿನ್ನಡೆಗೆ ಇದೇ ಪ್ರಬಲವಾದ ಕಾರಣ.

ಸತತ ಎರಡು ಬಾರಿ ನರೇಂದ್ರ ಮೋದಿ ಸ್ಪಷ್ಟ ಬಹುಮತದಿಂದ ಸರಕಾರ ರಚಿಸಿ ಆಡಳಿತ ಯಂತ್ರವನ್ನು ಶರವೇಗದಲ್ಲಿ ಓಡಿಸಿದ್ದು ವಿಪಕ್ಷಗಳಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳ ಸಾಲು ಸಾಲು ಹಗರಣಗಳನ್ನು ಬಯಲಿಗೆಳೆದಾಗ ಚುನಾವಣೆ ಗೆಲ್ಲಲು ಅವರು ಹೂಡಿದ ರಣತಂತ್ರವೇ ಟಕಾಟಕ್ ಗ್ಯಾರಂಟಿಗಳು. ಕರ್ನಾಟಕದಲ್ಲಿ ಗ್ಯಾರಂಟಿಯ ಅನಾಹುತ ಸಾಲದೆಂಬಂತೆ ದೇಶಕ್ಕೂ ಅದನ್ನು ವಿಸ್ತರಿಸುವ ಹಂಬಲದಲ್ಲಿ ಕಾಂಗ್ರೆಸ್ ಉರುಳಿಸಿದ ದಾಳ ಉತ್ತರಪ್ರದೇಶ ಮತ್ತು ರಾಜಸ್ಥಾನ ಇತರೆಡೆ ಭಾಜಪಕ್ಕೆ ಮುಳುವಾಯಿತೆನ್ನಬಹುದು. ಇನ್ನು ಮಹಾರಾಷ್ಟ್ರದಲ್ಲಿ ಬಿಜೆಪಿ ಶಿವಸೇನೆಯನ್ನು ಮತ್ತು ಎನ್ಸಿಪಿಯನ್ನು ಒಡೆದ ಪರಿಣಾಮವಾಗಿ ಅವರಿಗೆ ಹಿನ್ನಡೆಯಾಗಿರುವುದು ಅಸಂಭವವೇನಲ್ಲ. ಇಷ್ಟು ದಿನ ಸ್ವತಂತ್ರ ನಿರ್ಧಾರ ಕೈಗೊಳ್ಳುತ್ತಿದ್ದ ಮೋದಿ ಈಗ ಅತ್ತ ಇತ್ತ ನೋಡುವಂತಾಗಿದೆ. ಕೆಲವು ಕಾಯ್ದೆ ಕಾನೂನುಗಳನ್ನು ಈಗಲೇ ಜಾರಿ ಮಾಡುವುದು ಅಸಾಧ್ಯವೂ ಆಗಬಹುದು. ಅದರಲ್ಲೂ ಏಕರೂಪ ನಾಗರಿಕ ಸಂಹಿತೆಯನ್ನು ಮುಟ್ಟುವುದು ಸುಲಭದ ಮಾತಲ್ಲ.

ಹೊಸ ಮನ್ವಂತರಕ್ಕೆ ತೆರೆದುಕೊಳ್ಳುತ್ತಿರುವ ಭಾರತದ ಬಾಗಿಲನ್ನು ಮುಚ್ಚಿ ಮತ್ತದೇ ಹಳೆಯ ಹಾದಿಯಲ್ಲೇ ಬಿದ್ದು ಒದ್ದಾಡಿಸಲು ಪಣ ತೊಟ್ಟಂತಿವೆ ಈ ಎಡಪಕ್ಷಗಳು. ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ಅಟ್ಟಹಾಸ, ಪಂಜಾಬಿನಲ್ಲಿ ಆಪ್ ಬೆಂಬಲಿತ ಖಲಿಸ್ತಾನಿಗಳ ಪ್ರತ್ಯೇಕತಾವಾದ. ಇವೆಲ್ಲ ಘಟನೆಗಳಿಗೆ ಕಾಂಗ್ರೆಸ್ಸಿನ ಮೌನ ಸಮ್ಮತಿ. ಇವೆಲ್ಲವೂ ಬಂದ್ ಆಗಬೇಕೆಂದರೆ ಭಾಜಪ ಎಚ್ಚೆತ್ತುಕೊಳ್ಳಲೇಬೇಕಿದೆ. ಕುಟುಂಬ ರಾಜಕಾರಣವನ್ನು ಖಡಾಖಂಡಿತವಾಗಿ ಮೋದಿ ವಿರೋಧಿಸುತ್ತಾರೆ. ಆದರೆ ತಮ್ಮದೇ ಪಕ್ಷದಲ್ಲಿನ ಕೆಲವು ಕುಟುಂಬಗಳ ಹಿಡಿತದಿಂದ ವಿಧಾನಸಭಾ ಅಥವಾ ಲೋಕಸಭಾ ಕ್ಷೇತ್ರಗಳನ್ನು ಮುಕ್ತ ಮಾಡುವುದು ಅವರಿಗಿನ್ನೂ ಆಗಿಲ್ಲ. ಮೊಟ್ಟಮೊದಲು ನರೇಂದ್ರ ಮೋದಿ ಆ ನಿಟ್ಟಿನಲ್ಲಿ ನಿರ್ಧಾರ ಕೈಗೊಂಡು ಭಾಜಪದಲ್ಲಿನ ಕುಟುಂಬಗಳ ಹಿಡಿತವನ್ನು ಕಿತ್ತೊಗೆಯುವುದು ಸದ್ಯಕ್ಕೆ ಅತಿ ಅವಶ್ಯಕ. ಮತ್ತೆ ಮತ್ತೆ ಮೋದಿ ಹೆಸರಿನಲ್ಲಿ ಮಾತ್ರ ಗೆಲ್ಲುವ ಹಳೆಯ ತಲೆಗಳನ್ನು ಬದಿಗೆ ಸರಿಸಿ, ಪಕ್ಷದ ಪರ ಒಲವಿರುವ ಜನಸಾಮಾನ್ಯರೂ ಚುನಾಯಿತರಾಗುವಂತೆ ಮಾಡಿದರೇನೆ ಒಳ್ಳೆಯದು. ಭಾಜಪದಲ್ಲಿ ಆಗಬೇಕಾಗಿರುವ ರಿಪೇರಿ ಕೆಲಸ ಬಹಳಷ್ಟಿದೆ. ಹೀಗಾದಲ್ಲಿ ಮಾತ್ರ ಮುಂದಿನ ದಿನಗಳಲ್ಲಿ ಮತದಾರ ಭಾಜಪದ ಕೈಯನ್ನು ಭದ್ರಗೊಳಿಸಬಲ್ಲ.

ಹೀಗಾದರೆ ಪ್ರಜಾಪ್ರಭುತ್ವದ ರಕ್ಷಣೆ ಹೇಗೆ ಸಾಧ್ಯ?

ವಿಶ್ಲೇಷಣೆ

ಶಶಿಕುಮಾರ್. ಕೆ

vveditoped@gmail.com

18ನೇ ಲೋಕಸಭಾ ಚುನಾವಣೆ ಮುಕ್ತಾಯವಾಗಿ ಸರಕಾರವು ರಚನೆಯಾಗಿ ಖಾತೆಗಳ ಹಂಚಿಕೆಯು ಸಹ ಮುಗಿದಿದ್ದು ಇನ್ನೇನು ಮೊದಲನೇ ಅಧಿವೇಶನ ನಡೆಯುವುದು ಬಾಕಿ ಇದೆ. ಆದರೆ ಈ ಚುನಾವಣೆಯ ಫಲಿತಾಂಶದ ನಂತರ ಲೋಕಸಭೆಗೆ ಆಯ್ಕೆಯಾದ ವ್ಯಕ್ತಿಗಳು ಮತ್ತು ಕೆಲವು ಘಟನೆಗಳನ್ನು ಗಮನಿಸುತ್ತಾ ಹೋದರೆ ನಿಜಕ್ಕೂ ಆಘಾತವೆನಿಸುತ್ತದೆ. ಬಿಜೆಪಿ ಗೆದ್ದರೆ ದೇಶದ ಪ್ರಜಾಪ್ರಭುತ್ವ, ಸಂವಿಧಾನವನ್ನು ನಾಶ ಮಾಡುತ್ತಾರೆ ಎಂದು ಬಾಯಿ ಬಡಿದುಕೊಳ್ಳುತ್ತಿದ್ದ so called ಪ್ರಜಾಪ್ರಭುತ್ವ ರಕ್ಷಕರು ಈಗ ನಮಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಬಾಯಿ ಮುಚ್ಚಿಕೊಂಡು ತೆಪ್ಪಗಿದ್ದಾರೆ.

ಮೊದಲನೆಯದಾಗಿ ನಾನು ಹೇಳಲು ಹೊರಟಿರುವುದು ಈ ಬಾರಿ ಸಂಸತ್ತಿಗೆ ಮೂರು ಜನ ಭಯೋತ್ಪಾದನೆಯ ಹಿನ್ನೆಲೆಯುಳ್ಳ ಪ್ರತ್ಯೇಕತಾವಾದಿಗಳು ಆಯ್ಕೆಯಾಗಿದ್ದಾರೆ. ದುರಂತವೆಂದರೆ ಇವರಲ್ಲಿ ಇಬ್ಬರು ಜೈಲಿನಲ್ಲಿದ್ದುಕೊಂಡೇ ಚುನಾವಣೆಗೆ ಸ್ಪರ್ಧಿಸಿದ್ದರು. ಇವರು ಒಂದು ದಿನವೂ ಸಹ ಪ್ರಚಾರ ನಡೆಸಿಲ್ಲ ಆದರೂ ಸಹ ಜನ ಇವರನ್ನು ಸಂಸತ್ತಿಗೆ ಆಯ್ಕೆ ಮಾಡಿದ್ದಾರೆ ಎಂದರೆ ಇದಕ್ಕಿಂತಲೂ ದುರ್ದೈವದ ಸಂಗತಿ ಬೇರೆ ಇನ್ನೇನಿದೆ. 2001ರಲ್ಲಿ ಸಂಸತ್ತಿನ ಮೇಲೆ ಭಯೋತ್ಪಾದಕರು ದಾಳಿ ನಡೆಸಿದ್ದರು. ಆದರೆ ಈಗ ಭಯೋತ್ಪಾದನಾ ಹಿನ್ನೆಲೆಯುಳ್ಳವರೇ ಸಂಸತ್ತಿಗೆ ಪ್ರವೇಶಿಸುತ್ತಿದ್ದಾರೆ ಎಂದರೆ ನಮ್ಮ ಸಂವಿಧಾನದ ಕೆಲವು ಲೂಪ್ ಹೋಲ್‌ಗಳನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ. ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಕ್ಷೇತ್ರದಲ್ಲಿ ಅಲ್ಲಿನ ಮಾಜಿ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಸ್ಪರ್ಧಿಸಿದ್ದರು. ಅವರ ಪ್ರತಿಸ್ಪರ್ಧಿಯಾಗಿ ಸ್ಪರ್ಧಿಸಿದ್ದ ಅಬ್ದುಲ್ ರಶೀದ್ ಶೇಕ್ ಪ್ರಸ್ತುತ ತಿಹಾರ್ ಜೈಲಿನಲ್ಲಿದ್ದು , ಈತ ಪಕ್ಷೇತರನಾಗಿ ಸ್ಪರ್ಧಿಸಿ ಬರೋಬ್ಬರಿ 2 ಲಕ್ಷ ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾನೆ. ಈತನು ಒಟ್ಟು ನಾಲ್ಕು ಲಕ್ಷಕ್ಕೂ ಅಧಿಕ ಮತಗಳನ್ನು ಪಡೆದಿದ್ದನು ಎಂದರೆ ಜನರ ಮನಸ್ಥಿತಿ ಹೇಗೆ ಇದೆ ಎಂಬುದಕ್ಕೆ ಇದೇ ಉದಾಹರಣೆ. ಈತ ಪ್ರತ್ಯೇಕತಾವಾದಿಗಳ ಜೊತೆ ಸೇರಿಕೊಂಡು ಜಮ್ಮು ಮತ್ತು ಕಾಶ್ಮೀರದ ವಿವಿಧ ಕಡೆ ಕೂಲಿಗಾಗಿ ಕಲ್ಲು ತೂರಾಟ ನಡೆಸುವ ಯುವಕರಿಗೆ ಹಣ ಹಂಚುವುದರಿಂದ ಹಿಡಿದು, ಐಎಸ್‌ಐ ಖಲಿಸ್ತಾನಿಗಳ ಜೊತೆ ಸೇರಿ ಪಾಕಿಸ್ತಾನದ ಉಗ್ರರಿಗೆ ಭಾರತದೊಳಕ್ಕೆ ನುಸುಳಲು ನೆರವು ನೀಡುತ್ತಿದ್ದ ಎಂಬಂತಹ ಗಂಭೀರ ಆರೋಪಗಳಿವೆ. ಎನ್‌ಐಎ ಈತನನ್ನು ಬಂಧಿಸಿ ಈತನ ಎಲ್ಲ ಖಾತೆಗಳನ್ನು ಬಂದ್ ಮಾಡಿ, ಇವನನ್ನು ತಿಹಾರ್ ಜೈಲಿಗೆ ಅಟ್ಟಿದ್ದಾರೆ. ಕಾಶ್ಮೀರ್ ಅವಾಮಿ ಇತ್ತೇಹಾದ್ ಪಾರ್ಟಿ ಈತನ ಪಕ್ಷದ ಹೆಸರು. ಈ ಪಕ್ಷದ ಮುಖಾಂತರ 2008 ಮತ್ತು 2014ರಲ್ಲಿ ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಗೆ ಸ್ಪರ್ಧಿಸಿ ಗೆದ್ದು ಶಾಸಕನಾಗಿದ್ದನು. 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿಯೂ ಈತ ಸ್ಪರ್ಧಿಸಿ ಸೋಲನ್ನ ಅನುಭವಿಸಿದ್ದನು. ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿಯನ್ನು ರದ್ದುಪಡಿಸಿದ್ದಷ್ಟೇ ಸಾಲದು ಅಲ್ಲಿನ ಜನರ ಮನಸ್ಥಿತಿಯನ್ನು ಭಾರತದ ಕಡೆಗೆ ತಿರುಗಿಸಲು ಇನ್ನೆಷ್ಟು ವರ್ಷ ಬೇಕಾಗಬಹುದು ಎಂಬುದೇ ಯಕ್ಷ ಪ್ರಶ್ನೆಯಾಗಿದೆ.

ಮತ್ತೊಬ್ಬ ಪ್ರತ್ಯೇಕತಾವಾದಿ ಅಮೃತ್ ಪಾಲ್ ಸಿಂಗ್ ಪಂಜಾಬಿನ ಕಡೂರ್ ಸಾಹೀಬ್ ಎಂಬ ಲೋಕಸಭಾ ಕ್ಷೇತ್ರದಲ್ಲಿ 1,97,000 ಮತಗಳ ಅಂತರದಲ್ಲಿ ಇವನು ಗೆದ್ದಿದ್ದಾನೆ, ಅದು ಜೈಲಿನಲ್ಲಿ ಇದ್ದುಕೊಂಡು. ಪ್ರಸ್ತುತ ಇವನು ಅಸ್ಸಾಂನ ದಿಬ್ರುಗಡ್ ಜೈಲಿನಲ್ಲಿ ಬಂದಿಯಾಗಿದ್ದಾನೆ. ಇವನು ತಾನು ಜೂನಿಯರ್ ಬಿಂದ್ರನ್ ವಾಲಾ ಎಂದು ಹೇಳಿಕೊಂಡು ಅನಾಚಾರಗಳನ್ನು ಮಾಡಿದಂತವನು. 2020ರಲ್ಲಿ ದೆಹಲಿಯ ಹೊರಗೆ ರೈತರು ಹೆದ್ದಾರಿಯನ್ನು ಬಂದ್ ಮಾಡಿ ಒಂದು ವರ್ಷದ ಕಾಲ ಪ್ರತಿಭಟನೆ ನಡೆಸಿದಾಗ ದುಬೈನಿಂದ ಇವನು ಭಾರತಕ್ಕೆ ಬರುತ್ತಾನೆ. ಆಗಲೇ ರೈತ ಪ್ರತಿಭಟನೆಗಳಿಗೆ ಖಲಿಸ್ತಾನಿಗಳ ಲಿಂಕ್ ಆರಂಭವಾಗುವುದು. ದೀಪ್ ಸಿದು ಎಂಬ ಖಲಿಸ್ತಾನಿ ಹೋರಾಟಗಾರನ 'ವಾರೀಸ್ ದೆ ಪಂಜಾಬ್' ಎಂಬ ಸಂಘಟನೆಯನ್ನು ತನ್ನ ಸುಪರ್ದಿಗೆ ತೆಗೆದುಕೊಂಡು ಪಂಜಾಬಿನಾದ್ಯಂತ ಅಲ್ಲಿನ ಯುವಕರನ್ನು ಮಾದಕ ವ್ಯಸನ ಮುಕ್ತರನ್ನಾಗಿ ಮಾಡಲು ಜಾಗೃತಿ ಮೂಡಿಸುತ್ತೇನೆ ಎಂದು ಹೇಳಿ ಈತ ಮಾಡುತ್ತಿದ್ದದ್ದು ಮಾತ್ರ ಮನೆಹಾಳು ಕೆಲಸ. ಪಂಜಾಬಿನ ಯುವಕರನ್ನು ಭಾರತದ ಸಾರ್ವಭೌಮತೆ ವಿರುದ್ಧ ಎತ್ತಿಗಟ್ಟುವ ಕೆಲಸ ಮಾಡಿದನು. ಭಾರತದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ಬಹಿರಂಗವಾಗಿ ಕರೆ ನೀಡಿದ್ದನು. ಈತನ ನೇತೃತ್ವದಲ್ಲಿ 2023ರಲ್ಲಿ ಪಂಜಾಬಿನ ಹೊರವಲಯದ ಪೊಲೀಸ್ ಠಾಣೆಯಲ್ಲಿದ್ದಂತಹ ಅತ್ಯಾಚಾರದ ಆರೋಪಿಯನ್ನು ಬಿಡಿಸಿಕೊಳ್ಳಲು ತನ್ನ ಸಹಸ್ರಾರು ಜನ ಸಹಚರರೊಂದಿಗೆ ಶಸ್ತ್ರಾಸ್ತ್ರಧಾರಿಗಳಾಗಿ ಬಂದು ಠಾಣೆಯ ಮೇಲೆ ದಾಳಿ ಮಾಡಿ ಆತನನ್ನು ಬಿಡಿಸಿಕೊಂಡು ಹೋದ ಘಟನೆಯನ್ನು ದೇಶ ಇನ್ನೂ ಮರೆತಿಲ್ಲ. ಈತನ ಮೇಲೆ national security act ಅಡಿಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಲಾಯಿತು. ಇವನನ್ನು ಬಂಧಿಸುವ ವೇಳೆ ಈತನು ವ್ಯಸನ ಮುಕ್ತ ಕೇಂದ್ರಗಳೆಂದು ಆರಂಭಿಸಿದ್ದ ಕೇಂದ್ರಗಳಲ್ಲಿ ಇದ್ದದ್ದು ಮಾತ್ರ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳು. ಇಂತಹ ಅಪಾಯಕಾರಿಯದಂತಹ ವ್ಯಕ್ತಿ ಈಗ ಸಂಸತ್ ಪ್ರವೇಶಿಸುತ್ತಿದ್ದಾನೆ.

ಪಂಜಾಬಿನ ಫರೀದ್ ಕೋಟ್ ಲೋಕಸಭಾ ಕ್ಷೇತ್ರದಲ್ಲಿ ಸರಬ್ಜಿತ್ ಸಿಂಗ್ ಕಾಲ್ಸಾ ಎಂಬುವವನು 70,000 ಮತಗಳ ಅಂತರದಿಂದ ಪಕ್ಷೇತರರಾಗಿ ಗೆಲುವು ಸಾಧಿಸಿದ್ದಾನೆ. ಈತನು ಇಂದಿರಾ ಗಾಂಧಿಯ ಹಂತಕ ಬಿಯಾಂತ್ ಸಿಂಗ್‌ನ ಮಗ. ಈತ ಸದಾ ಖಲಿಸ್ತಾನಿಗಳ ಪರ ಮಾತನಾಡುವ, ದೇಶದ ಸಮಗ್ರತೆಗೆ ಗಂಡಾಂತರಕಾರಿಯಾಗಿರುವ ಈತ, ಸಿಖ್ ಯುವಕರ ಮನಸ್ಸು ಕೆಡಿಸಿ ಚುನಾವಣೆ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾನೆ. ಈ ಮೂವರು ಸಹ ಈಗ ಸಂಸತ್ತು ಪ್ರವೇಶಿಸುತ್ತಾರೆ. ದೇಶಕ್ಕೆ ಸಂಬಂಧಿಸಿದಂತಹ ಸಾಕಷ್ಟು ದಾಖಲೆಗಳು ಇವರ ಬಳಿಗೆ ಬರುತ್ತವೆ. ದೇಶಕ್ಕೆ ಸಂಬಂಧಿಸಿದ ಕಾನ್ಫಡೆನ್ಶಿಯಲ್ ವಿಷಯಗಳನ್ನು ಇವರು ಎಂತೆಂತಹ ಅನಾಚಾರಗಳಿಗೆ ಬಳಸಿಕೊಳ್ಳಬಹುದು ಎಂಬುದನ್ನು ನೆನೆಸಿಕೊಂಡರೆ ಭಯವಾಗುತ್ತದೆ.

ಇವರು ನಮ್ಮ ದೇಶದ ಪ್ರಜಾಪ್ರಭುತ್ವ, ನಮ್ಮ ದೇಶದ ಸಂವಿಧಾನವನ್ನೇ ಬಳಸಿಕೊಂಡು ನಮ್ಮದೇ ದೇಶದಲ್ಲಿ ಅರಾಜಕತೆ ಸೃಷ್ಟಿಸುವ ಆತಂಕವಿದೆ. ಎಂತಹ ಅಪಾಯಕಾರಿ ಆದಂತಹ ಸಂದೇಶವನ್ನು ಈ ಮೂರು ಕ್ಷೇತ್ರಗಳ ಮತದಾರರು ದೇಶಕ್ಕೆ ನೀಡಿದ್ದಾರೆ. ಇಂತಹ ಸೂಕ್ಷ್ಮ ವಿಚಾರಗಳು ಬಂದಾಗ so calledಪ್ರಜಾಪ್ರಭುತ್ವ ರಕ್ಷಕರು ಬಾಯಿಗೆ ಬೀಗ ಹಾಕಿಕೊಂಡು ಕೂತಿರುತ್ತಾರೆ.

ಈ ಹಿಂದೆಯೂ ಸಹ ಇಂತಹ ಘಟನೆಗಳು ನಡೆದಿವೆ. ಉತ್ತರ ಪ್ರದೇಶದಲ್ಲಿ ಕುಖ್ಯಾತ ಗ್ಯಾಂಗ್ ಸ್ಟಾರ್ ಅಜಮ್ ಖಾನ್‌ನನ್ನು ಉತ್ತರ ಪ್ರದೇಶದಲ್ಲಿ 2017ರಲ್ಲಿ ಯೋಗಿ ಆದಿತ್ಯನಾಥ್ ಸರಕಾರ ಬಂದ ನಂತರ ಈತನನ್ನು ಜೈಲಿಗೆ ಅಟ್ಟಲಾಗಿತ್ತು. ಆದರೆ 2021 ರಲ್ಲಿ ನಡೆದಂತಹ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಈತನು ಜೈಲಿನಲ್ಲಿ ಇದ್ದುಕೊಂಡೇ ರಾಂಪುರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವನ್ನು ಸಹ ಸಾಧಿಸಿದ್ದನು. ಆದರೆ ನಂತರ ಈತನ ದುಷ್ಕೃತ್ಯಗಳು ಸಾಬೀತಾಗಿ ಕೋರ್ಟ್ ತೀರ್ಪಿನಲ್ಲಿ ಈತನಿಗೆ ಆರು ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಲಾಯಿತು. ಆಗ ಈತನ ವಿಧಾನಸಭಾ ಸ್ಥಾನವು ಸಹ ರದ್ದಾಯಿತು. ಒಂದು ವೇಳೆ ವಿಧಾನಸಭೆ ಪ್ರವೇಶಿಸಿದ್ದರೆ ಇಡೀ ದೇಶಕ್ಕೆ ಎಂತಹ ಸಂದೇಶ ಹೋಗುತ್ತಿತ್ತು?

ಇದಕ್ಕಿಂತಲೂ ಘೋರವಾದಂತಹ ಸಂಗತಿ ಏನೆಂದರೆ ಲೋಕಸಭಾ ಚುನಾವಣೆಯ ನಂತರ ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ಭುಗಿಲೆದ್ದಿದ್ದು ಬಿಜೆಪಿಗೆ ಬೆಂಬಲ ನೀಡಿದ್ದರು ಎಂಬ ಕಾರಣಕ್ಕಾಗಿ ಬಿಜೆಪಿ ಕಾರ್ಯಕರ್ತರ ಮೇಲೆ ಟಿಎಂಸಿ ಕಾರ್ಯಕರ್ತರು ದಾಳಿ ನಡೆಸುತ್ತಿದ್ದಾರೆ. ಇವರಿಗೆ ಹೆದರಿ ಪ್ರಾಣಭಯದಿಂದ ಸುಮಾರು 4000 ಬಿಜೆಪಿ ಕಾರ್ಯಕರ್ತರು ಬಿಜೆಪಿ ಕಚೇರಿಯಲ್ಲಿಯೇ ಆಶ್ರಯ ಪಡೆದಿದ್ದಾರೆ. ಈ ಕುರಿತು ರಾಜ್ಯಪಾಲರಿಗೆ ಮನವಿ ಸಲ್ಲಿಸಲು ಹೋಗಿದ್ದ ಪಶ್ಚಿಮ ಬಂಗಾಳದ ವಿರೋಧ ಪಕ್ಷದ ನಾಯಕ ಸುಬೇಂದು ಅಧಿಕಾರಿಯನ್ನು ರಾಜ ಭವನ ಪ್ರವೇಶಿಸದಂತೆ ಪೊಲೀಸರು ತಡೆದಿದ್ದಾರೆ. ಚುನಾವಣಾ ಸಂದರ್ಭದಲ್ಲಿ ಮೋದಿ ಅಧಿಕಾರಕ್ಕೆ ಬಂದರೆ ಸಂವಿಧಾನವನ್ನೇ ಬದಲಾಯಿಸುತ್ತಾರೆ, ಪ್ರಜಾಪ್ರಭುತ್ವ ನಾಶವಾಗುತ್ತದೆ ಎಂದು ಗಂಟಲು ಹೋಗುವಂತೆ ಕಿರುಚುತ್ತಿದ್ದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸರಕಾರವೇ ಮುಂದೆ ನಿಂತು ಈ ದುಷ್ಟ ಕಾರ್ಯಗಳನ್ನು ನಡೆಸುತ್ತಿದೆ. ಚುನಾವಣಾ ಸಂದರ್ಭದಲ್ಲಿ ನಾನು ಪ್ರಜಾಪ್ರಭುತ್ವದ ರಕ್ಷಕ ಎಂದು ಕೈಯಲ್ಲಿ ಕೆಂಪು ಪುಸ್ತಕ (ಇದನ್ನು ಚೀನಾ ಸಂವಿಧಾನ ಎಂತಲೂ ಕೆಲವರು ಹೇಳುತ್ತಿದ್ದಾರೆ) ಹಿಡಿದು ಭಾಷಣವನ್ನು ಮಾಡುತ್ತಿದ್ದ ಪ್ರಸ್ತುತ ಲೋಕಸಭೆಯ ವಿರೋಧ ಪಕ್ಷದ ನಾಯಕನ ರೇಸ್ ನಲ್ಲಿರುವ ವ್ಯಕ್ತಿಗೆ ಇದ್ಯಾವುದೂ ಸಹ ಕಣ್ಣಿಗೆ ಕಾಣುತ್ತಿಲ್ಲ. ಕಂಡರೂ ಸಹ ನಮ್ಮ ಒಕ್ಕೂಟದ ಪಕ್ಷ ಅಧಿಕಾರದಲ್ಲಿರುವ ರಾಜ್ಯ, ಇಂತಹ ಅಸಡ್ಡೆ. ಒಂದು ವೇಳೆ ಇವರ ಒಕ್ಕೂಟವೇ ಅಧಿಕಾರಕ್ಕೆ ಬಂದಿದ್ದರೆ ದೇಶದಾದ್ಯಂತ ಇಂತಹ ಹಿಂಸಾಚಾರ ಭುಗಿಲೆದ್ದಿದ್ದರೂ ಸಹ ಆಶ್ಚರ್ಯ ಪಡಬೇಕಾಗಿರಲಿಲ್ಲ. ಆದರೆ ದೇವರ ದಯೆಯಿಂದ ಅದು ಆಗಲಿಲ್ಲ. ಈ ಹಿಂದೆಯೂ ಸಹ ಪಶ್ಚಿಮ ಬಂಗಾಳದಲ್ಲಿ ಸಾಕಷ್ಟು ರೀತಿಯ ರಾಜಕೀಯ ಉದ್ದೇಶಗಳಿಗಾಗಿ ಗಲಭೆಗಳು ನಡೆದಿವೆ. 2021ರಲ್ಲಿ ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಟಿಎಂಸಿ ಮತ್ತು ಬಿಜೆಪಿ ನಡುವೆ ಜಿದ್ದಾಜಿದ್ದಿನ ಪೈಪೋಟಿ ಏರ್ಪಟ್ಟಿತ್ತು, ಆದರೆ ಅಂತಿಮವಾಗಿ ಟಿಎಂಸಿ ಚುನಾವಣೆಯಲ್ಲಿ ಗೆಲುವು ಸಾಧಿಸಿತು. ಆದರೆ ಫಲಿತಾಂಶದ ದಿನದ ಸಂಜೆಯಿಂದಲೇ ಬಿಜೆಪಿ ಕಚೇರಿಗಳು ಹಾಗೂ ಬಿಜೆಪಿ ಕಾರ್ಯಕರ್ತರ ಮನೆಯ ಮೇಲೆ ಟಿಎಂಸಿ ಕಾರ್ಯಕರ್ತರು ಗೂಂಡಾಗಳ ರೀತಿ ದಾಳಿ ನಡೆಸಲು ಆರಂಭಿಸಿದರು. ಈ ದಾಳಿಗಳಲ್ಲಿ ಹಲವಾರು ಜನ ಪ್ರಾಣ ಕಳೆದುಕೊಂಡರೆ, ಇನ್ನೂ ಕೆಲವರು ಮನೆ-ಮಠ ಕಳೆದುಕೊಂಡು ನಿರ್ಗತಿಕರಾದರು. 2000 ಜನರು ಪ್ರಾಣ ಭಯದಿಂದ ಅಸ್ಸಾಮಿಗೆ ಪಲಾಯನ ಮಾಡಿದರು. ಆದರೆ ಮಮತಾ ಬ್ಯಾನರ್ಜಿ ಇದೆಲ್ಲವೂ ಕಟ್ಟುಕಥೆ ಎಂದು ಇಡೀ ಪ್ರಕರಣವನ್ನೇ ಮುಚ್ಚಿ ಹಾಕಿದರು. ಇಂಥವರೆಲ್ಲರೂ ಸಹ ಸಂವಿಧಾನ ಹಾಗೂ ಪ್ರಜಾಪ್ರಭುತ್ವದ ರಕ್ಷಕರಾಗಲು ಹೇಗೆ ಸಾಧ್ಯ? ಪ್ರಜಾಪ್ರಭುತ್ವಕ್ಕೆ ಅಪಾಯಕಾರಿಯಾಗಿರುವುದು ಬಿಜೆಪಿ ಅಲ್ಲ, ಬದಲಾಗಿ ಇಂತಹ ಭಯೋತ್ಪಾದನೆ ಹಿನ್ನಲೆಯುಳ್ಳ ವ್ಯಕ್ತಿಗಳು ಚುನಾವಣೆಯಿಂದ ಆರಿಸಿ ಬರುವುದು ಹಾಗೂ ಚುನಾವಣೆಯ ನಂತರ ರಾಜಕೀಯ ವಿಚಾರಗಳನ್ನು ಮುಂದೆ ಇಟ್ಟುಕೊಂಡು ಒಂದು ನಿರ್ದಿಷ್ಟ ಪಕ್ಷದ ಜನರ ಮೇಲೆ ದಬ್ಬಾಳಿಕೆ ನಡೆಸುವುದಾಗಿದೆ.

(ಲೇಖಕರು: ಹವ್ಯಾಸಿ ಬರಹಗಾರರು)



ನಾರದ ಸಂಚಾರ

ಕಲಹಪ್ರಿಯ

naadigru@gmail.com

ಆತಂಕದಲ್ಲಿ ಆರ್‌ಜೆಡಿ ಅಭ್ಯರ್ಥಿಗಳು!

ಬಿಹಾರದಲ್ಲಿ ಲೋಕಸಭಾ ಚುನಾವಣೆ ಮುಗಿಸಿಕೊಳ್ಳುತ್ತಿದ್ದಂತೆ ಮುಂದಿನ ವರ್ಷ ಎದುರಾಗಲಿರುವ ವಿಧಾನಸಭಾ ಚುನಾವಣೆಯ ಚರ್ಚೆ ಆರಂಭವಾಗಿದೆ. 23 ಲೋಕಸಭಾ ಕ್ಷೇತ್ರದ ಪೈಕಿ 19 ಸೋಲನುಭವಿಸಿರುವ ಆರ್‌ಜೆಡಿಗೆ ಈ ಸೋಲಿನ ಜತೆಜತೆಗೆ ಮುಂದಿನ ವಿಧಾನಸಭಾ ಚುನಾವಣೆಯ ಆತಂಕವೂ ಶುರುವಾಗಿದೆ. ನಾಯಕರದ್ದು ಈ ಚಿಂತೆಯಾದರೆ, ಟಿಕೆಟ್ ಆಕಾಂಕ್ಷಿಗಳಿಗೆ ತಲೆ ನೋವಾಗಿದೆ.

ಹೌದು, ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಭರ್ಜರಿ ಸೀಟುಗಳನ್ನು ಗೆಲ್ಲಬೇಕು ಎನ್ನುವ ಕಾರಣಕ್ಕೆ ಆರ್‌ಜೆಡಿ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್, ವಿಧಾನಸಭಾ ಟಿಕೆಟ್ ಆಕಾಂಕ್ಷಿಗಳಿಗೆ ಹಾಗೂ ಶಾಸಕರಿಗೆ ಲೋಕಸಭಾ ಚುನಾವಣೆಯಲ್ಲಿ ಲೀಡ್ ಕೊಡಿಸಿದರಷ್ಟೇ ಎಂಎಲ್‌ಎ ಟಿಕೆಟ್ ಎಂದು ಷರತ್ತು ಹಾಕಿದ್ದರಂತೆ.

ಇದೀಗ ಚುನಾವಣೆ ಮುಗಿದು ಆರ್‌ಜೆಡಿ ಮಖಾಡೆ ಮಲಗಿದೆ. ಬಹುತೇಕ ಕ್ಷೇತ್ರದಲ್ಲಿ ಆರ್‌ಜೆಡಿಗೆ ನಿರೀಕ್ಷಿತ ಲೀಡ್ ಸಿಕ್ಕಿಲ್ಲ. ಒಂದು ವೇಳೆ ಲಾಲು ಹೇಳಿದಂತೆ, ಲೀಡ್ ಕೊಡಿಸದ ಶಾಸಕರಿಗೆ ಟಿಕೆಟ್ ಕೊಡದಿದ್ದರೆ ಮುಂದೇನು ಎನ್ನುವ ಆತಂಕದಲ್ಲಿ ಅನೇಕರಿದ್ದಾರಂತೆ. ಇನ್ನು ಕೆಲ ಆಕಾಂಕ್ಷಿಗಳು ಟಿಕೆಟ್ ಸಿಗದಿದ್ದರೆ 'ಶಾಸಕ'ರಾಗುವ ಕನಸು ನುಚ್ಚುನೂರಾಗುತ್ತದೆ ಎನ್ನುವ ಬೇಸರದಲ್ಲಿದ್ದಾರೆ. ಆದರೆ ಕೆಲ ಆಕಾಂಕ್ಷಿಗಳು ಇದೀಗ ಲಾಲು ಮನಃಪರಿವರ್ತನೆಗೆ ದೇವರ ಮೊರೆ ಹೋಗಲು ತೀರ್ಮಾನಿಸಿದ್ದಾರಂತೆ.

ಕೇರಳ ಬಿಜೆಪಿಯಲ್ಲಿ ಹೊಸ ಪವರ್‌ಹೌಸ್

ದೇವರನಾಡು ಕೇರಳದಲ್ಲಿ ಬಾವುಟ ಕಟ್ಟಲು, ಸಂಘಟನೆಗೆ ಜನರಿಲ್ಲವೆಂದು ಒದ್ದಾಡುತ್ತಿದ್ದ ಬಿಜೆಪಿಗೆ ಇಷ್ಟು ದಿನ ಒಂದೇ ಪವರ್ ಹೌಸ್ ಆಗಿತ್ತು. ಲೋಕಸಭಾ ಚುನಾವಣೆಯಲ್ಲಿ ಈ ಹಿಂದೆ ಗೆಲ್ಲದಿದ್ದರೂ, ರಾಜ್ಯದ ಕೋಟಾದಲ್ಲಿ ವಿ. ಮುರುಳೀಧರನ್ ಅವರಿಗೆ ಸಚಿವ ಸ್ಥಾನ ಸಿಗುತ್ತಿತ್ತು. ಇದರೊಂದಿಗೆ ದೆಹಲಿ ಹೈಕಮಾಂಡ್ ಮಟ್ಟದಲ್ಲಿ ಉತ್ತಮ ಸಂಪರ್ಕವಿದಿದ್ದರಿಂದ, ಕೇರಳ ಬಿಜೆಪಿಯಲ್ಲಿ ಪವರ್‌ಫುಲ್ ನಾಯಕನೆಂದೇ ಹೆಸರಾಗಿದ್ದರು.

ಆದರೀಗ ಕೇರಳದಲ್ಲಿ ಬಿಜೆಪಿ ಪತಾಕೆಯನ್ನು ಸುರೇಶ್ ಗೋಪಿ ಹಾರಿಸಿದ್ದಾರೆ. ಇದೇ ಮೊದಲ ಬಾರಿಗೆ ದೇವರ ನಾಡಿನಲ್ಲಿ, ಕಮಲವನ್ನು ಅರಳಿಸಿದ ಕೀರ್ತಿ ಸುರೇಶ್ ಗೋಪಿ ಅವರಿಗಿದ್ದು ಇದೇ ಕೀರ್ತಿಗೆ ಗೋಪಿ ಅವರಿಗೆ ಕೇಂದ್ರ ಸಚಿವ ಸ್ಥಾನವೂ ಲಭಿಸಿದೆ. ಈ ಮೂಲಕ ಕೇರಳದಲ್ಲಿ ಹೊಸ ಪವರ್ ಹೌಸ್ ಆರಂಭವಾಗಿದೆ. ಸದಾ ಮೋದಿ ಹಾಗೂ ಅಮಿತ್ ಶಾ ಅವರಿಗೆ 'ವಿಧೇಯ'ನಾಗಿರುವ ಸುರೇಶ್ ಗೋಪಿ ಎಂಟ್ರಿ ಮೂಲಕ ಮುರುಳೀಧರನ್ ಅವರ ಶಕ್ತಿ ಕ್ರಮೇಣ ಕ್ಷೀಣಿಸಿದರೂ ಅಚ್ಚರಿಯಿಲ್ಲ ಎನ್ನುವುದು ಕೇರಳ ಬಿಜೆಪಿಯಲ್ಲಿನ ಗುಸುಗುಸು.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:175

ಸಮಾಚಾರ ಸಣ್ಣದಲ್ಲ

ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪತ್ನಿಯೊಂದಿಗೆ ದೆಹಲಿಯಿಂದ ಭೋಪಾಲ್ ನಗರಕ್ಕೆ ರೈಲಿನಲ್ಲಿ ಸಾಮಾನ್ಯರಂತೆ ಪ್ರಯಾಣಿಸಿದ ಸಂದರ್ಭದ ವಿಡಿಯೊ ವೈರಲ್ ಆಗಿದೆ. ಪ್ರಯಾಣದ ವೇಳೆ ಸಹಯಾತ್ರಿಕರೊಂದಿಗೆ ನಗುತ್ತಾ ಮಾತನಾಡಿ, ಚಿಕ್ಕ ಮಕ್ಕಳನ್ನು ಎತ್ತಿ ಮುದ್ದಾಡಿ, ಫೋಟೊಗಳಿಗೆ ಪೋಸ್ ನೀಡಿದರು. ಸಚಿವರ ಸರಳತೆಗೆ ಮೆಚ್ಚುಗೆ ವ್ಯಕ್ತವಾಗಿದೆ.

ಭಾಗವತ್-ಯೋಗಿ 2 ಸುತ್ತು ರಹಸ್ಯ ಸಭೆ

ಲಖನೌ: ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಮತ್ತು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಶನಿವಾರ ಎರಡು ಸುತ್ತು ಗೌಪ್ಯ ಸಭೆ ನಡೆಸಿರುವುದು ಕುತೂಹಲ ಮೂಡಿಸಿದೆ. ಆದಿತ್ಯನಾಥ್ ಶನಿವಾರ ಮಧ್ಯಾಹ್ನ ಭಾಗವತ್ ಅವರನ್ನು ಮೊದಲು ಕ್ಯಾಂಪಿಯರ್ ಗಂಜ್‌ನ ಶಾಲೆಯಲ್ಲಿ ಭೇಟಿಯಾದರು. ಅಲ್ಲಿ ಇಬ್ಬರೂ ಮೊದಲ ಸಭೆ ನಡೆಸಿದರು. ನಂತರ ಸಂಘದ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ನಂತರ ನಾಯಕರಿಬ್ಬರೂ ಶನಿವಾರ ರಾತ್ರಿ 8.30ರಲ್ಲಿ ನಗರದ ಪಕ್ಕಿಬಾಗ್‌ನ ಸರಸ್ವತಿ ಶಿಶು ಮಂದಿರಕ್ಕೆ ಭೇಟಿ ನೀಡಿ ಮತ್ತೊಂದು ಸುತ್ತು ಮಾತುಕತೆ ನಡೆಸಿದರು. ಎರಡೂ ಸಭೆಗಳು ತಲಾ 30 ನಿಮಿಷಗಳ ಕಾಲ ನಡೆದವು ಎಂದು ವರದಿಯಾಗಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನಿರೀಕ್ಷಿತ ಪ್ರದರ್ಶನ ತೋರದ ಹಿನ್ನೆಲೆ ಭಾಗವತ್ ಅವರ ಗೋರಕ್‌ಪುರ ಪ್ರವಾಸ ಮಹತ್ವ ಪಡೆದಿದೆ. ಇದು ವಾಡಿಕೆ ಭೇಟಿ ಅಲ್ಲ ಎಂದು ಆರ್‌ಎಸ್‌ಎಸ್ ಜತೆ ಸಂಬಂಧ ಹೊಂದಿರುವ ಬಿಜೆಪಿಯ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ. ಉತ್ತರಪ್ರದೇಶದಲ್ಲಿ ಪ್ರಾಬಲ್ಯ ಸಾಧಿಸಿದ್ದ ಬಿಜೆಪಿ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಳಪೆ ಪ್ರದರ್ಶನ ತೋರಿದೆ. ಈ ಬಗ್ಗೆ ಯೋಗಿ ಮತ್ತು ಭಾಗವತ್ ಚರ್ಚೆ ನಡೆಸಿರುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಗೋರಕ್‌ಪುರದಲ್ಲಿ ಗುರುವಾರ ಪ್ರಾರಂಭವಾದ 4 ದಿನಗಳ ಆರ್‌ಎಸ್‌ಎಸ್ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಗಮಿಸಿರುವ ಮೋಹನ್ ಭಾಗವತ್ ಅಲ್ಲೇ ತಂಗಿದ್ದಾರೆ.

12 ವರ್ಷದ ಮಗಳ 72ರ ವೃದ್ಧನಿಗೆ ಲಗ್ನ

ಇಸ್ಲಾಮಾಬಾದ್: ಪಾಕಿಸ್ತಾನದ ತಂದೆಯೊಬ್ಬ 12 ವರ್ಷದ ಮಗಳನ್ನು 72ರ ವೃದ್ಧನಿಗೆ 5 ಲಕ್ಷ ರು.ಗೆ ಮಾರಾಟ ಮಾಡಿದ್ದಾನೆ. ವೃದ್ಧನ ಜತೆ ಪುತ್ರಿಯ ಮದುವೆ ಮಾಡಿಸಿ ಕಳುಹಿಸಿಕೊಡಲು ಯತ್ನಿಸಿದ್ದಾನೆ. ಪಾಕಿಸ್ತಾನದ ಖೈಬರ್ ಪಖ್ತುಂಖ್ವಾದಲ್ಲಿ ವೃದ್ಧ-ಬಾಲಕಿ ಮದುವೆ ನಡೆಯುತ್ತಿರುವ ಸುದ್ದಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು, 72 ವರ್ಷದ ವರ ಹಬೀಬ್ ಖಾನ್‌ನನ್ನು ಬಂಧಿಸಿದ್ದಾರೆ. ಮದುವೆ ಮನೆಯಿಂದ ಓಡಿ ಹೋದ ತಂದೆ ಆಲಂ ಸೈಯದ್ ತಲೆ ಮರೆಸಿಕೊಂಡಿದ್ದಾನೆ. ತಂದೆ ಆಲಂ, ವರ ಹಬೀಬ್ ಮತ್ತು ನಿಕಾಹ್ ಖಾವಾನ್ (ಮದುವೆ ನಡೆಸಿಕೊಡುವ) ವಿರುದ್ಧ ಬಾಲ್ಯ ವಿವಾಹ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಪಾಕ್‌ನಲ್ಲಿಯೂ ಬಾಲ್ಯ ವಿವಾಹ ತಡೆ ಕಾನೂನು ಜಾರಿಯಾಗಿದೆ. ಹಾಗಿದ್ದೂ ವೃದ್ಧ-ಬಾಲಕಿಯರ ವಿವಾಹ ನಡೆಯುತ್ತಲೇ ಇವೆ. ಇದು ಅಧಿಕಾರಿಗಳ ನಿದ್ದೆಗೆಡಿಸಿದೆ.

ಕೈಗಾರಿಕಾ ಒಕ್ಕೂಟ: 20ಕ್ಕೆ ಬಜೆಟ್ ಪೂರ್ವ ಸಭೆ

ದೆಹಲಿ: ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಇದೇ 20ರಂದು ಕೈಗಾರಿಕಾ ಒಕ್ಕೂಟಗಳ ಜತೆ ಬಜೆಟ್ ಪೂರ್ವ ಸಭೆ ನಡೆಸಲಿದ್ದಾರೆ ಎಂದು ತಿಳಿದುಬಂದಿದೆ. ಜುಲೈನಲ್ಲಿ 2024-25ನೇ ಸಾಲಿನ ಪೂರ್ಣ ಪ್ರಮಾಣದ ಬಜೆಟ್ ಮಂಡನೆಯಾಗುವ ಸಾಧ್ಯತೆ ಇದೆ.

ಬಜೆಟ್ ಪೂರ್ವ ಸಭೆಗೂ ಮುನ್ನ ಜೂ.18ರಂದು ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಜತೆ ಸಚಿವೆ ನಿರ್ಮಲಾ ಸಭೆ ನಡೆಸುವರು ಎಂದು ಹೇಳಲಾಗಿದೆ. ಈ ಬಜೆಟ್ ಪ್ರಧಾನಿ ಮೋದಿ 3.0 ಅವಧಿಯ ಆರ್ಥಿಕ ಕಾರ್ಯಸೂಚಿಯನ್ನು ಪ್ರಸ್ತುತಪಡಿಸಲಿದೆ. ಹಣದುಬ್ಬರ ಗಮನದಲ್ಲಿಟ್ಟುಕೊಂಡು ಆರ್ಥಿಕತೆಗೆ ಪುಷ್ಟಿ ನೀಡುವ ವಿಧಾನಗಳನ್ನು ನಿರ್ಮಲಾ ಸೀತಾರಾಮನ್ ಅನುಸರಿಸಬೇಕಿದೆ. ಜತೆಗೆ ಮೈತ್ರಿಕೂಟದ ಅಗತ್ಯ ಪೂರೈಸುವ ನಿಟ್ಟಿನಲ್ಲೂ ಸಂಪನ್ಮೂಲ ಸಂಗ್ರಹ ಈ ಬಾರಿ ಸವಾಲ್ ಆಗಿದೆ. 5 ಟ್ರಿಲಿಯನ್(ಲಕ್ಷ ಕೋಟಿ) ಡಾಲರ್ ಆರ್ಥಿಕತೆ ಸಾಧಿಸಲು ಹಾಗೂ 2047ರೊಳಗೆ 'ವಿಕಸಿತ ಭಾರತ'ವಾಗಿ ದೇಶವನ್ನು ರೂಪಿಸುವ ನಿಟ್ಟಿನಲ್ಲಿ ಕ್ರಾಂತಿಕಾರಿ ಯೋಜನೆಗಳನ್ನು ಈ ಬಜೆಟ್‌ನಲ್ಲಿ ನಿರೀಕ್ಷಿಸಬಹುದಾಗಿದೆ. ಉದ್ಯೋಗ ಸೃಷ್ಟಿ, ಕೃಷಿ ಕ್ಷೇತ್ರದ ಅಭಿವೃದ್ಧಿ, ಆದಾಯ ಏರಿಕೆ, ಹಣಕಾಸಿನ ಬಲವರ್ಧನೆ ಎಲ್ಲವೂ ಈ ಬಾರಿಯ ಮೋದಿ ಸರಕಾರದಲ್ಲಿ ಆದ್ಯತೆಗಳಾಗಿವೆ.

{ಕೆ.ಸಿ.ತ್ಯಾಗಿ } ಜೆಡಿಯು ವಕ್ತಾರ

35 ವರ್ಷಗಳಿಂದ ಎನ್‌ಡಿಎಯಲ್ಲಿದ್ದೇನೆ. ಬಿಜೆಪಿ ಎಂದೂ ಯಾವ ಪಕ್ಷವನ್ನೂ ಒಡೆಯಲು ಯತ್ನಿಸಿಲ್ಲ. ಮೋದಿ 3.0 ಸರಕಾರ ರಚನೆಯಲ್ಲಿ ಟಿಡಿಪಿ ಮತ್ತು ಜೆಡಿಯು ನಿರ್ಣಾಯಕ ಪಾತ್ರ ವಹಿಸಿವೆ. ಎರಡೂ ಪಕ್ಷಗಳ ನಾಯಕರು ಎನ್‌ಡಿಎ ದುರ್ಬಲಗೊಳಿಸಲು ಎಂದೂ ಯತ್ನಿಸುವುದಿಲ್ಲ. ನಿತೀಶ್ ಕುಮಾರ್, ಚಂದ್ರಬಾಬು ನಾಯ್ಡು ಎನ್‌ಡಿಎ ಜತೆ ನಿಲ್ಲುತ್ತಾರೆ.

ಉನ್ನತ ಮಟ್ಟದ ಸಭೆ ನಡೆಸಿದ ಕೇಂದ್ರ ಗೃಹ ಸಚಿವ; ಲೆ.ಗವರ್ನರ್ ಹಾಜರಿ

ಜಮ್ಮುನಲ್ಲೂ ಕಾಶ್ಮೀರ ಮಾದರಿ ಶೂನ್ಯ ಭಯೋತ್ಪಾದನೆ ಅಳವಡಿಕೆ ಸಲಹೆ

ಜಮ್ಮು-ಕಾಶ್ಮೀರ ಉಗ್ರ ಕೃತ್ಯ ನಿರ್ಮೂಲನೆಗೆ ಶಾ ಸೂಚನೆ

ದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಸರಕಾರ ಮಾದರಿ ಯೋಜನೆಗಳ ಮೂಲಕ ದೇಶದಲ್ಲಿ ಭಯೋತ್ಪಾದನೆ ಯನ್ನು ಬುಡ ಸಮೇತ ಕಿತ್ತುಹಾಕಲಿದೆ ಎಂದು ಅಮಿತ್ ಶಾ ಭರವಸೆ ನೀಡಿದ್ದಾರೆ.

4-5 ದಿನಗಳಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಸರಣಿಯೋಪಾದಿ ನಡೆದ ಉಗ್ರರ ದಾಳಿ ಕೃತ್ಯಗಳ ಹಿನ್ನೆಲೆ ಕಣಿವೆ ರಾಜ್ಯದಲ್ಲಿನ ಭದ್ರತಾ ಪರಿಸ್ಥಿತಿ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿದರು.

6 ಗಂಟೆವರೆಗೂ ನಡೆದ ಸುದೀರ್ಘ ಸಭೆಯಲ್ಲಿ ಅಮಿತ್ ಶಾ ಜಮ್ಮು-ಕಾಶ್ಮೀರ ಭಾಗದ ಭದ್ರತಾ ವ್ಯವಸ್ಥೆ, ಇತ್ತೀಚೆಗೆ ನಡೆದ 3 ಭಯೋತ್ಪಾದಕ ದಾಳಿಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಉಗ್ರ ಕೃತ್ಯ ತೊಡೆದು ಹಾಕಲು ಅಗತ್ಯವಾದ ಕ್ರಮ ಗಳ ಬಗ್ಗೆ ಚರ್ಚಿಸಿದರು. ಕಾಶ್ಮೀರದಲ್ಲಿ ಉಗ್ರ ಚಟುವಟಿಕೆ ನಿಗ್ರಹಕ್ಕೆ ಅಳವಡಿಸಿ ಕೊಂಡ ಯಶಸ್ವಿ ಮಾದರಿಯನ್ನೇ ಜಮ್ಮು ಭಾಗದಲ್ಲಿಯೂ ಅಳವಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುಪ್ತಚರ ಬಳಕೆ: ಜಮ್ಮು-ಕಾಶ್ಮೀರದಲ್ಲಿ ಹೆದ್ದಾರಿಗಳ ಉದ್ದಕ್ಕೂ ಹೆಚ್ಚುವರಿ ಭದ್ರತಾ ಪಡೆ ನಿಯೋಜಿಸಬೇಕು. ಜಮ್ಮು-ಕಾಶ್ಮೀರದಲ್ಲಿ ಸಕ್ರಿಯ ಭಯೋ ತ್ಪಾದಕರು ಮತ್ತು ಅವರ ಬೆಂಬಲಿಗರನ್ನು ಪತ್ತೆಹಚ್ಚಲು ಗುಪ್ತಚರ ಬಲವನ್ನು ಸಮ ರ್ಥ ರೀತಿ ಬಳಸಿಕೊಳ್ಳಬೇಕು ಎಂದು ಶಾ ನಿರ್ದೇಶನ ನೀಡಿದರು.

ಉನ್ನತ ಮಟ್ಟದ ಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಜಮ್ಮು-ಕಾಶ್ಮೀರ ಲೆಫ್ಟಿನೆಂ ಟ್ ಗವರ್ನರ್ ಮನೋಜ್ ಸಿನ್ಹಾ, ಸೇನಾಪಡೆ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ನಿಯೋಜಿತ ಸೇನಾ ಮುಖ್ಯಸ್ಥ ಲೆ.ಜನರಲ್ ಉಪೇಂದ್ರ ದ್ವಿವೇದಿ, ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ, ಇಂಟೆಲಿಜೆನ್ಸ್ ಬ್ಯೂರೋ ನಿರ್ದೇಶಕ ತಪನ್ ದೇಕಾ, ಸಿಆರ್‌ಪಿಎಫ್ ಮಹಾನಿರ್ದೇಶಕ ಅನೀಶ್ ದಯಾಳ್ ಸಿಂಗ್, ಜಮ್ಮು- ಕಾಶ್ಮೀರ ಪೊಲೀಸ್ ಮಹಾನಿರ್ದೇಶಕ ಆರ್.ಆರ್. ಸ್ವೈನ್ ಮತ್ತಿತರ ಉನ್ನತ ಭದ್ರತಾ ಅಧಿಕಾರಿಗಳು ಉಪಸ್ಥಿತರಿದ್ದರು.

ಛಾಯಾ ಸಮರ: ಶಾ ವ್ಯಾಖ್ಯಾನ

ಯೋಜನೆ ಆಧಾರಿತ ವಿಧಾನದ ಮೂಲಕ ಕ್ಷಿಪ್ರ ಮತ್ತು ಸಮನ್ವಯ ಪ್ರತಿಕ್ರಿಯೆ ಅಗತ್ಯ ಎಂಬ ಸಲಹೆ ನೀಡಿದ ಶಾ, ಇತ್ತೀಚಿನ ಉಗ್ರ ದಾಳಿಗಳ ವೈಖರಿ ಗಮನಿಸಿದರೆ ಸಂಘಟಿತ ಭಯೋತ್ಪಾದಕ ಕೃತ್ಯಗಳಿಗಿಂತ ಸಣ್ಣ ಛಾಯಾಯುದ್ಧ ರೀತಿಯಲ್ಲಿ ಇರುವಂತೆ ಕಾಣುತ್ತಿದೆ ಎಂದು ವಿಶ್ಲೇಷಿಸಿದರು. ಅಮರನಾಥ ಯಾತ್ರೆ ಜೂ.19ರಿಂದ ರಂಭವಾಗುತ್ತಿದ್ದು ಹೈವೆ ಗಳಲ್ಲಿ ಭದ್ರತೆ ಹೆಚ್ಚಳಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ ನೀಡಿದ್ದಾರೆ. ಅಮರನಾಥ ಯಾತ್ರೆಗೆ ಸಮಗ್ರ ಭದ್ರತಾ ವ್ಯವಸ್ಥೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಯಾತ್ರಾರ್ಥಿಗಳಿಗೆ ಬಹುಸುತ್ತಿನ ಭದ್ರತೆ

ರಿಯಾಸಿಯಲ್ಲಿ ಯಾತ್ರಾರ್ಥಿಗಳ ಬಸ್ ಮೇಲೆ ಉಗ್ರರು ದಾಳಿ ನಡೆಸಿ 10 ಜನರನ್ನು ಬಲಿ ಪಡೆದಿದ್ದರು. ಜತೆಗೆ ಇಂತಹ ಇನ್ನಷ್ಟು ದಾಳಿಗಳನ್ನೂ ನಡೆಸುವುದಾಗಿ ಬೆದರಿಕೆ ಕೂಡ ಒಡ್ಡಿದ್ದಾರೆ. ಹೀಗಾಗಿ ವೈಷ್ಣೋದೇವಿ, ಶಿವಖೋರಿ ಪ್ರದೇಶಗಳನ್ನು ರಕ್ಷಿಸಬೇಕು. ಅಲ್ಲಿಗೆ ತೆರಳುವ ಯಾತ್ರಾರ್ಥಿಗಳಿಗೆ ಭದ್ರತೆ ಹೆಚ್ಚಿಸಬೇಕು ಎಂದು ಅಮಿತ್ ಶಾ ಸಭೆಯಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಮರನಾಥ್ ಯಾತ್ರೆ ಸಮಯದಲ್ಲಿ ಬಹು ಸುತ್ತಿನ ಭದ್ರತೆಗೆ ಒತ್ತು ನೀಡಲು ಆದೇಶಿಸಿದರು.

ಅಮಿತ್ ಶಾ ಸಲಹೆ

- ಆಯಕಟ್ಟು ಸ್ಥಳಗಳಲ್ಲಿ ಭದ್ರತೆ ಹೆಚ್ಚಿಸಿ-ಭದ್ರತಾ ಸಂಸ್ಥೆಗಳಲ್ಲಿ ಸಮನ್ವಯವಿರಲಿ
- ಜಮ್ಮು ಭಾಗದಲ್ಲಿ ಉಗ್ರರನ್ನು ಬೆಂಬಲಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ
- ಗಡಿಯಾಚೆಯಿಂದ ಭಾರತಕ್ಕೆ ನುಸುಳಿ ಬರಲಿರುವ ಪ್ರದೇಶಗಳ ಬಂದ್ ಮಾಡಿ

ಶಾಲಾ ಪಠ್ಯ ಕೇಸರೀಕರಣಗೊಳಿಸಿಲ್ಲ: ಸ್ಪಷ್ಟನೆ

ಕೋಮು ದಂಗೆ ಪಾಠ ಬೇಕೆ?: ಎನ್‌ಸಿಇಆರ್‌ಟಿ

ದೆಹಲಿ: ದ್ವೇಷ ಮತ್ತು ಹಿಂಸಾಚಾರ ಶಾಲೆ ಪಠ್ಯದ ವಿಷಯವಲ್ಲ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಹೇಳಿದ್ದಾರೆ.

ಶಾಲೆ ಪಠ್ಯವನ್ನು ಕೇಸರೀಕಣಗೊಳಿಸಿದ ಆರೋಪ ತಳ್ಳಿಹಾಕಿದ ಅವರು, ಮಕ್ಕಳ ಶಿಕ್ಷಣ ದಂಗೆ-ಗಲಭೆಗಳ ಕಡೆ ಕೇಂದ್ರೀಕೃತವಾಗಿರುವುದು ಸರಿಯಲ್ಲ. ಮಕ್ಕಳಿಗೆ ಸಕಾರಾತ್ಮಕ ವಿಚಾರಗಳನ್ನು ತಿಳಿಸಬೇಕೆ ಹೊರತು ಗಲಭೆಗಳ ಬಗ್ಗೆ ಅಲ್ಲ ಎಂದು ಗಮನ ಸೆಳೆದಿದ್ದಾರೆ.

ಇತ್ತೀಚೆಗೆ ಎನ್‌ಸಿಇಆರ್‌ಟಿ 12ನೇ ತರಗತಿಯ ರಾಜ್ಯಶಾಸ್ತ್ರ ಪುಸ್ತಕದಲ್ಲಿನ ಕೆಲವು ವಿಚಾರಗಳನ್ನು ತೆಗೆದು ಹಾಕಿದೆ. ವಿವಾದಿತ ಬಾಬ್ರಿ ಮಸೀದಿಯನ್ನು 'ಮೂರು ಗುಮ್ಮಟಗಳ ಕಟ್ಟಡ' ಎಂದಷ್ಟೇ ನಮೂದಿಸಲಾಗಿದೆ. ರಥಯಾತ್ರೆ, ಕರಸೇವಕರ ಭಾಗವಹಿಸುವಿಕೆ, ಕೋಮು ವಾದ, ಬಿಜೆಪಿ ಆಡಳಿತ ಪ್ರದೇಶಗಳಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆ ಮೊದಲಾದ ವಿಚಾರಗಳನ್ನು ಪಠ್ಯದಿಂದ ತೆಗೆಯಲಾಗಿದೆ. ಅಯೋಧ್ಯೆಗೆ ಸಂಬಂಧಪಟ್ಟ ವಿಚಾರವನ್ನು 4 ಪುಟಗಳಿಂದ 2 ಪುಟಕ್ಕೆ ಇಳಿಸಲಾಗಿದೆ. ಹಳೆಯ ಪುಸ್ತಕದಲ್ಲಿದ್ದ ಕೆಲ ವಿವಾದಾತ್ಮಕ ವಿಚಾರಗಳನ್ನು ಪಠ್ಯದಿಂದಲೇ ಕೈಬಿಡಲಾ ಗಿದೆ. ಹಾಗಾಗಿ ಹೊಸ ಆವೃತ್ತಿ ಬಗ್ಗೆ ಟೀಕೆ ಕೇಳಿ ಬಂದಿದ್ದವು. ಆದರೆ, ಈಗ ಮಾಡಲಾಗಿ ರುವ ಬದಲಾವಣೆಯಲ್ಲಿ ಯಾವುದೇ ತಪ್ಪು ಇಲ್ಲ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ಸ್ಪಷ್ಟಪಡಿಸಿದ್ದಾರೆ.

ದಿನೇಶ್ ಪ್ರಸಾದ್ ಸಕ್ಲಾನಿ ಹೇಳಿದ್ದು..

- ಬದಲಾದ ಪಠ್ಯದಲ್ಲಿ ಕೇಸರೀಕರಣ ವಿಚಾರಗಳೇ ಇಲ್ಲ. ಭಾರತದ ಬಗೆಗೆ ಜ್ಞಾನ ನೀಡುತ್ತಿದ್ದೇವೆ
- ಮಕ್ಕಳಿಗೆ ವಾಸ್ತವಿಕ ನೆಲೆಯಲ್ಲಿ ಇತಿಹಾಸದ ಜ್ಞಾನ ನೀಡಲಿದ್ದೇವೆ. ಇದರಲ್ಲಿ ರಾಜಕೀಯ ಇಲ್ಲ
- ಸುಪ್ರೀಂ ಕೋರ್ಟ್ ರಾಮ ಜನ್ಮಭೂಮಿ ಪರ ತೀರ್ಪು ನೀಡಿದ್ದನ್ನು ಪಠ್ಯದಲ್ಲಿಟ್ಟರೆ ತಪ್ಪೇನು?
- ಮಕ್ಕಳಿಗೆ ಪುರಾತನ ವಿಚಾರಗಳ ಜತೆಜತೆಗೇ ಹೊಸ ಬೆಳವಣಿಗೆಗಳ ಬಗೆಗೂ ತಿಳಿಸಿಕೊಡಬೇಕು.
- ಪಠ್ಯದಲ್ಲಿರುವ ವಿಚಾರಗಳು ಹಳೆಯವು, ಅಪ್ರಸ್ತುತ ಎನಿಸಿದಾಗ ಬದಲಿಸಲೇ ಬೇಕಾಗುತ್ತದೆ.
- ಹೊಸ ಸಂಸತ್ ಭವನದ ನಿರ್ಮಾಣ, ಅದರ ವೈಶಿಷ್ಟ್ಯ ಬಗ್ಗೆ ಮಕ್ಕಳಿಗೆ ತಿಳಿಸಿದರೆ ಏನು ಸಮಸ್ಯೆ?

ಗಲಭೆ ಕುರಿತಾದ ಪಠ್ಯಗಳು ರೋಷಾವೇಶಭರಿತ ಹಾಗೂ ಖಿನ್ನತೆಯಿಂದಿರುವ ನಾಗರಿಕರನ್ನು ಸೃಷ್ಟಿಸುತ್ತದೆ. ನಮ್ಮ ಉದ್ದೇಶ ಹಿಂಸೆ ಮತ್ತು ದ್ವೇಷ ಬೋಧನೆಯಲ್ಲ. ಮಕ್ಕಳನ್ನು ಘರ್ಷಣೆ ಎಡೆಗೆ ಪ್ರೇರೇಪಿಸುವುದು ಶಿಕ್ಷಣದ ಉದ್ದೇಶವಲ್ಲ. ಮಕ್ಕಳು ಬೆಳೆಯುತ್ತಾ ಹಲವು ವಿಚಾರಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ ಶಾಲೆ ಪಠ್ಯದಲ್ಲಿ ಇಂತಹ ವಿಚಾರ ಬೇಡ.

-ದಿನೇಶ್ ಪ್ರಸಾದ್ ಸಕ್ಲಾನಿ ಎನ್‌ಸಿಇಆರ್‌ಟಿ ಮುಖ್ಯಸ್ಥ

ಮ.ಪ್ರದೇಶ: ಗೋಮಾಂಸ ದಂಧೆ ಆರೋಪಿಗಳ 11 ಮನೆ ನೆಲಸಮ

ಭೋಪಾಲ್ : ಮಧ್ಯಪ್ರದೇಶದಲ್ಲಿನ ನೂತನ ಬಿಜೆಪಿ ಸರಕಾರವೂ ಉತ್ತರ ಪ್ರದೇಶ ಮಾದರಿಯಲ್ಲೇ ಅಪರಾಧ ಚಟುವಟಿಕೆಗಳಲ್ಲಿ ತೊಡಗಿದವರ, ಕಾನೂನು ಭಂಗಕ್ಕೆ ಮುಂದಾಗುವವರ ಮನೆಗಳ ನೆಲಸಮ ಕಾರ್ಯಾಚರಣೆ ಶುರುವಿಟ್ಟಿದೆ.

ರಾಜ್ಯದ ಮಾಂಡ್ಲಾ ಜಿಲ್ಲೆಯ ಭೈನ್‌ವಾಹಿ ಪ್ರದೇಶದಲ್ಲಿ ಅಕ್ರಮವಾಗಿ ಗೋಮಾಂಸ ಸಂಗ್ರಹಿಸಿಟ್ಟಿದ್ದ ಆರೋಪಿಗಳ ವಿರುದ್ಧ ನೆಲಸಮ ಕಾರ್ಯಾಚರಣೆ ಕೈಗೊಂಡಿದ್ದಾರೆ. ಆರೋಪಿಗಳು ಸರಕಾರಿ ಜಾಗದಲ್ಲಿ ನಿರ್ಮಿಸಿದ್ದ 11 ಮನೆಗಳನ್ನು ಪೊಲೀಸರು ನೆಲಸಮಗೊಳಿಸಿದ್ದಾರೆ.

ದೊಡ್ಡ ಪ್ರಮಾಣದಲ್ಲಿ ಗೋಮಾಂಸ ಸಂಗ್ರಹಿಸಲಾಗಿದೆ ಹಾಗೂ ಮಾಂಸ ಮಾರಾಟಕ್ಕಾಗಿಯೇ ದೊಡ್ಡ ಸಂಖ್ಯೆಯಲ್ಲಿ ಗೋವುಗಳನ್ನೂ ಕಟ್ಟಿಹಾಕಲಾಗಿದೆ ಎಂಬ ಮಾಹಿತಿ ಮೇರೆಗೆ ಪೊಲೀಸರು ಆರೋಪಿಗಳ ಮನೆಗಳ

ಮೇಲೆ ಭಾನುವಾರ ದಾಳಿ ನಡೆಸಿದ್ದರು. ಮನೆ ಹಿಂದೆ 150 ಗೋವುಗಳನ್ನು ಕಟ್ಟಿಹಾಕಲಾಗಿದ್ದರೆ, ಮನೆಯೊಳಗೆ ಫ್ರಿಡ್ಜ್‌ನಲ್ಲಿ ಗೋಮಾಂಸ ಸಂಗ್ರಹಿಸಲಾಗಿತ್ತು. ಗೋವಿನ ದೇಹದಿಂದ ಸಂಗ್ರಹಿಸಿ ಕೊಬ್ಬು, ಮೂಳೆ, ಚರ್ಮವನ್ನೂ ಮನೆಯಲ್ಲಿ ಸಂಗ್ರಹಿಸಿಟ್ಟಿದ್ದರು ಎಂದು ಮಾಂಡ್ಲಾ ಜಿಲ್ಲೆ ಎಸ್‌ಪಿ ರಜತ್ ಸಕ್ಲೆಚಾ ತಿಳಿಸಿದ್ದಾರೆ.

ಗೋವುಗಳನ್ನು ರಕ್ಷಿಸಿ ಗೋಶಾಲೆಗೆ ಕಳುಹಿಸಿಕೊಡಲಾಗಿದೆ. ಪ್ರಕರಣ ಸಂಬಂಧ ಒಬ್ಬ ಬಂಧಿಸಲಾಗಿದೆ. ಗೋಮಾಂಸ ಮಾರಾಟ ದಂಧೆಯಲ್ಲಿ ತೊಡಗಿದ್ದ 10 ಮಂದಿ ತಲೆ ಮರೆಸಿಕೊಂಡಿದ್ದು, ಪೊಲೀಸರು ಶೋಧ ನಡೆಸಿದ್ದಾರೆ.

ವರ್ಷದ 11ನೇ ಆತ್ಮಹತ್ಯೆ ಪ್ರಕರಣ

2023ರಲ್ಲಿ 26 ವಿದ್ಯಾರ್ಥಿ ಆತ್ಮಹತ್ಯೆ

ಕೋಟಾ: ಪರೀಕ್ಷಾರ್ಥಿ ಆತ್ಮಹತ್ಯೆ

ಜೈಪುರ: ರಾಜಸ್ಥಾನದ ಕೋಟಾ ನಗರದಲ್ಲಿ ಐಐಟಿ-ಜೆಇಇ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ 17 ವರ್ಷದ ವಿದ್ಯಾರ್ಥಿ ತನ್ನ ಕೊಠಡಿಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಬಿಹಾರದ ಮೋತಿಹಾರಿ ನಿವಾಸಿ ಆಯುಷ್ ಜೈಸ್ವಾಲ್ ಮೃತ ವಿದ್ಯಾರ್ಥಿ.

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸಲೆಂದೇ ಮಹಾವೀರ ನಗರ ಪ್ರದೇಶದ ಸಾಮ್ರಾಟ್ ಚೌಕ್ ಬಳಿಯ ಪೇಯಿಂಗ್ ಗೆಸ್ಟ್ ಹೌಸ್‌ನಲ್ಲಿ ತಂಗಿದ್ದ ಜೈಸ್ವಾಲ್, ಶನಿವಾರ ರಾತ್ರಿ ಎಷ್ಟು ಹೊತ್ತಾದರೂ ಕೊಠಡಿಯಿಂದ ಹೊರಬಾರದೇ ಇದ್ದಾಗ ಸ್ನೇಹಿತರು ಪೇಯಿಂಗ್ ಗೆಸ್ಟ್‌ಹೌಸ್ ಮಾಲೀಕರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ಪಡೆದು ಸ್ಥಳಕ್ಕಾಗಮಿಸಿದ ಪೊಲೀಸ್ ತಂಡ ಬಾಗಿಲ ಬೀಗ ಒಡೆದು ನೋಡಿದಾಗ ವಿದ್ಯಾರ್ಥಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಯಾವುದೇ ಡೆತ್ ನೋಟ್ ಪತ್ತೆಯಾಗಿಲ್ಲ. ಆತನ ಕುಟುಂಬ ಸದಸ್ಯರು ಬಿಹಾರದಿಂದ ಬಂದ ನಂತರ ಮರಣೋತ್ತರ ಪರೀಕ್ಷೆ ನಡೆಸಲಾಗುವುದು ಎಂದು ಮಹಾವೀರ್ ನಗರ ಪೊಲೀಸ್ ಅಧಿಕಾರಿ ಮಹೇಂದ್ರ ಮಾರು ತಿಳಿಸಿದ್ದಾರೆ.

ಜನವರಿಯಿಂದ ಈವರೆಗೆ ಕೋಟಾದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ 11ನೇ ಪ್ರಕರಣ ಇದಾಗಿದೆ. ಕಳೆದ ವರ್ಷ ವಿದ್ಯಾರ್ಥಿಗಳ 26 ಆತ್ಮಹತ್ಯೆ ಪ್ರಕರಣ ದಾಖಲಾಗಿವೆ.

ಬೆದರಿಕೆ ಆರೋಪಿ ರಾಜಸ್ಥಾನ ಬನ್ವಾರಿಲಾಲ್ ಸೆರೆ

ಹೊಸ ಪ್ರಕರಣ ದಾಖಲಿಸಿದ ಮುಂಬೈ ಪೊಲೀಸ್

ಸಲ್ಮಾನ್‌ಗೆ ಮತ್ತೆ ಬೆದರಿಕೆ

ಮುಂಬೈ: ಕಳೆದ ಏಪ್ರಿಲ್‌ನಲ್ಲಿ ಬಾಲಿವುಡ್ ನಟ ಸಲ್ಮಾನ್ ಖಾನ್ ನಿವಾಸದ ಹೊರಗೆ ಗುಂಡು ಹಾರಿಸಿದ ಪ್ರಕರಣ ಸಂಬಂಧ ಮುಂಬೈ ಪೊಲೀಸರು ಹೊಸ ಪ್ರಕರಣ ದಾಖಲಿಸಿದ್ದಾರೆ. ಇದೇ ವೇಳೆ, ಕ್ರಿಮಿನಲ್ ಬೆದರಿಕೆ ಆರೋಪದಡಿ ರಾಜಸ್ಥಾನ ಬುಂದಿ ಮೂಲದ ಬನ್ವಾರಿಲಾಲ್ ಲಾತುರ್ ಲಾಲ್ ಗುರ್ಜಾರ್(25)ನನ್ನು ಬೆದರಿಕೆ ಆರೋಪದಲ್ಲಿ ಬಂಧಿಸಲಾಗಿದೆ.

ಗುರ್ಜಾರ್ ಯೂಟ್ಯೂಬ್ ಚಾನೆಲ್‌ನಲ್ಲಿ ವಿಡಿಯೋ ಅಪ್ಲೋಡ್ ಮಾಡಿ, 'ಲಾರೆನ್ಸ್ ಬಿಷ್ಣೋಯ್, ಗೋಲ್ಡಿ ಬ್ರಾರ್ ಮತ್ತು ಗ್ಯಾಂಗ್ ಸದಸ್ಯರು ನನ್ನೊಂದಿಗಿದ್ದಾರೆ. ಸಲ್ಮಾನ್ ಖಾನ್ ಇನ್ನೂ ಕ್ಷಮೆ ಕೇಳದ ಕಾರಣ ಅವರನ್ನು ಕೊಲ್ಲಲಿದ್ದೇವೆ' ಎಂದು ಬೆದರಿಕೆ ಒಡ್ಡಿದ್ದ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಆರೋಪಿ ಗುರ್ಜಾರ್‌ಗೆ ಕ್ರಿಮಿನಲ್ ಹಿನ್ನೆಲೆ ಇದೆಯೇ ಎಂದು ಪರಿಶೀಲಿಸುತ್ತಿದ್ದೇವೆ. ಐಪಿಸಿ ಸೆಕ್ಷನ್ 506(2) (ಕ್ರಿಮಿನಲ್ ಬೆದರಿಕೆಗೆ ಶಿಕ್ಷೆ) ಮತ್ತು ಮಾಹಿತಿ ತಂತ್ರಜ್ಞಾನ (ಐಟಿ) ಕಾಯ್ದೆಯ ನಿಬಂಧನೆ ಸೇರಿ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿ ಹೇಳಿದರು.

ಪೆಟ್ರೋಲ್, ಡೀಸೆಲ್ ದರ ಏರಿಕೆ | ಹರ್ದೀಪ್ ಸಿಂಗ್ ಪುರಿ ವಾಗ್ದಾಳಿ

ಇಂಧನ ತುಟ್ಟಿ: ಕರ್ನಾಟಕದ ಕ್ರಮಕ್ಕೆ ಕೇಂದ್ರ ಸಚಿವ ಖಂಡನೆ

ದೆಹಲಿ: ಪೆಟ್ರೋಲ್-ಡೀಸೆಲ್ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ಮೂಲಕ ಇಂಧನ ದರ ಏರಿಕೆ

ಆಗುವಂತೆ ಮಾಡಿರುವ ಕರ್ನಾಟಕದಲ್ಲಿನ ಕೈ ಸರಕಾರದ ಕ್ರಮದ ವಿರುದ್ಧ ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ವಾಗ್ದಾಳಿ ನಡೆಸಿದ್ದಾರೆ. ಭಾನುವಾರ 'ಎಕ್ಸ್' ಸಂದೇಶದಲ್ಲಿ ಅವರು, ಪ್ರತಿ ಕುಟುಂಬದ ಮಹಿಳೆಗೆ ತಿಂಗಳಿಗೆ 8,500 ರು. ನೀಡುವ ಭರವಸೆ ನೀಡಿದ್ದ ಕಾಂಗ್ರೆಸ್ ಅದನ್ನು ಈಡೇರಿಸದೇ ಈಗ ತೆರಿಗೆ ಹೆಚ್ಚಳ ಮೂಲಕ ಜನರ ಸುಲಿಗೆಗೆ ಇಳಿದಿದೆ ಎಂದು ಟೀಕಿಸಿದ್ದಾರೆ. ರಾಜ್ಯದಲ್ಲಿ ಪ್ರತಿ ಲೀ. ಪೆಟ್ರೋಲ್ ಮತ್ತು ಡೀಸೆಲ್ ದರ ಹೆಚ್ಚಿಸುವ ಮೂಲಕ ಜನರಿಗೆ ಹೊರೆಯಾಗಿದೆ ಎಂದು ಟೀಕಿಸಿದ್ದಾರೆ. ಇಂಧನ ಬೆಲೆ ಸರಕು ಸಾಗಣೆ ಮೇಲೆ ಮೊದಲಿಗೆ ಪರಿಣಾಮ ಬೀರುತ್ತವೆ. ಅದರಿಂದ ಅಗತ್ಯ ವಸ್ತುಗಳ ಬೆಲೆಗಳ ಮೇಲೆಯೂ ಪರಿಣಾಮವಾಗುತ್ತದೆ. ಇದರಿಂದ ಕರ್ನಾಟಕದ ಜನರು ಆಹಾರ ಪದಾರ್ಥ, ಹಣ್ಣು-ತರಕಾರಿ, ಔಷಧಿ ಮತ್ತಿತರ ಮೂಲಭೂತ ವಸ್ತುಗಳಿಗೆ ಹೆಚ್ಚಿನ ಮೊತ್ತ ಪಾವತಿಸಬೇಕಾಗುತ್ತದೆ ಎಂದು ಸಚಿವರು ಟೀಕಿಸಿದ್ದಾರೆ.

ರಕ್ಷಿಸಿದ್ದ 39 ಬಾಲ ಕಾರ್ಮಿಕರು ನಿಗೂಢ ನಾಪತ್ತೆ!

ಭೋಪಾಲ್: ಮಧ್ಯಪ್ರದೇಶದ ರೈಸನ್ ಜಿಲ್ಲೆಯಲ್ಲಿ ಮದ್ಯ ತಯಾರಿಕಾ ಕಾರ್ಖಾನೆಯಲ್ಲಿ ದುಡಿಯುತ್ತಿದ್ದ 39 ಮಕ್ಕಳನ್ನು ರಕ್ಷಿಸಲಾಗಿದೆ. ಆದರೆ, ರಕ್ಷಣೆಯ ಕೆಲವೇ ಗಂಟೆಗಳ ಬಳಿಕ ಮಕ್ಕಳು ನಾಪತ್ತೆಯಾಗಿದ್ದಾರೆ. ಬಾಲಕಾರ್ಮಿಕರ ಬಳಕೆ ಬಗ್ಗೆ 'ಬಚ್ಪನ್ ಬಚಾವೋ' ಆಂದೋಲನ ದಿಂದ ಮಾಹಿತಿ ಪಡೆದ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬಳಿಕ ಸೇಹತ್‌ಗಂಜ್‌ನ ಕಾರ್ಖಾನೆ ಮೇಲೆ ದಾಳಿ ನಡೆಸಿದಾಗ 39 ಮಕ್ಕಳು ಕೆಲಸ ಮಾಡುತ್ತಿರುವುದು ಪತ್ತೆಯಾಗಿದೆ. ಮಕ್ಕಳ ಕೈಗಳ ಮೇಲೆ ಸುಟ್ಟ ಗಾಯಗಳು ಕಂಡು ಬಂದಿವೆ. 39 ಬಾಲಕಾರ್ಮಿ ಕರನ್ನು ರಕ್ಷಿಸಿ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಲಾಗಿದೆ. ಆದರೆ ರಾತ್ರಿ ವೇಳೆಗೆ ಮಕ್ಕಳು ಕಾಣೆಯಾಗಿದ್ದಾರೆ ಎಂಬ ಮಾಹಿತಿ ಬಂದಿದೆ.

ತೆಲಂಗಾಣ ಮೇದಕ್ ಜಿಲ್ಲೆಯಲ್ಲಿ ಘರ್ಷಣೆ

3 ಕಡೆ ಘರ್ಷಣೆ-ನಾಲ್ವರಿಗೆ ಗಾಯ-7 ಸೆರೆ

ಗೋವು ಬಲಿಗೆ ಸಿದ್ಧತೆ; ಮದರಸಾ ಮೇಲೆ ದಾಳಿ

ಹೈದರಾಬಾದ್: ತೆಲಂಗಾಣ ರಾಜ್ಯದ ಮೇದಕ್ ಜಿಲ್ಲೆಯಲ್ಲಿ ಬಕ್ರೀದ್ ಸಮಯದಲ್ಲಿ ಗೋವು ಬಲಿ ಕೊಡುವುದನ್ನು ವಿರೋಧಿಸಿ ಬಲ ಪಂಥೀಯ ಗುಂಪು ಮದರಸಾ ಮೇಲೆ ದಾಳಿ ನಡೆಸಿದ್ದು ಘಟನೆಯಲ್ಲಿ ನಾಲ್ವರು ಗಾಯಗೊಂಡಿದ್ದಾರೆ.

ಮಿರಜ್ ಉಲ್ ಉಲೂಮ್ ಮದರಸಾ ಆಡಳಿತ ಬಕ್ರೀದ್‌ಗೆ ಬಲಿ ಕೊಡಲು ಗೋವನ್ನು ಖರೀದಿಸಿದ ವಿಷಯ ತಿಳಿಯುತ್ತಿದ್ದಂತೆ ಮದರಸಾ ಬಳಿ ಬಲಪಂಥೀಯರ ಗುಂಪು ಜಮಾವಣೆಗೊಂಡಿದೆ. ಗೋವನ್ನು ಬಲಿ ಕೊಡಬಾರದು ಎಂದು ಘೋಷಣೆ ಕೂಗಿದೆ. ಪ್ರತಿಭಟನೆ ವೇಳೆ ಎರಡು ಕೋಮಿನ ನಡುವೆ ಘರ್ಷಣೆ ನಡೆದು ನಾಲ್ವರು ಗಾಯಗೊಂಡಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಪೊಲೀಸರು ಧಾವಿಸಿ ಗುಂಪು ಚದುರಿಸಿದ್ದಾರೆ.

ಈ ಬಗ್ಗೆ ಮಾಹಿತಿ ನೀಡಿರುವ ಮೇದಕ್ ಎಸ್‌ಪಿ, ಎರಡೂ ಗುಂಪಿನ ಮೇಲೆ ಪ್ರಕರಣ ದಾಖಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಿವರಿಸಿದ್ದಾರೆ.

ಮದರಸಾ ಸೇರಿ ಒಟ್ಟು 3 ಸ್ಥಳಗಳಲ್ಲಿ ಗಲಾಟೆ ನಡೆದಿದೆ. ಬಲಿಗಾಗಿ ಗೋವನ್ನು ಮಾರಿದ ಪ್ರದೇಶದಲ್ಲಿ ಗಲಾಟೆ ಆರಂಭವಾಗಿದೆ. ಈ ಸಂಬಂಧ ಬಿಜೆಪಿ ಮೇದಕ್ ಜಿಲ್ಲಾಧ್ಯಕ್ಷ ಗದ್ದಂ ಶ್ರೀನಿವಾಸ್, ನಗರಾಧ್ಯಕ್ಷ ಎಂ.ನಯನ್ ಪ್ರಸಾದ್, ಯುವ ಮೋರ್ಚಾ ಅಧ್ಯಕ್ಷ ಸೇರಿ 7 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಆರ್‌ಎಸ್‌ಎಸ್, ಹಿಂದೂ ವಾಹಿನಿ ಸದಸ್ಯರು ಮದರಸಾ ಅಧಿಕಾರಿಗಳ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಎಐಎಂಐಎಂ ಶಾಸಕ ಕಾರ್ವಾನ್ ಎಂ.ಕೌಸರ್ ಮೊಹಿಯುದ್ದಿನ್ ಆರೋಪಿಸಿದ್ದಾರೆ.

ಶಿವಸೇನೆ (ಉದ್ಧವ್ ಬಣ) ಸಂಸದ ಸಂಜಯ್ ರಾವತ್

ಸ್ಪೀಕರ್ ಸ್ಥಾನಕ್ಕೆ ಟಿಡಿಪಿ ಸ್ಪರ್ಧಿಸಿದರೆ ಇಂಡಿ ಒಕ್ಕೂಟ ಬೆಂಬಲ: ರಾವತ್

ಮುಂಬೈ: ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ತೆಲುಗು ದೇಶಂ ಪಕ್ಷ (ಟಿಡಿಪಿ) ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿದರೆ 'ಇಂಡಿಯ' ಒಕ್ಕೂಟದ ಎಲ್ಲಾ ಸದಸ್ಯ ಪಕ್ಷಗಳು ಬೆಂಬಲ ನೀಡಲಿವೆ ಎಂದು ಶಿವಸೇನಾ (ಉದ್ದವ್ ಬಣ) ನಾಯಕ, ಸಂಸದ ಸಂಜಯ್ ರಾವತ್ ಭಾನುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ರಾವತ್, ಲೋಕಸಭೆ ಸ್ಪೀಕರ್ ಆಯ್ಕೆ ನಿರ್ಣಾಯಕ. ಒಂದೊಮ್ಮೆ ಬಿಜೆಪಿಗೆ ಆ ಸ್ಥಾನ ಸಿಕ್ಕರೆ, ಅದು ಟಿಡಿಪಿ, ಜೆಡಿಯು, ಚಿರಾಗ್ ಪಾಸ್ವಾನ್ ಮತ್ತು ಜಯಂತ್ ಚೌಧರಿ ರಾಜಕೀಯ ಪಕ್ಷಗಳನ್ನು ಒಡೆಯುತ್ತದೆ ಎಂದು ಆರೋಪಿಸಿದ್ದಾರೆ.

ಸ್ಪೀಕರ್ ಸ್ಥಾನಕ್ಕೆ ಟಿಡಿಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಯಸುತ್ತಿದೆ ಎಂಬ ವಿಷಯ ಕೇಳಿದೆ. ಇದು ನಿಜವಾದರೆ ಇಂಡಿಯ ಒಕ್ಕೂಟ ಈ ಬಗ್ಗೆ ಚರ್ಚಿಸುತ್ತದೆ ಮತ್ತು ಎಲ್ಲ ಪ್ರತಿಪಕ್ಷಗಳು ಟಿಡಿಪಿಗೆ ಬೆಂಬಲ ನೀಡುವುದನ್ನು ಖಚಿತಪಡಿಸಲು ಯತ್ನಿಸುತ್ತದೆ ಎಂದಿದ್ದಾರೆ.

ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ನಾಯಕತ್ವ ವಿಚಾರ ಬಂದಿದ್ದರೆ ಫಲಿತಾಂಶ ಬೇರೆಯೇ ಆಗಿರುತ್ತಿತ್ತು. ಹಾಗಾಗಿಯೇ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಮೋದಿ ಅವರನ್ನು ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. ಇದು ಗಂಭೀರ ವಿಷಯ ಎಂದು ರಾವತ್ ಸುದ್ದಿಗಾರರ ಗಮನ ಸೆಳೆದರು.

ಎನ್‌ಡಿಎ ದುರ್ಬಲಗೊಳಿಸಲ್ಲ

ದೆಹಲಿ: ಯಾವುದೇ ಕಾರಣಕ್ಕೂ ಎನ್‌ಡಿಎ ಮೈತ್ರಿಕೂಟವನ್ನು ದುರ್ಬಲಗೊಳಿಸಲು ಯತ್ನಿಸುವುದಿಲ್ಲ ಎಂದು 'ಎನ್‌ಡಿಎ' ಮಿತ್ರಪಕ್ಷವಾದ ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಸ್ಪಷ್ಟವಾಗಿ ಹೇಳಿದೆ. ಆ ಮೂಲಕ ಲೋಕಸಭೆ ಸ್ಪೀಕರ್ ಆಯ್ಕೆ ವಿಚಾರದಲ್ಲಿ ಹಸ್ತಕ್ಷೇಪ ಮಾಡಲು ಯತ್ನಿಸುತ್ತಿರುವ ಇಂಡಿಯ ಒಕ್ಕೂಟಕ್ಕೆ ಜೆಡಿಯು ಟಾಂಗ್ ನೀಡಿದೆ. ಲೋಕಸಭೆ ಸ್ಪೀಕರ್ ಆಯ್ಕೆ ವಿಚಾರದಲ್ಲಿ ಬಿಜೆಪಿ ತೀರ್ಮಾನವೇ ಅಂತಿಮ. ಈ ವಿಚಾರದಲ್ಲಿ ಬಿಜೆಪಿಗೆ ಮೊದಲ ಹಕ್ಕಿದೆ ಮತ್ತು ಇಂಡಿಯ ಒಕ್ಕೂಟ ನಾಯಕರ ಹೇಳಿಕೆಗಳು ಆಕ್ಷೇಪಾರ್ಹ. ಲೋಕಸಭಾ ಸ್ಪೀಕರ್ ಸ್ಥಾನ ಸದನದ ಅತ್ಯಂತ ಗೌರವಾನ್ವಿತ ಹುದ್ದೆ. ಆ ಸ್ಥಾನದ ಮೇಲೆ ಆಡಳಿತ ಪಕ್ಷಕ್ಕೆ ಮೊದಲ ಹಕ್ಕಿದೆ ಎಂದು ಜೆಡಿಯು ವಕ್ತಾರ ಕೆಸಿ ತ್ಯಾಗಿ ಹೇಳಿದ್ದಾರೆ.

ಬಿಹಾರದ ಪಟನಾ ಸಮೀಪದಲ್ಲಿ ಅವಘಡ

ಗಂಗಾ ನದಿ ದೋಣಿ ಪಲ್ಟಿ -17 ಸಾವು

ಪಟನಾ: ಬಿಹಾರದ ರಾಜಧಾನಿ ಪಟನಾದ ಬಾರ್ಹ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಭಾನುವಾರ 17 ಮಂದಿ ಪ್ರಯಾಣಿಸುತ್ತಿದ್ದ ದೋಣಿ ಗಂಗಾ ನದಿಯಲ್ಲಿ ಪಲ್ಟಿಯಾಗಿದ್ದು, ಆರು ಮಂದಿ ನಾಪತ್ತೆಯಾಗಿದ್ದಾರೆ. ಅದೃಷ್ಟವಶಾತ್ 11 ಮಂದಿ ಈಜಿ ದಡ ಸೇರಿದ್ದಾರೆ.

ಭಾನುವಾರ ಮಧ್ಯಾಹ್ನ ನದಿ ಮಧ್ಯೆ ಸಾಗುತ್ತಿದ್ದಾಗಲೇ ದೋಣಿ ಮುಳುಗಲಾರಂಭಿಸಿದೆ. ತಕ್ಷಣ ನೀರಿಗೆ ಹಾರಿದ 11 ಮಂದಿ ಈಜಿ ದಡ ಸೇರಿದ್ದಾರೆ. 6 ಮಂದಿ ಕಾಣೆಯಾಗಿದ್ದಾರೆ. ರಾಜ್ಯ ವಿಪತ್ತು ನಿರ್ವ ಹಣಾ ಪಡೆ (ಎಸ್‌ಡಿಆರ್‌ಎಫ್) ತಂಡ ಸ್ಥಳಕ್ಕೆ ತಲುಪಿದ್ದು, ಶೋಧ ಕಾರ್ಯ ನಡೆದಿದೆ.

ಗಂಗಾ ದಸರಾ ನಿಮಿತ್ತ ಕೆಲವು ಭಕ್ತರು ಗಂಗಾಸ್ನಾನ ಮಾಡಲೆಂದೇ ದೋಣಿಯಲ್ಲಿ ಸ್ನಾನಘಟ್ಟಕ್ಕೆ ಹೋಗುತ್ತಿದ್ದರು. ಈ ವೇಳೆ ಉಮಾ ಘಾಟ್ ಬಳಿ ದೋಣಿ ಪಲ್ಟಿಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಡಲು ಅವಲಂಬಿತರ ಕಲ್ಯಾಣಕ್ಕಾಗಿ 'ನೀಲಿ ಆರ್ಥಿಕತೆ'ಗೆ ಒತ್ತು | ಸಚಿವಾಲಯ 100 ದಿನಗಳ ಕಾರ್ಯಯೋಜನೆ

ಆಳ ಸಮುದ್ರ ಯೋಜನೆ: ಭಾರತ ವಿಶ್ವದ 6ನೇ ರಾಷ್ಟ್ರ

ದೆಹಲಿ: ತನ್ನದೇ ಆದ ಆಳ ಸಮುದ್ರ ಯೋಜನೆಯನ್ನು ಹೊಂದಿದ ವಿಶ್ವದ ಆರನೇ ರಾಷ್ಟ್ರವಾಗಿ ಭಾರತ

ರೂಪುಗೊಳ್ಳುತ್ತಿದೆ ಎಂದು ಕೇಂದ್ರದ ಭೂ ವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಭಾನುವಾರ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಸಚಿವಾಲಯದ 100 ದಿನಗಳ ಕಾರ್ಯಯೋಜನೆ ಕುರಿತು ಸಭೆ ನಡೆಸಿದ ಸಚಿವ ಜಿತೇಂದ್ರ ಸಿಂಗ್, ಆಳ ಸಮುದ್ರ ಯೋಜನೆ ವಿಚಾರದಲ್ಲಿ ಭಾರತದ ಬೆಳವಣಿಗೆಯ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು. 'ವಿಶ್ವದಲ್ಲಿ ಸ್ವಂತವಾದ ಆಳ ಸಮುದ್ರ ಯೋಜನೆ ಹೊಂದಿದ ಕೆಲವೇ ಕೆಲವು ರಾಷ್ಟ್ರಗಳ ಸಾಲಿಗೆ ಭಾರತವೂ ಸೇರಲಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಮುದ್ರ ಮತ್ತು ಕಡಲ ಶಕ್ತಿಯ ಮೇಲೆ ಅವಲಂಬಿತವಾಗಿರುವ ಜನರ ಕಲ್ಯಾಣಕ್ಕಾಗಿ 'ನೀಲಿ ಆರ್ಥಿಕತೆ'ಗೆ ಹೆಚ್ಚು ಒತ್ತು ಕೊಡಬೇಕಿದೆ ಎಂದು ಅಧಿಕಾರಿಗಳಿಗೆ ಸಚಿವರು ಸೂಚಿಸಿದ್ದಾರೆ. 'ಡೀಪ್ ಸೀ ಮಿಷನ್' ಕೇವಲ ಖನಿಜ ಪರಿಶೋಧನೆಗಲ್ಲ. ಸಾಗರ ವಿಜ್ಞಾನದ ಅಭಿವೃದ್ಧಿ,

ಸಮುದ್ರದ ಪರಿಸರ ಶೋಧನೆ ಹಾಗೂ ಸಮುದ್ರ ಜೀವವೈವಿಧ್ಯ ಸಂರಕ್ಷಣೆ ಕಡೆಗೆ ಕಾರ್ಯ ನಿರ್ವಹಿಸುವುದಾಗಿದೆ ಎಂದು ಸಚಿವರು ವಿಷದೀಕರಿಸಿದರು.

ತುರ್ತು ಸಂದರ್ಭದಲ್ಲಿ ನೆರವಾಗುವ ಸ್ವಯಂ ತೇಲುವ ತಂತ್ರಜ್ಞಾನ ಅಭಿವೃದ್ಧಿ ಬಗೆಗೆ ಮಾಹಿತಿ ಪಡೆದ ಸಚಿವ ಜಿತೇಂದ್ರ ಸಿಂಗ್, ಆಳ ಸಮುದ್ರ ಯೋಜನೆ ಭಾರತದ ಆರ್ಥಿಕತೆಯ ಪೂರ್ಣ ಬೆಳವಣಿಗೆಗೆ ನೆರವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸೆಪ್ಟೆಂಬರ್‌ಗೆ ಪ್ರಯೋಗ; 2026ಕ್ಕೆ ಯೋಜನೆ ಪೂರ್ಣ

ಆಳ ಸಮುದ್ರ ಯೋಜನೆಯ ಮೊದಲ ಹಂತದ ವೆಸೆಲ್ ಹಾರ್ಬರ್ ಪ್ರಯೋಗವನ್ನು ಸೆಪ್ಟೆಂಬರ್‌ನಲ್ಲಿ ನಡೆಸಿ, 2026ರೊಳಗೆ ಯೋಜನೆ ಪೂರ್ಣಗೊಳಿಸುವಂತೆ ಸಚಿವರು ಸೂಚಿಸಿದರು. ಜತೆಗೆ 6 ಸಾವಿರ ಮೀಟರ್ ಆಳದವರೆಗೂ ಮುಳುಗಬಲ್ಲ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಷನ್ ಟೆಕ್ನಾಲಜಿಯ 'ಮತ್ಸ್ಯಯನ-6 ಸಾವಿರ' ಯೋಜನೆಯನ್ನೂ ಸಚಿವ ಸಿಂಗ್ ಶ್ಲಾಘಿಸಿದರು.



ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ ವೈಸ್

ನ್ಯೂಯಾರ್ಕ್: ನಮೀಬಿಯಾ ತಂಡದ ಅನುಭವಿ ಆಟಗಾರ ಡೇವಿಡ್ ವೈಸ್ ಅವರು ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ. ಶನಿವಾರ ರಾತ್ರಿ ನಡೆದ ಇಂಗ್ಲೆಂಡ್ ವಿರುದ್ಧದ ಟಿ20 ವಿಶ್ವಕಪ್‌ನ ಅಂತಿಮ ಲೀಗ್ ಪಂದ್ಯದಲ್ಲಿ ಆಡಿದ ಬಳಿಕ ಡೇವಿಡ್ ವೈಸ್ ತಮ್ಮ ನಿವೃತ್ತಿ ಘೋಷಿಸಿದರು.

ಡೇವಿಡ್ ವೈಸ್ ಅವರು ತಮ್ಮ ಕ್ರಿಕೆಟ್ ವೃತ್ತಿ ಜೀವನ ಆರಂಭಿಸಿದ್ದು ದಕ್ಷಿಣ ಆಫ್ರಿಕಾ ತಂಡದ ಪರ ಆಡುವ ಮೂಲಕ. 2021 ರಲ್ಲಿ ನಮೀಬಿಯಾ ತಂಡ ಸೇರಿದ್ದರು. ಒಟ್ಟು 5 ವರ್ಷಗಳ ಕಾಲ ನಮೀಬಿಯಾ ತಂಡವನ್ನು ಪ್ರತಿನಿಧಿಸಿದ್ದಾರೆ. 2021ರ ಟಿ20 ವಿಶ್ವಕಪ್‌ನಲ್ಲಿ ಆಡುವ ಮೂಲಕ ನಮೀಬಿಯಾ

ತಂಡದ ಪರ ಪಾದಾರ್ಪಣೆ ಮಾಡಿದ್ದರು.

ಆಲ್‌ರೌಂಡರ್ ಆಗಿರುವ ವೈಸ್ ಅವರು ನಮೀಬಿಯಾ ಪರ 34 ಟಿ20 ಪಂದ್ಯಗಳನ್ನು ಆಡಿ 532 ರನ್ ಗಳಿಸಿದ್ದಾರೆ. ಬೌಲಿಂಗ್‌ನಲ್ಲಿಯೂ ಉತ್ತಮ ಪ್ರದರ್ಶನ ತೋರಿರುವ ಅವರು 35 ವಿಕೆಟ್ ಕಿತ್ತಿದ್ದಾರೆ. ಒಂಬತ್ತು ಏಕದಿನ ಪಂದ್ಯಗಳನ್ನು ಆಡಿ 228 ರನ್ ಗಳಿಸಿದ್ದಾರೆ. ಆರು ವಿಕೆಟ್ ಪಡೆದಿದ್ದಾರೆ. ದಕ್ಷಿಣ ಆಫ್ರಿಕಾ ಮತ್ತು ನಮೀಬಿಯಾ ತಂಡದ ಪರ ಆಡಿ ಒಟ್ಟಾರೆಯಾಗಿ, ಅವರು 54 ಟಿ20 ಮತ್ತು 15 ಏಕದಿನ ಪಂದ್ಯಗಳನ್ನು ಆಡಿದ್ದಾರೆ.

ನನಗೆ ಈಗ 39 ವರ್ಷ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇನ್ನು ಮುಂದುವರಿಯಲು ಇದು ಸೂಕ್ತ ಸಮಯವಲ್ಲ ಎಂದು ತಿಳಿದಿದೆ. ಹೀಗಾಗಿ ನಾನು ಕ್ರಿಕೆಟ್‌ನಿಂದ ನಿವೃತ್ತಿಯಾಗುತ್ತಿದ್ದೇನೆ. 2 ದೇಶಗಳನ್ನು ಪ್ರತಿನಿಧಿಸಲು ನನಗೆ ಅವಕಾಶ ಮಾಡಿಕೊಟ್ಟ ಎಲ್ಲ ಸಿಬ್ಬಂದಿ ಮತ್ತು ಸಹ ಆಟಗಾರರಿಗೆ ಧನ್ಯವಾದಗಳು ಎಂದು ವೈಸ್ ಹೇಳಿದರು.

ವಿರಾಟ್ ಉತ್ತಮವಾಗಿ ಅಭ್ಯಾಸ ನಡೆಸಿದ್ದಾರೆ. ಐಪಿಎಲ್‌ನಲ್ಲಿ ಅವರ ಶ್ರೇಷ್ಠ ಬ್ಯಾಟಿಂಗ್ ನೋಡಿದ್ದೇವೆ. ಅಲ್ಲಿಂದ ಇಲ್ಲಿಗೆ ಬಂದಿದ್ದಾರೆ. ಕೆಲವು ಪಂದ್ಯಗಳಲ್ಲಿ ವಿಫಲರಾಗಿದ್ದಾರೆ. ಆದರೆ ಅದರಿಂದ ಅವರು ಕುಗ್ಗಿಲ್ಲ.

-ವಿಕ್ರಮ್ ರಾಥೋಡ್
ಭಾರತ ಕ್ರಿಕೆಟ್ ತಂಡದ ಬ್ಯಾಟಿಂಗ್ ಕೋಚ್

ಮಾಜಿ ಹಾಕಿ ಆಟಗಾರ ನಿಧನ

ಬೆಂಗಳೂರು: ರಾಜ್ಯ ಹಾಕಿ ತಂಡದ ಮಾಜಿ ಆಟಗಾರ ಜೆ. ಸುಕೇಂದರ್ (83) ಅವರು ವಯೋಸಹಜ ಕಾಯಿಲೆಯಿಂದ ಶನಿವಾರ ನಿಧನರಾದರು. 1958ರಿಂದ 1961ರವರೆಗೆ ರಾಷ್ಟ್ರೀಯ ಹಾಕಿ ಚಾಂಪಿಯನ್ ಷಿಪ್‌ನಲ್ಲಿ ಅವರು ಮೈಸೂರು ರಾಜ್ಯ ಹಾಕಿ ತಂಡವನ್ನು ಪ್ರತಿನಿಧಿಸಿದ್ದರು. ಅಫ್ಘಾನಿಸ್ತಾನದ ಕಾಬೂಲ್‌ಗೆ ಪ್ರವಾಸ ಮಾಡಿದ್ದ ಭಾರತ ವಿಶ್ವವಿದ್ಯಾಲಯ ತಂಡದ ಭಾಗವಾಗಿದ್ದ ಅವರು, ಸಿಐಎಲ್‌ನಲ್ಲಿ ಅಧಿಕಾರಿಯಾಗಿದ್ದರು. ಅವರ ನಿಧನಕ್ಕೆ ಕರ್ನಾಟಕ ರಾಜ್ಯ ಹಾಕಿ ಸಂಸ್ಥೆ ಸಂತಾಪ ಸೂಚಿಸಿದೆ.

ಹುಬ್ಬಳ್ಳಿ ಕಾನೂನು ವಿವಿಗೆ ಜಯ

ಬೆಂಗಳೂರು: ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು, ಗುರುವಾರ ಶ್ರೀಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಅಂತರ ಕಾನೂನು ಕಾಲೇಜು ಟೇಬಲ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು. ಶೇಷಾದ್ರಿಪುರಂ ಕಾನೂನು ಕಾಲೇಜು ಮತ್ತು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಜಂಟಿ ಆಶ್ರಯದಲ್ಲಿ ನಡೆದ ಈ ಟೂರ್ನಿಯ ಪುರುಷರ ವಿಭಾದಲ್ಲಿ 15 ತಂಡಗಳು ಮತ್ತು ಮಹಿಳಾ ವಿಭಾಗದಲ್ಲಿ 14 ತಂಡಗಳು ಭಾಗವಹಿಸಿದ್ದವು. ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜು ಎರಡನೇ, ಆತಿಥೇಯ ಶೇಷಾದ್ರಿಪುರಂ ಕಾನೂನು ಕಾಲೇಜು ಮೂರನೇ ಸ್ಥಾನ ಪಡೆದವು. ಬೆಂಗಳೂರಿನ ವಿವೇಕಾನಂದ ಕಾನೂನು ಕಾಲೇಜು ನಾಲ್ಕನೇ ಸ್ಥಾನ ಗಳಿಸಿತು. ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆಯಿತು. ಬೆಳಗಾವಿಯ ಆರ್.ಎಲ್. ಕಾನೂನು ಕಾಲೇಜು ಎರಡನೇ ಸ್ಥಾನ ಪಡೆಯಿತು. ಬೆಂಗಳೂರಿನ ಕ್ರೈಸ್ಟ್ ಕಾನೂನು ಕಾಲೇಜು ಮೂರನೇ ಮತ್ತು ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜು ನಾಲ್ಕನೇ ಸ್ಥಾನ ಪಡೆದವು.

ದರೋಡೆ ಯತ್ನ: ನಾಲ್ವರ ಸೆರೆ

ಕೊಯಮತ್ತೂರು: ಕೇರಳದ ಕೊಚ್ಚಿಯ ಅಸ್ಲಾಂ ಸಿದ್ದಿಕಿ ಬೆಂಗಳೂರಿನಲ್ಲಿ ಕಂಪ್ಯೂಟರ್ ಖರೀದಿಸಿ ಕಾರಿನಲ್ಲಿ ತೆರಳುತ್ತಿದ್ದಾಗ ತಮಿಳು ನಾಡಿನಲ್ಲಿ ದರೋಡೆಕೋರರ ತಂಡ ಅಡ್ಡಗಟ್ಟಿ ಮಾರಕಾಸ್ತ್ರ ತೋರಿಸಿ ದರೋಡೆಗೆ ಯತ್ನಿಸಿದೆ. ಸಿದ್ದಿಕಿ ಜಾಹೀರಾತು ಏಜೆನ್ಸಿ ನಡೆಸುತ್ತಿದ್ದು, ಜೂ.13ರಂದು ನಾಲ್ವರು ಸ್ನೇಹಿತರೊಂದಿಗೆ ಕಾರಿನಲ್ಲಿ ಬೆಂಗಳೂರಿಗೆ ಭೇಟಿ ನೀಡಿ ಕಂಪ್ಯೂಟರ್, ಬಿಡಿಭಾಗಗಳನ್ನು ಖರೀದಿಸಿ ದ್ದರು. ಬಳಿಕ ಕೊಯಮತ್ತೂರು ಮಾರ್ಗವಾಗಿ ಕೊಚ್ಚಿಗೆ ಹಿಂತಿರುಗುತ್ತಿದ್ದರು. ಸಿದ್ದಿಕಿ ದೂರು ಮತ್ತು ವಿಡಿಯೊ ದೃಶ್ಯಾವಳಿ ಆಧರಿಸಿ ತನಿಖೆ ಆರಂಭಿಸಿದ ಕೊಯಮತ್ತೂರು ಮಧುಕರೈ ಪೊಲೀಸರು 4 ಆರೋಪಿಗಳನ್ನು ಬಂಧಿಸಿದ್ದಾರೆ. ಸಿದ್ದಿಕಿ ಮಧ್ಯರಾತ್ರಿ ಕಾರಿನಲ್ಲಿ ತೆರಳುತ್ತಿದ್ದಾಗ ಕೊಯಮತ್ತೂರು ಬಳಿ ಹೆದ್ದಾರಿಯಲ್ಲಿ ಅಡ್ಡಗಟ್ಟಿದ ದರೋಡೆಕೋರರ ತಂಡ ಮಾರಕಾಸ್ತ್ರಗಳಿಂದ ದಾಳಿಗೆ ಮುಂದಾಗಿದೆ. ಅಪಾಯ ಅರಿತ ಕಾರು ಚಾಲಕ ಕೂಡಲೇ ಕಾರನ್ನು ವೇಗವಾಗಿ ಹಿಮ್ಮುಖವಾಗಿ ಚಲಾಯಿಸಿದ್ದಾನೆ. ಆಗ ಕಾರಿನ ಬಾಗಿಲುಗಳು ದರೋಡೆಕೋರರಿಗೆ ಗುದ್ದಿವೆ. ದರೋಡೆಕೋರರು ಚೇತರಿಸಿಕೊಳ್ಳುವಷ್ಟರಲ್ಲೇ ಕಾರನ್ನು ಚಾಲಕ ದೂರಕ್ಕೆ ಕೊಂಡೊಯ್ದು ಕಾರಿನಲ್ಲಿದ್ದವರನ್ನು ರಕ್ಷಿಸಿದ್ದಾನೆ. ಇದಿಷ್ಟೂ ದೃಶ್ಯ ಕಾರಿನ ಡ್ಯಾಶ್‌ಬೋರ್ಡ್ ಕ್ಯಾಮರಾದಲ್ಲಿ ಸೆರೆಯಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಳಿಕ ಸಿದ್ದಿಕಿ ಮಧುಕರೈ ಪೊಲೀಸ್ ಠಾಣೆಗೆ ತೆರಳಿ ದೂರು ಕೊಟ್ಟಿದ್ದಾರೆ. ವಿಡಿಯೋ ಆಧಾರದ ಮೇರೆಗೆ ಕಾರ್ಯಾಚರಣೆ ನಡೆಸಿದ ಕೊಯಮತ್ತೂರು ಪೊಲೀಸರು ಕೇರಳದ ನಾಲ್ವರು ಮುಸುಕುಧಾರಿ ದರೋಡೆಕೋರರನ್ನು ಬಂಧಿಸಿದ್ದಾರೆ. ಕೇರಳದ ಶಿವದಾಸ್, ರಮೇಶ್ ಬಾಬು, ವಿಷ್ಣು, ಅಜಯ್ ಕುಮಾರ್ ಬಂಧಿತರು.

ದಕ್ಷಿಣ ಆಫ್ರಿಕಾ ವಿರುದ್ಧದ ಮೊದಲ ಪಂದ್ಯದಲ್ಲಿ ಭಾರತ ತಂಡ ಜಯ

ಸ್ಮೃತಿ ಶತಕ: ಭಾರತ ವಿಜೇತ

ಬೆಂಗಳೂರು: ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗ ಣದಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಉಪನಾಯಕಿ ಸ್ಮೃತಿ ಭರ್ಜರಿ ಶತಕ ಗಳಿಸಿದರು. ಅವರ ಬ್ಯಾಟಿಂಗ್ ಮತ್ತು ಆಶಾ ಶೋಭನಾ ಅವರ ಪರಿಣಾಮಕಾರಿ ಬೌಲಿಂಗ್‌ನಿಂದ ಭಾರತ ಮಹಿಳಾ ತಂಡವು ದಕ್ಷಿಣ ಆಫ್ರಿಕಾ ಎದುರು 143 ರನ್‌ಗಳ ಬೃಹತ್ ಜಯ ದಾಖಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆಯನ್ನೂ ಸಾಧಿಸಿತು. ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಈ ಸಲದ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿಯಾಗಿರುವ ಸ್ಮೃತಿಗೆ ಚಿನ್ನಸ್ವಾಮಿ ಕ್ರೀಡಾಂಗಣವು ತವರಿನ ಅಂಗಳವೂ ಆಗಿದೆ.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಪ್ರವಾಸಿ ತಂಡದ ಮಧ್ಯಮವೇಗಿ ಮಸಾಬೆತಾ ಕ್ಲಾಸ್ (51ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದ ಆತಿಥೇಯ ಬಳಗವು ಆರಂಭಿಕ ಆಘಾತ ಎದುರಿಸಿತು. ಕೇಲವ 55 ರನ್‌ಗಳಿಗೆ 3 ವಿಕೆಟ್ ಪತನವಾದವು.

ಆದರೆ ಈ ಹಂತದಲ್ಲಿ ದಿಟ್ಟ ಹೋರಾಟ ನಡೆಸಿದ ಸ್ಮೃತಿ ಶತಕ ದಾಖಲಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 ರನ್ ಗಳಿಸಲು ಸಾಧ್ಯವಾಯಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 37.4 ಓವರ್‌ಗಳಲ್ಲಿ 122 ರನ್‌ಗಳಿಗೆ ಕುಸಿಯಿತು. ಇದಕ್ಕೆ ಕಾರಣವಾಗಿದ್ದು ಸ್ಪಿನ್ನರ್ ಆಶಾ ಶೋಭನಾ (21ಕ್ಕೆ4) ಮತ್ತು ದೀಪ್ತಿ ಶರ್ಮಾ (10ಕ್ಕೆ2) ಕಾರಣರಾದರು.

ಎಡಗೈ ಬ್ಯಾಟರ್ ಸ್ಮೃತಿ ಅವರಿಗೆ ಏಕದಿನ ಕ್ರಿಕೆಟ್‌ನಲ್ಲಿ ಇದು ಆರನೇ ಶತಕ. 27 ವರ್ಷದ ಸ್ಮೃತಿ ಅವರ ಆಟವು ಅಪಾರ ತಾಳ್ಮೆ ಮತ್ತು ಏಕಾಗ್ರತೆಯಿಂದ ಕೂಡಿತ್ತು. 116 ಎಸೆತದಲ್ಲಿ ಅವರು 100ರ ಗಡಿ ಮುಟ್ಟಿದರು.

ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ದೀಪ್ತಿ ಶರ್ಮಾ (37; 48) ಹಾಗೂ ಪೂಜಾ (ಔಟಾಗದೆ 31; 42) ಮಹತ್ವದ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 (ಸ್ಮೃತಿ ಮಂದಾನ 117, ದೀಪ್ತಿ ಶರ್ಮಾ 37, ಪೂಜಾ ವಸ್ತ್ರಕರ್ ಔಟಾಗದೆ 31,

ಅಯಾಬೊಂಗಾ ಕಾಕಾ 47ಕ್ಕೆ3, ಮಸಾಬೆತಾ ಕ್ಲಾಸ್ 51ಕ್ಕೆ2) ದಕ್ಷಿಣ ಆಫ್ರಿಕಾ: 37.4 ಓವರ್‌ಗಳಲ್ಲಿ 122 (ಸೂನ್ ಲೂಸ್ 33, ಮರಿಜಾನೆ ಕಾಪ್ 24, ಸಿನಾಲೊ ಜಫ್ತಾ ಔಟಾಗದೆ 27, ದೀಪ್ತಿ ಶರ್ಮಾ 10ಕ್ಕೆ2, ಆಶಾ ಶೋಭನಾ 21ಕ್ಕೆ4)

ಫಲಿತಾಂಶ: ಭಾರತಕ್ಕೆ 143 ರನ್‌ಗಳ ಜಯ. ಸರಣಿಯಲ್ಲಿ 1-0 ಮುನ್ನಡೆ.

ಮುಂದಿನ ಪಂದ್ಯ: ಜೂನ್ 19

ಸೂಪರ್-8 ಪ್ರವೇಶಕ್ಕೆ ಗೆಲ್ಲ ಬೇಕಿದ್ದ ಪಂದ್ಯದಲ್ಲಿ ಸ್ಕಾಟ್ಲೆಂಡ್ ಸೋಲು

ಆಸಿಸ್‌ಗೆ ಜಯ: ಆಂಗ್ಲರಿಗೆ ಲಾಭ

ಗ್ರಾಸ್ ಐಲೆಟ್ (ಸೇಂಟ್ ಲೂಸಿಯಾ): ಸೂಪರ್-8 ಪ್ರವೇಶಕ್ಕೆ ಗೆಲ್ಲಲೇ ಬೇಕಿದ್ದ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡ ಆಸ್ಟ್ರೇಲಿಯಾ ವಿರುದ್ಧ 5 ವಿಕೆಟ್ ಅಂತರದ ಸೋಲು ಕಾಣುವ ಮೂಲಕ ಟೂರ್ನಿಯಿಂದ ಹೊರಬಿದ್ದಿದೆ. ಆಸ್ಟ್ರೇಲಿಯಾದ ಈ ಗೆಲುವಿನಿಂದಾಗಿ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡ ಸೂಪರ್-8ಕ್ಕೆ ಪ್ರವೇಶ ಪಡೆಯುವಂತಾಯಿತು. ಸ್ಕಾಟ್ಲೆಂಡ್ ಮತ್ತು ಇಂಗ್ಲೆಂಡ್ ಬಿ ಗುಂಪಿನಲ್ಲಿ ತಲಾ 5 ಅಂಕ ಪಡೆದಿದ್ದರೂ ಕೂಡ ರನ್ ರೇಟ್ ಆಧಾರದಲ್ಲಿ ಇಂಗ್ಲೆಂಡ್ ಮುಂದಿದ್ದ ಕಾರಣ ಈ ಲಾಭ ಜಾಸ್ ಬಟ್ಲರ್ ಪಡೆಗೆ ಲಭಿಸಿತು.

ಇಲ್ಲಿನ ಸೇಂಟ್ ಲೂಸಿಯಾದ ಡ್ಯಾರೆನ್ ಶಮಿ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಸ್ಕಾಟ್ಲೆಂಡ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 180 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಈ ದೊಡ್ಡ ಮೊತ್ತವನ್ನು ಬೆನ್ನಟ್ಟಿದ ಆಸ್ಟ್ರೇಲಿಯಾ 19.4 ಓವರ್‌ಗಳಲ್ಲಿ 5 ವಿಕೆಟ್‌ಗೆ 186 ರನ್ ಬಾರಿಸಿ ಗೆಲುವು ದಾಖಲಿಸಿತು. ಆಸೀಸ್ ಬ್ಯಾಟಿಂಗ್ ಸರದಿಯಲ್ಲಿ ಆರಂಭಿಕ ಆಟಗಾರ ಟ್ರಾವಿಸ್ ಹೆಡ್(68) ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್ ಮಾರ್ಕಸ್ ಸ್ಟೋಯಿನಿಸ್(59) ಅರ್ಧಶತಕ ಬಾರಿಸಿ ಮಿಂಚಿದರು. ಉಳಿದಂತೆ ಟಿಮ್ ಡೇವಿಡ್ ಅಜೇಯ 24 ರನ್ ಬಾರಿಸಿದರು. ಡೇವಿಡ್ ವಾರ್ನರ್(1) ಮತ್ತು ನಾಯಕ ಮಿಚೆಲ್ ಮಾರ್ಷ್(8) ಮತ್ತೆ ವಿಫಲರಾದರು.

ಪಂದ್ಯದ ತಿರುವು: 17 ಓವರ್ ತನಕ ಪಂದ್ಯ ಸ್ಕಾಟ್ಲೆಂಡ್ ತಂಡದ ಪರ ಇತ್ತು. ಆದರೆ 18ನೇ ಓವರ್‌ನಲ್ಲಿ ಪಂದ್ಯದ ಚಿತ್ರಣವೇ ಬದಲಾಯಿತು. ಬ್ರಾಡ್ ವೀಲ್ ಓವರ್‌ನಲ್ಲಿ ಕ್ಯಾಮರೂನ್ ಗ್ರೀನ್ ಹ್ಯಾಟ್ರಿಕ್ ಬೌಂಡರಿ ಬಾರಿಸಿ ಒಟ್ಟು

13 ರನ್ ಕಸಿದರು. ಇದಕ್ಕೂ ಮುನ್ನ 2 ಓವರ್ ನಡೆಸಿ ಒಂದು ಮೇಡನ್ ಸಹಿತ ವಿಕೆಟ್ ಕಿತ್ತಿದ್ದ ಬ್ರಾಡ್ ವೀಲ್ ಈ ಓವರ್‌ನಲ್ಲಿ ದುಬಾರಿಯಾದರು. ಇದು ಸ್ಕಾಟ್ಲೆಂಡ್ ತಂಡದ ಸೋಲಿಗೆ ಪ್ರಮುಖ ಕಾರಣವಾಯಿತು. ಒಂದೊಮ್ಮೆ ಈ ಓವರ್ ಕಂಟ್ರೋಲ್ ಆಗುತ್ತಿದ್ದರೆ ಸ್ಕಾಟ್ಲೆಂಡ್‌ಗೆ ಗೆಲುವಿನ ಅವಕಾಶ ಇರುತ್ತಿತ್ತು.

ಮೊದಲು ಬ್ಯಾಟಿಂಗ್ ನಡೆಸಿದ ಸ್ಕಾಟ್ಲೆಂಡ್ ಬಿರುಸಿನ ಆಟಕ್ಕೆ ಒತ್ತು ನೀಡಿ ದೊಡ್ಡ ಮೊತ್ತವನ್ನು ಕಲೆಹಾಕಿತು. ಆರಂಭಿಕ ಆಟಗಾರ ಜಾರ್ಜ್ ಮುನ್ಸಿ ಆರಂಭದಿಂದಲೇ ಆಸೀಸ್ ಬೌಲರ್‌ಗಳ ಮೇಲೆರಗಿ ಮೂರು ಸಿಕ್ಸರ್ ಮತ್ತು 2 ಸಿಕ್ಸರ್ ನೆರವಿನಿಂದ 35 ರನ್ ಬಾರಿಸಿ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಈ ವಿಕೆಟ್ ಪತನದ ಬಳಿಕ ಬಂದ ಬ್ರಾಂಡನ್ ಮೆಕ್ಮಲ್ಲೆನ್ ಕೂಡ ಆಕ್ರಮಣಕಾರಿ ಬ್ಯಾಟಿಂಗ್ ನಡೆಸಿ ಗಮನಸೆಳೆದರು. ಆದರೆ ಪಂದ್ಯ ಸೋತ ಕಾರಣ ಇವರ ಬ್ಯಾಟಿಂಗ್ ಸಾಹಸ ವ್ಯರ್ಥಗೊಂಡಿತು. ಆಸೀಸ್ ಪರ ಗ್ಲೆನ್ ಮ್ಯಾಕ್ಸ್‌ವೆಲ್ 44 ರನ್ ವೆಚ್ಚದಲ್ಲಿ 2 ವಿಕೆಟ್ ಕಿತ್ತರು.

ಕ್ರೊಯೇಷಿಯ ಮಣಿಸಿದ ಸ್ಪೇನ್

ಬರ್ಲಿನ್: ಶನಿವಾರ ರಾತ್ರಿ ನಡೆದ ಯುರೋ ಕಪ್ ಪಂದ್ಯದಲ್ಲಿ ಸರ್ವಾಂಗೀಣ ಪ್ರದರ್ಶನ ತೋರಿದ ಸ್ಪೇನ್ ತಂಡ ಕ್ರೊವೇಷಿಯಾವನ್ನು 3-0 ಗೋಲ್‌ಗಳಿಂದ ಮಣಿಸಿದೆ. ಬರ್ಲಿನ್‌ನಲ್ಲಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸ್ಪೇನ್ ಪರ ಅಲ್ವೆರೊ ಮೊರಾಟ (29ನೇ ನಿಮಿಷ), ಫ್ಯಾಬಿಯಾನ್ ರುಯೆಜ್ (32ನೇ ನಿಮಿಷ), ಡ್ಯಾನಿ ಕಾರ್ವಜಲ್ (45+22ನೇ ನಿಮಿಷ) ತಲಾ ಒಂದು ಗೋಲು ಸಿಡಿಸಿದರು. ಇವರ ಆರ್ಭಟದ ಮುಂದೆ ಕ್ರೊವೇಷಿಯಾಕ್ಕೆ ಕನಿಷ್ಠ ಒಂದು ಗೋಲು ಬಾರಿಸಲು ಸಾಧ್ಯವಾಗಲಿಲ್ಲ.

ಮೊದಲ ಅವಧಿಯಲ್ಲೇ ಮುನ್ನಡೆ ಸಾಧಿಸಿದ ಸ್ಪೇನ್ ಪಂದ್ಯದುದಕ್ಕೂ ಮೇಲುಗೈ ಸಾಧಿಸಿತು. ಎರಡನೇ ಅವಧಿಯಲ್ಲಿ ಎಚ್ಚೆತ್ತ ಕ್ರೊವೇಷಿಯಾ ಗೋಲು ಗಳಿಸಲು ಶತ ಪ್ರಯತ್ನ ಪಟ್ಟರೂ ಕೂಡ ಸ್ಪೇನ್ ರಕ್ಷಣಾ ಕೋಟೆಯನ್ನು ಭೇದಿಸುವಲ್ಲಿ ಯಶಸ್ಸು ಕಾಣಲಿಲ್ಲ. ಖ್ಯಾತ ರಿಯಲ್ ಮ್ಯಾಡ್ರಿಡ್ ತಂಡದ ಮಿಡ್‌ಫೀಲ್ಡರ್ ಮಾಡ್ರಿಕ್, ಮಾಟಿಯೊ ಕೊವಾಸಿಕ್ ಮತ್ತು ಮಾರ್ಸೆಲೊ ಬ್ರಾಝೊವಿಕ್ ಅವರನ್ನೊಳಗೊಂಡ

ಕ್ರೊವೇಷಿಯಾ ಒಂದೂ ಗೋಲು ಬಾರಿಸಲಾಗದೆ ಹೀನಾಯ ಸೋಲು ಕಂಡಿತು. ಈ ಗೆಲುವಿನೊಂದಿಗೆ ಸ್ಪೇನ್ ತಂಡ ಮತ್ತೆ ಕ್ರೊವೇಷಿಯಾ ವಿರುದ್ಧ ತನ್ನ ಪ್ರಾಬಲ್ಯ ಮುಂದುವರಿಸಿದೆ. ಯುರೋ 2020ರ ಕೂಟದ 16ರ ಘಟ್ಟದ ಪಂದ್ಯದಲ್ಲಿ ಸ್ಪೇನ್ ಹೆಚ್ಚುವರಿ ಅವಧಿಯ ಆಟದಲ್ಲಿ ಕ್ರೊವೇಷಿಯಾ ಮೇಲೆ ಜಯಗಳಿಸಿತ್ತು.

ಭಾರತೀಯ ಕ್ರಿಕೆಟ್ ತಂಡಕ್ಕೆ ಗಂಭೀರ್ ಕೋಚ್

ಮಾಸಾಂತ್ಯದಲ್ಲಿ ಅಧಿಕೃತ ಘೋಷಣೆ | 2027ರ ವರೆಗೂ ತಂಡದ ಮಾರ್ಗದರ್ಶಿ

ದೆಹಲಿ: ಭಾರತ ಕ್ರಿಕೆಟ್ ತಂಡದ ನೂತನ ಕೋಚ್ ಆಗಿ ಮಾಜಿ ಕ್ರಿಕೆಟಿಗ ಗೌತಮ್ ಗಂಭೀರ್ ಅವರನ್ನೇ ನೇಮಕ ಮಾಡಲು ಬಿಸಿಸಿಐ ತೀರ್ಮಾನ ಕೈಗೊಂಡಿದ್ದು ಇದೇ ತಿಂಗಳ ಅಂತ್ಯದಲ್ಲಿ ಅಧಿಕೃತ ಘೋಷಣೆ ಮಾಡಲಿದೆ ಎಂದು ಕೆಲ ಆಂಗ್ಲ ಮಾಧ್ಯಮಗಳು ವರದಿ ಮಾಡಿದೆ. ರಾಹುಲ್ ದ್ರಾವಿಡ್ ಅವರು ಟಿ20 ವಿಶ್ವಕಪ್ ಬಳಿಕ ಕೋಚ್ ಹುದ್ದೆಯಿಂದ ಕೆಳಗಿಳಿಯಲಿದ್ದಾರೆ.

ದ್ರಾವಿಡ್ ಅವರು ಕೋಚ್ ಹುದ್ದೆಯಿಂದ ಕೆಳಗಿಳಿಯುವುದಾಗಿ ಹೇಳಿದ ಬೆನ್ನಲ್ಲೇ ಗಂಭೀರ್ ಮುಂದಿನ ಕೋಚ್ ಎನ್ನುವ ಮಾತುಗಳು ಕೇಳಿಬಂದಿತ್ತು. ಐಪಿಎಲ್ ವೇಳೆ ಇದಕ್ಕಾಗಿ ಜಯ್ ಶಾ ಮತ್ತು ಬಿಸಿಸಿಐ ಅಧಿಕಾರಿಗಳು ಕೂಡ ಗಂಭೀರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು. ಮೂಲಗಳ ಪ್ರಕಾರ ಗಂಭೀರ್ ಕೂಡ ಕೋಚ್ ಆಗಲು ಒಪ್ಪಿಕೊಂಡಿದ್ದಾರೆ ಎಂದು ತಿಳಿದುಬಂದಿದೆ. ಈ ಬಾರಿಯ ಐಪಿಎಲ್‌ನಲ್ಲಿ ಕೆಕೆಆರ್ ತಂಡಕ್ಕೆ ಯಶಸ್ವಿ ಮಾರ್ಗದರ್ಶನ ನೀಡಿ ತಂಡವನ್ನು ಚಾಂಪಿಯನ್ ಮಾಡಿದ ಗಂಭೀರ್, ರಾಹುಲ್ ದ್ರಾವಿಡ್ ಅವರ ಸ್ಥಾನ ತುಂಬಲು ಅರ್ಹರು ಎಂದು ಬಿಸಿಸಿಐ ಭಾವಿಸಿದೆ ಎಂದು ಮೂಲಗಳು ತಿಳಿಸಿವೆ. ಮೂಲಗಳ ಪ್ರಕಾರ ಗಂಭೀರ್ ಕೋಚ್ ಆಗುವ

ದೃಷ್ಟಿಯಿಂದಲೇ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿಲ್ಲ ಎನ್ನಲಾಗಿದೆ.

ಕಳೆದ ತಿಂಗಳು ಬಿಸಿಸಿಐ ಕೋಚ್ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಿತ್ತು. ಆರಂಭದಲ್ಲಿ ಎನ್‌ಸಿಎ ಮುಖ್ಯಸ್ಥರಾಗಿರುವ ವಿವಿಎಸ್ ಲಕ್ಷ್ಮಣ್ ಅವರ ಹೆಸರು ಕೇಳಿ ಬಂದಿತ್ತು. ಆದರೆ ಅವರು ಕೋಚ್ ಹುದ್ದೆಯಲ್ಲಿ ಆಸಕ್ತಿ ಹೊಂದಿಲ್ಲ ಎಂದು ಹೇಳಿದ್ದರು. ಈ ವೇಳೆ ಗಂಭೀರ್ ಕೋಚ್ ಆಗಲಿದ್ದಾರೆ ಎನ್ನುವ ಮಾತುಗಳು ಕೇಳಿ ಬಂದಿತ್ತು. ಸದ್ಯ ಅವರೇ ಕೋಚ್ ಆಗುವುದು ಖಚಿತ ಎನ್ನುತ್ತಿದೆ ಮೂಲಗಳು. ನೂತನ ಕೋಚ್ ಆಗಿ ಆಯ್ಕೆಯಾದವರ ಕಾರ್ಯಾವಧಿ 2027ರ ಡಿಸೆಂಬರ್ 31ಕ್ಕೆ ಮುಕ್ತಾಯಗೊಳ್ಳುತ್ತದೆ. 2027ರಲ್ಲಿ ನಡೆಯುವ ಏಕದಿನ ವಿಶ್ವಕಪ್ ಟೂರ್ನಿಯೂ ಈ ಕೋಚ್‌ಗೆ ಸಿಗಲಿದೆ. ಆಯ್ಕೆಯಾದ ಹೊಸ ಕೋಚ್ ಟಿ20 ವಿಶ್ವಕಪ್ ಟೂರ್ನಿಯ ನಂತರ ತಕ್ಷಣವೇ ತಂಡದ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ.

ಮುಖ್ಯ ಕೋಚ್ ಹುದ್ದೆಗೆ ಅರ್ಜಿ ಭರ್ತಿ ಮಾಡುವ ಮುನ್ನ ಗಂಭೀರ್ ಅವರು ಒಂದು ಷರತ್ತು ಹಾಕಿದ್ದರು. ಆಯ್ಕೆಯ ಗ್ಯಾರಂಟಿ ನೀಡಿದರೆ ಮಾತ್ರ ಗಂಭೀರ್ ಈ ಹುದ್ದೆಗೆ ಅರ್ಜಿ ಸಲ್ಲಿಸಲು ಸಿದ್ಧರಿರುವುದಾಗಿ ಹೇಳಿದ್ದರು. ಕೋಚ್ ಹುದ್ದೆಗಾಗಿ ಎಷ್ಟು ಅರ್ಜಿಗಳು ಬಂದಿದೆ ಎಂಬುದರ ಬಗ್ಗೆ ಸದ್ಯ ಯಾವುದೇ ಮಾಹಿತಿ ಹೊರಬಿದ್ದಿಲ್ಲ ಆದರೆ ಗಂಭೀರ್ ಕೋಚ್ ಆಗುವುದು ಖಚಿತ ಎನ್ನಲಾಗಿದೆ.

ದ್ರಾವಿಡ್ ಕಳೆದ ವರ್ಷ ನಡೆದಿದ್ದ ಏಕದಿನ ವಿಶ್ವಕಪ್ ಬಳಿಕವೇ ಕೋಚ್ ಹುದ್ದೆಯಿಂದ ಕೆಳಗಿಳಿಯಲು ನಿರ್ಧರಿಸಿದ್ದರು. ಆದರೆ, ಬಿಸಿಸಿಐ ಟಿ20 ವಿಶ್ವಕಪ್ ತನಕ ಅವರನ್ನು ಮುಂದುವರಿಯುವಂತೆ ಒತ್ತಾಯ ಮಾಡಿತ್ತು. ಹೀಗಾಗಿ ದ್ರಾವಿಡ್ ಟಿ20 ವಿಶ್ವಕಪ್ ತನಕ ಈ ಹುದ್ದೆಯಲ್ಲಿ ಮುಂದುವರಿದರು.

ಪಾಕ್ ಕ್ರಿಕೆಟಿಗರ ವಾರ್ಷಿಕ ಸಂಭಾವನೆ ಕಡಿತ

ಇಸ್ಲಾಮಾಬಾದ್: ಈ ಬಾರಿಯ ಟಿ20 ವಿಶ್ವಕಪ್‌ನಲ್ಲಿ ಕಳಪೆ ಪ್ರದರ್ಶನ ತೋರುವ ಮೂಲಕ ಟೂರ್ನಿಯಿಂದ ಹೊರಬಿದ್ದು ಆಘಾತ ಕಂಡಿರುವ ಪಾಕಿಸ್ತಾನ ತಂಡದ ಆಟಗಾರರಿಗೆ ಮತ್ತೊಂದು ಶಾಕ್ ಎದುರಾಗಿದೆ. ಆಟಗಾರರ ವಾರ್ಷಿಕ ಸಂಭಾವನೆಯಲ್ಲಿ ಕಡಿತ ಮಾಡಲು ಪಾಕ್ ಕ್ರಿಕೆಟ್ ಮಂಡಳಿ ನಿರ್ಧರಿಸಿದೆ ಎಂದು ತಿಳಿದುಬಂದಿದೆ.

ಮೂರು ಪಂದ್ಯಗಳನ್ನು ಆಡಿರುವ ಪಾಕಿಸ್ತಾನವು ಅಮೆರಿಕ ಹಾಗೂ ಭಾರತದ ವಿರುದ್ಧ ಹೀನಾಯವಾಗಿ ಸೋಲನುಭವಿಸಿದೆ. ಕೆನಡಾ ವಿರುದ್ಧ ಮಾತ್ರ ಗೆದ್ದಿರುವ ಕಾರಣ 2 ಪಾಯಿಂಟ್‌ಗಳನ್ನು ಪಡೆದಿದೆ. ಅಮೆರಿಕ ಹಾಗೂ ಐರ್ಲೆಂಡ್ ನಡುವಿನ ಪಂದ್ಯವು ಮಳೆಯಿಂದ ರದ್ದಾದ ಕಾರಣ ಅಮೆರಿಕದ ಅಂಕ 5ಕ್ಕೆ ಏರಿಕೆಯಾಯಿತು. ಇದರಿಂದಾಗಿ ಐರ್ಲೆಂಡ್ ವಿರುದ್ಧ ಪಾಕ್ ಗೆದ್ದರೂ ಯಾವುದೇ ಉಪಯೋಗವಿಲ್ಲದಂತಾಗಿದೆ. ಟೂರ್ನಿಯಿಂದ ಹೊರಬಿದ್ದ ಪಾಕ್ ತಂಡದ ವಿರುದ್ಧ ಮಾಜಿ ಆಟಗಾರರು ಭಾರೀ ಟೀಕೆ ವ್ಯಕ್ತಪಡಿಸಿದ್ದಾರೆ. ಈ ರೀತಿ ಪ್ರದರ್ಶನ ತೋರುದಕ್ಕಿಂತ ಟೂರ್ನಿಯಲ್ಲಿ ಪಾಲ್ಗೊಳ್ಳದೇ ಇದ್ದಿದ್ದರೆ ಉತ್ತಮವಾಗಿರುತ್ತಿತ್ತು ಎಂದು ಆಕ್ರೋಶ ಹೊರಹಾಕಿದ್ದಾರೆ.

ಪಾಕ್ ಮಾಧ್ಯಮ ವರದಿಗಳ ಪ್ರಕಾರ ಮಾಜಿ ಆಟಗಾರರು ಹಾಗೂ ಪಿಸಿಬಿ ಸದಸ್ಯರು ಆಟಗಾರರ ಸಂಬಳ ಕಡಿತಗೊಳಿಸಲು ಪಾಕ್ ಕ್ರಿಕೆಟ್ ಮಂಡಳಿಯ ಅಧ್ಯಕ್ಷ ಮೊಹ್ಸಿನ್ ನಖ್ವಿಗೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಪಾಕ್ ಕ್ರಿಕೆಟ್ ಮಂಡಳಿ ಕೂಡ ಈ ವಿಚಾರವನ್ನು ಗಂಭಿರವಾಗಿ ಪರಿಗಣಿಸಿದ್ದು ಉನ್ನತ ಮಟ್ಟದ ಸಭೆ ನಡೆಸಿ ಆಟಗಾರರ ಕೇಂದ್ರೀಯ ಗುತ್ತಿಗೆಯನ್ನು ಮರು ಪರಿಶೀಲಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಚಾಲೆಂಜರ್ ಟೂರ್ನಿ: ಫೈನಲ್‌ಗೆ ನಗಾಲ್ ನೆಗೆತ

ಪೆರುಜಿಯಾ, ಇಟಲಿ: ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಇಲ್ಲಿ ನಡೆಯುತ್ತಿರುವ ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿದರು. ಈ ಮೂಲಕ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಅಗ್ರ 50ರಲ್ಲಿ ಸ್ಥಾನ ಪಡೆಯುತ್ತ ದಾಪುಗಾಲು ಹಾಕಿದರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ವಿಶ್ವದ 77ನೇ ಕ್ರಮಾಂಕದ ನಗಾಲ್ 7-6 (7-2), 1-6, 6-2 ರಿಂದ ಸ್ಪೇನ್‌ನ ಬರ್ನಾಬೆ ಜಪಾಟಾ ಮಿರಾಲ್ಲೆಸ್ ಅವರನ್ನು ಮೂರು ಸೆಟ್‌ಗಳ ಹೋರಾಟದಲ್ಲಿ ಹಿಮ್ಮೆಟ್ಟಿಸಿದರು. ಮತ್ತೊಂದು

ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಇಟಲಿಯ ಲೂಸಿಯಾನೊ ದರ್ಡೆರಿ ಮತ್ತು ನಾಲ್ಕನೇ ಶ್ರೇಯಾಂಕದ ಜರ್ಮನಿಯ ಡೇನಿಯಲ್ ಆಲ್ಟ್‌ಮೇಯರ್ ಸೆಣಸಲಿದ್ದು, ಅದರ ವಿಜೇತರನ್ನು ಆರನೇ ಶ್ರೇಯಾಂಕದ ನಗಾಲ್ ಭಾನುವಾರ ಫೈನಲ್ನಲ್ಲಿ ಎದುರಿಸಲಿದ್ದಾರೆ.

ಮೊದಲ ಸೆಟ್ ಅನ್ನು ಟೈಬ್ರೇಕರ್‌ನಲ್ಲಿ ಗೆದ್ದುಕೊಂಡ ನಗಾಲ್, ಎರಡನೇ ಸೆಟ್ನಲ್ಲಿ ಹಿನ್ನಡೆ ಅನುಭವಿಸಿದರು. ಆದರೆ, ಮೂರನೇ ಸೆಟ್ನಲ್ಲಿ ಮತ್ತೆ ಹಿಡಿತ ಸಾಧಿಸಿದ ಭಾರತದ 26 ವರ್ಷದ ಆಟಗಾರ ಗೆಲುವು ಸಾಧಿಸಿ ಮುನ್ನಡೆದರು.

ಈ ವರ್ಷ ಚೆನ್ನೈ ಓಪನ್ ಗೆದ್ದಿದ್ದ ನಗಾಲ್, ಕಳೆದ ವಾರ ಹೀಲ್ ಬ್ರಾನ್ ನೆಕರ್ಕಪ್ ಎಟಿಪಿ ಚಾಲೆಂಜರ್ ಟೂರ್ನಿಯಲ್ಲಿ ಕಿರೀಟ ಮುಡಿಗೇರಿಸಿಕೊಂಡಿದ್ದರು. ಇದೀಗ ವರ್ಷದ ಮೂರನೇ ಪ್ರಶಸ್ತಿಯ ಹೊಸ್ತಿಲಲ್ಲಿದ್ದಾರೆ.

ಮೊಬೈಲ್ ಫೋನ್ -ಇವಿಎಂ ಲಿಂಕ್

ಮುಂಬೈ: ವಿದ್ಯುನ್ಮಾನ ಮತಯಂತ್ರ (ಇವಿಎಂ) ಸ್ವತಂತ್ರ ವ್ಯವಸ್ಥೆಯಾಗಿದೆ. ಅದನ್ನು ಬೇರೆ ಯಾರೋ ಅನ್‌ಲಾಕ್ ಮಾಡಲು ಸಾಧ್ಯವಿಲ್ಲ. ಅದಕ್ಕೆಲ್ಲಾ 'ಒಟಿಪಿ' ಇರುವುದಿಲ್ಲ ಎಂದು ಮಹಾರಾಷ್ಟ್ರ ರಾಜಧಾನಿ ಮುಂಬೈನ ಚುನಾವಣಾಧಿಕಾರಿ ಒಬ್ಬರು ಭಾನುವಾರ ಸ್ಪಷ್ಟಪಡಿಸಿದ್ದಾರೆ.

'ಜೂ.4ರಂದು ಮತ ಎಣಿಕೆ ನಡೆದಾಗ 48 ಮತ ಅಂತರದಿಂದ ಜಯಿಸಿದ ಶಿವಸೇನೆ (ಏಕನಾಥ್ ಶಿಂದೆ ಬಣ) ಅಭ್ಯರ್ಥಿ ರವೀಂದ್ರ ವೈಕರ್ ಸಂಬಂಧಿ ಬಳಸಿದ್ದ ಮೊಬೈಲ್ ಫೋನ್, ಇವಿಎಂಗೆ ಸಂಪರ್ಕಗೊಂಡಿತ್ತು' ಎಂಬ ವರದಿ 'ಮಿಡ್-ಡೇ' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಈ ವರದಿಯಲ್ಲಿನ ಅಂಶಗಳನ್ನು ಕ್ಷೇತ್ರದ ಚುನಾವಣಾಧಿಕಾರಿ ವಂದನಾ ಸೂರ್ಯವಂಶಿ ಅಲ್ಲಗಳೆದಿದ್ದಾರೆ.

ಮತ ಎಣಿಕೆ ದಿನ ಮತ ಎಣಿಕೆ ಕೇಂದ್ರದಲ್ಲಿ ಮೊಬೈಲ್ ಫೋನ್ ಬಳಸಿದ ಆರೋಪದ ಮೇಲೆ ವೈಕರ್ ಅವರ ಸೋದರ ಮಾವ ಮಂಗೇಶ್ ಪಂಡಿಲ್ಕರ್ ವಿರುದ್ಧ ಬುಧವಾರ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿ ಶನಿವಾರ ತಿಳಿಸಿದ್ದರು.

ಈ ಬಗ್ಗೆ ಭಾನುವಾರ ಸುದ್ದಿಗೋಷ್ಠಿ ನಡೆಸಿದ ಸೂರ್ಯವಂಶಿ, ಇವಿಎಂ ಸ್ವತಂತ್ರ ವ್ಯವಸ್ಥೆಯಾಗಿದೆ ಮತ್ತು ಅದನ್ನು

ಬೇರೆಯವರು ತೆರೆಯಲು ಸಾಧ್ಯವಿಲ್ಲ. ಅದಕ್ಕೆ ಒಟಿಪಿ ವ್ಯವಸ್ಥೆಯೂ ಇಲ್ಲ. ಇವಿಎಂ ಮರು ಪ್ರೋಗ್ರಾಮೆಬಲ್ ಸಾಧನವಲ್ಲ. ಮತ್ತು ವೈರ್‌ಲೆಸ್ ಸಂವಹನ ಸಾಮರ್ಥ್ಯವನ್ನೂ ಅದು ಹೊಂದಿಲ್ಲ. ಈ ಬಗ್ಗೆ ಪತ್ರಿಕೆಯೊಂದ ವರದಿ ಸಂಪೂರ್ಣ ಸುಳ್ಳು ಎಂದು ಸ್ಪಷ್ಟಪಡಿಸಿದರು.

ಮಾನನಷ್ಟ ಮಾಡಿದ ಹಾಗೂ ಸುಳ್ಳು ಸುದ್ದಿ ಪ್ರಕಟಿಸಿದ ಮಿಡ್-ಡೇ ಪತ್ರಿಕೆಗೆ ಐಪಿಸಿ ಸೆಕ್ಷನ್ 499 ಮತ್ತು 505ರಡಿ ನೋಟಿಸ್ ನೀಡಿದ್ದೇವೆ ಎಂದು ತಿಳಿಸಿದರು.

ಜೂ.4ರಂದು ಗೋರೆಗಾಂವ್ ಮತ ಎಣಿಕೆ ಕೇಂದ್ರದಲ್ಲಿ ಮೊಬೈಲ್ ಫೋನ್ ಬಳಸಿದ ಆರೋಪದಡಿ ವೈಕರ್ ಅವರ ಸೋದರ ಮಾವ ಮಂಗೇಶ್ ಪಾಂಡಿಲ್ಕರ್ ವಿರುದ್ಧ ಐಪಿಸಿ ಸೆಕ್ಷನ್ 188ರಡಿ ಬುಧವಾರ ಪ್ರಕರಣ ದಾಖಲಿಸಲಾಗಿದೆ.

ಪ್ರಿಕ್ಸ್‌ನಲ್ಲಿ ಲವ್ಲಿನಾಗೆ ಬೆಳ್ಳಿ

ಪ್ಯಾರಿಸ್ ಒಲಿಂಪಿಕ್‌ನಲ್ಲೂ ಆಡಲಿರುವ ಆಟಗಾರ್ತಿ

ದೆಹಲಿ: ಟೋಕಿಯೊ ಒಲಿಂಪಿಕ್ ಪದಕ ವಿಜೇತೆ ಭಾರತೀಯ ಬಾಕ್ಸರ್ ಲವ್ಲಿನಾ ಬೊರ್ಗೊಹೈನ್ ಅವರು ಪ್ಯಾರಿಸ್ ಒಲಿಂಪಿಕ್ಸ್ ಟೂರ್ನಿಗೂ ಮುನ್ನ ಶ್ರೇಷ್ಠ ಪ್ರದರ್ಶನ ತೋರಿದ್ದಾರೆ. ಜೆಕ್ ಗಣರಾಜ್ಯದಲ್ಲಿ ನಡೆದ

ಗ್ರ್ಯಾಂಡ್ ಪ್ರಿಕ್ಸ್ 2024 ಸ್ಪರ್ಧೆಯಲ್ಲಿ ಬೆಳ್ಳಿ ಪದಕವನ್ನು ಜಯಿಸಿದ್ದಾರೆ. ಅವರ ಈ ಪ್ರದರ್ಶನ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಪದಕ ಭರವಸೆಯನ್ನು ಹೆಚ್ಚಿಸುವಂತೆ ಮಾಡಿದೆ.

ಮಹಿಳಾ ವಿಭಾಗದ ಫೈನಲ್ ಪಂದ್ಯದಲ್ಲಿ ಲವ್ಲಿನಾ ಚೀನಾದ ಲಿ ಕಿಯಾನ್ ವಿರುದ್ಧ ತೀವ್ರ ಹೋರಾಟ ನಡೆಸಿದರೂ ಕೂಡ 2-3 ಅಂಕಗಳ ಅಂತರದಿಂದ ಸೋತರು. ಇದಕ್ಕೂ ಮುನ್ನ ನಡೆದ ರೌಂಡ್ ರಾಬಿನ್ ಸುತ್ತಿನಲ್ಲಿ ಲವ್ಲಿನಾ ಇಂಗ್ಲೆಂಡ್‌ನ ಚಾಂಟಲ್ ರೀಡ್ ವಿರುದ್ಧ 3-2 ರಿಂದ ತನ್ನ ಮೊದಲ ಪಂದ್ಯವನ್ನು ಗೆದಿದ್ದರು. ಎರಡನೇ ಪಂದ್ಯದಲ್ಲಿ ಸೋಲು ಕಂಡಿದ್ದರು. 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ವೆಲ್ಟರ್‌ವೇಟರ್ ವಿಭಾಗದಲ್ಲಿ ಲವ್ಲಿನಾ ಕಂಚಿನ ಪದಕವನ್ನು ಗೆದ್ದಿದ್ದರು.

2024ರ ಪ್ಯಾರಿಸ್ ಒಲಿಂಪಿಕ್ಸ್‌ಗಾಗಿ ಬಾಕ್ಸಿಂಗ್‌ನಲ್ಲಿ ಭಾರತ ಆರು ಕೋಟಾಗಳನ್ನು ಪಡೆದಿದ್ದು, ಅಮಿತ್ ಪಂಗಲ್ (51 ಕೆಜಿ), ನಿಶಾಂತ್ ದೇವ್ (71 ಕೆಜಿ), ನಿಖತ್ ಜರೀನ್ (50 ಕೆಜಿ), ಪ್ರೀತಿ ಪವಾರ್ (54 ಕೆಜಿ), ಜೈಸ್ಮಿನ್ ಲಂಬೋರಿಯಾ (57 ಕೆಜಿ), ಲೊವ್ಲಿನಾ ಬೊರ್ಗೊಹೈನ್ (75 ಕೆಜಿ) ವಿಭಾಗದಲ್ಲಿ ಸ್ಪರ್ಧಿಸಲಿದ್ದಾರೆ.

ಟೋಕಿಯೊ 2020 ರ ಕಂಚಿನ ಪದಕ ವಿಜೇತೆ ಲವ್ಲಿನಾ ಬೊರ್ಗೊಹೈನ್ (ಮಹಿಳೆಯರ 75 ಕೆಜಿ), ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಜರೀನ್ (ಮಹಿಳೆಯರ 50 ಕೆಜಿ) ಮತ್ತು ಪ್ರೀತಿ ಪವಾರ್ (ಮಹಿಳೆಯರ 54 ಕೆಜಿ) ಕಳೆದ ವರ್ಷ ಹ್ಯಾಂಗ್ಝೌನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ತಮ್ಮ ಒಲಿಂಪಿಕ್ಸ್ ಕೋಟಾಗಳನ್ನು ಗೆದ್ದಿದ್ದರು.

ಪ್ರತಿಪಕ್ಷ ನಾಯಕ ಖರ್ಗೆ ಭೇಟಿಯಾದ ಸಚಿವ ರಿಜಿಜು

24ರಿಂದ 18ನೇ ಲೋಕಸಭೆ ಮೊದಲ ಅಧಿವೇಶನ

ದೆಹಲಿ: 18ನೇ ಲೋಕಸಭೆಯ ಮೊದಲ ಅಧಿವೇಶನಕ್ಕೆ ಒಂದು ವಾರ ಮುಂಚಿತವಾಗಿಯೇ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಅಧಿವೇಶನ ಕುರಿತು ಮಾಹಿತಿ ನೀಡಿದರು.

ರಾಜ್ಯಸಭೆಯಲ್ಲಿನ ಪ್ರತಿಪಕ್ಷ ನಾಯಕರಾದ ಖರ್ಗೆ ಅವರನ್ನು ದೆಹಲಿಯ ನಂ.10, ರಾಜಾಜಿ ಮಾರ್ಗ್ ನಿವಾಸದಲ್ಲಿ ರಿಜಿಜು ಭೇಟಿಯಾದರು. ಇದೊಂದು ಸೌಜನ್ಯದ ಭೇಟಿಯಷ್ಟೇ ಎಂದು ಹೇಳಲಾಗಿದೆ. ಖರ್ಗೆ ಅವರ ಭೇಟಿ ಸಂದರ್ಭದ ಫೋಟೋವನ್ನು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಕಿರಣ್ ರಿಜಿಜು, ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭೇಟಿ ಆಹ್ಲಾದಕರವಾಗಿತ್ತು. ಅವರು ತಮ್ಮ ಜೀವನದ ಹಲವು ಅಮೂಲ್ಯ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಂಡರು. ನಾವೆಲ್ಲರೂ ಒಟ್ಟಾಗಿ ದೇಶಕ್ಕಾಗಿ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ.

18ನೇ ಲೋಕಸಭೆಯ ಮೊದಲ ಅಧಿವೇಶನ ಜೂನ್ 24 ರಂದು ಪ್ರಾರಂಭವಾಗಲಿದ್ದು, ಈ ಸಂದರ್ಭದಲ್ಲಿ ಲೋಕಸಭೆಯ

ನೂತನ ಸದಸ್ಯರು ಪ್ರಮಾಣ ವಚನ ಸ್ವೀಕರಿಸುತ್ತಾರೆ ಮತ್ತು ಸ್ಪೀಕರ್ ಆಯ್ಕೆಯಾಗುತ್ತಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜೂ.27ರಂದು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಮತ್ತು ಮುಂದಿನ ಐದು ವರ್ಷಗಳ ಹೊಸ ಸರ್ಕಾರದ ಮಾರ್ಗಸೂಚಿಯನ್ನು ರೂಪಿಸುವ ಸಾಧ್ಯತೆಯಿದೆ.

ಸಾಮಾಜಿಕ ತಾಣ ಪಯಣ

ವಿಟಾಕೀಸ್

ಕರಗದ ಕನಸುಗಳು

ಕನಸಿನೂರಿಗೆ ತೆವಳುತ್ತಲೇ
ಸಾಗುತ್ತಿದ್ದೆ ಒಂಟಿಯಾಗಿ
ಎಲ್ಲಿಂದಲೋ ಮಿಂಚಂತೆ
ನೀ ಬಂದೆ ಜೊತೆಯಾದೆ
ಕಣ್ಣ ಮಳೆ ಕೆನ್ನೆ ಮೇಲಿಳಿದಂತೆ

ಕಂಗಳಲಿ ಸಾವಿರ ಬೆಳದಿಂಗಳ
ಕನಸುಗಳ ಬಿತ್ತಿದೆ
ಮನದಂಗಳ ತುಂಬಾ
ನವಿಲ ನರ್ತನ
ಭಾವ ಜೀವದಾಲಿಂಗನದಂತೆ

ಪ್ರೀತಿ ಸ್ನೇಹದ ಚೆಂಬೆಳಕು
ಹೊಂಬೆಳಕು ಮಿಲನ
ನೂರು ಹಣತೆ ಹಚ್ಚಿ
ಬೆಳಕ ಲಾಲಿ ಹಾಡಿದೆ
ಮೊಲ್ಲೆ ಮೊಗ್ಗು ಮೆಲ್ಲ ಬಿರಿದಂತೆ

ಕನಸಿನರಮನೆ ಹಾದಿಗೆ
ಭರವಸೆಯ ಹೂಮಳೆಗರೆದೆ
ಕನಸುಡಿಗೆ ತುಂಬಿ
ಮನ ಸೂರೆಗೊಂಡೆ
ಶಶಿ ಬೆಳಕಿಳಿದು ಭುವಿ ತಬ್ಬಿದಂತೆ

ಬಿತ್ತಿದ ಕನಸುಗಳ ಕಿತ್ತು
ಪರರ ಕಂಗಳಲಿ ನನಸಾಗಿಸಿದೆ
ಕರಗಿದ ಕನಸುಗಳ ಕರಿ ನೆರಳ
ಹಾದಿಯಲಿ ಕಾಯುತಿದೆ
ಚಂದ್ರ ಚೂರಿಯಾಗಿ ಎದೆಯಿರಿದಂತೆ

ಪುಟ್ಟ ಬಟ್ಟಲ ಕಂಗಳನರಳಿಸಿ
ಕನಸು ಕರಗದಂತೆ ಕಾಪಿಟ್ಟು
ಕಾಯುತಿದೆ ಹೂ ಹೃದಯ
ಮುಂದೊಮ್ಮೆ ನನಸಾಗಿ
ನಕ್ಷತ್ರ ನಗು ನಯನದೊಳಿಳಿದಂತೆ

ಕನಸುಗಳ ಕಡಲೊಳಗೆ
ಹಬ್ಬಿದಬಳ್ಳಿ ಮರ ತಬ್ಬಿದಂತೆ
ಇಬ್ಬನಿ ತಬ್ಬಿದ ಹೂಮೊಗದಂತೆ
ನನಸಾಗಲು ನೀನೆಂದು ಬರುವೆ
ನಸುಕು ಮುಸುಕು ಸರಿಸಿದಂತೆ

● **ಇಂದಿರಾ ಮೋಟೆಬೆನ್ನೂರ, ಬೆಳಗಾವಿ**

ಕಾರ್ಟೂನ್



ನೊಡ್ರೀ ..ಉಂಡೆ ಕೊಬ್ಬರಿ ಮಾರಾಟಕ್ಕೆ ಅವಕಾಶ ಮಾಡಿದ್ದಾರಂತೆ ..!!!

● **ಎಚ್.ಎಸ್. ವಿಶ್ವನಾಥ್**

ತನಗಗಳು

ಕಾನೂನಿನ ಎದುರು
ರಾಜಕಾರಣಿ ಏನು
ನಾಯಕನಾದರೇನು?
ತಲೆಬಾಗಲೇಬೇಕು
★
ದೊಡ್ಡ ನಾಯಕ ನಟ
ಮುಚ್ಚಿಡಲು ಕಪಟ
ಸುರಿದ ಲಕ್ಷನೋಟ
ನಡೆಯಲಿಲ್ಲ ಆಟ
★
ಆ ನಟನೊಳಗೊಬ್ಬ
ಖಳನಾಯಕನಿದ್ದ
ಏನೋ ಮಾಡಲು ಹೋಗಿ
ಹಾಳು ಬಾವಿಗೆ ಬಿದ್ದ
★
ದುಡುಕಿದ ಬುದ್ಧಿಗೆ
ಬಲಿಯಾದವರೆಷ್ಟು
ಆಘಾತ ಗೊಂಡ ಹುಚ್ಚು
ಅಭಿಮಾನಿಗಳೆಷ್ಟು
★
ಬಿದ್ದವನೆದ್ದು ನಿಂತು
ತಲೆಯೆತ್ತಬಹುದೆ?
ಜೈಕಾರ ಸನ್ಮಾನಕೆ
ಜನ ಮುತ್ತಬಹುದೆ?

ಮಾದರಿಯಾಗಬೇಕು
ಜನಪ್ರಿಯ ನಟರು
ಗಮನದಲಿ ಬೇಕು
ತನ್ನ ಹಿಂಬಾಲಕರು
★
ಅಭಿಮಾನಿಗಳಿಗೆ
ದಿಗಿಲಾಗಿದೆಯಂತೆ.
ತಾವು ಆರಾಧಿಸಿದ್ದು
ವಿವಾದಿಯನ್ನೇ ಅಂತ

● **ನಿಂಗಮ್ಮ ಭಾವಿಕಟ್ಟಿ ಹುನಗುಂದ**

ತರ್ಲೆತಿಮ್ಮ

ಹಾಡೊಂದ ನಾ ಹಾಡುವೆನು ಹೃದಯ ರಾಗದಲ್ಲಿ.. ಚಿತ್ರದಲ್ಲಿರುವವರು, ಲೈರಾ ಮೇಘನಾ

ಅತ್ಯಮೂಲ್ಯ ಸಮಯದ ವ್ಯಯ

● **ನಿರಂಜನ**

ನೀವು ಗಮನಿಸಿದ್ದೀರೋ ಇಲ್ಲವೋ ಅಥವ ಯೋಚಿಸಿದ್ದೀರೋ ಇಲ್ಲವೊ, ನಾನು ನಿಮಗೆ ಈಗ ತಿಳಿಸುವ ವಿಷಯ ನನ್ನನ್ನು ಮನಸನ್ನು ತುಂಬಾ ದಿವಸದಿಂದ ಕೊರೆಯುತ್ತಿದೆ. ಇತ್ತೀಚಿನ ದಿನಗಳಲ್ಲಿ, ಟಿವಿ ಹಾಗೂ ಮೊಬೈಲ್ ಗೀಳಿಗೆ ಅಂಟಿಕೊಂಡದ್ದೇವೆ. ಇದು ಎಲ್ಲಿಯವರೆಗೆ ಬಂದು ನಿಂತಿದೆ ಎಂದರೆ, ಗಂಡ ಹೆಂಡತಿಯನ್ನು, ಹೆಂಡತಿಯನ್ನು ಮಕ್ಕಳು ತಂದೆ ತಾಯಿಯನ್ನಾದರೂ ಬಿಟ್ಟಾರು, ಆದರೆ ಮೊಬೈಲ್ ಮಾತ್ರ ಬಿಡೆವು ಎನ್ನುವ ಸ್ಥಿತಿಗೆ ಬಂದಿದ್ದೇವೆ.

ವಿಷಯಕ್ಕೆ ಬರುವೆ. ನಾವು(ನನ್ನ ಮಟ್ಟಿಗೆ ಹೇಳುವುದಾದರೆ) ನಾವು ಪ್ರತಿ ದಿನ ಟಿವಿ,ಮೊಬೈಲ್ ನಲ್ಲಿ ಯಾವುದೋ ಕಾರ್ಯಕ್ರಮ ನೋಡುವಾಗ ಪ್ರತಿ ಎರಡು ಮೂರು ನಿಮಿಷಗಳಿಗೆ ಜಾಹೀರಾತುಗಳು ಬರುತ್ತವೆ. ಸ್ವಲ್ಪ ಜಾಹಿರಾತು ತೋರಿಸಿದ ನಂತರ ಸಮಯದ ಕೌಂಟಡೌನ್ ಟೈಮ್ ತೋರಿಸಲು ಪ್ರಾರಂಭಿಸುತ್ತಾರೆ.ಆ ಸಮಯದಲ್ಲಿ ಮೊಬೈಲ್ ನಲ್ಲಿ ಫಾರ್ವರ್ಡ್ ಮಾಡಲಾಗದಂತೆ ಮಾಡಿರಲಾಗಿರುತ್ತೆ. ಆಗ ನನಗೆ ಒಂದು ತರಹದ ಆತಂಕ ಅಂತ ಬೇಕಾದರೂ ಅಂದುಕೊಳ್ಳಿ ಅಥವಾ ತೊಳಲಾಟ ಎಂದಾದರೂ ತಿಳಿಯಿರಿ. ಪ್ರತಿ ಕಾರ್ಯಕ್ರಮ ನೋಡುವಾಗಲು ನಾವು ಇಷ್ಟು ಸಮಯ ವ್ಯರ್ಥ ಮಾಡುತ್ತೇವೆ ಎಂದಾದರೆ, ಬರೀ ಜಾಹೀರಾತುಗಳಿಗಾಗಿಯೇ ನಮ್ಮ ಜೀವನದ ಎಷ್ಟು ಅತ್ಯಮ್ಯೂಲ್ಯ ಗಂಟೆಗಳು, ದಿನಗಳು ವ್ಯರ್ಥ ಮಾಡುತ್ತೇವೆ ಎನ್ನುವ ಭಯ ಕಾಡಲು ಶುರುವಾಗುತ್ತೆ.

ಹೀಗೆ ಇಂತಹ ಅನೇಕ ಕೆಲಸಕ್ಕೇ ಬಾರದ ವಾಟ್ಸಾಪ್ ಚಾಟ್, ಮೊಬೈಲ್, ಇನ್ಸ್ಟಾಗ್ರಾಮ್, ಸೋಷಿಯಲ್ ಮೀಡಿಯಾ ಹೀಗೆ ಮುಂತಾದ ಕೆಲಸಕ್ಕೆ ಬಾರದ, ನಮ್ಮ ಸಮಯವನ್ನು ನಮಗೇ ಗೊತ್ತಿರದಂತೆ ನುಂಗುವ ಹಾಕುವ ವಿಷಯವನ್ನು ಬಿಟ್ಟು ಸಾಹಿತ್ಯ, ಇತಿಹಾಸ, ದೇಶ ವಿದೇಶಗಳ ಬಗ್ಗೆ ಪತ್ರಿಕೆ, ಪುಸ್ತಕ ಓದುವ ಮುಖಾಂತರ ತಿಳಿಯುವ ಮುಖಾಂತರ ನಮ್ಮ ಸಮಯವನ್ನು ಸದ್ಬಳಕೆ ಮಾಡಿಕೊಂಡರೆ ಆಗುವ ಸಂತೋಷವೇ ಬೇರೆ ಅಲ್ಲವೇ?

ಪ್ರೀತಿಯೆಂಬ ಮಾರ್ಗ

● **ಶಂಕರಾನಂದ ಹೆಬ್ಬಾಳ**

ಮನುಷ್ಯನೆಂದ ಮೇಲೆ ಕಾಯದಲ್ಲಿ ಅರಿಷಡ್ವರ್ಗಗಳು ಇದ್ದದ್ದೆ. ಆದರೆ ಯಾವುದು ಎಷ್ಟಿರಬೇಕು ಅಷ್ಟಿದ್ದರೆ ಏನು ಚಿಂತೆಯಿಲ್ಲ ಅದರಲ್ಲೂ ದ್ವೇಷ ಅಸೂಯೆಗಳು ಮನುಷ್ಯನ ಮನಸ್ಸನ್ನು ವಿಕೃತಿಯತ್ತ ಕೊಂಡೊಯ್ದು ಅವಸಾನವನ್ನೆ ಕಾಣಿಸಿಬಿಡುತ್ತವೆ. ಅಸೂಯೆಯಿಂದ ಹುಟ್ಟಿದ ಕೌರವರ ಸ್ಥಿತಿ ಏಳಿಗೆಯಾಗಲಿಲ್ಲ. ದ್ವೇಷದ ಮನಸ್ಸಿನಲ್ಲಿ ಶಾಂತಿಯಿರುವುದಿಲ್ಲ.

ಚಿತ್ತದನುಭವ ಭಾವ ಸಂಭಾವನೆಗಳೆಲ್ಲ।
ಬತ್ತವದನು ವಿಚಾರಯುಕ್ತಿಗಳು ಕುಟ್ಟೆ॥
ತತ್ವತಂಡುಲ ದೊರೆಗುಮುದು ವಿವೇಚಿತತತ್ವ।
ನಿತ್ಯ ಭೋಜನ ನಮಗೆ - ಮಂಕುತಿಮ್ಮ॥

ನಮ್ಮ ಮನದಲ್ಲಿನ ಅನುಭವಗಳು, ಭಾವಗಳು ಭತ್ತವಿದ್ದಂತೆ ಅದನ್ನು ಯುಕ್ತಿ ಹಾಗೂ ವಿಚಾರಗಳೆಂಬ ಒನಕೆಯಿಂದ ಕುಟ್ಟಿದರೆ ಅಕ್ಕಿರೂಪದ ತತ್ವ ಸಿಗುತ್ತದೆ ಅದನ್ನೆ ಆಹಾರವಾಗಿ ಸ್ವೀಕರಿಸಬೇಕು ಎಂಬುದು ಈ ಕಗ್ಗದ ಅರ್ಥ.

ಒಂದೂರಿನಲ್ಲಿ ಒಬ್ಬ ಹುಡುಗನಿದ್ದ. ಇತ ಸದಾಕಾಲ ಪರರನ್ನು ನಿಂದಿಸುವುದು ಹಾಗೂ ಜಗಳವಾಡುವುದು ಹೀಗೆಲ್ಲ ಮಾಡುತಿದ್ದ. ತಂದೆ ಮಗನಿಗೆ ಬುದ್ಧಿ ಹೇಳಿ ಹೇಳಿ ರೋಸಿಹೋಗಿದ್ದ. ಮನೆಯ ವಾತಾವರಣ ಹಾಗೂ ಶಾಲೆಯ ವಾತಾವರಣಕ್ಕೆ ಈ ಹುಡುಗ ದೊಡ್ಡ ತಲೆನೋವಾಗಿದ್ದ.ಒಬ್ಬನೆ ಮಗ ಏನು ಮಾಡಬೇಕೆಂಬ ಉಭಯಸಂಕಟದಲ್ಲಿ ಒದ್ದಾಡ ತೊಡಗಿದ. ಮಗನ ಕಿರಿಕಿರಿಗಳು, ಜಗಳಗಳನ್ನು ಬಗೆಹರಿಸಿ ತಂದೆಗೆ ಜೀವನವೆ ಬೇಸರವಾಗಿತ್ತು. ತಂದೆ ಇವನಿಗೆ ಎಷ್ಟು ಬುದ್ದಿ ಹೇಳಿದರೂ ಅದು ಬಂಡೆಮೇಲೆ ನೀರು ಸುರಿದಂತಾಗಿತ್ತು.

ಕೊನೆಗೆ ತಂದೆಯೆ ಇದಕ್ಕೊಂದು ಉಪಾಯ ಕಂಡುಕೊಂಡ. ಆ ದಿನ ಮಗನನ್ನು ಕರೆದು, 'ಮಗನೆ, ನೋಡು ಈ ಕೈಚೀಲವನ್ನು ತಗೆದುಕೋ. ಜತೆಗೆ ಈ ಆಲೂಗಡ್ಡೆಯನ್ನು ತೆಗೆದುಕೋ. ಈಗ ನೀನು ಏನು ಮಾಡಬೇಕೆಂದರೆ, ಪ್ರತಿನಿತ್ಯ ಯಾರ ಜತೆ ನೀನು ಜಗಳವಾಡುತ್ತಿಯೋ ಹಾಗೂ ದ್ವೇಷ ಮಾಡುತ್ತಿಯೋ ಅವರ ಹೆಸರಿನಲ್ಲಿ ಈ ಚೀಲದೊಳಗೆ ಒಂದು ಆಲೂಗಡ್ಡೆಯನ್ನು ಹಾಕಬೇಕು. ಆ ಚೀಲವನ್ನು ಜತೆಯಲ್ಲಿ ಹಿಡಿದು ತಿರುಗಾಡಬೇಕು' ಎಂದು ಹೇಳಿದ. ಹುಡುಗ ಸರಿ ಇದೇನು ಮಹಾಶಿಕ್ಷೆ ಎಂದು ಒಪ್ಪಿಕೊಂಡ. ಮೊದಲನೆ ದಿನ ಹುಡುಗ ಅದರಲ್ಲಿ ಐದು ಆಲೂಗಡ್ಡೆಗಳನ್ನು ಹಾಕಿದ. ಅನಂತರ ಆ ಚೀಲ ತುಂಬುತ್ತಾ ಹೋಯಿತು. ಅದಿರಲಿ ಬರಿ ಚೀಲ ತುಂಬಿದ್ದರೆ ಸಮಸ್ಯೆಯಾಗಲಿಲ್ಲ. ಆ ಆಲೂಗಡ್ಡೆಗಳು ಕೊಳೆತು ವಾಸನೆ ಬರಲಾರಂಭಿಸಿದವು. ಆತನಿಗೆ ದಿನವೂ ಅವುಗಳನ್ನು ಹೊತ್ತು ತಿರುಗುವುದು ಸಾಕಾಗಿ ಹೋಯಿತು.ಕೊನೆಗೆ ಒಂದು ದಿನ ಚೀಲ ಕೆಳಗಿಟ್ಟು 'ಅಪ್ಪಾ...! ಇದು ನನ್ನಿಂದ ಸಾಧ್ಯವಿಲ್ಲ' ಎಂದು ಕುಳಿತುಬಿಟ್ಟ. ತಂದೆಯು ತಲೆಯ ಸವರುತ್ತ, 'ಮಗು ನಾನು ನಿನಗೆ ಇದನ್ನೆ ಹೇಳಿದ್ದು. ಕೋಪ, ದ್ವೇಷ, ಜಗಳ ಮನಸ್ಸನ್ನು ಹಾನಿ ಮಾಡುತ್ತವೆ, ಕೊಳಕಾಗಿಸುತ್ತವೆ. ಹಾಗೆಯೇ ಕೊಳಕಾಗದ ಮತ್ತು ಹಾನಿಮಾಡದ ಪ್ರೀತಿಯನ್ನು ನೀನು ಸಂಪಾದಿಸು ಎಂದು ತಿಳಿಸಿ ಹೇಳಿದ. ಮುಂದೆ ಆ ಮಗು ಅರಿವಿನ ಮೂರ್ತಿಯಾಗಿ ಜಗತ್ಪ್ರಸಿದ್ಧನಾದ.

ನಾವು ನೀವೆಲ್ಲ ಈ ಹುಡುಗನಂತೆ ಬರಿ ದ್ವೇಷ ಅಸೂಯೆಗಳಲ್ಲಿ ಜೀವನವನ್ನು ನರಕವಾಗಿಸಿ ಸುಂದರವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದೇವೆ. ಇರುವುದೆಷ್ಟು ದಿನ ಲೋಕದಲ್ಲಿ ಬರಿ ಮೂರು ದಿನದ ಬದುಕಿನಲ್ಲಿ ನರಕವನ್ನು ನೋಡುತ್ತಿದ್ದೇವೆ. ಯಮನು ತೋರಿಸುವ ನರಕಕ್ಕಿಂತ ಈ ನರಕ ಭಯಂಕರವಾಗಿದೆ. ನಿತ್ಯವೂ ದಿನಪತ್ರಿಕೆಗಳಲ್ಲಿ, ನ್ಯೂಸ್ ಚಾನಲಗಳಲ್ಲಿ ಎಲ್ಲೆಂದರಲ್ಲೆ ಹೊಡೆದಾಟ ಬಡಿದಾಟ ಇವುಗಳದ್ದೆ ಕಾರುಬಾರಾದರೆ ಪ್ರೀತಿಗೆ ಅರ್ಥವೆ ಇಲ್ಲದಂತಾಗುತ್ತದೆ.ಹಾಗಾಗಿ ಎಲ್ಲರೂ ನಮ್ಮವರೆಂದು ಪ್ರೀತಿಸೋಣ, ಪ್ರೀತಿಯ ಹಾದಿಯಲ್ಲಿ ಎಲ್ಲರಿಗೂ ತೋರಿಸಿ ಸುಖಜೀವಿಗಳಾಗಿ ಬದುಕೋಣ.



ಮಮ್ಮೂಟಿ ಜತೆಯಾದ ಸಮಂತಾ

ನಟಿ ಸಮಂತಾ, ಮಯೋಸಿಟಿಸ್ ಎಂಬ ಅಪರೂಪದ ಖಾಯಿಲೆಯಿಂದ ಬಳಲುತ್ತಿದ್ದರು, ಅಮೇರಿಕಾಗೆ ತೆರಳಿ ಚಿಕಿತ್ಸೆ ಪಡೆದು ವಿಶ್ರಾಂತಿ ಪಡೆದಿದ್ದರು. ಹಾಗಾಗಿ ಅವರನ್ನು ಯಾವ ಚಿತ್ರದಲ್ಲಿಯೂ ಕಾಣಲು ಸಾಧ್ಯವಾಗಿರಲಿಲ್ಲ, ಸೋಷಿಯಲ್ ಮೀಡಿಯಾದಲ್ಲಿ ಸಕ್ರೀಯವಾಗಿದ್ದ ಸಮಂತಾ, ತಮ್ಮ ಆರೋಗ್ಯದ ಬಗ್ಗೆ ಅಪ್‌ಡೇಟ್ ನೀಡುವ ಜತೆಗೆ ಕೆಲವು ಫೋಟೋಗಳನ್ನು ಹಂಚಿಕೊ ಳ್ಳುತ್ತಿದ್ದರು, ಈಗ ಸಮ್ಮು ಮತ್ತೆ ನಟನೆಗೆ ಮರಳಿದ್ದಾರೆ. ಮಲೆಯಾಳಂ ಖ್ಯಾತ ನಟ ಮಮ್ಮೂಟಿ ಅಭಿನಯಿಸುತ್ತಿ ರುವ ಹೊಸ ಚಿತ್ರದಲ್ಲಿ ಸಮಂತಾ ನಾಯಕಿಯಾಗಿ ನಟಿಸುತ್ತಿ ದ್ದಾರೆ. ಇದು ಆ್ಯಕ್ಷನ್, ಥ್ರಿಲ್ಲರ್ ಚಿತ್ರವಾಗಿದ್ದು, ಸಮಂತಾ ಕೂಡ ಆ್ಯಕ್ಷನ್‌ನಲ್ಲಿ ಮಿಂಚಲಿದ್ದಾರೆ. ಗೌತಮ್ ವಾಸು ದೇವನ್ ಮೆನನ್ ನಿರ್ದೇಶನದಲ್ಲಿ ಚಿತ್ರ ಮೂಡಿಬರು ತ್ತಿದ್ದು, ಸಿನಿಮಾದ ಶೂಟಿಂಗ್ ಕೂಡ ಆರಂಭವಾಗಿದೆ.

ಟರ್ಬೊ ಚಿತ್ರದ ಗೆಲುವಿನ ಖುಷಿಯಲ್ಲಿರುವ ಮಮ್ಮೂಟಿ ಈಗ ಮತ್ತೆ ಹೊಸ ಅವತಾರದಲ್ಲಿ ಮಿಂಚಲಿದ್ದಾರೆ. ಇದು ಪ್ಯಾನ್ ಇಂಡಿಯಾ ಸಿನಿಮಾವಾಗಿದ್ದು, ಮಲೆಯಾಳಂ, ತೆಲುಗು, ಕನ್ನಡ ಸೇರಿದಂತೆ ಪಂಚಭಾಷೆಗಳಲ್ಲಿ ಮೂಡಿಬರಲಿದೆ. ಇತ್ತ ಸಿಟಾಡೆಲ್ ವೆಬ್ ಸೀರೀಸ್‌ನಲ್ಲಿ ಅಭಿನಯಿಸಿರುವ ಸಮಂತಾ ಅದರ ಬಿಡುಗಡೆಗೆ ಎದಿರು ನೋಡುತ್ತಿದ್ದಾರೆ, ನಟನೆಯ ಜತೆಗೆ ನಿರ್ಮಾದಣದತ್ತಲೂ ಒಲವು ತಾಳಿದ್ದು, ಬಂಗಾರಂ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಈಗ ಮತ್ತೆ ನಟನೆಗೆ ಮರಳಿರುವುದು ಸಿನಿಪ್ರಿಯರಿಗೆ ಖುಷಿ ಕೊಟ್ಟಿದೆ.

ವಿದ್ಯಾರ್ಥಿಗಳ ಪಾರ್ಟಿ ಸಾಂಗ್

ಅರುಣ್ ಅಮುಕ್ತ ನಿರ್ದೇಶನದ ವಿದ್ಯಾರ್ಥಿ ವಿದ್ಯಾರ್ಥಿನಿಯರೇ ಚಿತ್ರದ ಶೂಟಿಂಗ್ ಮುಕ್ತಾಯವಾಗಿದ್ದು ತೆರೆಗೆ ಬರಲು ಸಿದ್ಧವಾಗಿದೆ. ಸದ್ಯ ಚಿತ್ರದ ಸ್ಟೂಡೆಂಟ್ ಪಾರ್ಟಿ.. ಸಾಂಗ್ ಬಿಡುಗಡೆಯಾಗಿದೆ. ಚೇತನ್ ಕುಮಾರ್ ಸಾಹಿತ್ಯದ ಈ ಹಾಡಿಗೆ ವಿಜೇತ್ ಕೃಷ್ಣ ಸಂಗೀತ ಸಂಯೋಜಿಸಿದ್ದಾರೆ. ರ್‍ಯಾಪ್ ಶೈಲಿಯಲ್ಲಿರುವ ಈ ಗೀತೆ ಚಂದನ್ ಶೆಟ್ಟಿ ಮತ್ತು ವಿಜೇತ್ ಕೃಷ್ಣ ದನಿಯಲ್ಲಿ ಮೂಡಿಬಂದಿದೆ. ಪಾರ್ಟಿ ಸಾಂಗ್ ಅದ್ಭುತವಾಗಿ ಮೂಡಿಬಂದಿದ್ದು, ಯುವ ಸಮೂಹದ ಮನಗೆದ್ದಿದೆ. ಚಂದನ್ ಶೆಟ್ಟಿ, ಅಮರ್, ಭಾವನಾ, ಮನಸ್ವಿ, ವಿವಾನ್, ಭವ್ಯಾ, ಸುನೀಲ್ ಪುರಾಣಿಕ್, ಅರವಿಂದ ರಾವ್, ಸಿಂಚನಾ, ರಘು ರಾಮನಕೊಪ್ಪ, ಪ್ರಶಾಂತ್ ಸಂಬರ್ಗಿ, ಕಾಕ್ರೋಚ್ ಸುಧಿ ಮುಂತಾದವರು ನಟಿಸಿದ್ದಾರೆ. ವೆರೈಟಿ ಕ್ರಿಯೇಷನ್ಸ್ ಬ್ಯಾನರ್‌ನಲ್ಲಿ ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಕುಮಾರ್ ಗೌಡ ಛಾಯಾಗ್ರಹಣ, ಭರ್ಜರಿ ಚೇತನ್ ಮತ್ತು ವಾಸುಕಿ ವೈಭವ್ ಸಾಹಿತ್ಯ, ಪವನ್ ಗೌಡ ಸಂಕಲನ, ಟೈಗರ್ ಶಿವು, ನರಸಿಂಹ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ. ಜುಲೈ 19 ರಂದು ಚಿತ್ರ ರಾಜ್ಯಾದ್ಯಂತ ತೆರೆಗೆ ಬರಲಿದೆ.

ನಾಡಸಿಂಹ ಕೆಂಪೇಗೌಡರ ಹಾಡು ಬಿಡುಗಡೆ

ಹೆಚ್.ಎಂ.ಕೃಷ್ಣಮೂರ್ತಿ ನಿರ್ಮಿಸಿರುವ ನಾಡಪ್ರಭು ಕೆಂಪೇಗೌಡರ ಕುರಿತ ನಾಡಸಿಂಹ ಕೆಂಪೇಗೌಡ ಎಂಬ ಹಾಡು ಬಿಡುಗಡೆಯಾಗಿದೆ.

ಈ ಹಾಡಿನಲ್ಲಿ ಕೆಂಪೇಗೌಡರ ಪಾತ್ರದಲ್ಲಿ ಕೃಷ್ಣಮೂರ್ತಿ ಕಾಣಿಸಿಕೊಂಡಿದ್ದಾರೆ. ಟಿ.ಎಸ್.ನಾಗಾಭರಣ, ವಿನಯಾ ಪ್ರಸಾದ್, ಧರ್ಮ, ನೀನಾಸಂ ಅಶ್ವತ್, ಮುನಿ, ಹೆಚ್. ವಾಸು, ವಿಕ್ಟರಿ ವಾಸು ಮುಂತಾದವರು ಈ ಹಾಡಿನಲ್ಲಿ ಅಭಿನಯಿಸಿದ್ದಾರೆ. ಕೆ.ರಾಮನಾರಾಯಣ್ ಬರೆದಿರುವ ಈ ಹಾಡಿಗೆ ಶ್ರೀಧರ್ ವಿ ಸಂಭ್ರಮ್ ಸಂಗೀತ ಸಂಯೋಜಿಸಿದ್ದಾರೆ. ಶಂಕರ್ ಮಹಾದೇವನ್ ಮತ್ತು ಅನುರಾಧಾ ಭಟ್ ಹಾಡಿಗೆ ದನಿಯಾಗಿದ್ದಾರೆ. ಭಜರಂಗಿ ಮೋಹನ್ ನೃತ್ಯ ನಿರ್ದೇಶನ, ಕೃಷ್ಣ ಕುಮಾರ್ ಛಾಯಾ ಗ್ರಹಣ ಪುನೀತ್ ಸಂಕಲನ ಈ

ಬೆಂಗಳೂರು ಹಾಗೂ ಸುತ್ತಮುತ್ತಲ್ಲಿನ ಊರುಗಳಿಗೆ ಮಾಗಡಿ ಕೆಂಪೇಗೌಡರು ಮಾಡಿರುವ ಉಪಕಾರ ಮಹತ್ತರವಾದ್ದದ್ದು. ಅಂತಹ ಮಹಾನುಭಾವರ ಸ್ಮರಣೆಗಾಗಿ ಈ ಹಾಡನ್ನು ನಿರ್ಮಿಸಿದ್ದೇನೆ. ಮೊದಲ ಬಾರಿಗೆ ಕೆಂಪೇಗೌಡರ ಪಾತ್ರದಲ್ಲೂ ಕಾಣಿಸಿಕೊಂಡಿದ್ದೇನೆ.
- ಹೆಚ್.ಎಂ.ಕೃಷ್ಣಮೂರ್ತಿ ನಿರ್ಮಾಪಕ

ಟೀಸರ್ ನಲ್ಲಿ ಮಿಂಚಿದ ಕಣ್ಣಪ್ಪ

ಅದ್ದೂರಿ ಬಜೆಟ್ ನಲ್ಲಿ ನಿರ್ಮಾಣವಾಗಿರುವ ಪ್ಯಾನ್ ಇಂಡಿಯಾ ಸಿನಿಮಾ ಕಣ್ಣಪ್ಪ ಸೆಟ್ಟೇರಿದಾಗಿನಿಂದಲೂ ಸಖತ್ ಸದ್ದು ಮಾಡುತ್ತಿದೆ. ಸದ್ಯ ಕಣ್ಣಪ್ಪನ ಟೀಸರ್ ರಿಲೀಸ್ ಆಗಿದ್ದು ಸಿನಿಪ್ರಿಯರ ಮನಗೆದ್ದಿದೆ. ವಿಷ್ಣುಮಂಚು ಆ್ಯಕ್ಷನ್ ನಲ್ಲಿಯೇ ಮಿಂಚಿದ್ದಾರೆ. ಪೌರಾಣಿಕ ಕಥೆಯ ಜತೆಗೆ ಐತಿಹಾಸಿಕ ಸ್ಟೋರಿಯೂ ಇಲ್ಲಿದೆ. ಡಾ.ಮೋಹನ್ ಬಾಬು ನಿರ್ಮಾಣದ ಈ ಚಿತ್ರವನ್ನು ಮುಖೇಶ್ ಕುಮಾರ್ ಸಿಂಗ್ ನಿರ್ದೇಶಿಸಿದ್ದಾರೆ. ಕಣ್ಣಪ್ಪ ಎರಡನೇ ಶತಮಾನದ ಚೋಳರ ಕಾಲದ ಕಥೆಯನ್ನು ಆಧರಿಸಿ ನಿರ್ಮಾಣವಾಗುತ್ತಿದೆ. ಶರತ್ ಕುಮಾರ್, ಮೋಹನ್ ಬಾಬು, ಅಕ್ಷಯ್ ಕುಮಾರ್, ಪ್ರಭಾಸ್ ,ಕಾಜಲ್ ಅಗರ್ ವಾಲ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ.

ಕಣ್ಣಪ್ಪ ಕೇವಲ ಸಿನಿಮಾವಲ್ಲ ಇದು ನಮ್ಮ ಇತಿಹಾಸ. ಪ್ರತಿಯೊಬ್ಬರೂ ತಮ್ಮ ತಮ್ಮ ಪಾತ್ರಗಳನ್ನು ಜೀವಿಸಿದ್ದಾರೆ. ಈಗಲೂ ನಾವು ಆ ಪಾತ್ರಗಳಲ್ಲಿ ಉಳಿದಿದ್ದೇವೆ. ಅಷ್ಟೊಂದು ಅಚ್ಚುಕಟ್ಟಾಗಿ ಸಿನಿಮಾ ಮೂಡಿಬಂದಿದೆ ಎಂದು ನಟ ಶರತ್‌ಕುಮಾರ್ ಹೇಳಿದರು.

ಕಣ್ಣಪ್ಪ ಚೋಳರ ಕಾಲದ ಕಥೆಯಾಗಿದೆ. ಹದಿನಾಲ್ಕನೇ ಶತಮಾನದಲ್ಲಿ ಕವಿ ಧೂರ್ಜಟಿ ಬರೆದಿರುವ ಐತಿಹಾಸಿಕ ವಿಚಾರಗಳನ್ನು ಅಧರಿಸಿ ಚಿತ್ರದಕಥೆ ಹೆಣೆದು ತೆರೆಗೆ ತರಲಾಗುತ್ತಿದೆ. ಪ್ರತಿ ಸನ್ನಿವೇಶಗಳು ಕೂಡ ಅದ್ಭುತವಾಗಿ ಮೂಡಿಬಂದಿವೆ.
- ವಿಷ್ಣು ಮಂಚು ನಟ

ಕಣ್ಣಪ್ಪ ಚಿತ್ರದ ಶಕ್ತಿಯೇ ನನ್ನ ಕಲಾವಿದರು. ಕೊರೆಯುವ ಚಳಿಯಲ್ಲೂ ಇಡೀ ತಂಡ ಶ್ರಮಿಸಿದೆ. ವಿಷ್ಣು, ಶರತ್ ಕುಮಾರ್, ಮೋಹನ್ ಬಾಬು ನನ್ನ ನಿರೀಕ್ಷೆಗೂ ಮೀರಿದ ಬೆಂಬಲ ನೀಡಿದ್ದಾರೆ.
- ಮುಕೇಶ್ ಕುಮಾರ್ ಸಿಂಗ್ ನಿರ್ದೇಶಕ

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಚಿತ್ರ, ಶುಕ್ಲಪಕ್ಷ, ಏಕಾದಶಿ, ಯೋಗ ಪರಿಘ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು

ಅಂಗೈ ಮತ್ತು ಅಂಗಾಲಿನಲ್ಲಿ ಉರಿ ಇದ್ದರೆ, ಬೆಟ್ಟದ ನೆಲ್ಲಿಕಾಯಿ ಒಣಗಿಸಿ ಪುಡಿಮಾಡಿಟ್ಟುಕೊಳ್ಳಿ. ಪ್ರತಿನಿತ್ಯ ಈ ಪುಡಿಯನ್ನು ಮಜ್ಜಿಗೆಗೆ ಸೇರಿಸಿ ಕುಡಿಯುವುದರಿಂದ ಅಂಗೈ, ಅಂಗಾಲಿನ ಉರಿಯನ್ನು ತಪ್ಪಿಸಬಹುದು.

ಸೌಂದರ್ಯ ಸೂತ್ರ

ಚಿಯಾ ಬೀಜದಲ್ಲಿ ಒಮೆಗಾ 3, ಒಮೆಗಾ 6 ಕೊಬ್ಬಿನ ಆಮ್ಲ ಸಮೃದ್ಧವಾಗಿದೆ. ಚರ್ಮದ ಆರೋಗ್ಯಕ್ಕೆ ಒಳ್ಳೆಯದು. ಇದನ್ನು ಸಣ್ಣದಾಗಿ ರುಬ್ಬಿಕೊಂಡು, ಪೇಸ್ಟ್ ಮಾಡಿ ಮುಖಕ್ಕೆ ಹಚ್ಚಿಕೊಳ್ಳುವುದರಿಂದ ಚರ್ಮವನ್ನು ತೇವಗೊಳಿಸಿ, ಆಕರ್ಷಕವಾಗಿಸುತ್ತದೆ.

ದಿನ ಭವಿಷ್ಯ

ಮೇಷ ಸ್ನೇಹಿತರೊಂದಿಗೆ ಪಾರ್ಟಿಗೋಸ್ಕರ ಸಾಕಷ್ಟು ಹಣ ಖರ್ಚು ಮಾಡಬಹುದು. ಹಾಗಿದ್ದರು ಆರ್ಥಿಕವಾಗಿ ಗಟ್ಟಿಯಾಗಿರುತ್ತೀರಿ.

ವೃಷಭ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಹಣ ಉಳಿತಾಯ ಮಾಡಿದರೆ ಪ್ರಯೋಜನ. ಇಂದು ನಿಮ್ಮ ಹೆಸರು ಕೆಡಿಸುವ ಪ್ರಯತ್ನ ನಡೆಯಲಿದೆ.

ಮಿಥುನ ಸಂಗಾತಿಯ ಜತೆ ಕುಟುಂಬದ ಸಮಸ್ಯೆ ಹಂಚಿಕೊಳ್ಳಿ. ಮನೆಯಲ್ಲಿನ ಶಾಂತಿ ಸಾಮರಸ್ಯದ ವಾತಾವರಣದಿಂದ ಮಕ್ಕಳಿಗೂ ನೆಮ್ಮದಿ.

ಕಟಕ ಸಮಸ್ಯೆಗಳ ಬಗ್ಗೆ ಜಾಸ್ತಿ ಚಿಂತಿಸದಿರಿ. ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಕೌಶಲ್ಯ ಇಂದು ಸಿದ್ಧಿಸಲಿದೆ. ಅವಿವಾಹಿತರಿಗೆ ಮದುವೆ ಪ್ರಸ್ತಾಪ.

ಸಿಂಹ ಅತಿಥಿಗಳ ಆಗಮನದಿಂದ ಮನೆಯಲ್ಲಿ ಆಹ್ಲಾದಕರ ವಾತಾವರಣ. ಮಕ್ಕಳಿಂದ ಖುಷಿ ವಿಚಾರ ಕೇಳಲಿದ್ದೀರಿ. ಅಪರಿಚಿತ ವ್ಯಕ್ತಿ ಭೇಟಿ.

ಕನ್ಯಾ ಹೊಸದೇನಾದರೂ ಕಲಿಯಬೇಕೆಂಬ ತುಡಿತ ನಿಮ್ಮಲ್ಲಿರುತ್ತದೆ. ಕಲಿಕೆಗೆ ಪ್ರಸಕ್ತ ಸಮಯ. ಹಿರಿಯರ ಆಶೀರ್ವಾದದಿಂದ ಧನಲಾಭ.

ತುಲಾ ಇತರರನ್ನು ಟೀಕಿಸುವಾಗ ಎಚ್ಚರ. ಇದರಿಂದ ನಿಮಗೆ ತೊಂದರೆ ಆಗಲಿದೆ. ಮಕ್ಕಳು ನಿಮಗೆ ಕೆಲಸ ಕಾರ್ಯದಲ್ಲಿ ಸಹಾಯ ಮಾಡುತ್ತಾರೆ.

ವೃಶ್ಚಿಕ ನಕಾರಾತ್ಮಕ ಭಾವನೆ ಬಿಡಿ. ಸಂಗಾತಿಗೆ ಸಮಯ ಕೊಟ್ಟಿಲ್ಲ ಅನ್ನೋದು ಅಸಮಾಧಾನಕ್ಕೆ ಕಾರಣ ಆಗಬಹುದು.

ಧನು ಅಪರಿಚಿತ ವ್ಯಕ್ತಿ ಸಲಹೆಯಿಂದ ಹೂಡಿಕೆ ಮಾಡಿದಲ್ಲಿ ಲಾಭ ಸಾಧ್ಯತೆ. ಸ್ನೇಹಿತರು ಸಂಬಂಧಿಗಳ ಜತೆ ವ್ಯವಹರಿಸುವಾಗ ಹಿತಾಸಕ್ತಿ ಕಾಪಾಡಿ.

ಮಕರ ಇಂದು ನಿಮಗೆ ಚೈತನ್ಯದಾಯಕ ದಿನ. ಅನಿರೀಕ್ಷಿತ ಲಾಭ ನಿರೀಕ್ಷಿಸಬಹುದು. ಪ್ರೀತಿಯ ವಿಚಾರದಲ್ಲಿ ನಿರಾಶರಾದರೂ ಧೃತಿಗೆಡದಿರಿ.

ಕುಂಭ ಧಾರ್ಮಿಕ, ಆಧ್ಯಾತ್ಮಿಕ ವಿಚಾರದಲ್ಲಿ ಭಾಗವಹಿಸಲು ಉತ್ತಮ ದಿನ. ಮುಂಗೋಪದಿಂದಾಗಿ ಬಂದಿರುವ ಅವಕಾಶವನ್ನು ಕಳೆದುಕೊಳ್ಳುವಿರಿ.

ಮೀನ ಇಂದು ಯಾರಿಗೂ ಸಾಲ ನೀಡಬೇಡಿ. ಕೊಡುವುದು ಅಗತ್ಯವಾಗಿದ್ದರೆ ಯಾವಾಗ ಮರುಪಾವತಿ ಮಾಡುತ್ತಾರೆಂದು ಬರವಣಿಗೆಯಲ್ಲಿ ತೆಗೆದುಕೊಳ್ಳಿ.

• ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1973- ಒಲಂಪಿಕ್ಸ್‌ನಲ್ಲಿ ಭಾರತಕ್ಕೆ ಕಂಚಿನ ಪದಕ ತಂದುಕೊಟ್ಟ ಟೆನಿಸ್ ಆಟಗಾರ ಲಿಯಾಂಡರ್ ಪೇಸ್ ಜನನ
- 1674- ಛತ್ರಪತಿ ಶಿವಾಜಿಯ ತಾಯಿ ಜೀಜಾಬಾಯಿ ನಿಧನ
- 1858- ವೀರ ಮಹಿಳೆ ಝಾನ್ಸಿ ರಾಣಿ ಲಕ್ಷ್ಮೀಬಾಯಿ ನಿಧನ
- 1631- ಮೊಘಲ್ ಚಕ್ರವರ್ತಿ ಷಹಜಹಾನ್ ಪತ್ನಿ ಮುಮ್ತಾಜ್ ಮಹಲ್ ನಿಧನ

ಚಿತ್ರಸ್ಫೂರ್ತಿ

ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ ... ಹಸಿರು ಹಚ್ಚೆ ಚುಚ್ಚಿ ಮೇಲಕ್ಕರಿಸಿಣ ಹಚ್ಚಿ; ಹೊನ್ನ ಚಿಕ್ಕಿ ಚಿಕ್ಕಿ; ಇಟ್ಟು ಬೆಳ್ಳಿ ಅಕ್ಕಿ ! ಚಿತ್ರಕೃಪೆ; ಸುದರ್ಶನ್ ಪ್ರಸಾದ್

ಆಪತ್ಕಾಲದಲ್ಲಿ ಇರಬೇಕಾದ ಸಮಯ ಪಜ್ಞೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ದಾರಿಯಲ್ಲಿ ನಡೆದು ಬರುತ್ತಿದ್ದ ವ್ಯಕ್ತಿಗೆ, ಇದ್ದಕ್ಕಿದ್ದಂತೆ ಚೂಪಾದ ಬಾಣವೊಂದು ಬಂದು ಅವನ ಎದೆಗೆ ಚುಚ್ಚಿಕೊಂಡಿತು . ಅದು ಕಾಡಿನ ದಾರಿಯಾಗಿದ್ದರಿಂದ ಬಹುಶಃ ಅದು ಯಾರೋ ಬೇಟೆಗಾರರು, ಯಾವುದೊ ಹಕ್ಕಿಗೋ, ಅಥವಾ ಯಾವುದೊ ಪ್ರಾಣಿಗೂ ಬಿಟ್ಟ ಬಾಣವಾಗಿರಬೇಕು. ಆತ ನೋವಿನಿಂದ ಕಿರುಚಿಕೊಂಡ. ಅಲ್ಲೇ ಹಸು ಮೇಯಿಸುತ್ತಿದ್ದ ಜನರು ಅವನೆಡೆಗೆ ಓಡಿ ಬಂದು, ಅವನಿಗೆ ಚುಚ್ಚಿದ ಬಾಣವನ್ನು ತೆಗೆಯಲು ಹೋದರು.

ಆದರೆ ಈ ವ್ಯಕ್ತಿ ಬಾಣವನ್ನು ಮುಟ್ಟಲು ಇವರಿಗೆ ಬಿಡಲಿಲ್ಲ. ಅದು ಹಾಗೇ ಇರಲಿ, ತೆಗೆಯಬೇಡಿ ಎಂದು ಹೇಳಿದ.

ಇವರಿಗೆಲ್ಲಾ ಆಶ್ಚರ್ಯವಾಯಿತು, 'ಯಾಕಪ್ಪಾ, ಬಾಣವನ್ನು ತೆಗೆಯಬೇಡಿ ಎನ್ನುತ್ತಿರುವೆ? ಒಂದೇ ಸಮನೆ ರಕ್ತ ಸುರಿಯುತ್ತಿದೆ, ಹೀಗೆ ಬಿಟ್ಟರೆ, ರಕ್ತ ಸುರಿದು, ನೋವು ಇನ್ನೂ ಜಾಸ್ತಿ ಆಗುತ್ತದೆ, ಅಷ್ಟೇ' ಎಂದು ಹೇಳಿದರು.

ಅವರ ಮಾತನ್ನು ಕೇಳಿ ಈ ವ್ಯಕ್ತಿ ಬಾಣವನ್ನು ತೆಗೆಯುವ ಮೊದಲು, 'ನನಗೆ ಈ ಬಾಣವನ್ನು, ಯಾರು, ಯಾಕೆ ಬಿಟ್ಟರು ಎಂದು ಗೊತ್ತಾಗಬೇಕು. ಅದು ನನಗೇ ಬಿಟ್ಟರೆ, ಅಥವಾ ಬೇರೆ ಯಾರಿಗೊ ಬಿಟ್ಟ ಬಾಣ ನನಗೆ ತಗುಲಿತೇ, ಎಂಬುದು ಮೊದಲು ಗೊತ್ತಾಗಬೇಕು' ಎಂದನು.

ಆಗ ಅವರು, 'ಅಯ್ಯಾ, ಅದನ್ನೆಲ್ಲಾ ಆಮೇಲೆ ತಿಳಿದುಕೋ. ಮೊದಲು ನಿನ್ನ ಎದೆಗೆ ನೆಟ್ಟಿರುವ ಬಾಣದಿಂದ ಸುರಿಯುತ್ತಿರುವ ರಕ್ತ ನಿಲ್ಲಬೇಕು, ಅದಕ್ಕೆ ಔಷಧಿ ಹಾಕಬೇಕು' ಎಂದು ಹೇಳಿ ಮತ್ತೆ ಬಾಣವನ್ನು ತೆಗೆಯಲು ಹೋದರು.

'ಇಲ್ಲ, ನನಗೆ ಮೊದಲು ಸತ್ಯ ಗೊತ್ತಾಗಬೇಕು. ಅಲ್ಲಿಯವರೆಗೂ ಈ ಬಾಣವನ್ನು ತೆಗೆಯಲು ನಾನು ಬಿಡುವುದಿಲ್ಲ' ಎಂದು ಹಠ ಮಾಡುತ್ತಲೇ ಇದ್ದ.

ಸ್ವಲ್ಪ ಹೊತ್ತಾಗುತ್ತಲೇ, ಇನ್ನೂ ಹೆಚ್ಚಿನ ರಕ್ತಸ್ರಾವವಾಗಿ ಅವನ ಕಣ್ಣುಗಳೆಲ್ಲ ಮಬ್ಬಾಗತೊಡಗಿತು. ನರಳುತ್ತಾ ಎಚ್ಚರತಪ್ಪುವ ಸ್ಥಿತಿಗೆ ತಲುಪಿದ.

ಇದನ್ನೆಲ್ಲಾ ಗಮನಿಸುತ್ತಾ ಅದೇ ದಾರಿಯಲ್ಲಿ ಬರುತ್ತಿದ್ದ ಒಬ್ಬ ಯುವಕ, ಹಿಂದೂ ಮುಂದೂ ನೋಡದೆ, ನೇರವಾಗಿ ಇವನ ಬಳಿಗೆ ಓಡಿ ಬಂದು ಎದೆಗೆ ನಾಟಿದ ಬಾಣವನ್ನು ಎಳೆದು ತೆಗೆದೇ ಬಿಟ್ಟ. ರಕ್ತ ಹರಿಯುತ್ತಿದ್ದ ಜಾಗವನ್ನು ತನ್ನ ಹೆಬ್ಬೆರಳಿನಿಂದ ಒತ್ತಿ ಹಿಡಿದ.

ಕೋಪಗೊಂಡ ಈ ವ್ಯಕ್ತಿ, ಆ ಯುವಕನನ್ನು ಬಾಯಿಗೆ ಬಂದಂತೆ ಬೈಯಲಾರಂಭಿಸಿದ.

ಆಗ ಈ ಯುವಕನಿಗೂ ಸಿಟ್ಟು ಬಂದು, 'ನೀನು ಮೊದಲು ಬದುಕಯ್ಯಾ, ನೀನು ಬದುಕಿದರೆ ತಾನೇ ನಿನ್ನ ಪ್ರಶ್ನೆಗೆ ಉತ್ತರ ಸಿಗುವುದು. ಅಷ್ಟಕ್ಕೂ ನಿನ್ನ ಪ್ರಶ್ನೆಗೆ ಉತ್ತರ ಸಿಗದಿದ್ದರೆ, ಏನೂ ನಷ್ಟವಿಲ್ಲ. ಮೊದಲು ನಿನ್ನ ಜೀವ ಉಳಿಸಿಕೋ. ನೀನೇ ಯೋಚಿಸು, ಜೀವ ಹೋದರೆ ಮತ್ತೆ ಬರುವುದೇ?' ಎಂದು ಅವನಿಗೆ ಗದರಿದ.

ಮತ್ತೆ ಆ ಯುವಕ, 'ನಿಮಗ್ಯಾರಿಗೂ ಸ್ವಲ್ಪವೂ ಬುದ್ಧಿ ಇಲ್ಲವೇ ಈ ವ್ಯಕ್ತಿಗಂತೂ ತನ್ನ ಪ್ರಾಣ ಹೋಗುತ್ತದೆಂಬ ಅರಿವಿಲ್ಲ. ನಿಮಗೆ ಇವನನ್ನು ಸಂತೈಸಿ ಬುದ್ಧಿ ಹೇಳುವ ಸಮಯವು ಇದಲ್ಲ ಎನ್ನುವುದರ ಪರಿಜ್ಞಾನವೇ ಇಲ್ಲ. ಒಬ್ಬರ ಪ್ರಾಣಕ್ಕಿಂತ ಪ್ರಶ್ನೆಗೆ ಉತ್ತರ ಕೊಡುವುದು ಮುಖ್ಯವಲ್ಲ. ಸಮಸ್ಯೆಯಿಂದ ಪಾರಾಗುವ ಉಪಾಯವನ್ನು ಮಾತ್ರ ಮೊದಲು ಕಂಡುಕೊಳ್ಳಬೇಕು. ಇಂತಹ ಸಮಯದಲ್ಲಿ ವ್ಯರ್ಥವಾದ ಮಾತುಗಳು, ವಾದವಿವಾದ, ಯಾವುದೂ ಪ್ರಯೋಜನಕ್ಕೆ ಬರುವುದಿಲ್ಲ' ಎಂದು ಅಲ್ಲಿರುವ ಜನರಿಗೆಲ್ಲ ಬುದ್ಧಿ ಹೇಳಿ ಅವನನ್ನು ಹತ್ತಿರದ ಆಸ್ಪತ್ರೆ ಕಡೆಗೆ ತಲುಪಿಸುವ ವ್ಯವಸ್ಥೆ ಮಾಡಿದ.

ಏನಾದರೂ ಅವಘಡವಾದಾಗ ಗೊತ್ತಿದ್ದು ಗೊತ್ತಿಲ್ಲದೆಯೋ ನಾವು ಕೂಡ ಈ ಜನರ ರೀತಿ ವರ್ತಿಸುತ್ತೇವೆ. ಆತಂಕದಿಂದ ನಡೆದಿರುವುದನ್ನು ನೋಡುತ್ತಾ ನಿಂತುಬಿಡುತ್ತಿರುವೆ ಹೊರತು ಆ ಕ್ಷಣಕ್ಕೆ ಏನು ಮಾಡಬೇಕು ಅದನ್ನು ಮಾಡುವ ಕಡೆಗೆ ಗಮನಹರಿಸುವುದಿಲ್ಲ. ಅಥವಾ ಹೀಗೆ ಕಾಯುತ್ತಾ, ಚರ್ಚಿಸುತ್ತಾ ಇರುವ ಗುಣಗುವ ಜನರನ್ನು ನೋಡುತ್ತೇವೆ. ಅಲ್ಲಿ ಅತಿ ಮುಖ್ಯವಾದದ್ದು ಯಾರಿಗಾದರೂ ಪ್ರಾಣಪಾಯವಾಗಿದ್ದರೆ ಅವರನ್ನು ತಕ್ಷಣ ಆಸ್ಪತ್ರೆಗೆ ಕಳಿಸಿಕೊಡುವುದು. ಮಳೆ ಬಂದು ರಸ್ತೆಯಲ್ಲಿ ಮರ ಬಿದ್ದಿದ್ದರೆ ಜನರನ್ನು ಸೇರಿಸಿ ಅದನ್ನು ಪಕ್ಕಕ್ಕೆ ಹಾಕುವುದು. ನಿಂತು ನೋಡಿದಾಗ ಸಮಸ್ಯೆ ಬಗೆಹರಿಯುವುದಿಲ್ಲ ಕಾರ್ಯಪ್ರವೃತ್ತರಾಗಬೇಕು.

ಪದಬಂಧ

1	■	2		3		4	■	5
6			■		■	7		
	■	■	■	■	■	■	■	
8		9	■	10	■	11		
■	■	12					■	■
13			■		■	14		15
	■	■	■	■	■	■	■	
16		17	■	18	■	19		
	■	20					■	

ಎಡದಿಂದ ಬಲಕ್ಕೆ

2. ಕಪ್ಪು ಪಕ್ಷಿಯೊಂದಿಗೆ ಬಂದಿರುವ ಅಭ್ರಕ (5)
6. ಹಲವು ಬಗೆಯಲ್ಲಿ ಬಂದಿದೆ ಹರಾಜು (3)
7. ಹಾಸ್ಯ ಅಥವಾ ಸಂತೋಷ (3)
8. ಆಕಾಶವಾಣಿ ತಿರುಗಿ ಬಂದಿದೆ (3)
11. ಪ್ರವಾಹ ಅಥವಾ ಹರಿಯುವಿಕೆ ಅಸ್ತವ್ಯಸ್ತವಾಗಿದೆ (3)
12 ಮಗುವಿಗೆ ಹೆಸರಿಡುವ ಕಾರ್ಯಕ್ರಮ (5)
13. ದಡಿಯ ತಂದ ಬಿಡಿಗಾಸು (3)
14. ಜನರು ಕಟ್ಟುವ ಕರ (3)
16. ತಿರುಗಿ ಬಂದಿರುವ ಮರ, ಗಿಡ ಮುಂತಾದವು (3)
19. ಧಾವಿಸುವಾಗಿನ ಆತುರ (3)
20. ಹುರಿಗಳಿಗೆ ಮತ್ತೊಂದು ಹೆಸರು (5)

ಮೇಲಿನಿಂದ ಕೆಳಕ್ಕೆ

1. ಗಡಿಬಿಡಿಯಲ್ಲ, ಗೊಂದಲ (4)
2. ಬಿಸಿಗೆ ಮತ್ತೊಂದು ಹೆಸರು (2)
3. ಸೇವಕ ಅಥವಾ ದಾಸ (3)
4. ಸೂರ್ಯನಿಗೆ ಇನ್ನೊಂದು ಹೆಸರು (2)
5. ಕಾಲುನಡಿಗೆಯಿಂದ ಸಾಗುವವನು (4)
9. ಒಂದು ಬಗೆಯ ಹಕ್ಕಿ, ಟಿಟ್ಟಿಭ (3)
10. ನೌಕರನ ನೌಕರಿ (3)
11. ದೀಪವನ್ನು ಹಚ್ಚಿಡುವ ಮಣ್ಣಿನ ಚಿಕ್ಕ ಬಟ್ಟಲು (3)
13. ಸೇನಾಪತಿಗೆ ಹೀಗೆಯೂ ಹೇಳಬಹುದು (4)
15. ಅವನ ಮಿತ್ರತ್ವ (4)
17. ಹಸಿರು ಬಣ್ಣದ ಹಾವಸೆ (2)
18. ಕಾಂತಿ ಇಲ್ಲದಿರುವಿಕೆ, ಮಬ್ಬು (2)
19. ಮುತ್ತಿಗೆ ಎನ್ನುವ ಪದ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ದಿನಚರಿ 5. ಪಲ್ಲವ 6. ಹನನ 8. ಸಾವರಿಸು 9. ಕಿರಾತ 11. ರುಮಾಲು 13. ಪಾಯಸ 16. ಪಾವಕ 18. ಮರಕತ 19. ಗಮಾರ 21. ಕುಲಾವಿ 22. ಸಮಾವೇಶ

ಮೇಲಿನಿಂದ ಕೆಳಕ್ಕೆ: 1. ತಪರಾಕಿ 2. ದಿವ 3. ಚಕ್ರವರ್ತಿ 4. ವನ 6. ಹಸುರು 7. ನಗುಲು 10. ರಾಧೇಯ 12. ಮಾಧವ 13. ಪಾರಗ 14. ಸಮರ 15. ತೆಕತುಮಾ 17. ಕಲಾವಿದ 20. ಮಾಗಿ 21. ಕುಶ

• ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ನಗಿಸುವ ಅನಿಲ

ಗಾಳಿ ಅಥವಾ ಆಮ್ಲಜನಕವನ್ನಲ್ಲದೆ ಬೇರೆ ಯಾವುದೇ ಅನಿಲವನ್ನು ನಾವು ಹೆಚ್ಚು ಕಾಲ ಉಸಿರಾಡಿದರೆ ಅದು ನಮ್ಮ ದೇಹದ ಮೇಲೆ ವಿವಿಧ ರೀತಿಯ ಪರಿಣಾಮವನ್ನು ಬೀರುತ್ತದೆ. ನೈಟ್ರಸ್ ಆಕ್ಸೈಡ್ ಅನಿಲವನ್ನು ಉಸಿರಾಡಿದರೆ ಅದು ತಕ್ಷಣ ರಕ್ತದಲ್ಲಿ ಕರಗಿ ಮಿದುಳಿಗೆ ತಲುಪಿ ಒಂದು ರೀತಿಯ ಭ್ರಮೆಯನ್ನು ಉಂಟುಮಾಡುತ್ತದೆ. ಅಲ್ಲದೆ ವ್ಯಕ್ತಿ ತನ್ನ ಯೋಚನಾಶಕ್ತಿಯನ್ನು ಕಳೆದುಕೊಂಡು ನಗಲು ಪ್ರಾರಂಭಿಸಿ ನಗುತ್ತಲೇ ಇರುತ್ತಾನೆ. ಹೀಗಾಗಿ ಈ ಅನಿಲವನ್ನು ನಗಿಸುವ ಅನಿಲ ಎಂದು ಕರೆಯುತ್ತಾರೆ. ಈ ಅನಿಲದ ಸೇವನೆ ನಿಲ್ಲಿಸಿ ಆಮ್ಲಜನಕ ಸೇವಿಸಿದ ಸ್ವಲ್ಪ ಕಾಲಕ್ಕೆ ನಗು ನಿಲ್ಲುತ್ತದೆ.

ಪುಸ್ತಕ ಲೋಕ



ಮೂರು ಹೆಣ್ಣು ಐದು ಜಡೆ

ಬೀಚಿಯವರು ಬರೆದಿರುವ ಅದ್ಭುತವಾದ ಕಾದಂಬರಿ ಮೂರು ಹೆಣ್ಣು ಐದು ಜಡೆ. ನಮ್ಮ ನಿತ್ಯ ಜೀವನದಲ್ಲಿ ಕಂಡುಬರುತ್ತಿರುವ ಅನೇಕ ದಾರುಣ ಚಿತ್ರಗಳಲ್ಲಿ ಇದೂ ಒಂದು. ಪುಷ್ಪ, ರತ್ನ, ಹಾಗೂ ಲಕ್ಷ್ಮೀ, ಕಾದಂಬರಿಯ ಮೂರು ಸ್ತ್ರೀ ಪಾತ್ರಗಳು. ಇವರಲ್ಲಿ ಇಬ್ಬರು ಜೋಡಿ ಜಡೆ ಹಾಕುತ್ತಾರೆ. ಒಬ್ಬಳದು ಮಾತ್ರ ಒಂಟಿ ಜಡೆ. ಈ ಜಡೆಗಳ ಮೂಲಕವೇ ಧನದಾಹಿತನ, ಅಧಿಕಾರ ಲಾಲಸೆ, ಮನುಷ್ಯರು ಎಸಗುವ ಅನ್ಯಾಯಗಳನ್ನು ಕಟ್ಟಿಕೊಡಲು ಯತ್ನಿಸುವ ಕೃತಿ ಇದು. ನೋಡಿದೊಡನೆ ಒಬ್ಬಳನ್ನು 'ಅಂಥವಳು' ಅನ್ನುತ್ತೇವೆ. ಇನ್ನೊಬ್ಬಳನ್ನು 'ಛೇ! ಪಾಪ' ಅನ್ನುತ್ತೇವೆ. ಅದೂ ತಪ್ಪು, ಇದೂ ತಪ್ಪು ಎಂಬುದು ತಿಳಿದಾಗ ತಬ್ಬಿಬ್ಬಾಗುತ್ತೇವೆ. ಆಗಿನ ಮುಖಕ್ಕೆ ಇದು ಕನ್ನಡಿ. ಹಾಸ್ಯಮಯ ನಿರೂಪಣೆಯ ಜತೆಗೆ ಗಂಭೀರ ಕಥಾವಸ್ತುವನ್ನು ಹೊಂದಿದ ಕಾದಂಬರಿ.

ಟ್ವೀಟ್‌ಮೆಂಟ್

ಹರ್ಷ ಗೋಯಂಕ: ಒಂದು ಒಳ್ಳೆ ಭಾವನೆ ಅಂದರೆ, ನಮ್ಮ ಉಪಸ್ಥಿತಿ ಹಾಗೂ ಅನುಪಸ್ಥಿತಿ ಕೆಲವರಿಗೆ ಏನೋ ಒಂದು ಅನ್ನಿಸಲು ಶುರುವಾಗುವುದು!

ವಿಷ್ಣು: ನಿಜ ಹೇಳಬೇಕೆಂದರೆ ಒಬ್ಬರ ಉಪಸ್ಥಿತಿ, ಅನುಪಸ್ಥಿತಿ ಈ ಪ್ರಪಂಚಕ್ಕೆ ಏನೂ ವ್ಯತ್ಯಾಸ ಮಾಡುವುದಿಲ್ಲ. ಆ ಕ್ಷಣವನ್ನುಜೀವಿಸಬೇಕು!

ದಿನಕ್ಕೊಂದು ಪ್ರಶ್ನೆ

• ಎಲ್.ಪಿ.ಕುಲಕರ್ಣಿ, ಬಾದಾಮಿ

ಇತ್ತೀಚೆಗೆ, ಬಿಚೋಮ್ ಅನ್ನು ಯಾವ ರಾಜ್ಯದ 27ನೇ ಜಿಲ್ಲೆ ಎಂದು ಘೋಷಿಸಲಾಗಿದೆ?

ಎ. ಬಿಹಾರ್

ಬಿ. ಅರುಣಾಚಲ ಪ್ರದೇಶ

ಸಿ. ಜಾರ್ಖಂಡ್

ಡಿ. ಮಣಿಪುರ

ಉತ್ತರ: ಬಿ. ಅರುಣಾಚಲ ಪ್ರದೇಶ

ಮಾಹಿತಿ

ಬಿಚೋಮ್, ಅರುಣಾಚಲ ಪ್ರದೇಶದ 27 ನೇ ಜಿಲ್ಲೆಯನ್ನು ಮುಖ್ಯಮಂತ್ರಿ ಪೆಮಾ ಖಂಡು ಉದ್ಘಾಟಿಸಿದರು. ರಾಜ್ಯ ವಿಧಾನಸಭೆಯು ಫೆಬ್ರವರಿಯಲ್ಲಿ ಅರುಣಾಚಲ ಪ್ರದೇಶ (ಜಿಲ್ಲೆಗಳ ಮರು-ಸಂಘಟನೆ) (ತಿದ್ದುಪಡಿ) ಮಸೂದೆ, 2024 ಅನ್ನು ಅಂಗೀಕರಿಸಿತು, ಇದು ಬಿಚೋಮ್ ಮತ್ತು ಕೆಯಿ ಪನ್ಯೋರ್ ಜಿಲ್ಲೆಗಳ ರಚನೆಗೆ ಕಾರಣವಾಯಿತು. ಪಶ್ಚಿಮ ಮತ್ತು ಪೂರ್ವ ಕಮೆಂಗ್ನಿಂದ ಕೆತ್ತಲಾದ ಬಿಚೋಮ್, ಪಶ್ಚಿಮ ಕಮೆಂಗ್ನಿಂದ 27 ಮತ್ತು ಪೂರ್ವ ಕಮೆಂಗ್ನಿಂದ 28 ಹಳ್ಳಿಗಳನ್ನು ಒಳಗೊಂಡಿದೆ, ಇದು ಈ ಪ್ರದೇಶಕ್ಕೆ ಮಹತ್ವದ ಮೈಲಿಗಲ್ಲು.

ಕ್ಷೇಮ ಸಮಾಚಾರ

ಗಂಟಲು ನೋವು ಪರಿಹಾರ ಹಲವು

• ಕೆ. ಶ್ರೀನಿವಾಸರಾವ್ ಹರಪನಹಳ್ಳಿ

ಮಾನವನ ಅತ್ಯವಶ್ಯ ಅಂಗಗಳಲ್ಲಿ ಗಂಟಲು ಕೂಡ ಒಂದು. ಗಂಟಲು ಕಟ್ಟಿದಾಗ, ಉಗುಳು ನುಂಗುವುದೂ ಕಷ್ಟವಾದಾಗ, ಬಾವು ಉಂಟಾದಾಗ ಅಸಹನೀಯ ಯಾತನೆ ಉಂಟಾಗುತ್ತದೆ. ಗಾಯಕರಂತೂ ತಮ್ಮ ಸ್ವರ ಮಾಧುರ್ಯಕ್ಕಾಗಿ ಗಂಟಲ ಶುದ್ಧತೆಗೆ ಅಧಿಕ ಪ್ರಾಶಸ್ತ್ಯ ನೀಡಲೇಬೇಕು. ಇಂತಹ ಗಂಟಲು ಗೊರಗೊರ ಎಂದಾಗ ,ಕಫ ತುಂಬಿದಾಗ, ನೋವಾದಾಗ, ಬಾತುಕೊಂಡಾಗ ಏನು ಮಾಡುವುದು. ಇಲ್ಲಿದೆ ಮನೆಮದ್ದುಗಳು.

- ಗಂಟಲೊಳಗೆ ಬಾವು ಉಂಟಾದಾಗ ವಾಯುವಿಳಂಗದ ಬೇರಿನ ಕಷಾಯ ತಯಾರಿಸಿ ಅದರಿಂದ ಬಾಯಿ ಮುಕ್ಕಳಿಸಬೇಕು.
- ಹಿಪ್ಪಲಿ, ತಾರೀಕಾಯಿ, ಇಂದುಪ್ಪುಗಳನ್ನು ಸಮವಾಗಿ ಬೆರೆಸಿ ಚೂರ್ಣ ಮಾಡಿಕೊಂಡು ಬಿಸಿನೀರಿನಲ್ಲಿ ಕದಡಿ ಕುಡಿದರೆ ಸ್ವರ ಸಲೀಸಾಗುತ್ತದೆ.
- ಗಂಟಲು ನೋಯುತ್ತಿದ್ದರೆ ಕೊಂಚ ಉಪ್ಪನ್ನು ಅಡುಗೆ ಸೋಡಾ ಅಥವಾ ನಿಂಬೆರಸದೊಂದಿಗೆ ಬಿಸಿನೀರಿಗೆ ಬೆರೆಸಿ ಬಾಯಿಗೆ ಹಾಕಿಕೊಂಡು ಗಂಟಲವರೆಗೆ ಮುಕ್ಕಳಿಸಬೇಕು.
- 25 ಗ್ರಾಂ ನೆಲ್ಲಿಕಾಯಿ ಚೆಟ್ಟು, 10 ಗ್ರಾಂ ಜೇಷ್ಠಮಧು ಸೇರಿಸಿ ಕಷಾಯ ಮಾಡಿ ಕುಡಿದರೆ ಗಂಟಲಿನ ಹುಣ್ಣು ಮಾಯವಾಗುತ್ತದೆ.
- ಹಿಪ್ಪಲಿ, ಶುಂಠಿ, ಅಣಲೆಕಾಯಿ, ಕಾಳುಮೆಣಸು ಎಲ್ಲವನ್ನೂ ಒಟ್ಟಾಗಿಸಿ ತಯಾರಿಸಿದ ಚೂರ್ಣವನ್ನು ಜೇನುತುಪ್ಪದಲ್ಲಿ ಬೆರೆಸಿ ನೆಕ್ಕಿದರೆ ಗಂಟಲಿನಲ್ಲಿ ಕುಳಿತ ಕಫ ಕಡಿಮೆಯಾಗುತ್ತದೆ.
- ಸ್ವರ ಗೊರಗೊರ ಎಂದರೆ ಒಂದೆಲಗದ ಗಡ್ಡೆಯನ್ನು ಅರೆದು ಜೇನುತುಪ್ಪಕ್ಕೆ ಸೇರಿಸಿ ನೆಕ್ಕಬೇಕು.
- ಗಂಟಲಿನಲ್ಲಿ ಕೆರೆತವೇ? ವಿಕ್ಸ್ ಚೇಪಿರಿ ಎನ್ನುವ ಜಾಹೀರಾತಿಗೆ ಗುಡ್ ಬೈ ಹೇಳಿ. ಒಂದು ಲೋಟ ಬಿಸಿನೀರಿಗೆ 1/2 ಚಮಚ ಉಪ್ಪು ಸೇರಿಸಿ ಪುನರಪಿ ಮುಕ್ಕಳಿಸಿ, ಸಾಕು. ಕೆರೆತ ಮಾಯ!
- ಬೆಳ್ಳುಳ್ಳಿ ಹಾಗೂ ಅತಿ ಮಧುರವನ್ನು ಸಮವಾಗಿ ಬೆರೆಸಿ ನುಣ್ಣಗೆ ಅರೆದು ನೀರಿಗೆ ಸೇರಿಸಿ ಕುಡಿದರೆ ಗಂಟಲಿನ ಕಫ ನಾಶವಾಗುತ್ತದೆ.
- ಇನ್ನು ಸ್ವರ ಬಿದ್ದುಹೋಗಿದ್ದರೆ ಪುದೀನ ಸೊಪ್ಪಿನ ಕಷಾಯಕ್ಕೆ ಉಪ್ಪು ಸೇರಿಸಿ ಬಾಯಿ ಮುಕ್ಕಳಿಸಬೇಕು. ಅಥವಾ ಮಾವಿನೆಲೆ ಕಷಾಯಕ್ಕೆ ಜೇನುತುಪ್ಪ ಬೆರೆಸಿ ಕುಡಿಯಬೇಕು. ಅಥವಾ ನೀಲಗಿರಿ ಎಣ್ಣೆಯನ್ನು ಕಾಯಿಸಿ ಅದರಿಂದ ಬಾಯಿ ಮುಕ್ಕಳಿಸಬೇಕು ಜತೆಗೆ ಗಂಟಲ ಹೊರಗೆ ಲೇಪಿಸಬೇಕು.

ಇಷ್ಟೆಲ್ಲಾ ಮಾಡಿಯೂ ಗಂಟಲು ನೋವು ಓಡಿಹೋಗದಿದ್ದರೆ ಮತ್ತೆ ಹೇಳಿ.

ಭೂಮಿಯನ್ನಾಳಿದ ಡೈನೊಸಾರ್‌ಗಳು

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಡೈನೊಸಾರ್‌ಗಳೆಂದರೆ ಮಕ್ಕಳಿಗೆ ಹಾಗೂ ಇಂದಿನ ಯುವಜನಾಂಗಕ್ಕೆ ಮೋಡಿ ಮಾಡಿದ ಪ್ರಾಣಿ. ಈ ಪ್ರಾಣಿ ಇವರ ಮನಸೂರೆಗೊಂಡದ್ದು ಕೇವಲ ಸಿನಿಮಾ ಹಾಗೂ ದೂರದರ್ಶನದ ಮಾಧ್ಯಮಗಳ ಮೂಲಕ. ನಿಜಕ್ಕೂ ಇದನ್ನು ಕಂಡವರಾರು ? ಆದರೆ ಅವು ಪ್ರಪಂಚದ ಜೀವಸಂಕುಲದ ಇತಿಹಾಸದಲ್ಲಿ ಅಚ್ಚಳಿಯದ ಹೆಜ್ಜೆಮೂಡಿಸಿ ಹೋಗಿರುವುದಂತೂ ಸತ್ಯ! ಇಂದಿಗೂ ಅವುಗಳ ಉಗಮ ಹೇಗೆ? ಅವುಗಳು ಹೇಗೆ ಬದುಕಿದ್ದವು? ಅವು ಇಡೀ ಪ್ರಪಂಚವನ್ನು ಅಷ್ಟು ವರ್ಷಗಳ ಕಾಲ ಹೇಗೆ ಆಳಿದವು ಮತ್ತು ಹೇಗೆ ಅಳಿದವು ಎಂಬುದು ಅಷ್ಟೇ ನಿಗೂಢ !

ಭೂಮಿಯ ಮೇಲಿನ ಜೈವಿಕ ಪ್ರಪಂಚದ ಇತಿಹಾಸದಲ್ಲಿ ಅತ್ಯಂತ ಹೆಚ್ಚು ದೀರ್ಘಕಾಲ ಬಾಳಿ ಬದುಕಿದ ಪರಂಪರೆ ಅಷ್ಟೇ ಭವ್ಯ ಹಾಗೂ ಅವರ್ಣನೀಯ. ಈ ಡೈನೊಸಾರ್‌ಗಳ ಬಗ್ಗೆ ಒಂದಿಷ್ಟು ಮಾಹಿತಿ.

- ಡೈನೊಸಾರ್‌ಗಳು ಭೂಮಿಯ ಮೇಲಿನ ಅತ್ಯಂತ ಸಮರ್ಥವಾಗಿ, ಸುಮಾರು 16 ಕೋಟಿ ವರ್ಷಗಳವರೆಗೆ ಭವ್ಯವಾಗಿ ಬಾಳಿದ ಜೀವಿಗಳಾಗಿವೆ. ಅಂದರೆ ಇಂದಿಗೆ 23 ಕೋಟಿ ವರ್ಷಗಳ ಹಿಂದೆ ಅವು ತಮ್ಮ ಜೀವನವನ್ನು ಪ್ರಾರಂಭಿಸಿ 7 ಕೋಟಿ ವರ್ಷಗಳ ಹಿಂದೆ ನಾಶವಾಗಿವೆ ಎಂದು ತಿಳಿದು ಬಂದಿದೆ.
- ಡೈನೊಸಾರ್ ಎಂಬುದು ಗ್ರೀಕ್ ಭಾಷೆಯ ಪದವಾಗಿದ್ದು, ಡೈನೋಸ್ ಎಂದರೆ 'ಭಯಾನಕ' ಮತ್ತು 'ಸಾರಸ್' ಎಂದರೆ ಹಲ್ಲಿಗಳು ಎಂದು. ಇವು ನಿಜಕ್ಕೂ ಭಯಾನಕ ಹಲ್ಲಿಗಳೇ.



- 19ನೇ ಶತಮಾನದಲ್ಲಿ ಮೊದಲ ಡೈನೊಸಾರ್‌ಗಳ ಪಳೆಯುಳಿಕೆಗಳನ್ನು ಪತ್ತೆ ಹಚ್ಚಲಾಯಿತು. 2008ನೇ ವರ್ಷದ ಕೊನೆಯವರೆಗೆ 1047 ಡೈನೊಸಾರ್‌ಗಳ ವಿವಿಧ ಪ್ರಭೇದಗಳನ್ನು ಗುರುತಿಸಲಾಗಿದೆ.
- ಅತ್ಯಂತ ಉದ್ದವಾದ ಡೈನೊಸಾರ್‌ನ ಪಳೆಯುಳಿಕೆ 27 ಮೀಟರ್ (89 ಅಡಿ)ಗಳಾಗಿದ್ದು, ಇದನ್ನು 1907ರಲ್ಲಿ ಪತ್ತೆ ಹಚ್ಚಲಾಗಿದೆ. ಇದು ಈಗ ಇಂಗ್ಲೆಂಡ್‌ನ ಪಿಟ್ಸ್‌ಬರ್ಗ್ ಕಾರ್ನಜ್ ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂನಲ್ಲಿ ಸುರಕ್ಷಿತವಾಗಿ ಇಡಲಾಗಿದೆ.
- ನಮ್ಮ ಭೂಮಿಯ ಮೇಲೆ ಕಂಡು ಬಂದ ಅತ್ಯಂತ ಭಾರದ ಡೈನೊಸಾರ್ 120 ಟನ್ (1,20,000 ಕೆ.ಗ್ರಾಂ) ಎಂದು ಅಂದಾಜಿಸಲಾಗಿದೆ. ಅತ್ಯಂತ ಪುಟ್ಟ ಡೈನೊಸಾರ್ ಎಂದರೆ ನಮ್ಮ ಮನೆಯ ಪಾರಿವಾಳದಷ್ಟು!
- ಸುಮಾರು 7 ಕೋಟಿ ವರ್ಷಗಳ ಹಿಂದೆ ಭೂಮಿಗೆ ಕ್ಷುದ್ರಗ್ರಹದಿಂದಾದ ಡಿಕ್ಕಿಯೇ ಡೈನೊಸಾರ್ ಸಂತತಿಗಳ ನಾಶಕ್ಕೆ ಕಾರಣ ಎಂಬುದು ವಿಜ್ಞಾನಿಗಳ ಅಭಿಪ್ರಾಯ.
- ಡೈನೊಸಾರ್ಗಳು 16 ಕೋಟಿ ವರ್ಷಗಳ ಕಾಲ ಈ ಭೂಮಿಯ ಮೇಲೆ ತಮ್ಮ ಅಧಿಪತ್ಯವನ್ನು ಸಾಧಿಸಿದ್ದವು! ನೆನಪಿಡಿ, ಈ ಭೂಮಿಯ ಮೇಲೆ ಮಾನವನ ಅಧಿಪತ್ಯ ಕೇವಲ 10 ದಶಲಕ್ಷ ವರ್ಷಗಳು ಮಾತ್ರ !
- ಡೈನೊಸಾರ್‌ಗಳಷ್ಟೇ ಪ್ರಸಿದ್ಧವಾದ ಟೈರನೊಸಾರ್‌ಗಳು 40 ಅಡಿ ಉದ್ದವಿದ್ದು (12.4 ಮೀಟರ್) 5 ರಿಂದ 7 ಟನ್ ಭಾರವಿದ್ದವು.
- 1902ರ ಸರ್ವೇಕ್ಷಣೆಯಲ್ಲಿ ಕಂಡು ಬಂದ ಡೈನೊಸಾರ್‌ನ ಪಳೆಯುಳಿಕೆಯನ್ನು ಸ್ಟೆಗೊಸಾರಸ್ ಎಂದು ಗುರುತಿಸಲಾಗಿದ್ದು ಇದರ ಭಾರ 3100 ಕೆ.ಗ್ರಾಂ.ಗಳಾಗಿವೆ.
- ಟ್ರೈಸೆರಾಟಾಪ್ಸ್ ಎನ್ನುವ ವಿಶೇಷ ಡೈನೊಸಾರ್‌ಗಳು ಮುಖದ ಮೇಲೆ ಮೂರು ಕೊಂಬುಗಳನ್ನು ಹೊಂದಿದ್ದು ಇದರಿಂದಲೇ ಶತ್ರುಗಳನ್ನು ಸಮರ್ಥವಾಗಿ ಎದುರಿಸಿ ಹೋರಾಟ ನಡೆಸುತ್ತಿದ್ದವು. ಇವೂ ಕೂಡ ಸಸ್ಯಾಹಾರಿಗಳಾಗಿರುವುದು ಒಂದು ವಿಶೇಷ !
- ನಮ್ಮ ಭೂಮಿಯ ಮೇಲೆ ಸುಮಾರು 16 ಕೋಟಿ ವರ್ಷಗಳ ಕಾಲ ಸಾಮ್ರಾಜ್ಯವನ್ನು ಸ್ಥಾಪಿಸಿ ಆಳಿದ ಡೈನೊಸಾರ್ ಸಂತತಿಯಲ್ಲಿ ಬೇರೆ ಬೇರೆ ಪ್ರಭೇದಗಳು ಬೇರೆ ಬೇರೆ ಕಾಲದಲ್ಲಿ ಕಂಡು ಬಂದದ್ದು ಒಂದು ವಿಶೇಷ. ಉದಾಹರಣೆಗೆ ಟೈರನೊಸಾರಸ್‌ಗಳು 8 ಕೋಟಿ ವರ್ಷಗಳ ಹಿಂದೆ ಸ್ಟೆಗೊಸಾರಸ್‌ಗಳು ಆಳಿದ ನಂತರ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದವು.
- ಅತ್ಯಂತ ಪ್ರಾಚೀನ ಡೈನೊಸಾರ್ ಎಂದರೆ ಈವೊರಾಪ್ಟರ್. ಇದು ಮಾಂಸಾಹಾರಿಯಾಗಿದ್ದು 32.8 ಕೋಟಿ ವರ್ಷಗಳ ಹಿಂದೆ ಕಂಡು ಬಂದಿದೆ.

ಎಷ್ಟೇ ಸಂಶೋಧನೆಗಳನ್ನು ನಡೆಸಿದರೂ ವಿಜ್ಞಾನಿಗಳಿಗೆ ಡೈನೊಸಾರ್‌ಗಳ ಬಗ್ಗೆ ಸಂಪೂರ್ಣ ಮಾಹಿತಿಗಳು ಲಭ್ಯವಾಗಿಲ್ಲ. ಹಲವು ಹತ್ತು ಅನುಮಾನಗಳು ಇನ್ನೂ ಕಾಡುತ್ತಿವೆ. ಅವು ಹೇಗೆ ವರ್ತಿಸುತ್ತಿದ್ದವು? ಅವು ಸಂಗಾತಿಯನ್ನು ಹೇಗೆ ಅರಸುತ್ತಿದ್ದವು? ಅವುಗಳ ಬಣ್ಣ ಯಾವುದು? ಈಗ ಸಿಕ್ಕ ಪಳೆಯುಳಿಕೆಗಳು ಹೆಣ್ಣೇ, ಗಂಡೆ? ಹೀಗೆ ಹಲವು ಪ್ರಶ್ನೆಗಳು ಅವರನ್ನು ಇನ್ನೂ ಕಾಡುತ್ತಿವೆ.

ಬಿ ಪಾಸಿಟಿವ್

ಈ ಸಮಯ ಕಳೆದುಹೋಗುವುದು

ಸಮಯ ಮನುಷ್ಯನಿಗೆ ಅಮೂಲ್ಯ. ಪ್ರತಿ ಕ್ಷಣವೂ ಕೂಡ ಬಹಳ ಮುಖ್ಯ. ಕೆಟ್ಟ ಸಮಯ ಬಂದಾಗ ನಾವು ಹೇಗೆ ಅದನ್ನು ತೆಗೊಳ್ಳುತ್ತೇವೆ ಅನ್ನುವುದರ ಮೇಲೆ ಬದುಕು ನಿರ್ಧಾರವಾಗುತ್ತದೆ. ಜೀವನದಲ್ಲಿ ನಿಮ್ಮ ಹತ್ತಿರ ಏನೂ ಇಲ್ಲದಾಗ ನಿಮ್ಮ ತಾಳ್ಮೆ ಹಾಗೂ ನಿಮ್ಮ ಬಳಿ ಎಲ್ಲವೂ ಇದ್ದಾಗ ನಿಮ್ಮ ನಡುವಳಿಕೆ ತುಂಬಾ ಮುಖ್ಯ ಅನ್ನತ್ತೆ.

ನಿಮ್ಮ ದೌರ್ಬಲ್ಯಗಳಿಗೆ ನೀವು ಕಾರಣವಾಗಬೇಡಿ. ನಿಮ್ಮ ಬಲಕ್ಕೆ ನೀವು ಕಾರಣವಾಗಿ. ಕೆಟ್ಟ ಸಮಯ ಇದೇ ಎಂದಾಕ್ಷಣ ಇಡೀ ಜೀವನವೇ ಕೆಟ್ಟದಾಗುತ್ತದೆ ಅಂದುಕೊಳ್ಳುವುದು ತಪ್ಪು. ಅಂತಹ ಸಂದರ್ಭದಲ್ಲಿ ಆತ್ಮವಿಶ್ವಾಸ ಇರಬೇಕು. ನಮ್ಮ ಮನಸ್ಸು ಕೆಲವೊಮ್ಮೆ ಕೆಲವು ಕಾರಣಗಳಿಂದ ನೋವುಂಟಾಗುತ್ತದೆ. ನಮ್ಮ ನಿಯಂತ್ರಣ ತಪ್ಪುತ್ತದೆ ಅಂತಹ ಸಂದರ್ಭದಲ್ಲಿ ಅದರ ಪಾಡಿಗೆ ಹಾಗೆ ಬಿಡಿ ಸಮಯ ಕೊಡಿ, ಅದು ಹಾಗೆ ಸರಿ ಹೋಗುತ್ತದೆ. ಸಮಯದ ಬೆಲೆ ತಿಳಿದವರಿಗೆ ಜೀವನದ ಬೆಲೆಯೂ ಸಹ ತಿಳಿದಿರುತ್ತದೆ. ಸಮಯಕ್ಕೆ ನಾವು ಗೌರವ ಕೊಟ್ಟರೆ ಮುಂದೆ ಸಮಯವೇ ನಮಗೆ ಗೌರವ ತಂದುಕೊಡುತ್ತದೆ. ಈ ದಿನ ನಮ್ಮ ಕೊನೆ ದಿನವೆಂದು ಕಳೆದರೆ ಬದುಕು ಪ್ರತಿ ಕ್ಷಣದ ಸಂಭ್ರಮ ಆಗುತ್ತದೆ. ಯಾಕೆಂದರೆ ಯಾರಿಗೆ ಗೊತ್ತು ಎಷ್ಟು ಜನರಿಗೆ ನಾಳೆಯ ಸೂರ್ಯ ನೋಡಲು ಸಿಗುವುದೋ ಇಲ್ಲವೋ ಎಂದು. ಜೀವನದಲ್ಲಿ ಗಡಿಯಾರ ಎಲ್ಲರಿಗೂ ಒಂದೇ ಆದರೆ ಅದರಲ್ಲಿ ತೋರಿಸೋ ಟೈಮ್ ಎಲ್ಲರಿಗೂ ಒಂದೇ ಅಲ್ಲಾ . ಬಡವ, ಶ್ರೀಮಂತ ಎಲ್ಲರಿಗೂ ಗಡಿಯಾರ ಮಾತ್ರ ಒಂದೇ ಎಲ್ಲರನ್ನೂ ಸಮಾನವಾಗಿ ಕಾಣುವುದು ಈ ಸಮಯ ಮಾತ್ರ. ನಿನ್ನೆಯ ಬಗ್ಗೆ ಯೋಚನೆ ಮಾಡಿ ನಾಳೆಯನ್ನು ಹಾಳುಮಾಡಬೇಡಿ. ಇವತ್ತಿನ ದಿನವನ್ನು ಸರಿಯಾಗಿ ಬಳಸಿಕೊಳ್ಳಿ.

• ಮಾನಸ ಎಂ ಸೊರಬ

ಸರ್ಟಿಫಿಕೇಟ್ ಕೊಡೋಕೆ ನೀವ್ಯಾರು?

ಅಂದಹಾಗೆ ನಾ ಹೇಳಹೊರಟಿರುವುದು ಬೇರೆಯವರ ಬಗ್ಗೆ ಸುಲಭವಾಗಿ ಅಭಿಪ್ರಾಯಗಳನ್ನು ತೆಗೆದುಕೊಂಡು ಅದಕ್ಕೊಂದು ಷರಾ ಬರೆದು ಬೇರೆಯವರ ಮುಂದೆ ಅದನ್ನೇ ಹೇಳಿ ಯಾ ಒಪ್ಪಿಸಿಬಿಡುವವರನ್ನು.

ಯಾರೋ ಅವರು ಹೇಗೆ ಅಂತ ಇನ್ಯಾರದೋ ಬಗ್ಗೆ ಕೇಳ್ತಾರೆ. ಉತ್ತರಿಸುವುದು ತಪ್ಪಾ ಹಾಗಿದ್ರೆ? ಅನ್ನೋದು ನಿಮ್ಮ ಅನುಮಾನವಾದರೆ ನನ್ನುತ್ತರ ಖಂಡಿತಾ ತಪ್ಪಲ್ಲ ವೆಂದೇ! ಆದರೆ ಅಭಿಪ್ರಾಯವನ್ನು ಹೇಳುವಾಗ ನಮ್ಮ ಅನಿಸಿಕೆಗಳನ್ನೂ, ಅನುಮಾನಗಳನ್ನೂ ಸೇರಿಸಿ ಪೂರ್ವಾಪರ ಯೋಚಿಸದೆ ಹೇಳುವುದು ತಪ್ಪು. ಉದಾಹರಣೆಗೆ ಒಬ್ಬ ವ್ಯಕ್ತಿಯ ಬಗ್ಗೆ ಹೆಚ್ಚಿಗೆ ಮಾಹಿತಿ ಇಲ್ಲ ಎಂದೇ ಅಂದುಕೊಳ್ಳೋಣ. ಮತ್ತೊಬ್ಬರು ಬಂದು ಆ ವ್ಯಕ್ತಿ ಹೇಗೆ? ಎಂದು ಕೇಳಿದರೆ ನಮ್ಮುತ್ತರ ನಮಗೆ ಗೊತ್ತಿರುವ ವ್ಯಾಪ್ತಿಯಲ್ಲೇ ಇರಬೇಕೇ ವಿನಃ ಅದನ್ನೂ ಮೀರಿದ ಮಾತುಗಳು ಅಲ್ಲಿರಬಾರದು. ತುಂಬಾ ಹಿಂದೆ ಗಾಳಿ ಮಾತು ಎನ್ನುವ ಚಲನಚಿತ್ರ ಬಂದಿತ್ತು. ಗೆಳತಿಯೊಬ್ಬಳು ತನ್ನ ಹೊಟ್ಟೆಕಿಚ್ಚಿಗೆ ತನ್ನದೇ ಗೆಳತಿಗೆ ಹುಡುಗನ ಹಾಗೆ ಪ್ರೇಮಪತ್ರ ಬರೆದು ನಾಯಕಿಗೆ ತೊಂದರೆ ಕೊಡುವುದೂ ಅಲ್ಲದೆ ಅವಳ ಜೀವನವನ್ನೇ ಹಾಳು ಮಾಡುತ್ತಾಳೆ. ಇನ್ನೊಂದು ಅರ್ಥದಲ್ಲಿ ನೋಡಿದರೆ ನಾಯಕಿಗೆ ಇದ್ದ ಭಯ ಸಮಾಜ ಇದನ್ನು ಒಪ್ಪಿದರೆ? ಆ ನಂಬಿಕೆಯನ್ನೇ ಬಲವಾಗಿ ಪುಷ್ಟೀಕರಿಸಿ ತನ್ನ ಚಾರಿತ್ರ್ಯಕ್ಕೆ ಕಳಂಕ ತಂದರೆ ಎನ್ನುವ ಅಪರಿಮಿತ ಭಯ!

ಇದೊಂಥರಾ ರೋಗವಾ, ಪದ್ಧತಿಯಾ ಅಥವಾ ಜನರಿಂದ ಜನರಿಗೆ ದಾಟಿಕೊಂಡು ಬಂದ ಅಂಟುರೋಗವಾ? ಕೆಲವೊಮ್ಮೆ ಇದೇನ್ ಹುಚ್ಚು ಅನ್ನಿಸುವಷ್ಟು, ಎಷ್ಟೋ ಮನೆಗಳ, ಮನಗಳ ಒಡೆಯುವಷ್ಟು ಪ್ರಭಾವಶಾಲಿಯಾದ ಈ ಅಭ್ಯಾಸದ ಅರಿವು ಸ್ವತಃ ನಮಗೇ ಇರುವುದಿಲ್ಲ. ಮಾನವ ವಿವೇಚನೆ ಇರುವವನು, ಬುದ್ಧಿಯನ್ನು ಬಳಸಿ ಸರಿ ತಪ್ಪು ವಿವೇಚಿಸಿ ಬದುಕು ಕಟ್ಟುವವನು ಎನ್ನುವುದೆಲ್ಲವೋ ಸರಿಯೇ, ಆದರೆ ಇದೊಂದು ಅಭ್ಯಾಸ ಅನಾಹುತಗಳನ್ನೇ ತಂದೊಡ್ಡಬಲ್ಲದು ಗೊತ್ತೇ?

ಶ್ವೇತ ವರ್ಣ
• ಶ್ವೇತಾ ಭಿಡೆ

ನಮ್ಮೆಲ್ಲರಿಗೂ ಈ ಸಮಾಜದ ಭಯ ಇರಲೇಬೇಕು, ಆ ಚೌಕಟ್ಟಿನ ಒಳಗೇ ಬದುಕಬೇಕು, ಆದರೆ ಅದೇ ಮಾರಕವಾಗಬಾರದು. ಇನ್ಯಾರೋ ಪ್ರಭಾವಶಾಲಿಗಳು, ಮತ್ಯಾರೋ ಸಂಬಂಧಿಕರು ನಮ್ಮ ಬದುಕಿಗೆ ಪ್ರಮಾಣಪತ್ರ ನೀಡುವ ಅಗತ್ಯವೇನಿದೆ ಎನ್ನುವ ಪ್ರಶ್ನೆ ಮೂಡದೇ ಇರುವುದಿಲ್ಲ.

ನಡತೆಯ ಪ್ರಮಾಣಪತ್ರವೆಂಬ ಮಾನದಂಡ

ಶಾಲೆಗಳಲ್ಲಿ ನಡತೆ ಪ್ರಮಾಣಪತ್ರ ಪಡೆಯುತ್ತಿದ್ದ ದಿನಗಳು ನೆನಪಿದೆಯೇ? ಆಗ ಅದೊಂದು ಮಾನದಂಡವಾಗಿತ್ತು. ಶಾಲೆ ಅಥವಾ ಸಂಸ್ಥೆಗಳಲ್ಲಿ ಈ ರೀತಿ ಇದ್ದಾಗ ಶಿಸ್ತು ಹೆಚ್ಚುತ್ತದೆ, ನಿಜ. ಆದರೆ ತೀರಾ ಅನಗತ್ಯ ವ್ಯಕ್ತಿಗಳ ಅತಿಕ್ರಮ ಪ್ರವೇಶದಿಂದ ಖಾಸಗಿ ಜೀವನ ಒಂದಷ್ಟು ಹಾಳಾಗುತ್ತಿರುವುದಂತೂ ಸತ್ಯವೇ.

ಈಗಂತೂ ಸೋಶಿಯಲ್ ಮೀಡಿಯಾದ ಹಾವಳಿ ಬೇರೆ. ಯಾರದ್ದೋ ನಡತೆಯನ್ನು, ವ್ಯಕ್ತಿತ್ವವನ್ನು ಅವರ ಸ್ಟೇಟಸ್ ನೋಡಿ ಅಳೆಯುವ ಕಾಲ ಬಂದಿದೆ. ಅವನು ಏನು ಶೇರ್ ಮಾಡ್ತಾನೆ, ಇವಳು ಯಾವ ಬಟ್ಟೆ ಹಾಕ್ತಾಳೆ, ಅವನು ಯಾವ ಫ್ರೆಂಡ್ ಜತೆ ಇನ್ಯಾವ ಹೋಟೆಲ್‌ಗೆ ಹೋಗ್ತಾನೆ, ಅವರಿಷ್ಟದ ಸಿನೆಮಾ ಯಾವುದು ಈ ರೀತಿಯ, ಕೆಲವೊಮ್ಮೆ ಕ್ಷುಲ್ಲಕವೂ ಎನಿಸುವ ವಿಷಯಗಳು ನಮ್ಮನ್ನೇ ಅಳೆಯುವ ಮಾನದಂಡವಾಗಿ ಪರಿಣಮಿಸಿದೆ. ಅದು ತಪ್ಪಾ? ಅಲ್ಲ! ಆದರೆ ಏಕಮುಖವಾಗಿ ನಿರ್ಧಾರಕ್ಕೆ ಬರುವುದು ತಪ್ಪು.

ಚೆಂದದ ಸುಳ್ಳಿನ ಮಾಲೆ

ಒಬ್ಬ ಪ್ರಭೂತಿ ಇನ್ನೊಬ್ಬ ಗೆಳೆಯನಿಗೆ ದೊಡ್ಡ ಸಾಧನೆ ಮಾಡಿದ ಹಾಗೆ ಹೇಳುತ್ತಿದ್ದ. ಅದೇ, ಅವಳು ಇದ್ದಾಳಲ್ಲ,

ರಾತ್ರಿಯೆಲ್ಲ ಆನ್ಲೈನ್ ಅಲ್ಲಿ ಇರ್ತಾಳೆ, ಸುಮ್ನೆ ಟ್ರೈ ಮಾಡಿದ್ರೆ ಸಾಕು ಮಗಾ, ಬೀಳ್ತಾಳೆ?! ಎನ್ನುವ ಹಗುರಾದ ಮಾತುಗಳು. ಸರಿ, ಆಕೆಯೇ ಸರಿ ಇಲ್ಲ ಎನ್ನೋದು ಸತ್ಯವೋ, ಸುಳ್ಳೋ ಆದರೆ ಅದನ್ನು ನೋಡಲು ಮಧ್ಯರಾತ್ರಿಯವರೆಗೂ ಎಚ್ಚರವಿದ್ದ, ಗಮನಿಸಿದ ಮಹಾನುಭಾವ ಇನ್ನೆಷ್ಟು ಉತ್ತಮನಿರಬಹುದು?

ಮತ್ಯಾರೋ ತಮಗಾಗದವರ ಬಗ್ಗೆ ಮಾತನಾಡಲು ಚಿಕ್ಕ ಅವಕಾಶ ಸಿಕ್ಕರೂ ಸಾಕು. ಇರುವ ವಿಷವನ್ನೆಲ್ಲ ಒಟ್ಟುಗೂಡಿಸಿ ಚೆಂದದ ಸುಳ್ಳಿನ ಮಾಲೆ ಪೋಣಿಸಿ ಅದನ್ನೇ ಒಪ್ಪಿಸಿಬಿಡುತ್ತಾರೆ. ಹೀಗೆ ಮಾಡುವಾಗ ತಮ್ಮ ಬಗ್ಗೆಯೂ ಜನರು ಬೇರೇನೋ ಯೋಚಿಸುತ್ತಾರೆ ಎನ್ನುವುದನ್ನು ಮರೆಯುತ್ತಾರೋ ಅಥವಾ ಹೇಗಿದ್ದರೂ ನಿಭಾಯಿಸುತ್ತೇವೆ ಎನ್ನುವ ಧೈರ್ಯವೋ ಗೊತ್ತಿಲ್ಲ. ಆದರೆ ಬೇರೊಬ್ಬರ ಬಗ್ಗೆ ಪ್ರಮಾಣಪತ್ರ ಬರೆಯಲು, ಸಹಿ ಹಾಕಲು ಮಾತ್ರ ಸದಾ ಸಿದ್ಧರಿರುವವರನ್ನು ನೋಡಿದರೆ ಇದ್ಯಾವ ರೀತಿಯ ಸಿಕ್ ಸೊಸೈಟಿ ಅನಿಸದೇ ಇರದು.

ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕುವವರು

ತಮ್ಮ ತಟ್ಟೆಯಲ್ಲಿ ಕತ್ತೆ ಬಿದ್ದಿದ್ದರೂ, ಮತ್ತೊಬ್ಬರ ತಟ್ಟೆಯಲ್ಲಿ ನೊಣ ಹುಡುಕುವ ಇಂಥವರನ್ನು ಕಂಡಾಗ ನಿಜಕ್ಕೂ ಸರ್ಟಿಫಿಕೇಟ್ ಕೊಡೋಕೆ ನೀವ್ಯಾರು? ಎಂದು ಗಟ್ಟಿಯಾಗಿ ಕೇಳಬೇಕು ಅನ್ನಿಸುತ್ತದೆ. ತೀರಾ ವೈಯಕ್ತಿಕ ದ್ವೇಷ, ಅಸೂಯೆ ಇಟ್ಟುಕೊಂಡು ಹೀಗೆ ವರ್ತಿಸುವವರನ್ನು ನಾವು ತಿದ್ದಲು ಅಥವಾ ಸರಿಯಾಗಿ ಎಂದು ಕೇಳಲು ಸಾಧ್ಯವಿಲ್ಲ. ನಮ್ಮದೇ ವರ್ತುಲದಲ್ಲಿ ಆದರೆ ನಮಗೆ ಅಂಥವರನ್ನು ತಿದ್ದುವ, ಖಂಡಿಸುವ, ಪ್ರಶ್ನೆಮಾಡುವ ಅವಕಾಶವಂತೂ ಇದ್ದೇ ಇರುತ್ತದೆ. ಹಾಗಾಗಿ ಗೊತ್ತಿರುವ ಯಾರೇ ಈ ರೀತಿಯ ಅಭ್ಯಾಸವನ್ನು ಹೊಂದಿದ್ದು ಅದನ್ನು ಪರಿಪಾಠದಂತೆ ರೂಢಿಸಿಕೊಂಡು ಬಂದಿದ್ದರೆ ದಯವಿಟ್ಟು ಅದನ್ನು ತಿದ್ದುವ ಪ್ರಯತ್ನ ಮಾಡಿ. ತೀರಾ ಕೇಳದೆ ಇರುವ ಪಕ್ಷದಲ್ಲಿ ಉದಾಸೀನ ಮಾಡಿ, ಅಂಥ ವರ್ತನೆಗಳನ್ನು ಯಾವುದೇ ಕಾರಣಕ್ಕೂ ಪ್ರೋತ್ಸಾಹಿಸಬೇಡಿ. ಕ್ರಮೇಣ ಸರಿಯಾಗಬಹುದು.

ಇನ್ನು ಸ್ವತಃ ನೀವೇ ಇಂಥವರಿಂದ, ಇಂಥವುಗಳಿಂದ ಫಲಾನುಭವಿಯಾದರೆ ತಡೆಯಿರಿ! ನಿಮ್ಮ ವ್ಯಕ್ತಿತ್ವ, ಗುಣ ಸರಿಯಿದ್ದರೆ ನಿಮಗ್ಯಾವ ಸರ್ಟಿಫಿಕೇಟ್, ಗುಣಗಾನ, ನಡತೆ ಪ್ರಮಾಣಪತ್ರ ಬೇಕಿಲ್ಲ. ನೀವು ಸರಿಯಾದ ಮಾರ್ಗ ಆಯ್ಕೆ ಮಾಡಿಕೊಂಡಿದ್ದೇನೆ ಎನ್ನುವ ಬಲವಾದ ನಂಬಿಕೆಯಿಂದ ಮುಂದೆ ಸಾಗಿರಿ. ಹಾಂ! ಅಂಥ ವ್ಯಕ್ತಿಗಳಿಂದ ದೂರವಿರಲು ಮರೆಯಬೇಡಿ! ಏಕೆಂದರೆ ಸಾಧಿಸಲಾದವರು, ಅಸಮರ್ಥರು, ಹೇಡಿಗಳು ಅಷ್ಟೇ ಇಂಥಾ ಕಾಯಕಕ್ಕೆ ಕೈ ಹಾಕುವುದು. ನಿಮ್ಮ ನೆಮ್ಮದಿ ನಿಮ್ಮ ಜತೆ ಇರಲಿ, ಅದಕ್ಕೂ ಮುಖ್ಯವಾಗಿ ನಿಮ್ಮ ಆಯ್ಕೆಯ ಮಾರ್ಗ ಸರಿಯಾಗಿಯೇ ಇರಲಿ, ಏಕೆಂದರೆ ನಿಮ್ಮ ಬದುಕು ನಿಮ್ಮದೇ!

• ಡಾ.ಕರವೀರಪ್ರಭು ಕ್ಯಾಲಕೊಂಡ

ಒಂದು ವರ್ಷದೊಳಗಿನ ಮಕ್ಕಳು ಬಾಯಿಯಲ್ಲಿ ಬೆರಳಿಟ್ಟುಕೊಳ್ಳುವುದು ಸಹಜವೇ. ಹಸಿವಾದಾಗ, ಒಂಟಿಯಾಗಿ ಅಸೌಖ್ಯವಾಗಿದ್ದಾಗ, ಹಾಲು ಕುಡಿಯುವ ಬಯಕೆಯುಂಟಾದಾಗ, ಹೀಗೆ ವಿವಿಧ ಸಂದರ್ಭಗಳಲ್ಲಿ ಮಕ್ಕಳು ಬಾಯಿಯಲ್ಲಿ ಬೆರಳಿಟ್ಟುಕೊಳ್ಳುತ್ತಾರೆ. ಹಸಿವಾದಾಗ ಮಕ್ಕಳು ಒಂದು ಬೆರಳನ್ನು ಮಾತ್ರವಲ್ಲದೇ ಕೈಯ ಎಲ್ಲಾ ಬೆರಳುಗಳನ್ನು ಬಾಯಿಯೊಳಗೆ ತುರುಕಿಕೊಳ್ಳುತ್ತಿರುತ್ತಾರೆ ಹಾಗೂ ಸಾಮಾನ್ಯವಾಗಿ ತಾಯಿಯ ಹಾಲು ಕುಡಿಯುವ ಮಕ್ಕಳಿಗಿಂತ ಬಾಟಲಿ ಹಾಲು ಕುಡಿಯುವ ಮಕ್ಕಳಲ್ಲಿ ಬಾಯಿಯಲ್ಲಿ ಬೆರಳಿಟ್ಟುಕೊಳ್ಳುವ ಅಭ್ಯಾಸವು ಹೆಚ್ಚಾಗಿ ಕಂಡು ಬರುತ್ತದೆ. ಯಾಕೆಂದರೆ ಶೀಶೆಯಲ್ಲಿ ಹಾಲು ಕುಡಿಯುತ್ತಿರುವಾಗ ಅದು ಬೇಗ ಮುಗಿಯುತ್ತದೆ. ಇದರಿಂದ ಹಾಲು ಹೀರಬೇಕೆಂಬ ಬಯಕೆಯು ಪೂರ್ಣವಾಗದಿರುವುದರಿಂದ ಬಾಯಿಯಲ್ಲಿ ಬೆರಳಿಟ್ಟುಕೊಂಡು ತೃಪ್ತಿ ಪಡುತ್ತವೆ. ಬೆಳೆಯುತ್ತಿದ್ದಂತೆ ಕೆಲವು ಮಕ್ಕಳು ಈ ಅಭ್ಯಾಸವನ್ನು ತಾವಾಗಿಯೇ ಬಿಟ್ಟು ಬಿಡುತ್ತವೆ. ಆಟದ ಸಾಮಾನು ಹಾಗೂ ಇತರ ವಸ್ತುಗಳ ಮೇಲೆ ಗಮನ ಹೆಚ್ಚಾಗಿ ಬಾಯಿಯಲ್ಲಿ

ಮಕ್ಕಳ ಬೆರಳು ಚೀಪುವಿಕೆ, ನಾಚಿಕೆ ಏಕೆ?

ಸಮಸ್ಯೆ ಪರಿಹಾರಕ್ಕೆ ಹೀಗೆ ಮಾಡಿ

- ಮಕ್ಕಳಿಗೆ ಇತರ ಹವ್ಯಾಸಗಳ ಕಡೆಗೆ ಗಮನ ಹರಿಯುವಂತೆ ಮಾಡಬೇಕು.
- ಯಾವುದಾದರೂ ಒಳ್ಳೆಯ ಅಭ್ಯಾಸವನ್ನು ಕಲಿತುಕೊಂಡರೆ ಬಹುಮಾನ ನೀಡುವುದರ ಮೂಲಕ ಮಕ್ಕಳಲ್ಲಿ ಬದಲಾವಣೆ ಉಂಟುಮಾಡಬಹುದು.
- ಬಾಯಲ್ಲಿ ಬೆರಳು ಹಾಕಿಕೊಳ್ಳದೇ ಇರುವ ಸಂದರ್ಭಗಳಲ್ಲಿ ಮಕ್ಕಳನ್ನು ಮೆಚ್ಚಿಕೊಳ್ಳುವುದು, ಪ್ರೋತ್ಸಾಹಿಸುವುದು, ಹುರುಪು ಹುಮ್ಮಸ್ಸು ತುಂಬಿ ಬಹುಮಾನ ಕೊಡುವುದು ಮಾಡಿ ಈ ಅಭ್ಯಾಸದಿಂದ ಹೊರಬರಲು ಪ್ರೋತ್ಸಾಹಿಸಬೇಕು.
- ಮಕ್ಕಳಲ್ಲಿ ಅತಿಯಾದ ಆಸಕ್ತಿಯಿರುತ್ತದೆ. ಅವರಿಗೆ ಕಾಗದ, ಪೆನ್ಸಿಲ್, ಬಿಲ್ಡಿಂಗ್ ಬಾಕ್ಸ್‌ಗಳಂಥವನ್ನು ನೀಡಿದರೆ, ಅವುಗಳೊಂದಿಗೆ ಕಾಲ ಕಳೆಯುತ್ತಾ ಮೈ ಮರೆಯುತ್ತಾರೆ.

ಬೆರಳಿಟ್ಟು ಚೀಪುವುದನ್ನು ಮರೆಯುತ್ತಾರೆ . ಆದ್ದರಿಂದ ವಯಸ್ಸಿಗೆ ತಕ್ಕಂತೆ ಮಕ್ಕಳ ಮನಸ್ಸಿಗೆ ಹಿಡಿಸುವ ಆಟದ ಸಾಮಾನುಗಳನ್ನು ದೊರೆಯುವಂತೆ ಮಾಡಿ ಸಮಯಕ್ಕೆ ಸರಿಯಾಗಿ ಆಹಾರವನ್ನು ತಿನ್ನಿಸಿದರೆ ಬಹಳಷ್ಟು ಮಟ್ಟಿಗೆ ಈ ಅಭ್ಯಾಸಗಳು ದೀರ್ಘಕಾಲ ಮುಂದುವರಿಯುವಂತೆ ನೋಡಿಕೊಳ್ಳಬಹುದು. ನಿದ್ದೆ ಮಾಡುತ್ತಿರುವಾಗ, ಆಯಾಸವಾದಾಗ ಒಂದೆರಡು ಸಲ ಬಾಯಿಯಲ್ಲಿ ಬೆರಳಿಟ್ಟುಕೊಂಡರೆ ಅಷ್ಟಾಗಿ ಹಚ್ಚಿಕೊಳ್ಳುವ ಅಗತ್ಯವಿಲ್ಲ. ಸಾಮಾನ್ಯವಾಗಿ ಮಕ್ಕಳು ದೊಡ್ಡವರಾದಂತೆ 6 – 8 ವರ್ಷದೊಳಗೆ ಬಾಯಿಯಲ್ಲಿ ಬೆರಳಿಟ್ಟುಕೊಳ್ಳುವುದನ್ನು ಬಿಟ್ಟು ಬಿಡುತ್ತಾರೆ. ಒಂದುವೇಳೆ ಆಗಲೂ ಬಿಡದಿದ್ದರೆ ಇದಕ್ಕೆ ತೀವ್ರವಾದ ಒತ್ತಡಕ್ಕೆ ಸಂಬಂಧಿಸಿದ ಸಮಸ್ಯೆಗಳು, ಮಾನಸಿಕವಾಗಿ ಕಡೆಗಣಿಸುವಂತಹ, ಹೀಯಾಳಿಸುವಂತಹ ಕಾರಣಗಳಿಂದ ಹೀಗೆ ಮಾಡಬಹುದು. ಇಂತಹ ಸಮಯದಲ್ಲಿ ಮಕ್ಕಳು ಈ ಅಭ್ಯಾಸದಿಂದ ಹೊರಬರಲು ದೊಡ್ಡವರು ಸಹಕರಿಸಬೇಕು. ಬಲವಂತವಾಗಿ ಭಯ ಪಡಿಸುವುದು ಸರಿಯಲ್ಲ.

ಯಾಕೆಂದರೆ ಮಕ್ಕಳು ದೊಡ್ಡವರಾಗುತ್ತಿದ್ದಂತೆ ಸ್ವಯಂ ನಿಗ್ರಹವನ್ನು ಕಳೆದುಕೊಳ್ಳುತ್ತಾರೆ. ಬೇರೆಯವರನ್ನು ನೋಡಿ ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳುತ್ತಾರೆ. ಆದ್ದರಿಂದ ಮಕ್ಕಳನ್ನು ಬಯ್ಯುವುದು, ಹೊಡೆಯುವುದನ್ನು ಮಾಡಬಾರದು. ಮಕ್ಕಳು ಬಾಯಲ್ಲಿ ಬೆರಳಿಟ್ಟುಕೊಂಡರೆ ದೊಡ್ಡವರು ಮೊದಲು ಅದನ್ನು ಗಮನಿಸದಂತೆಯೇ ವರ್ತಿಸಬೇಕು. ಹೊಡೆಯುವುದರಿಂದ, ಬಯ್ಯುವುದರಿಂದ, ಬೆದರಿಸುವುದರಿಂದ ಈ ಅಭ್ಯಾಸವು ಮತ್ತಷ್ಟು ಉಲ್ಬಣಗೊಳ್ಳುವ ಅಪಾಯವಿದೆ.

ಲವ್‌ಎವೆರಿ ಬಾಡಿ

ಚೊಚ್ಚಲ ಹೆರಿಗೆಯಾಗಿದ್ದರೆ ತಾಯಂದಿರಿಗೆ ಮಗುವಿನ ಲಾಲನೆ ಪಾಲನೆಯಲ್ಲಿ ಸಾಕಷ್ಟು ಗೊಂದಲಗಳು ಇರುತ್ತವೆ. ಮಗುವನ್ನು ಹೇಗೆ ಮಲಗಿಸಬೇಕು? ಹೇಗೆ ಎತ್ತಿಕೊಳ್ಳಬೇಕು? ಮಗುವಿಗೆ ಎಷ್ಟು ಬಾರಿ ಹಾಲು ಕೊಡಬೇಕು? ಈ ಎಲ್ಲಾ ವಿಷಯಗಳು ಗೊತ್ತಿರುವುದಿಲ್ಲ. ಮಗು ಅಳುತ್ತಿದ್ದರೆ ಮಗು ಹೊಟ್ಟೆ ನೋವಿನಿಂದ ಅಳುತ್ತಿದೆಯೇ? ಅಥವಾ ತಲೆನೋವಿನಿಂದ ಅಳುತ್ತಿದೆಯೇ? ಎಂದು ತಿಳಿಯದೆ ಕಂಗಾಲಾಗಿ ಬಿಡುತ್ತಾರೆ. ಮಗುವಿಗೆ ಹಾಲು ಕುಡಿಸಿದ ತಕ್ಷಣ ಎತ್ತಿ ಆಟ ಆಡಿಸಿದರೆ ವಾಂತಿ ಮಾಡುತ್ತದೆ. ಆದ್ದರಿಂದ ಹಾಲು ಕೊಟ್ಟ ನಂತರ ಮಗುವನ್ನು ಬೆನ್ನಿಗೆ ಹಾಕಿ ಬೆನ್ನು ನೀವಬೇಕು. ಅಲ್ಲದೆ ಮಗುವಿಗೆ ತೇಗು ಬಂದರೆ ಒಳ್ಳೆಯದು. ತೇಗು ಬಂದರೆ ಅಧಿಕ ಗ್ಯಾಸ್ ಹೊರಬರಲು ಸಹಾಯ ಮಾಡುತ್ತದೆ. ನಂತರ ಸುಖವಾಗಿ ನಿದ್ದೆ ಮಾಡುತ್ತದೆ.

• ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687,
ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ,
ಬೆಂಗಳೂರು-560098
ಇ-ಮೇಲ್:
vishwavanimagazine@gmail.com

• ಬೆಂ.ಮು. ಮಾರುತಿ

ಬಟನ್ ಇಡ್ಲಿ ಬಂಬಾಟ್ ರುಚಿ

ಬಟನ್ ಇಡ್ಲಿ' ಎಂದು ಕರೆಯಲು ಮುಖ್ಯ ಕಾರಣ ಅದರ ಮುದ್ದಾದ ಗಾತ್ರ. ಇದು ದಕ್ಷಿಣ ಭಾರತದ ಅನೇಕ ರೆಸ್ಟೋರೆಂಟ್‌ಗಳಲ್ಲಿ ಲಭ್ಯವಿದೆ. ಕೆಲವು ಹೋಟೆಲ್‌ಗಳು ಈ ಬಟನ್ ಇಡ್ಲಿಯಿಂದ ಕೆಲವು ಹೊಸ ರೆಸಿಪಿಗಳನ್ನು ಕೂಡ ಆವಿಷ್ಕರಿ ಸಿವೆ. ಗ್ರೀನ್ ಮಸಾಲಾ ಬಟನ್ ಇಡ್ಲಿಯು ಅಂತಹ ಒಂದು ಪಾಕವಿಧಾನವಾಗಿದ್ದು ಅದು ತುಂಬಾ ಮಸಾಲೆಯುಕ್ತವಾಗಿದೆ ಮತ್ತು ರುಚಿಗೆ ತುಂಬಾ ಅದ್ಭುತವಾಗಿದೆ.

ತಯಾರಿಸುವುದು ಹೇಗೆ: ಹಿಟ್ಟನ್ನು ಪುಡಿಮಾಡಿ ಮತ್ತು ರಾತ್ರಿಯಿಡೀ ಹುದುಗು ವಿಕೆಗೆ ಬಿಡಿ. ಇಡ್ಲಿಗಳನ್ನು ಉಗಿ ಮಾಡಲು ಸುಮಾರು 10 ನಿಮಿಷಗಳನ್ನು ತೆಗೆದು ಕೊಳ್ಳುತ್ತದೆ.

ಬಟನ್ ಇಡ್ಲಿಗೆ ಬೇಕಾಗುವ ಪದಾರ್ಥಗಳು

★ ಹಸಿ ಅಕ್ಕಿ – 1 1/2 ಕಪ್. ★ ಉದ್ದಿನಬೇಳೆ (ಕಪ್ಪು ಬೇಳೆ) – 1/2 ಕಪ್.
★ ಅಗತ್ಯವಿರುವಷ್ಟು ಉಪ್ಪು. ★ ತುಪ್ಪ – 2 ಚಮಚ

ಮಾಡುವ ವಿಧಾನ: ಉದ್ದಿನಬೇಳೆ ಮತ್ತು ಅಕ್ಕಿಯನ್ನು ಪ್ರತ್ಯೇಕವಾಗಿ 2 ಗಂಟೆ ನೆನೆಸಿಡಿ. ನೀವು ನಯವಾದ ರಚನೆಯನ್ನು ಪಡೆಯುವವರೆಗೆ ಸುಮಾರು 30 ನಿಮಿಷ ನಿಯಮಿತ ಮಧ್ಯಂತರದಲ್ಲಿ ನೀರನ್ನು ಸೇರಿಸುವ ಮೂಲಕ ಗ್ರೈಂಡರ್‌ನಲ್ಲಿ ಉದ್ದಿನ ಬೇಳೆಯನ್ನು ರುಬ್ಬಿಕೊಳ್ಳಿ. ಅದನ್ನು ತೆಗೆದು, ನೆನೆಸಿದ ಅಕ್ಕಿಯನ್ನು ಸೇರಿಸಿ ಮತ್ತು ಒರಟಾಗಿ ರುಬ್ಬಿಕೊಳ್ಳಿ. ಈಗ ಈ ಅಕ್ಕಿ ಮಿಶ್ರಣವನ್ನು ಗ್ರೈಂಡರ್‌ನಿಂದ ವರ್ಗಾಯಿಸಿ. ಇದನ್ನು ರುಬ್ಬಿದ ಉದ್ದಿನಬೇಳೆ ಮಿಶ್ರಣದೊಂದಿಗೆ ಸೇರಿಸಿ. ತದ ನಂತರ ಉಪ್ಪು ಹಾಕಿ, ಹುದುಗುವಿಕೆಗೆ ಪಕ್ಕಕ್ಕೆ ಬಿಡಿ. 8 ಗಂಟೆಗಳ ನಂತರ, ಬಟನ್ ಇಡ್ಲಿ ಅಚ್ಚುಗಳನ್ನು ಎಣ್ಣೆಯಿಂದ ಸವರಿ. ಒಂದು ಚಮ ಚದ ಸಹಾಯದಿಂದ, ಅಚ್ಚುಗಳನ್ನು ತುಂಬಿಸಿ ಮತ್ತು ಕುಕ್ಕರ್‌ನಲ್ಲಿ ಸುಮಾರು 8 ನಿಮಿಷಗಳ ಕಾಲ ಉಗಿ ಮಾಡಿ. ಬಟನ್ ಇಡ್ಲಿಯನ್ನು ಸೇವಿಸಲು ಸಾಂಬಾರ್‌ನ್ನು ತಯಾರಿಸಬೇಕು. ಈಗ ರುಚಿಕರವಾದ ಬಟನ್ ಇಡ್ಲಿ ಸಾಂಬಾರ್ ಬಡಿಸಲು ಸಿದ್ಧ.

ಕಿಚನ್ ಮಸ್ತಿ ಪಾಯಿಂಟ್ಸ್ : • ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಹಿಟ್ಟು ಸಾಕಷ್ಟು ದಪ್ಪವಾಗಿರಬೇಕು ಇಲ್ಲದಿದ್ದರೆ ಇಡ್ಲಿಗಳು ಗಟ್ಟಿಯಾಗಿರುವುದಿಲ್ಲ.

• ಸಾಮಾನ್ಯ ಇಡ್ಲಿಗಳಿಗೆ ಹೋಲಿಸಿದರೆ, ಈ ಬಟನ್ ಇಡ್ಲಿ ವಿನ್ಯಾಸದಲ್ಲಿ ಸ್ವಲ್ಪ ಗಟ್ಟಿಯಾಗಿರಬೇಕು. ಒಮ್ಮೆ ಪ್ರಯತ್ನ ಪಟ್ಟು ರುಚಿಕರವಾದ ಬಟನ್ ಇಡ್ಲಿ ತಯಾರಿಸಿ ಕುಟುಂಬದವರೊಂದಿಗೆ ಆಸ್ವಾದಿಸಿ.

• ಪ್ರಹ್ಲಾದ ಪರ್ವತಿ

ಕುಕ್ಕೂ ಗಡಿಯಾರ ಜರ್ಮನಿಯ ಕಪ್ಪು ಅರಣ್ಯದ(ಬ್ಲಾಕ್ ಫಾರೆಸ್ಟ್) ಸರ್ವೋತ್ಕೃಷ್ಟ ಸಂಕೇತವಾಗಿದೆ. ಅವು ಈ ಪ್ರದೇಶದ ಪಾರಂಪರಿಕ ಕಲಕುಶಲ ಕೌಶಲ್ಯ ಹಾಗು ಶ್ರೀಮಂತ ಇತಿಹಾಸಕ್ಕೆ ಸಾಕ್ಷಿಯಾಗಿವೆ. ಇಲ್ಲಿಯ ವಿಟೆನ್ಬರ್ಗ್ ರಾಜ್ಯದಲ್ಲಿರುವ 'ಬ್ಲಾಕ್ ಫಾರೆಸ್ಟ್' ಪ್ರದೇಶ ಸುಂದರವಾದ ಕಣಿವೆಗಳನ್ನು ಹೊಂದಿದೆ. ರಸ್ತೆಯ ಇಕ್ಕೆಲಗಳಲ್ಲಿ ದಟ್ಟ ಹಸಿರಿನ ಬೃಹತ್ ಓಕ್ ಹಾಗೂ ಪೈನ್ ಮರದ ಸಾಲುಗಳ ನಿಬಿಡ ನೆರಳಿನಿಂದ ಸದಾ ಕತ್ತಲು ಆವರಿಸಿದಂತೆ ಕಾಣುವುದರಿಂದ

ಕಪ್ಪು ಕಾಡಿನ ಕುಕ್ಕೂ ಗಡಿಯಾರ

ಇದಕ್ಕೆ 'ಕಪ್ಪು ಕಾನನ'ವೆಂಬ ಅನ್ವರ್ಥಕ ನಾಮ. ಎರಡು ನೂರು ಕಿ.ಮೀ.ಉದ್ದದ ಈ ಅರಣ್ಯದ ದಕ್ಷಿಣ ಮತ್ತು ಪಶ್ಚಿಮದಲ್ಲಿ ರೈನ್ ನದಿ ಹರಿಯುತ್ತಿದ್ದು, ಪ್ರಕೃತಿ ಮಧ್ಯದ ಈ ಸುಂದರ ಪ್ರದೇಶ ಈ ದೇಶದ ಪ್ರಮುಖ ಪ್ರವಾಸಿ ತಾಣವಾಗಿದೆ.

ನಾವು ಕುಕ್ಕೂ ಗಡಿಯಾರ ತಯಾರಿಕೆಯ ನೆಲೆಯಾದ ಟ್ರೈಬರ್ಗ್ ಎಂಬ ಪರ್ವತ ಶ್ರೇಣಿಯಲ್ಲಿರುವ ಸ್ಥಳಕ್ಕೆ ಭೇಟಿ ನೀಡಿದಾಗ ಅಲ್ಲಿಯ ಗಡಿಯಾರ ತಯಾರಿಕೆಯ ಕೆಲಸ, ಮರದ ಕೆತ್ತನೆಯ ಮನೆ, ಮ್ಯೂಸಿಯಂ ಹಾಗೂ ಬೃಹತ್ ಮಾರಾಟ ಮಳಿಗೆಯ ಸಂಪೂರ್ಣ ಪರಿಚಯವಾಯಿತು. ಈ ಕಟ್ಟಿಗೆಯ ಕಟ್ಟಡದ ಪ್ರವೇಶದ್ವಾರದಲ್ಲಿಯೇ ದೊಡ್ಡ ಗಡಿಯಾರವಿದೆ. ಅದರ ಮೇಲೆ ಇರುವ ಗುಡಿಸಲಿನಂತಹ ಮನೆಯ ಮುಚ್ಚಿದ ಬಾಗಿಲಿನಿಂದ ಹೊರಬಂದ ಹಕ್ಕಿಯೊಂದು ಕೂಗುತ್ತಿರುವಂತೆಯೇ ಆಟಿಗೆಯ ಗಂಡು ಹೆಣ್ಣು ಚಿಕಣಿ ಗೊಂಬೆಗಳು ನರ್ತಿಸುತ್ತ ಒಂದು ಸುತ್ತು ಹಾಕುತ್ತವೆ. ತಕ್ಷಣವೇ ಆಗಿನ ಸಮಯದ ಅನುಸಾರ ಗಡಿಯಾರದ ಗಂಟೆಗಳು ಅನುರಣಿಸುತ್ತವೆ. ಇದು ಪ್ರತಿ ಗಂಟೆಗೆ ಪುನರಾವರ್ತನೆ ಆಗುತ್ತದೆ. ಹನ್ನೆರಡು ಗಂಟೆ ಹೊತ್ತಿಗಂತು ಅಲ್ಲಿ ಸಂದರ್ಶಕರ ಸಾಗರ.

ಈ ಎರಡಂತಸ್ತಿನ ಮಳಿಗೆ ಒಳಹೊಕ್ಕರೆ ವಿವಿಧ ವಿನ್ಯಾಸ ಹಾಗೂ ಗಾತ್ರದ ಸಾವಿರಾರು ಕುಕ್ಕೂ ಗಡಿಯಾರಗಳ ಪ್ರಪಂಚವೇ ಅನಾವರಣಗೊಳ್ಳುತ್ತದೆ. ಕಪ್ಪು ಕಾಡಿನಲ್ಲಿ ದೊರೆಯುವ ಮರವನ್ನು ಬಳಸಿಕೊಂಡು ಪೆಂಡ್ಯೂಲಮ್ ಗಡಿಯಾರವನ್ನು ಕೈಯಿಂದ ತಯಾರಿಸುವುದು ಇಲ್ಲಿಯ ವಿಶೇಷತೆ. ಗಂಟೆಗೊಮ್ಮೆ ಕೊಗಿಲೆ ಪಕ್ಷಿಯ ಮಧುರ ಧ್ವನಿ ಗಡಿಯಾರದಲ್ಲಿ ಹೊರಸೂಸುವುದಕ್ಕಾಗಿ ಮರದಿಂದ ತಯಾರಿಸಿದ ಕೊಳವೆಗಳಿಗೆ ಭಾರವಾದ ಎರಡು ಕಟ್ಟಿಗೆ ತುಂಡಿನ ಆಕುಂಚನದ ಚಲಿಸುವಿಕೆಯ ತಂತ್ರಗಾರಿಕೆ ವಿಸ್ಮಯ ಮೂಡಿಸುತ್ತದೆ. ಕಟ್ಟಡದ ನೆಲಮಾಳಿಗೆಯಲ್ಲಿರುವ ಯಂತ್ರ ಕಾರ್ಯಾಗಾರದಲ್ಲಿ ಪ್ರಾತ್ಯಕ್ಷಿಕೆ ಮೂಲಕ ಕ್ಲಾಕ್ ತಯಾರಿಕೆಯ ಕುಸುರಿ ಕೆಲಸ, ಡೈಲ್, ಗಡಿಯಾರದಲ್ಲಿ ಅಳವಡಿಸಲಾಗುವ ಯಂತ್ರಗಳ ಬಿಡಿಭಾಗಗಳು ಮತ್ತು ಹೊರಭಾಗದ ಚೌಕಟ್ಟು ಅಳವಡಿಸುವುದು ಜಾಣ್ಮೆಯ ಕೆಲಸ.

ಕುಕ್ಕೂ ಪ್ರವಾಸ ರೂಟ್

ಈ ಗಡಿಯಾರಗಳ ಪ್ರಪಂಚ ಅನ್ವೇಷಿಸಲು ಆಸಕ್ತಿ ಇದ್ದವರಿಗಾಗಿಯೇ ''ಬ್ಲಾಕ್ ಫಾರೆಸ್ಟ್ ಕುಕ್ಕೂ ರೂಟ್'' ಎಂಬ ಎರಡು ಪ್ರವಾಸ ಮಾರ್ಗಗಳು ಇಲ್ಲಿವೆ. ಮೂನ್ನೂರು ಕಿ.ಮೀ ಪ್ರಯಾಣದ ಈ ಮಾರ್ಗದಲ್ಲಿ ಪ್ರಕೃತಿಯ ಸುಂದರ ದೃಶ್ಯಗಳ ಮೂಲಕ ಸಾಗಿ, ವಿಶ್ವದ ಅತಿ ದೊಡ್ಡ ಪಾರಂಪರಿಕ ಗಡಿಯಾರ ತಯಾರಿಕಾ ಕೇಂದ್ರ, ವಸ್ತು ಸಂಗ್ರಹಾಲಯವಿರುವ ಫರ್ಟವಾಂಗೇನ್, ಕುಕ್ಕೂ ಗಡಿಯಾರ ತಯಾರಿಕೆಯ ಪ್ರಭಾವಶಾಲಿ ಸಂಗ್ರಹದ ಟ್ರೈಬರ್ಗ್, ಸೇಂಟ್ ಹಾರ್ಗೇನ್ ಮತ್ತು ಟಿಟಿಸಿ -ನ್ಯೂಸ್ಟಾಡಟ್ ಮುಂತಾದ ಪಟ್ಟಣಗಳಲ್ಲಿಯ ಸಾಂಸ್ಕೃತಿಕ ಪರಂಪರೆ ಹಾಗು ಪಾರಂಪರಿಕ ಮರದ ಕೆತ್ತನೆಯ ಸೊಬಗಿನ ಗಡಿಯಾರಗಳ ತಯಾರಿಕೆ ಕೌಶಲ ಸವಿಯಬಹುದು.

ಶತಮಾನಗಳ ಇತಿಹಾಸ

ಈ ಗಡಿಯಾರಗಳನ್ನು ಈ ಕಣಿವೆಯಲ್ಲಿರುವ ಹಿಮಾವೃತ್ತ ಪುಟ್ಟ ಹಳ್ಳಿ ಸ್ಕೋನ್ವಾಲ್ಡ ಎಂಬ ಹಳ್ಳಿಯಲ್ಲಿ ಪ್ರಥಮ ಬಾರಿಗೆ ರೂಪಿಸಲಾಯಿತಂತೆ. ದೀರ್ಘ ಕಾಲದ ಚಳಿಗಾಲದಲ್ಲಿ ಇಲ್ಲಿನ ಜಮೀನುಗಳು ಹಿಮದಿಂದ ಕೂಡಿದ್ದರಿಂದಾಗಿ ರೈತರಿಗೆ ಉಳುಮೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಅರಣ್ಯದಲ್ಲಿ ಬೆಳೆಯುತ್ತಿದ್ದ ಕಪ್ಪು ಲಿಂಡೆನ್ ಮರ ಉಪಯೋಗಿಸಿಕೊಂಡು, ತಮ್ಮ ಸೃಜನಶೀಲತೆ, ಸೂಕ್ಷ್ಮ ಕರಕುಶಲತೆ ಮೇಳೈಸಿಕೊಂಡು ಈ ಕುಕ್ಕೂ ಗಡಿಯಾರ ರಚನೆಗೆ ಮುಂದಾದರು. ನಂತರ ಬೇಸಿಗೆಯಲ್ಲಿ ಯುರೋಪ್ ಖಂಡದಾದ್ಯಂತ ಅವುಗಳನ್ನು ಮಾರಾಟ ಮಾಡಿದ್ದರಿಂದ ಜನಪ್ರಿಯತೆ ದಕ್ಕಿತೆಂದು ಇತಿಹಾಸ ತಿಳಿಸುತ್ತದೆ. ಫ್ರಾಂಜ್ ಆಂಟೋನ್ ಕೆಟರರ್ ಎಂಬಾತ ಮೊಟ್ಟಮೊದಲ ಬಾರಿಗೆ 1730 ರಲ್ಲಿ ಈ ಕುಕ್ಕೂ ಗಡಿಯಾರ ತಯಾರಿಸಿದನಂತೆ. ಅವುಗಳಿಗೆ ಕುಕ್ಕೂ ಹೆಸರು ಬರಲು ಸಹ ಈ ಅರಣ್ಯದಲ್ಲಿದ್ದ ಕೋಗಿಲೆಗಳ ಕೂ ಕೂ ಕಲರವವೇ ಕಾರಣ. ಕೋಗಿಲೆಗಳ ಈ ಧ್ವನಿ ಕೇಳುಗರಿಗೆಲ್ಲ ಅದೃಷ್ಟದ ಸುರಿಮಳೆಯಾಗುತ್ತದೆ ಎಂಬ ನಂಬಿಕೆಯಿಂದ ಕೋಗಿಲೆಯ ಕೂಗನ್ನು ಮತ್ತು ಅದರ ಪ್ರತಿರೂಪವನ್ನು ಗಡಿಯಾರದಲ್ಲಿ ಅನುಕರಣೆ ಮಾಡಲಾಯಿತು.

ಇತ್ತೀಚಿನ ದಿನಗಳಲ್ಲಿ ದಿನಗಳಲ್ಲಿ ಇವುಗಳ ತಯಾರಿಕೆಯಲ್ಲಿ ಲೋಹವನ್ನು ಬಳಸಿ ಹೆಚ್ಚು ಆಕರ್ಷವಾದ ಗಡಿಯಾರಗಳು ರೂಪಗೊಳ್ಳುತ್ತಿವೆ. ಪ್ರಪಂಚದಾದ್ಯಂತ ಮಾರಕಟ್ಟೆ ಹೊಂದಿರುವ ಈ ಗಡಿಯಾರಗಳು ಈ ದೇಶದ ರಾಷ್ಟ್ರೀಯ ಸ್ಮರಣಿಕೆಯಾಗಿವೆ.